ಸಂವಾದ

ಜುಲೈ 2003 | ರೂ. 10/- | ಮಾಸ ಪತ್ರಿಕೆ

ನ್ಯಾಷನಲ್ ಜಿಯೋಗ್ರಫಿಕ್' ಕಂಡ

ಭಾರತದ ಅಸ್ಪೃಶ್ಯರು

ಅವಲೋಕನ

- ಡಾ|| ಜಿ. ರಾಮಕೃಷ್ಣ
- ಡಾ|| ಸಿದ್ಧಲಿಂಗಯ್ಯ
- ಪ್ರೊ|| ಜಿ.ಕೆ. ಗೋವಿಂದರಾವ್
- ಪ್ರೊ|| ಸಿ.ಜಿ.ಕೆ.
- ಡಾ|| ಕಮಲಾ ಹಂಪನಾ
- ಪುರುಷೋತ್ತಮದಾಸ್

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 9

ಜುಲೈ 2003

ಸಂಪಾದಕ :

ಇಂದೂಧರ ಹೊನ್ನಾಪುರ

ನೆರವು :

ಕೆಪಿ ದೊಡ್ಡಿ ಶಿವರಾಂ
ಹಾಲ್ಕುರಿಕೆ ಶಿವಶಂಕರ್
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
ANJANANAGARA, MAGADI ROAD
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ



- ಪತ್ರಗಳು 3
- ಮೇರಾ ಭಾರತ್ ಮಹಾನ್ 4
- ಅಂತರಂಗ 5
- ಬರಡಾಗಿರುವ ವೀರಶೈವ ಮಠಗಳಿಂದ ದಲಿತೋದ್ಧಾರ ಸಾಧ್ಯವೇ?
  - ದಾಸನೂರು ಕೂಸಣ್ಣ 6
- ದಲಿತ ಚಳವಳಿ : 86ರ ನೋಟ
  - ಕೋಟಿಗಾನಹಳ್ಳಿ ರಾಮಯ್ಯ 8
- ಬುದ್ಧ-ಬೌದ್ಧ ಧಮ್ಮ - ದೇವರು ಇತ್ಯಾದಿ
  - ಎಸ್. ಧಮ್ಮಿಕ 12
- ಕೃಷ್ಣಾರ್ಜುನರು ಈಗಲೂ ಇದ್ದಾರೆ !
  - ಅರವಿಂದ ಚೊಕ್ಕಾಡಿ 16



- ನ್ಯಾಷನಲ್ ಜಿಯೋಗ್ರಫಿಕ್ ಕಂಡ ಭಾರತದ ಅಸ್ಪೃಶ್ಯರು
  - ಡಾ|| ನಟರಾಜ್ ಹುಳಿಯಾರ್ 20
- ಝೀನ್ ಝೆಲಕ್
  - ಕೆ.ವಿ. ಸುಬ್ಬಣ್ಣ 28
- ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಒಂದಾಗಬೇಕು ಏಕೆ?
  - ರಂಜಾನ್ ದರ್ಗಾ 30
- ಅಂಬೇಡ್ಕರ್‌ಗೆ ಅಸ್ಪೃಶ್ಯತೆ ಕಲಿಸಿದ ಪಾಠ 34
- WTO ಉನ್ನತ ಶಿಕ್ಷಣ ಮತ್ತು ಸಾಮ್ರಾಜ್ಯ ಶಾಹಿ
  - ಪ್ರೊ|| ವಿ.ಎನ್. ಲಕ್ಷ್ಮೀನಾರಾಯಣ 38
- ಅವಲೋಕನ-ಸಂವಾದ 22
  - ಡಾ|| ಜಿ. ರಾಮಕೃಷ್ಣ
  - ಡಾ|| ಸಿದ್ಧಲಿಂಗಯ್ಯ
  - ಪ್ರೊ|| ಜಿ.ಕೆ. ಗೋವಿಂದರಾವ್
  - ಪ್ರೊ|| ಸಿ.ಜಿ.ಕೆ.
  - ಡಾ|| ಕಮಲಾ ಹಂಪನಾ
  - ಪುರುಷೋತ್ತಮದಾಸ್
- ಅಂಬೇಡ್ಕರ್ ಹೀಗೆ ಹೇಳುತ್ತಾರೆ 43

ಕವನಗಳು : ಪರದೇಶಿ ಮಗನ ಪದವು - 10, ಪುಟ್ಟ ಗೌರಿಯ ನವಿಲು - 11



ಮುಖಪುಟ ಕಲೆ ಮತ್ತು ವಿನ್ಯಾಸ: ರಾಥೋಡ್

ಬಿಡುಗಡೆಯ ಹಾದಿಗೆ ದಿಕ್ಸೂಚಿ

ಮಾನ್ಯರೆ,

ಜೂನ್ ತಿಂಗಳ 'ಸಂವಾದ' ಪತ್ರಿಕೆ ಕೈ ಸೇರಿದೆ. ಕಲಾವಿದ ಜಾನ್ ದೇವರಾಜ್ ರವರ ಮುಖಪುಟ ಚಿತ್ರದಿಂದ ಆರಂಭವಾಗುವ ಕುತೂಹಲ ಲೇಖನಗಳನ್ನು ಓದಿದರೂ ಕಡಿಮೆ ಯಾಗುತ್ತಿಲ್ಲ. ವ್ಯವಸ್ಥೆಯ ಒಳಗೆ ಬಂಧಿಯಾಗಿರುವ ಮಾನವ ಜೀವವೊಂದು ಹೊರ ಜಗತ್ತಿನತ್ತ ಹೊರಳಲು, ಅರ್ಥಾತ್ ಬಿಡುಗಡೆಗೊಳ್ಳಲು ಯತ್ನಿಸುತ್ತಿರುವಂತೆ, ಭಾಸವಾಗುವ ಚಿತ್ರ ನೋಡಿ ಮುಂದಿನ ಲೇಖನಗಳನ್ನು ಓದುತ್ತಾ ಹೋದರೆ, ಬಿಡುಗಡೆಯ ಹಾದಿ ಸುಗಮವಾದಂತೆ ಅನಿಸಿತು.

ಸಂಚಿಕೆಯಲ್ಲಿನ ಪ್ರತೀ ಲೇಖನಕ್ಕೂ ನೀವು ಕೊಟ್ಟಿರುವ ಕಾಲಂ ಶೀರ್ಷಿಕೆ / ತಲೆಬರಹಗಳು ಕೂಡ ಅರ್ಥಪೂರ್ಣವಾಗಿವೆ. ತಡವಾಗಿ ಯಾದರೂ ಅತ್ಯುತ್ತಮವಾದುದನ್ನೇ ಓದುಗರಿಗೆ ನೀಡಿದ್ದಕ್ಕಾಗಿ ಧನ್ಯವಾದಗಳು.

ಅವಲೋಕನ ಲೇಖನ ಮಾಲೆ ಇಂದಿನ ಸಂದರ್ಭಕ್ಕೆ ಸರಿಯಾಗಿಯೇ ಇದೆ. ರೆಕ್ಕೆ ಕತ್ತರಿಸಿದ ಹಕ್ಕಿಗಳಂತೆ ಹಾರಾಡುತ್ತ ಸಿಕ್ಕ-ಸಿಕ್ಕಲ್ಲಿ ಆಶ್ರಯ ಪಡೆಯಲು ಹವಣಿಸುತ್ತಿರುವ ದಲಿತ-ಹಿಂದುಳಿದ-ಅಲ್ಪಸಂಖ್ಯಾತ ಸಮುದಾಯದ ಮುಖಂಡರಿಗೆ ಇದೊಂದು ಮಾಹಿತಿಪೂರ್ಣ ಪಾಠವಾಗಲಿ.

ಇಂತಿ,
ಕಲ್ಲಣ್ಣ ಸಮಗಾರ
ರಾಯಚೂರು

ವಿದ್ಯಾರ್ಥಿಗಳ ಮೆಚ್ಚುಗೆ

'ಸಂವಾದ' ಪತ್ರಿಕಾ ಬಳಗಕ್ಕೆ ನಮಸ್ಕಾರಗಳು

'ಸಂವಾದ' ಪ್ರತಿ ಸಂಚಿಕೆಯನ್ನು ತಪ್ಪದೇ ಓದುತ್ತಿರುವ ನಮಗೆ ಪ್ರತೀ ಸಂಚಿಕೆಯಲ್ಲೂ ವಿಚಾರಣಪೂರ್ಣ ಲೇಖನಗಳನ್ನು ನೀಡುತ್ತಲೇ ಇದ್ದೀರಿ ಅದಕ್ಕಾಗಿ ವಿದ್ಯಾರ್ಥಿ ಸಮುದಾಯದ ಪರವಾಗಿ ತಮಗೆ ಧನ್ಯವಾದಗಳು.

ಕೆ.ಪಿ. ಅಶ್ವತ್, ಆರ್. ಶಿವಣ್ಣ,
ಲೋಕೇಶ್ ಮತ್ತು ಸ್ನೇಹಿತರು



ಮನಗೆದ್ದ ಸಂಪಾದಕೀಯ

ಗೆಳೆಯ ಸಂಪಾದಕ ಇಂದೂಧರ ಹೊನ್ನಾಪುರ

ಜೂನ್ ತಿಂಗಳ 'ಸಂವಾದ' ಪತ್ರಿಕೆಯಲ್ಲಿ ನೀನು ಬರೆದ ಸಂಪಾದಕೀಯ ಅಂತರಂಗ ಕಾಲಂನಲ್ಲಿ "ಮೀಸಲಾತಿ ನೀತಿಯ ಬುಡಮೇಲು" ಲೇಖನದಲ್ಲಿ ಕಪಟ ಸರ್ಕಾರಗಳ ದ್ವಂದ್ವ ನಿಲುವನ್ನು ಚೆನ್ನಾಗಿ ನಿರೂಪಿಸಿದ್ದೀಯ.

ಮೀಸಲಾತಿಯನ್ನು ಕೇಂದ್ರವಾಗಿಟ್ಟುಕೊಂಡು ಇಂದಿನ ವ್ಯವಸ್ಥೆಯ ಹುಳುಕುಗಳನ್ನು ಲೇವಡಿ ಮಾಡುತ್ತಾ ನೈತಿಕ ಅಂತಃ ಸತ್ವವನ್ನು ಕಳೆದುಕೊಂಡಿರುವ ರಾಜಕೀಯ ಶಕ್ತಿಗಳನ್ನು ತರಾಟೆಗೆ ತೆಗೆದುಕೊಂಡ ನಿನ್ನ ನಿಷ್ಠೂರವಾದ ಮಾತುಗಳು ನನಗೆ ತುಂಬ ಇಷ್ಟವಾಯಿತು.

ಅಲ್ಲದೆ ಬಡವರಿಗೆ ಮೀಸಲಾತಿ ನೀಡುವುದಾದರೆ ಕೊಳೆಗೇರಿ ವಾಸಿಗಳಿಗೆ ಮಾತ್ರ ನೀಡಬೇಕೆನ್ನುವ ನಿನ್ನ ಪ್ರಸ್ತಾಪ ಸ್ವಾಗತಾರ್ಹ.

ನಾನು ಬೆಂಗಳೂರಿಗೆ ಬಂದಾಗ ಕೆಲವು ವಿಚಾರಗಳ ಬಗ್ಗೆ ನಿನ್ನೊಡನೆ ಖುದ್ದಾಗಿ ಚರ್ಚಿಸಬೇಕು. ನಿರೀಕ್ಷೆಯಲ್ಲಿ,

ವಂದನೆಗಳೊಂದಿಗೆ,
ಎಸ್. ಪೆಮ್ಮಯ್ಯ, ವಕೀಲರು
ಮಡಿಕೇರಿ

ಜವಾಬ್ದಾರಿಯುತ ಬದುಕಿಗೆ ಸ್ಫೂರ್ತಿ

ಪ್ರಿಯ ಸಂಪಾದಕರೆ,

ಕಳೆದ ಮೂರು ಸಂಚಿಕೆಯಿಂದ 'ಸಂವಾದ'ವನ್ನು ಓದುತ್ತಿದ್ದೇನೆ. ಸ್ವತಂತ್ರ ಬಂದು ಐದು ದಶಕಗಳೇ ಕಳೆದರೂ, ಇನ್ನೂ ಮೂಲಭೂತ ಹಕ್ಕುಗಳಿಗಾಗಿ ಪರಿತಪಿಸುತ್ತಿರುವ ದಲಿತರು, ಜಾಗತಿಕ ವ್ಯವಸ್ಥೆಯಲ್ಲಿ ಮತ್ತಷ್ಟೂ ಗೊಂದಲ ಗೊಳ್ಳುತ್ತಿರುವ ಈ ಸ್ಥಿತಿಯಲ್ಲಿ, ದಲಿತರು ವಿವಿಧ ನೆಲೆಯಲ್ಲಿ ಯೋಚನೆ ಮಾಡಲು, ತಮ್ಮದೇ ಆದ ಜವಾಬ್ದಾರಿಯುತ ಬದುಕನ್ನು ಬದುಕಲು ಆಲೋಚಿಸು ವಂತೆ ಮಾಡುವ ನಿಟ್ಟಿನಲ್ಲಿ 'ಸಂವಾದ' ಮಾಸಪತ್ರಿಕೆಯು ನಾಡಿನ ದಲಿತರಿಗೆ ಅಷ್ಟೇ ಅಲ್ಲದೆ ಜಗತ್ತಿನ ಶೋಷಿತ ವರ್ಗಕ್ಕೆ ನೆರವಾಗಬಲ್ಲ ಪತ್ರಿಕೆಯಂತೆ ಮೂಡಿ ಬರುತ್ತಿದೆ.

ಪತ್ರಿಕೆಯಲ್ಲಿನ ಎಲ್ಲಾ ಲೇಖನಗಳು ವಿಚಾರಪೂರಿತವಾಗಿದ್ದು, ವಿನ್ಯಾಸವೂ ಮನಸೆಳೆಯುವಂತಿದೆ. ಮೇರಾ ಭಾರತ್ ಮಹಾನ್ ಪತ್ರಿಕೆಯ ಮೆರಗನ್ನು ಹೆಚ್ಚಿಸಿದೆ. ಮುಂದಿನ ಸಂಚಿಕೆಯಿಂದ ಪತ್ರಿಕೆಯನ್ನು ನನ್ನ ವಿಳಾಸಕ್ಕೆ ಕಳುಹಿಸಿಕೊಡಿ ಚಂದದಾರನಾಗಲು ನೂರು ರೂ.ಗಳನ್ನು ಎಂ.ಓ. ಮಾಡಿದ್ದೇನೆ.

ನಮಸ್ಕಾರಗಳು
[illegible]ಸತ್‌ಕುಮಾರ್, ಮುದ್ದೇನಹಳ್ಳಿ

ಸಂವಾದ
ಚಂದಾ ವಿವರ
ಬಿಡಿ ಪ್ರತಿ : ರೂ. 10/-
ವಾರ್ಷಿಕ : ರೂ. 100/-
ವಿಶೇಷ ವಾರ್ಷಿಕ ಚಂದಾ: ರೂ. 500/-
ಆಜೀವ : ರೂ. 5,000/-
ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು ಡಿಡಿ, ಎಂ.ಓ, ಮೂಲಕ ಮಾತ್ರ ಕಳುಹಿಸಬೇಕು
ಚಂದಾ ಕಳಿಸಬೇಕಾದ ವಿಳಾಸ :
ಸಂವಾದ ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು-91

ನಿಮ್ಮ ಶ್ರಮಕ್ಕೊಂದು ಥ್ಯಾಂಕ್ಸ್

ಪ್ರಿಯ ಸಂಪಾದಕರೆ,

ಜೂನ್ ತಿಂಗಳ 'ಸಂವಾದ' ಸಂಚಿಕೆ ಅದ್ಭುತವಾಗಿ ಮೂಡಿ ಬಂದಿದೆ. ಈ ಸಂಚಿಕೆಯ ಎಲ್ಲಾ ಲೇಖನಗಳೂ ಒಂದಕ್ಕಿಂತ ಒಂದು ಉತ್ತಮವಾಗಿವೆ. ಚಿಂತನಾರ್ಹವಾಗಿವೆ. ಅದರ ಹಿಂದಿನ ಸಂಚಿಕೆಯಲ್ಲಿ ಖಾಸಗೀ ಕ್ಷೇತ್ರದ ಮೀಸಲಾತಿ ಕುರಿತು ಅಪಸ್ವರವೆತ್ತಿದ್ದ ಮೋಹನ್‌ರಾಂರವರ ಲೇಖನಕ್ಕೆ ಚಿಂತಕರಾದ ನಟರಾಜ್ ಹುಳಿಯಾರ್ ಮತ್ತು ಮಿತ್ರರಾದ ಮಂಜುರವರು ಚೆನ್ನಾಗಿ ಜಾಡಿಸಿದ್ದಾರೆ.

'ಸಂವಾದ'ವನ್ನು ಸಂಚಿಕೆಯಿಂದ ಸಂಚಿಕೆಗೆ ಚೆನ್ನಾಗಿ ತರುತ್ತಿರುವ ನಿಮ್ಮ ಶ್ರಮಕ್ಕೊಂದು ಥ್ಯಾಂಕ್ಸ್.

ಸಿ.ವಿ. ಲೋಕೇಶ್ವರ್, ಕನಕಪುರ

ಸ್ತ್ರೀ ಸಂವೇದನೆಯ ಪ್ರತೀಕ

ಆತ್ಮೀಯರೆ,

'ಸಂವಾದ'ದ ಕಳೆದೆರಡು ಸಂಚಿಕೆಗಳಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿ ಮಹಿಳೆಯರನ್ನು ಕುರಿತು ಬಂದಿರುವ ಲೇಖನಗಳು ನನಗೆ ತುಂಬಾ ಇಷ್ಟವಾದವು. ಹೆಣ್ಣನ್ನು ಭೂಮಿ-ಆಗಸ-ಪ್ರಕೃತಿಗಳಿಗೆ ಹೋಲಿಸುತ್ತಾ ಜಗತ್ತಿನೆದುರು ಹುಸಿ ಬಡಾಯಿ ಕೊಚ್ಚಿಕೊಳ್ಳುವ ಭಾರತದ ಭಂಡ ಸ್ತ್ರೀ ಶೋಷಕರಿಗೆ ಮತ್ತು ಸನಾತನವಾದಿಗಳಿಗೆ ಭಾರತದಲ್ಲಿನ ಹೆಣ್ಣಿಗೆ ಜಗತ್ತಿನೆಲ್ಲಾ ಸ್ತ್ರೀ ಕುಲಕ್ಕೆ ಹೋಲಿಸಿದರೆ 89ನೇ ಸ್ಥಾನವೆಂಬ ಸಮೀಕ್ಷಾ ವರದಿ ಕೇಳಿ ಓದಿ ನಾಚಿಕೆಯಾಗದಿದ್ದರೆ ಅದಕ್ಕಿಂತ ದುರಂತ ಬೇರೊಂದಿಲ್ಲ.

'ಸಂವಾದ' ಯಶಸ್ವಿಯಾಗಲಿ. ನೊಂದ ಸ್ತ್ರೀಕುಲದಲ್ಲಿ ಧೈರ್ಯ ತುಂಬಲಿ.

ಸುಮಿತ್ರಾ ಪ್ರಭಾಕರ್
ಸ್ತ್ರೀ ಜಾಗೃತಿ ವೇದಿಕೆ, ಜಮಖಂಡಿ

ಅಂತರ್‌ಜಾತಿ ವಿವಾಹ : ಮಹಿಳೆ ನೇಣಿಗೆ ಶರಣು

ಬೆಂಗಳೂರು, ಜೂನ್ 19 : ಅಂತರ್ ಜಾತಿ ವಿವಾಹವಾಗಿದ್ದ ಮಹಿಳೆಯೊಬ್ಬರು, ತವರು ಮನೆಯಲ್ಲಿ ತನ್ನನ್ನು ಕೀಳಾಗಿ ಕಂಡರೆಂಬ ಕಾರಣಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕೆ.ಆರ್.ಪುರದ ವಿ.ಬಿ. ಲೇಔಟ್‌ನಲ್ಲಿ ಬುಧವಾರ ನಡೆದಿದೆ.

ಭೂ ನೋಂದಣಾಧಿಕಾರಿ ಕಚೇರಿಯಲ್ಲಿ ಸಹಾಯಕರಾಗಿ ಕೆಲಸ ಮಾಡುವ ಶ್ರೀನಿವಾಸ ಅವರ ಪತ್ನಿ ಲೀಲಾವತಿ (25) ಆತ್ಮಹತ್ಯೆ ಮಾಡಿಕೊಂಡ ಮಹಿಳೆ, ಇವರಿಬ್ಬರೂ ಒಂದೂವರೆ ವರ್ಷದ ಹಿಂದೆ ಪ್ರೀತಿಸಿ ಅಂತರ್‌ಜಾತಿ ವಿವಾಹವಾಗಿದ್ದರು.

ಇತ್ತೀಚೆಗೆ ಕೋರಮಂಗಲದಲ್ಲಿನ ತವರು ಮನೆಗೆ ಲೀಲಾವತಿ ಹೋಗಿದ್ದರು. ಆ ಸಂದರ್ಭದಲ್ಲಿ ತವರು ಮನೆಯಲ್ಲಿ ಯಾರೂ ಸರಿಯಾಗಿ ಮಾತನಾಡದೆ ಕೀಳಾಗಿ ಕಂಡರು. ಇದರಿಂದ ಬೇಸತ್ತ ಲೀಲಾವತಿ ನಂತರ ಗಂಡನ ಮನೆಗೆ ವಾಪಸ್ಸಾದರು.

ಬುಧವಾರ ಬೆಳಿಗ್ಗೆ ಪತಿ ಶ್ರೀನಿವಾಸ ಕಚೇರಿಗೆ ಹೋದಾಗ ಮನೆಯಲ್ಲಿ ಸೀರೆಯಿಂದ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆ.ಆರ್. ಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

(ಪ್ರಜಾವಾಣಿ)

ಮೇರಾ ಭಾರತ್ ಮಹಾನ್

ಚಿತ್ರದುರ್ಗ ಜಿಲ್ಲಾಧಿಕಾರಿಯಿಂದ ಕಿರುಕುಳ, ಜಾತಿ ನಿಂದನೆ : ದಲಿತ ಅಧಿಕಾರಿಯ ದೂರು

ಬೆಂಗಳೂರು, ಜೂ. 4 : ದಲಿತರಾದ ತಮ್ಮ ಮೇಲೆ ಜಿಲ್ಲಾಧಿಕಾರಿಯವರು ವಿನಾಕಾರಣ ಕಿರುಕುಳ ನೀಡುತ್ತಿದ್ದಾರೆ, ತೇಜೋವಧೆಗೆ ಪ್ರಯತ್ನಿಸುತ್ತಿದ್ದಾರಲ್ಲದೇ, ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿದ್ದಾರೆಂದು ಆರೋಪಿಸಿ ಜಿಲ್ಲಾಧಿಕಾರಿಯ ವಿರುದ್ಧ ಕಾನೂನುಕ್ರಮಕ್ಕೆ ತಹಶೀಲ್ದಾರರೊಬ್ಬರು ದೂರು ನೀಡಿದ ಘಟನೆ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲಾಧಿಕಾರಿಯ ಕಿರುಕುಳ ತಾಳಲಾರದೇ ಸೋಮವಾರದಂದು ತಾವು ಜಿಲ್ಲಾಧಿಕಾರಿಯವರನ್ನೇ ಖುದ್ದಾಗಿ ಭೇಟಿಯಾಗಿ ಸಮಸ್ಯೆಗಳನ್ನು ವಿವರಿಸಿದರೆ ಅವಾಚ್ಯ ಶಬ್ದಗಳೊಂದಿಗೆ ತಮ್ಮನ್ನು ನಿಂದಿಸಿ, ಕೆಲಸದಿಂದ ಡಿಸ್‌ಮಿಸ್ ಮಾಡುವ ಬೆದರಿಕೆ ಹಾಕಿದರಲ್ಲದೆ, ಜಾತಿ ನಿಂದನೆ ಮಾಡಿದ್ದಾರೆಂದು ಆರೋಪಿಸಿರುವ ತಹಸೀಲ್ದಾರರು ದಲಿತರ ಮೇಲಿನ ದೌರ್ಜನ್ಯ ತಡೆ ಕಾಯಿದೆಯನ್ವಯ ಜಿಲ್ಲಾಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ತಾವು ಪರಿಶಿಷ್ಟ ವರ್ಗದವರು ಹಾಗೂ ಜಿಲ್ಲಾಧಿಕಾರಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿಲ್ಲ ಎಂಬ ಕಾರಣಕ್ಕಾಗಿ ಜಿಲ್ಲಾಧಿಕಾರಿ ಸಿ.ಎನ್. ಸೀತಾರಾಂ ಮಾನಸಿಕ ಕಿರುಕುಳ ನೀಡುತ್ತಿರುವುದರೊಂದಿಗೆ, ಸಾರ್ವಜನಿಕ ಸಭೆಯಲ್ಲಿಯೇ ಅವಮಾನ ಮಾಡಿದ್ದಾರೆ ಎಂದು ತಹಶೀಲ್ದಾರ ಎಚ್.ಪಿ. ನಾಗರಾಜ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರಲ್ಲದೆ, ಜಿಲ್ಲಾಧಿಕಾರಿ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿದ್ದಾರೆ.

(ಜನವಾಹಿನಿ)

ದಲಿತರ ಮೇಲೆ ದೌರ್ಜನ್ಯ: ಸಚಿವರ ವಿರುದ್ಧ ಪ್ರಕರಣ ದಾಖಲು

ಪಟ್ನಾ, ಜೂನ್ 21 : (ಯುಎನ್‌ಐ): ದಲಿತರ ಮೇಲೆ ದೌರ್ಜನ್ಯ ನಡೆಸಿದ ಆರೋಪದ ಮೇಲೆ ಬಿಹಾರದ ವಾರ್ತಾ ಸಚಿವ ಸೀತಾರಾಮ್ ಯಾದವ್ ವಿರುದ್ಧ ಮೂರು ಪ್ರಥಮ ಮಾಹಿತಿ ವರದಿ (ಎಫ್‌ಐಆರ್)ಗಳನ್ನು ದಾಖಲಿಸಲಾಗಿದೆ.

ಸೀತಾಮುಡಿ ನ್ಯಾಯಾಲಯದ ನಿರ್ದೇಶನದಂತೆ ನಾನ್ಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್‌ಗಳನ್ನು ದಾಖಲುಗೊಳಿಸಲಾಗಿದೆ. ಯಾದವ್ ಅವರು ದಲಿತರ ಮೇಲೆ ದೌರ್ಜನ್ಯ ನಡೆಸಿ ಅವರ ಭೂಮಿಯನ್ನು ಕಸಿದು ಕೊಳ್ಳುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಅಕ್ರಮವಾಗಿ ವಶಪಡಿಸಿಕೊಂಡ ಭೂಮಿಯಲ್ಲಿ ಅವರು ಮನೆ ಕಟ್ಟಿಕೊಂಡಿದ್ದಾರೆ ಎಂದು ದೂರಲಾಗಿದೆ. ಪೊಲೀಸರು ಸಚಿವರ ವಿರುದ್ಧ ದೂರು ದಾಖಲಿಸದೇ ಹೋದಾಗ ದಲಿತರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯ ಮೊಕದ್ದಮೆ ದಾಖಲಿಸುವಂತೆ ಪೊಲೀಸರಿಗೆ ಇತ್ತೀಚೆಗೆ ಆದೇಶ ನೀಡಿತ್ತು.

(ಪ್ರಜಾವಾಣಿ)

ಎರಡು ವರ್ಷಗಳಲ್ಲಿ 976 ಅತ್ಯಾಚಾರ ಪ್ರಕರಣಗಳು

ತಿರುವನಂತಪುರಂ, ಜೂನ್ 17 (ಯುಎನ್‌ಐ) : ಕೇರಳದಲ್ಲಿ ಕಳೆದ ಎರಡು ವರ್ಷಗಳಲ್ಲಿ 976 ಅತ್ಯಾಚಾರ ಪ್ರಕರಣಗಳು, 84 ವಿಚಾರಣಾಧೀನ ಕೈದಿಗಳ ಸಾವು, 256 ಮಹಿಳಾ ಹತ್ಯೆ ಪ್ರಕರಣಗಳು ವರದಿಯಾಗಿವೆ ಎಂದು ಮುಖ್ಯಮಂತ್ರಿ ಎ.ಕೆ. ಆಂಟನಿ ಇಂದು ವಿಧಾನಸಭೆಗೆ ತಿಳಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಅತ್ಯಾಚಾರಕ್ಕೆ ಬಲಿಯಾದವರಲ್ಲಿ 344 ಜನರು ಅಲ್ಪ ವಯಸ್ಕರಾಗಿದ್ದಾರೆ. 350 ಮಕ್ಕಳಿಗೆ ವಿವಿಧ ತೆರನಾದ ಕಿರುಕುಳ ನೀಡಿದ ಬಗ್ಗೆ ವರದಿಯಾಗಿದೆ.

(ಪ್ರಜಾವಾಣಿ)

ಅಧಿಕಾರಿಗಳ ಬಂಧನ

ಹಾವೇರಿ, ಜೂ. 5 : ಇಲ್ಲಿಯ ತೋಟಗಾರಿಕೆ ಸಹಾಯಕ ನಿರ್ದೇಶಕ ಗಂಗಾಧರಪ್ಪ ಎಂಬುವರು ತಮ್ಮ ಹಿರಿಯ ಅಧಿಕಾರಿಗಳ ಮೇಲೆ ದೌರ್ಜನ್ಯ ಹಾಗೂ ಜಾತಿನಿಂದನೆ ಆರೋಪವನ್ನು ಹೊರಿಸಿ ಪೊಲೀಸರಿಗೆ ದೂರು ನೀಡಿದ್ದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾವೇರಿ ಪೊಲೀಸರು ಇಬ್ಬರು ಅಧಿಕಾರಿಗಳನ್ನು ಬಂಧಿಸಿರುವುದಾಗಿ ತಿಳಿದಿದೆ.

ಬಂಧಿತರು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ವಿ.ಕೆ. ಅಂಗಡಿ ಮತ್ತು ಹಿರಿಯ ಸಹಾಯಕ ಹೇಮಂತಕುಮಾರ ಎಂದು ಪೊಲೀಸರು ತಿಳಿಸಿದ್ದಾರೆ.

(ಉದಯವಾಣಿ)

ಲಂಚ ಕೊಟ್ಟರೂ ಸಿಗದ ಹಕ್ಕುಪತ್ರ : ಮರ್ಮಾಂಗ ಕತ್ತರಿಸಿಕೊಂಡ ರೈತ

ಭರತಪುರ್, ಜೂನ್ 12 (ಯುಎನ್‌ಐ) : ಕೇಳಿದಷ್ಟು ಲಂಚ ಕೊಟ್ಟರೂ, ಅಧಿಕಾರಿಗಳು ಕೃಷಿ ಭೂಮಿಯ ಹಕ್ಕುಪತ್ರ ನೀಡದಿರುವುದನ್ನು ಪ್ರತಿಭಟಿಸಿ ಪಟವಾರಿಯ ಕಚೇರಿ ಆವರಣದಲ್ಲೆ ರೈತನೊಬ್ಬ ತನ್ನ ಮರ್ಮಾಂಗವನ್ನು ಕತ್ತರಿಸಿಕೊಂಡ ದಾರುಣ ಘಟನೆ ರಾಜನಗರ ತಹಶೀಲ್‌ನ ಭಾರ್ವಾ ಗ್ರಾಮದಲ್ಲಿ ಜರುಗಿದೆ.

ತೀವ್ರವಾಗಿ ಗಾಯಗೊಂಡ ರೈತ ಅನಾರಿ ಪಾಲ್ ಎಂಬುವನನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದ್ದು, ಆತನ ಸ್ಥಿತಿ ಗಂಭೀರವಾಗಿದೆ ಎಂದು ಜಿಲ್ಲಾ ಪೊಲೀಸ ಅಧಿಕಾರಿ ರವಿ ಗುಪ್ತಾ ಅವರು ತಿಳಿಸಿದ್ದಾರೆ.

ಜಮೀನಿನ ಹಕ್ಕು ಪತ್ರಕ್ಕಾಗಿ ಲಂಚ ನೀಡಿದ್ದ ರೈತ, ಹಕ್ಕುಪತ್ರ ಸಿಗದಾಗ ಸಂಬಂಧಪಟ್ಟ ಅಧಿಕಾರಿಯೊಂದಿಗೆ ಮಾತಿನ ಚಕಮಕಿ ನಡೆಸಿ, ಹತಾಶನಾಗಿ ಈ ಕೃತ್ಯಕ್ಕೆ ಮುಂದಾಗಿರಬಹುದೆಂದು ರವಿ ಗುಪ್ತಾ ಅವರು ಹೇಳಿದ್ದಾರೆ.

ಜಿಲ್ಲಾಧಿಕಾರಿ ರಮಾನಂದ ಶುಕ್ಲಾ ಪ್ರಕರಣದ ಇಲಾಖಾ ತನಿಖೆಗೆ ಆದೇಶ ನೀಡಿದ್ದಾರೆ.

(ಪ್ರಜಾವಾಣಿ)

ಅಂತರಂಗ

ಹೆಡೆ ಎತ್ತಿದ ಅಸ್ಪೃಶ್ಯತೆಯ ಘಟಸರ್ಪ



ಅಸ್ಪೃಶ್ಯತೆಯ ಘಟಸರ್ಪ ಮತ್ತೆ ಹೆಡೆ ಎತ್ತಿದೆ. ಸರ್ಕಾರದ ಮಹಾತ್ವಾಕಾಂಕ್ಷೆಯ ಅಕ್ಷರ ದಾಸೋಹ, ಹುದುಗಿದ್ದ ಜಾತಿ ವಿಷವನ್ನು ಬಹಿರಂಗವಾಗಿ ಕಾರಲಾರಂಭಿಸಿದೆ. ಇದುವರೆಗೆ ಕೇವಲ ವೈಯಕ್ತಿಕ ನೆಲೆಗಳಲ್ಲಿ ಅಥವ ಯಾವುದೋ ಒಂದು ಊರು-ಕೇರಿಗೆ ಮಾತ್ರ ಸೀಮಿತವಾಗಿದ್ದ ಅಸ್ಪೃಶ್ಯತೆ ಇಂದು ಇಡೀ ರಾಜ್ಯವನ್ನೇ ಆವರಿಸಿ, ನಾಗರಿಕತೆಯನ್ನೇ ನಾಚಿಸುವಷ್ಟರಮಟ್ಟಿಗೆ ಬಹಿರಂಗವಾಗಿ ತನ್ನ ಕರಾಳ ರೂಪವನ್ನು ಪ್ರದರ್ಶಿಸುತ್ತಿದೆ.

ತುರುವೇಕೆರೆ ಘಟನೆಯನ್ನು ನೋಡಿ; ಬಿಸಿಯೂಟದ ಮೊದಲ ದಿನ ದಲಿತ ಮಕ್ಕಳೊಂದಿಗೆ ಸಿಹಿಯೂಟ ಮಾಡಿದ ಇತರೆ ಜಾತಿ ಮಕ್ಕಳಿಗೆ ಕಾಯಿಸಿದ ಬೇವಿನ ಕಡ್ಡಿ ಬರೆಯೊಂದಿಗೆ ಗೋಮೂತ್ರದ ಸ್ನಾನ ಮಾಡಿಸಿ ಶುದ್ಧಿಗೊಳಿಸಿದ ವರದಿ ಬಂದಿದೆ. ಚಾಮರಾಜ ನಗರ ಜಿಲ್ಲೆಯಲ್ಲಿ ಮೇಲ್ಜಾತಿ ಮಕ್ಕಳು ಊಟ ಮಾಡಿದ ನಂತರ ದಲಿತ ಮಕ್ಕಳಿಗೆ ಬಡಿಸಲಾಗಿದೆ. ಕೋಲಾರ-ಮಂಡ್ಯ ಜಿಲ್ಲೆಗಳಲ್ಲಿ ಅಡುಗೆಯವರಾಗಿ ನೇಮಕಗೊಂಡ ಪರಿಶಿಷ್ಟ ಜಾತಿ ಮಹಿಳೆಯರನ್ನು ಹೊರಗಿಟ್ಟು ಅಡಿಗೆ ಮಾಡಲಾಗಿದೆ. ಹುಬ್ಬಳ್ಳಿಯಲ್ಲಿ ಪರಿಶಿಷ್ಟ ಜಾತಿಯ ಅಡಿಗೆಯವರಿದ್ದರೆ, ಯೋಜನೆಯನ್ನೇ ಕೈಬಿಡಬೇಕೆಂದು ಪ್ರತಿಭಟನೆ ಮಾಡಲಾಗಿದೆ. ಜನಪ್ರತಿನಿಧಿಗಳೆನಿಸಿಕೊಳ್ಳುವ ಜನರೇ ಇಂಥ ಅಮಾನವೀಯ ಕೃತ್ಯಗಳಿಗೆ ಮುಂದಾಗಿದ್ದಾರೆ.

ಇಷ್ಟೆಲ್ಲಾ ಅಡಚಣೆ ನಡುವೆಯೂ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಮುಂದಾದ ಕಡೆ, ಆಹಾರಕ್ಕೆ ವಿಷವಸ್ತುಗಳನ್ನು ಸೇರಿಸಿ ಉಂಡ ವಿದ್ಯಾರ್ಥಿಗಳು ಅಸ್ವಸ್ಥರಾಗುವ ಘಟನೆಗಳೂ ನಡೆಯುತ್ತಿವೆ. ಕಳಪೆ ಆಹಾರ ಧಾನ್ಯಗಳ ಕಾರಣ ನೀಡಿ ಅಕ್ಷರ ದಾಸೋಹವನ್ನು ನಿಲ್ಲಿಸುವ ವ್ಯವಸ್ಥಿತ ಸಂಚನ್ನು ಮೇಲ್ಜಾತಿಯ ಅವಿವೇಕಿಗಳು ಮಾಡುತ್ತಿದ್ದಾರಾದರೂ, ಅವರ ಮೂಲ ಉದ್ದೇಶ ಇರುವುದು ದಲಿತ ಮಕ್ಕಳಿಗೆ ಯೋಜನೆಯ ಲಾಭ ಸಿಗದಂತೆ ಮಾಡುವುದೇ ಆಗಿರುವುದು ಈಗ ಗುಟ್ಟಾಗಿ ಉಳಿದಿಲ್ಲ.

ಸರ್ಕಾರ ಕಳಪೆ ಆಹಾರ ಸಾಮಗ್ರಿ ಒದಗಿಸುವುದು, ಅಡಿಗೆ ಸ್ಥಳದಲ್ಲಿ ಸ್ವಚ್ಛತೆ ಕಾಪಾಡದಿರುವುದು. ಪಾತ್ರ ಪಗಡ ಇತ್ಯಾದಿ ಸಮಸ್ಯೆಗಳು ಅಲ್ಲಲ್ಲಿ ಇರಬಹುದಾದರೂ, ಯೋಜನೆ ವಿರುದ್ಧದ ಹೋರಾಟಕ್ಕೆ ಇವು ನೆಪ ಮಾತ್ರ. ನಿಜವಾದ ಸಮಸ್ಯೆ ಇರುವುದು ಜನರ ಮನಸ್ಸಿನಲ್ಲಿ. ಜಾತಿ ವಿಷದಿಂದ ತುಂಬಿ ಹೋಗಿರುವ ಮನಸ್ಸುಗಳಿಗೆ ನಿಜವಾಗಿಯೂ ಬಡವರ ದೀನ ದಲಿತರ ಪರವಾದ ಈ ಕಾರ್ಯಕ್ರಮವನ್ನು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಂಥ ಮನಸ್ಸುಗಳನ್ನೇ ರಾಜಕೀಯ ಪಕ್ಷಗಳು ಹಾಗೂ ಧುರೀಣರು ಪ್ರತಿನಿಧಿಸುತ್ತಿರುವುದರಿಂದ ಅಕ್ಷರ ದಾಸೋಹದ ವಿರುದ್ಧ ಅಪಸ್ವರ ಎತ್ತುತ್ತಿದ್ದಾರೆ.

ಆಶ್ಚರ್ಯ ಎಂದರೆ ಕಳೆದ ವರ್ಷ ಇದೇ ಕಾರ್ಯಕ್ರಮವನ್ನು ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಆರಂಭಿಸಲಾಗಿತ್ತು. ಅಲ್ಲಿ ಯಾವ ಸಮಸ್ಯೆಗಳೂ ಉದ್ಭವವಾಗಲಿಲ್ಲ. ಇಡೀ ವರ್ಷ ಯಾವ ಘರ್ಷಣೆಗಳಿಗೂ ಅವಕಾಶವಿಲ್ಲದಂತೆ ಅಲ್ಲಿ ಅಕ್ಷರ ದಾಸೋಹ ಯಶಸ್ವಿಯಾಗಿ ನಡೆಯಿತು. ಅದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿದಾಗ ಮಾತ್ರ ಯಾಕೆ ಕೋಲಾಹಲ ಎದ್ದಿದೆ? ಯೋಜನೆಯಿಂದ ಸರ್ಕಾರಕ್ಕೆ ಅನುಕೂಲವಾಗುತ್ತದೆ ಎಂಬ ಭಾವನೆಯಿಂದ ವಿರೋಧ ಪಕ್ಷಗಳು ಇಂಥ ಕಾರ್ಯಕ್ಕೆ ಕೈಹಾಕಿರುವ ಸಾಧ್ಯತೆಗಳಿವೆ. ಚುನಾವಣೆ ಹತ್ತಿರ ಬರುತ್ತಿರುವುದರಿಂದ ರಾಜಕೀಯ ಪಕ್ಷಗಳು ಲಾಭ-ನಷ್ಟದ ಲೆಕ್ಕಾಚಾರದಲ್ಲಿ ತೊಡಗಿ ಅನವಶ್ಯಕವಾಗಿ ಹುಯಿಲೆಬ್ಬಿಸುತ್ತಿರುವುದು ಸ್ಪಷ್ಟವಾಗುತ್ತಿದೆ.

ಆಳುವ ಸರ್ಕಾರಗಳು ದೀನ-ದಲಿತರು ಹಾಗೂ ಸಮಾಜದ ಇತರೆ ದುರ್ಬಲ ವರ್ಗಗಳ ಏಳಿಗೆಗಾಗಿ ಆಗಾಗ್ಗೆ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ರಾಜ್ಯದ ಕಾಂಗ್ರೆಸ್ ಸರ್ಕಾರ ಮಾಡಿದ್ದೂ ಅದನ್ನೇ. ಸರ್ಕಾರಿ ಶಾಲೆಗಳಲ್ಲಿ ಹಾಜರಾತಿಯನ್ನು ಹೆಚ್ಚಿಸುವ ಹಾಗೂ ಓದಿನ ನಡುವೆ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ತಡೆಗಟ್ಟುವ ಉದ್ದೇಶದಿಂದ ಆರಂಭಿಸಲಾದ ಮಹತ್ವಾಕಾಂಕ್ಷೆಯ ಯೋಜನೆ ಅಕ್ಷರ ದಾಸೋಹ. ಸರ್ಕಾರದ ಎಲ್ಲಾ ಯೋಜನೆಗಳಂತೆ ಇದಕ್ಕೂ ಆರಂಭದ ಅಡಚಣೆಗಳು ಕಿರಿಕಿರಿಗಳು ಸಾಮಾನ್ಯ. ರಾಜಕಾರಣಿಗಳು ಇದನ್ನೇ ದೊಡ್ಡದು ಮಾಡಿ ಯೋಜನೆ ವಿರುದ್ಧ ಅಪಪ್ರಚಾರ ಮಾಡುವುದೂ ಸಾಮಾನ್ಯ.

ಇದೇನೇ ಇದ್ದರೂ, ಅಕ್ಷರ ದಾಸೋಹದಿಂದ ಲಕ್ಷಾಂತರ ನಿರ್ಗತಿಕ ಮಕ್ಕಳಿಗೆ ವಿದ್ಯೆ ಜತೆಯಲ್ಲಿ ಊಟವೂ ಸಿಗುತ್ತಿದೆ. ಮಕ್ಕಳನ್ನು ಶಾಲೆಯಿಂದ ತಪ್ಪಿಸಿ ಹೊಟ್ಟೆಪಾಡಿಗಾಗಿ ದುಡಿಯಲು ಕಳುಹಿಸುತ್ತಿದ್ದ ತಂದೆ ತಾಯಂದಿರೂ ಊಟದ ನೆಪದಲ್ಲಾದರೂ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಕ್ಕಳೂ ಊಟದ ಆಸೆಯಿಂದಲಾದರೂ ಶಾಲೆಗೆ ತಪ್ಪದೇ ಹಾಜರಾಗುತ್ತವೆ. ಆ ಮೂಲಕವಾದರೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ದೀನ ದಲಿತರು ಮತ್ತು ದುರ್ಬಲ ವರ್ಗದ ಮಕ್ಕಳಿಗೆ ದಕ್ಕಿನಂತಾಗುತ್ತದೆ. ಆದುದರಿಂದ ಎಂಥ ಒತ್ತಡ, ಪ್ರತಿರೋಧ, ಅಡಚಣೆಗಳು ಎದುರಾದರೂ ಸರ್ಕಾರ ಈ ಕಾರ್ಯಕ್ರಮವನ್ನು ಕೈಬಿಡದೆ ಮುಂದುವರೆಸಬೇಕು. ಅಂಥ ಇಚ್ಛಾಶಕ್ತಿ ಪ್ರದರ್ಶನಕ್ಕೆ ಸರ್ಕಾರ ಸಿದ್ಧವಾಗಬೇಕು.

★ ★ ★

ಗುಜರಾತಿನ ಬೆಸ್ಟ್ ಬೇಕರಿ ಹಗರಣ ಅಲ್ಲಿನ ಸಾಮಾಜಿಕ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಅನ್ನುವುದನ್ನು ಸಾಬೀತು ಪಡಿಸುತ್ತಿದೆ. ಮನುಕುಲವೇ ನಾಚುವಂತ ಬರ್ಬರ ಹತ್ಯಾಕಾಂಡ ಜಗತ್ತಿನ ಕಣ್ಣೆದುರೇ ನಡೆದರೂ, ಅಪರಾಧಿಗಳಿಗೆ ಶಿಕ್ಷೆಯಾಗದಂತ ಅನಾಗರಿಕ ವಾತಾವರಣ ಅಲ್ಲಿದೆ. ನಾಗರಿಕ ಸರ್ಕಾರ, ಕಾನೂನು, ಶಿಸ್ತು ಇತ್ಯಾದಿಗಳಿಗೆ ಅಲ್ಲಿ ಅರ್ಥವೇ ಇಲ್ಲ. ಹಾಡು ಹಗಲು ಸುಟ್ಟು ಬೆಂದು ಹೋದ ಘಟನೆಯನ್ನು ಕಣ್ಣಾರೆ ಕಂಡವರು, ತಾವು ಕಂಡದನ್ನು ನ್ಯಾಯಾಲಯದಲ್ಲಿ ಹೇಳಲಾರದಂತ ಸ್ಥಿತಿ ಗುಜರಾತಿನಲ್ಲಿದೆ. ಅಲ್ಲಿನ ಸರ್ಕಾರ, ಪೋಲೀಸರು-ಎಲ್ಲರೂ ಜಗತ್ತಿನ ಕಣ್ಣಲ್ಲಿ ಆರೋಪಿ ಸ್ಥಾನದಲ್ಲಿ ಈಗ ನಿಂತಿದ್ದಾರೆ.

ಗೋದ್ರಾ ಘಟನೆಯ ನಂತರ ಅಲ್ಲಿನ ಸರ್ಕಾರ ಸಂಪೂರ್ಣ ಅನಾಗರಿಕವಾಗಿಯೇ ವರ್ತಿಸುತ್ತಿದೆ. ಕಾನೂನು ಮತ್ತು ನ್ಯಾಯಕ್ಕೆ ಅಲ್ಲಿ ಯಾವ ಮಾನ್ಯತೆಯೂ ಇಲ್ಲದಾಗಿದೆ. ಹಲ್ಲೆ, ದೌರ್ಜನ್ಯ, ಹತ್ಯಾ ಕಾಂಡ ಗಳಲ್ಲಿ ಭಾಗವಹಿಸಿದವರಿಗೆ ನ್ಯಾಯಾಲಯದ ಶಿಕ್ಷೆ ವಿಧಿಸಲಾಗುತ್ತಿಲ್ಲ. ಜನ ಸಮುದಾಯ ಜಾಗೃತವಾಗಿ ಸಾಮಾಜಿಕ ವ್ಯವಸ್ಥೆಯನ್ನು ಮಾನವೀಯ ಅಂತಃಕರಣದ ಮೂಲಕ ಸ್ವತಃ ರಕ್ಷಿಸಿಕೊಳ್ಳಬೇಕಾದ ಕಾಲ ಬಂದೊದಗಿದೆ. ಎಲ್ಲ ಜನಪರ ಸಂಘಟನೆಗಳು ಈ ಬಗ್ಗೆ ಚಿಂತಿಸಬೇಕಾಗಿದೆ.

ಇಂದೂಧರ ಹೊನ್ನಾಪುರ
ಸಂಪಾದಕ

ಬರಡಾಗಿರುವ ವೀರಶೈವ ಮಠಗಳಿಂದ ದಲಿತೋದ್ಧಾರ ಸಾಧ್ಯವೇ?

ಬ್ರಾಹ್ಮಣ್ಯದ ಜಾತಿಯ ಸೊಗಡನ್ನು ಆಸ್ವಾದಿಸಿದ ವೀರಶೈವರು ಜಾತೀಯತೆಯ ಸಂವಿಧಾನಕ್ಕೆ ಅನುಗುಣವಾಗಿ ಬಾಳುತ್ತೇವೆಂದು ಅದರೊಂದಿಗೆ ಅಲಿಖಿತ ಒಪ್ಪಂದ ಮಾಡಿಕೊಂಡರು. ಅದರ ಫಲದಿಂದಾಗಿ, ಅಪಕೀರ್ತಿಗೆ ಸಿಕ್ಕಿದ ದಲಿತರು-ಹಿಂದುಳಿದವರು ವೀರಶೈವ ಸಂಸ್ಕೃತಿಯಿಂದ ವಿಮೋಚನೆ ಪಡೆಯಬೇಕಾಗಿದ್ದ ಅವರೆಲ್ಲರೂ ತ್ರಿಶಂಕುಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡರು. ವೀರಶೈವರೂ ಸಹ ತದನಂತರ 'ಬ್ರಾಹ್ಮಣ'ರೆಂದು ಕರೆಸಿಕೊಳ್ಳುವ ಹುಚ್ಚಿನ ಮತ್ತು ನೆತ್ತಿಗೆಹತ್ತಿ, ಜಾತಿ ಕೂಟಕ್ಕೆ ಸೇರ್ಪಡೆಯಾದರು. ಮಠ ಹಾಗೂ ಉಪಾಸಕರ ಮನೆಗಳೊಳಗೆ ಬಸವತತ್ವಗಳನ್ನು ಹೇಳುವವರೆಲ್ಲರೂ ಕೇಳುವವರಾಗಿ ಆಚಾರದಲ್ಲಿ ಶೂನ್ಯರಾದರು.

○ ದಾಸನೂರು ಕೂಸಣ್ಣ

ಈ ದೇಶದಲ್ಲಿ ದಲಿತರ ಬಗ್ಗೆ ಚರ್ಚೆಯಾಗದ ಕಾಲಗಳಿಲ್ಲ. ಸಾಮಾಜಿಕವಾಗಿ ಅಧಃ ಪತನಗೊಂಡಿರುವ ಅವರ ಬದುಕಿನ ಬಗ್ಗೆ ಪ್ರಾಮಾಣಿಕವಾಗಿ ದುಡಿದವರೆಲ್ಲರೂ ಚರಿತ್ರಾರ್ಹರಾಗಿದ್ದಾರೆ. ಅವರ ಪರವಾಗಿ ದುಡಿಯುವ ನೆಪದಲ್ಲಿ ಮತ್ತಷ್ಟು ಅತಂತ್ರಗೊಳಿಸುವವರೆಲ್ಲರೂ ಸಾಮಾಜಿಕ ಖಳವೇಷಧಾರಿಗಳಾಗಿದ್ದಾರೆ. ಅಂತರರಾಷ್ಟ್ರೀಯ ಸಮುದಾಯಗಳಿಂದು ದಲಿತರ ಬಗ್ಗೆ ಚರ್ಚೆಗಿಳಿದಿವೆ. ಇದೊಂದು ಉತ್ತಮ ಜಾಗತಿಕ ಬೆಳವಣಿಗೆ. ನಮ್ಮ ದೇಶವನ್ನಾಳಿದ ಬ್ರಿಟಿಷ್ ಪ್ರಭುಗಳು ಸಂಸತ್ತಿನಲ್ಲಿ ದಲಿತರ ಮೇಲೆ ಮಾನವೀಯ ಸಂವೇದನೆಗಳು ಹೊರಚೆಲ್ಲಿವೆ. ಅಲ್ಲಿನ ಕಾರ್ಮಿಕ ಪಕ್ಷದ ಸಂಸತ್ ಸದಸ್ಯರು ಸಂಸತ್ತಿನಲ್ಲಿ ಮಂಡಿಸಿದ ನಿಲುವಳಿ ಸೂಚನೆಯಲ್ಲಿ 'ಭಾರತದಲ್ಲಿ ದಲಿತರ ಮೇಲಾಗುತ್ತಿರುವ ನಿರಂತರ ದೌರ್ಜನ್ಯಗಳನ್ನು ಅವಮಾನವೀಯುವೆಂದು ಖಂಡಿಸಿದ್ದಾರೆ. ಅದರ ಮುಂದುವರಿದ ಟೀಕೆಗಳಲ್ಲಿ ಭಾರತ ಅಲ್ಲಿಂದ ಪಡೆದುಕೊಳ್ಳುತ್ತಿರುವ ಅನುದಾನ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಪುನರ್ ಮೌಲೀಕರಿಸಬೇಕೆಂಬ ಮಾತುಗಳನ್ನಾಡಿದ್ದಾರೆ. ಅದರಲ್ಲೂ ಗುಜರಾತ್‌ನಲ್ಲಿ ನಡೆದ ದೌರ್ಜನ್ಯ ಮತ್ತು ಭೂಕಂಪದ ಪರಿಹಾರದಲ್ಲಿ ನಡೆದ ಅನ್ಯಾಯಗಳನ್ನು ಖಂಡಿಸಿ ಉಲ್ಲೇಖಿಸಿವೆ. (ಡೆಕನ್ ಹೆರಾಲ್ಡ್-9, ಜೂನ್, 03) ಇಲ್ಲಿನ ಜಾತಿವಾದಿಗಳಿಗೆ ಅದು ಅಷ್ಟೇನೂ ಪರಿಣಾಮ ಬೀರದು. ಏಕೆಂದರೆ, ಅವರ ಅಂತಃ ಕರಣಗಳೆಲ್ಲವೂ ದದ್ದಾಗಿರುವುದರಿಂದ, ಅವರು ತಮ್ಮ ಹಳದಿ ಕಣ್ಣುಗಳಿಂದಲೇ ದಲಿತರನ್ನು ನೋಡಿ ಅಸ್ಥಿರ ಬದುಕಿಗೆ ನೂಕುತ್ತಿದ್ದಾರೆ. ಇಂತಹ ಮನಸ್ಸುಗಳನ್ನು ತಿದ್ದಲು ಭಾರತ ಪರಂಪರೆಯಲ್ಲಿ ಬುದ್ಧನಿಂದ ಇಲ್ಲಿಯತನಕ ಹಲವು ಪ್ರಾಜ್ಞರು ಬಂದು ಹೋಗಿದ್ದಾರೆ.

ಕರ್ನಾಟಕ ಜಾತಿವಾದಿಗಳ ಬ್ರಾಹ್ಮಣ್ಯದ ವಿರುದ್ಧ ಹೋರಾಡುತ್ತಲೇ ಪ್ರಗತಿಪರ ಚಕ್ರವನ್ನು ತಿರುಗಿಸುತ್ತಿದೆ. ಅದರಲ್ಲೂ ಎಂಟನೂರು ವರ್ಷಗಳಿಂದ ಬಸವಣ್ಣ-ಅಲ್ಲಮರಂತಹವರು ಅದರ ವಿರುದ್ಧ ದುಡಿದ ಪ್ರಾಮಾಣಿಕ ಕಾಯಕ ಜೀವಿಗಳು. ಜಾತಿವಾದಿಗಳ ಪಂಚೇಂದ್ರಿಯಗಳನ್ನು ಪರಿಶುದ್ಧಗೊಳಿಸಲು ಅಪಕೀರ್ತಿಗೆ ಒಳಗಾಗಿದ್ದ ಎಲ್ಲ ಜಾತಿಯ ಶರಣರಿಂದಲೇ ಕಾಯಕ ಚಿಕಿತ್ಸೆ ನೀಡಿಸಿದರು. ಬ್ರಾಹ್ಮಣ್ಯ ಆರಂಭದಲ್ಲಿ ಶರಣರ ಚಿಕಿತ್ಸೆಗೆ ಅಂಜಿದರೂ, ನಿಧಾನವಾಗಿ ಸಹಿಸಿಕೊಂಡು ಚಿಕಿತ್ಸೆಯ ಹುಟ್ಟಡಗಿಸಲು ಮುಂದಾಯಿತು. ಅದಕ್ಕೋಸ್ಕರ, ಬ್ರಾಹ್ಮಣ್ಯ ಜಾತಿಕಾರಣವನ್ನು ಪೋಷಿಸುವ ಸಲುವಾಗಿ ರಾಜನೈತಿಕಕಾರಣಗಳಿಗೆ ಅಧರ್ಮಕಾರಣವನ್ನು ಬೆರೆಸಿ, ಅದರಿಂದ ಹೊರಬಂದ ಕೊಳೆತ ಫಲಿತವನ್ನು ಸಮಾಜಕ್ಕೆ ಉಣಬಡಿಸಿತು. ವೀರಶೈವ ಕಾಯಕ ಸಂಸ್ಕೃತಿಗೆ ಕಾರಣೀಭೂತರಾದವರೆಲ್ಲರೂ ಅದರ ನಂಜುಂಡು ನಿಧಾನವಾಗಿ ನಿರ್ಗಮಿಸಿದರು. ಆವಾಗ ಬ್ರಾಹ್ಮಣ್ಯ ನಿಧಾನವಾಗಿ ವೀರಶೈವ ಮಠಗಳಿಗೆ ಜಾತಿಯ ಸೋಂಕನ್ನು ಅಗೋಚರವಾಗಿ ಬಿತ್ತಿ ಅದರ ಸಾಮಾಜಿಕ ಆರೋಗ್ಯವನ್ನು ಹದಗೆಡಿಸಿತು.

ಬ್ರಾಹ್ಮಣ್ಯದ ಜಾತಿಯ ಸೊಗಡನ್ನು ಆಸ್ವಾದಿಸಿದ ವೀರಶೈವರು ಜಾತೀಯತೆಯ ಸಂವಿಧಾನಕ್ಕೆ ಅನುಗುಣವಾಗಿ ಬಾಳುತ್ತೇವೆಂದು ಅದರೊಂದಿಗೆ ಅಲಿಖಿತ ಒಪ್ಪಂದ ಮಾಡಿಕೊಂಡರು. ಅದರ ಫಲದಿಂದಾಗಿ, ಅಪಕೀರ್ತಿಗೆ ಸಿಕ್ಕಿದ ದಲಿತರು-ಹಿಂದುಳಿದವರು ವೀರಶೈವ ಸಂಸ್ಕೃತಿಯಿಂದ ವಿಮೋಚನೆ ಪಡೆಯಬೇಕಾಗಿದ್ದ ಅವರೆಲ್ಲರೂ ತ್ರಿಶಂಕುಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡರು. ವೀರಶೈವರೂ ಸಹ ತದನಂತರ 'ಬ್ರಾಹ್ಮಣ'ರೆಂದು ಕರೆಸಿಕೊಳ್ಳುವ ಹುಚ್ಚಿನ ಮತ್ತು ನೆತ್ತಿಗತ್ತಿ, ಜಾತಿ ಕೂಟಕ್ಕೆ ಸೇರ್ಪಡೆಯಾದರು. ಮಠ ಹಾಗೂ ಉಪಾಸಕರ ಮನೆಗಳೊಳಗೆ ಬಸವತತ್ವಗಳನ್ನು ಹೇಳುವವರೆಲ್ಲರೂ ಕೇಳುವವರಾಗಿ ಆಚಾರದಲ್ಲಿ ಶೂನ್ಯರಾದರು. ನಿಧಾನವಾಗಿ ಬರಡಾದ ಅದರ ಸಂಸ್ಕೃತಿಯೊಳಗೆ ಮೇಲು ಕೀಳಿನ ದಗೆ ಹೆಚ್ಚಿದ ಕಾರಣ ಜಾತಿವಂತರಾಗಿ ವರ್ಗೀಕರಣಗೊಂಡು, ಮೂಲ ಜಾತಿ ಹೆಸರಿಗೆ 'ಲಿಂಗಾಯಿತ' ಎಂಬ ಗೌರವ ಸೂಚಕ ಸೇರಿಸಿಕೊಂಡರು. ಆದರೆ ಹೊಲೆಯ ಮತ್ತು ಮಾದಿಗ ಹಾಗೂ ಅಲೆಮಾರಿ ಭಿಕ್ಷುಕ ಜಾತಿಗಳಿಗೆ 'ಲಿಂಗಾಯಿತ' ಪದ ಸಿಗದಿದ್ದ ಕಾರಣದಿಂದ ಅವರಿಂದ ಬಲು ದೂರ ಹೋದರು.

ಬರಡಾಗಿರುವ ಅದರ ನೆಲದ ಮೇಲೆ ಹಿಂದಿನ ಚಿಗುರನ್ನು ಕಾಣಲು ಅಲ್ಲಲ್ಲಿ ಪ್ರಯತ್ನಗಳಾಗುತ್ತಿವೆ. ಅಂತಹ ಸೂಕ್ಷ್ಮ ಪ್ರಕ್ರಿಯೆಯನ್ನು ಚಿತ್ರದುರ್ಗದ ಮುರುಗ ಮಠದ ಶ್ರೀಗಳಾದ ಶ್ರೀ ಶ್ರೀ ಶಿವಮೂರ್ತಿಗಳು 'ಜಾತಿಗೊಂದು ಮಠ ಸ್ಥಾಪಿಸಿ, ಕುಲಕ್ಕೊಂದು ಗುರುಗಳನ್ನು ನೀಡುವ' ಪ್ರಯತ್ನದಲ್ಲಿ ಮುಂದಾಗಿದ್ದಾರೆ. ಈ ಪ್ರಯತ್ನವನ್ನು ಮುಕ್ತವಾಗಿ ಪರಶೀಲಿಸುವುದಕ್ಕೂ ಮುನ್ನ ಶಿವಶರಣ ಮಾದಾರ ಚನ್ನಯ್ಯನವರ ಜಯಂತಿ (8-6-2003) ಸಂದರ್ಭದಲ್ಲಿ ಅವರು ಮಂಡಿಸಿದ ವಿಚಾರವೊಂದರ ಮೇಲೆ ಬೆಳಕನ್ನು ಚೆಲ್ಲುವ ಪ್ರಯತ್ನವಿದು.

"ನಮ್ಮನ್ನು ದಲಿತರು ಮತಾಂತರವಾಗುತ್ತಿರುವುದರ ಬಗ್ಗೆ ಸ್ವಾಮೀಜಿಗಳು ಮಾತನಾಡುತ್ತಾ ಸಮಾಜದ ಹಲವರು ಪ್ರಶ್ನಿಸುತ್ತಿದ್ದಾರೆ?" ಎಂಬ ಗಂಭೀರ ಮಾತುಗಳನ್ನಾಡಿದರು. ಈ ಪ್ರಶ್ನೆಯನ್ನು ಅವರಿಗೆ ಕೇಳಿದವರಾರು? ವೀರಶೈವ ಧರ್ಮವನ್ನು ಸರ್ವನಾಶ ಮಾಡಿ ಮಠಮಾನ್ಯಗಳಿಗೆಲ್ಲ ಜಾತಿಯ ಕಿಚ್ಚನ್ನು ಅಚ್ಚಿದವರೆ? ದೇಶದ ಉದ್ದಗಲಕ್ಕೂ ಧರ್ಮಸಾರ ಬಿತ್ತುವ ನೆಪದಲ್ಲಿ ವರ್ಣಾಶ್ರಮ ಬೇಕೆನ್ನುವ ಕಂದಾಚಾರಿಗಳೇ? ದಲಿತರ ಮತ್ತು ಹಿಂದುಳಿದವರನ್ನು ನಿರ್ದಯವಾಗಿ ನಿಸ್ತೇಜಗೊಳಿಸಿದ ಸನಾತನವಾದಿಗಳೇ? ಬಿಜ್ಜಳ ಜನ ಪಿತ್ತವನ್ನು ಅಲುಗಾಡಿಸಿ ಶರಣರನ್ನು ಹಾದಿ ಬೀದಿಗಳಲ್ಲಿ ಅಮಾನವೀಯವಾಗಿ ಕೊಲ್ಲಿಸಿದ ಜಾತಿವಾದಿ ಪ್ರಿಯರೆ? ಅಥವಾ ಗಾಂಧೀಜಿ ಕೊಂದ ಸಂತಾನವೇ? ಇರಲಿ, ದಲಿತರೇನು ಇವತ್ತು ಮಾತ್ರ ಮತಾಂತರ ಗೊಳ್ಳುತ್ತಿಲ್ಲ. ಅವರು ಈ ದೇಶಕ್ಕೆ ಪಾದಾರ್ಪಣೆ ಮಾಡಿದ ಧರ್ಮಗಳಿಗೆಲ್ಲ ಪ್ರವೇಶ ಪಡೆದುಕೊಂಡಿದ್ದಾರೆ. ಇಸ್ಲಾಮಿಗಳಾಗಿ, ಕ್ರೈಸ್ತರಾಗಿ, ಸಿಖ್ಖರಾಗಿ ಹೋಗಿದ್ದಾರೆ. ಅಂಬೇಡ್ಕರರು ಹಿಂದೂ ಧರ್ಮವನ್ನು ಟೀಕಿಸುವಾಗ, ಅದೊಂದು ಮಾನವೀಯ ಧರ್ಮವಾಗಬೇಕೆಂಬ ನಿಲುವು ತಾಳಿದ್ದರು. ಆದರೆ ಅದ್ಯಾವುದೂ ಅದಕ್ಕೆ ಬೇಕಿಲ್ಲ.

ಒಂದು ವೇಳೆ ಶಿವಮೂರ್ತಿಗಳು ಅವರನ್ನು ಪ್ರಶ್ನಿಸಿದವರನ್ನು ಸಂಪ್ರೀತಿಗೊಳಿಸುವುದಕ್ಕಾಗಿ ಜಾತಿಗೊಂದು ಮಠ ಹಾಗೂ ಗುರುಪೀಠ ಇತ್ಯಾದಿಗಳಿಗಾಗಿ ಹೋರಾಡಿದ್ದರೆ, ಅದೊಂದು ನೈಜ ವೀರಶೈವ ಧರ್ಮದ ನಡುವಳಿಕೆ ಆಗದು. ವೀರಶೈವ ಮಠಗಳಿಂದು ದಲಿತರಿಗೆ ರಾಜಾಶ್ರಯ ನೀಡುವುದಕ್ಕಿಂತ, ಅವುಗಳ ಕೇಂದ್ರ ಸ್ಥಾನಗಳಲ್ಲಿ ಕೂರುವ ಅವರ ಉಪಾಸಕರಲ್ಲಿ ಆಂತರಿಕ ಬದಲಾವಣೆಗಳನ್ನು ತರಬೇಕಾಗಿದೆ. ಸಾಧರಮಠಗಳನ್ನು ಬಣಜಿಗರು ಕಂಡರೆ ಅದೊಂದು ಮಾದಿಗರ ಮೂಲವೆಂದು ಜರಿಯುತ್ತಾರೆ. ಈ ನಮೂನೆಯಲ್ಲಿ ನೊಣಬರು, ಗಾಣಿಗರು, ಪಂಚಮಶಾಲಿ, ಕುರುಬರು ಪರಸ್ಪರ ತಮ್ಮ ಜಾತಿಯ ಮೂಲಗಳನ್ನೇ ಬಣ್ಣಿಸಿಕೊಂಡು ಸೋಬಾನೆ ಮುಗಿಯುವಾಗ ಶಿವನನ್ನು ಸ್ಮರಿಸುವವರಂತೆ ಬಸವಣ್ಣನನ್ನು ನೆನೆಯುತ್ತಾರೆ. ಇಂದಿಗೂ ಮರುಳಸಿದ್ಧರಿಗೆ ಎಷ್ಟೋ ವೀರಶೈವ ಮಠಗಳು 'ಜಂಗಮ' ಸ್ಥಾನ ಕೊಡಲು ನಿರಾಕರಿಸುತ್ತಲೆ ಬಂದಿವೆ. ಪಂಚ ಪೀಠಗಳಂತು ವೇದ ಹಾಗೂ ಬ್ರಾಹ್ಮಣ್ಯದ ಸಂಸ್ಕಾರಗಳಿಗೆ ತಲೆಬಾಗಿವೆ. ಅವುಗಳಿಲ್ಲದೆ ನಮ್ಮ ಬದುಕು ಇಲ್ಲ ಎನ್ನುವಂತಹ ಸ್ಥಿತಿಯಲ್ಲಿವೆ. ಅಡ್ಡ ಪಲ್ಲಕ್ಕಿಯಿಂದ ಕೆಳಗಿಳಿದು ಬಿಟ್ಟರೆ ಮೈಲಿಗೆಯಾಗುವುದೆಂಬ ಭಯದ ಭೀತಿಯಲ್ಲಿ ನರಳುತ್ತಿವೆ. ಅವುಗಳು ವೀರಶೈವರ ಇತರೆ ಮಠಗಳನ್ನು 'ಶಾಖಾ ಮಠ"ಗಳೆಂದೆ ಸಂಬೋಧಿಸುತ್ತವೆ. ಕಳೆದೆರಡು ತಿಂಗಳಿಂದೆ ಪಂಚಪೀಠಗಳ ಸಮ್ಮುಖದಲ್ಲಿ ಸೇರಿದ್ದ ವೀರಶೈವ ಶ್ರೀಗಳೆಲ್ಲರ ಸಮ್ಮಿಲನವು "ಯೌವನದಲ್ಲಿ ಪರಸ್ಪರ ಕಿತ್ತಾಡಿ, ತಮಗೆ ಬೇಕಾದ ಮಕ್ಕಳೊಡನೆ ಜೀವಿಸಿ ವೃದ್ಧಾಪ್ಯದಲ್ಲಿ ಒಂದಾದ ದಂಪತಿಗಳಂತೆ" ಕಂಡಿತು. ಅದು ಸಹ ಆತ್ಮ ಪೂರಕವಾಗಿ ಸೇರಿದ ಕೂಟವಾಗಿರಲಿಲ್ಲ.

ಕರ್ನಾಟಕದಲ್ಲಿ ಮೂವತ್ತು ದೊಡ್ಡ ಮಠಗಳಿವೆ; ಸಾವಿರಾರು ಶಾಖಾಮಠಗಳಿವೆ. ಊರಿಗೊಂದು ಗುರುಸ್ಥಳ ಮಠಗಳಿವೆ. ಇವುಗಳೆಲ್ಲವೂ ಅಂಶಿಕವಾಗಿ ಯಾದರೂ ಬಸವ ತತ್ವವನ್ನು ನಿಯತ್ತಿನಿಂದ ಪಾಲಿಸಿದ್ದರೆ, ದಲಿತರಿಗೆ ಇಂದು ಯಾವುದೇ ಪೂರ್ವದವರ ಹೆಸರಿನ ಮಠಗಳ ಅವಶ್ಯಕತೆ ಇರುತ್ತಿರಲಿಲ್ಲ.

ಅದೊಂದು ಧರ್ಮ ರಾಜಕಾರಣದ ಸಭೆಯಾಗಿತ್ತು. ವೀರಶೈವ ಸಂಸ್ಕೃತಿಯೊಳಗಿರುವ 'ಅಸ್ಪೃಶ್ಯತೆ'ಯನ್ನು ಹೋಗಲಾಡಿಸಲು ಮೊದಲು ಶ್ರೀಗಳು ಮುಂದಾಗಬೇಕಿದೆ. ಅನಂತರ, ದಲಿತರ ಬಗ್ಗೆ ಚಿಂತಿಸಲಿ.

ಮೂಲ ದಲಿತರು 'ಸಂಘ ಸಂಸ್ಕೃತಿ' (ಮಠ)ಯನ್ನು ಬುದ್ಧನಿಂದ ಪಡೆದವರು, ಅವುಗಳ ಮೇಲೆ ಬ್ರಾಹ್ಮಣ್ಯದ ನೇರ ಧಾಳಿಗಳಾದ ಮೇಲೆ ಅವುಗಳೆಲ್ಲವು ನಶಿಸಿ ಹೋದವು. ಅಂಬೇಡ್ಕರರು ಮತಾಂತರವಾಗುವಾಗ ಮಾನಸಿಕ ಜಿಜ್ಞಾಸೆಗೆ ಒಳಗಾದರು. ನಾನು ಯಾವ ಧರ್ಮವನ್ನು ಅಪ್ಪಿಕೊಂಡರೆ ದಲಿತರಿಗೆ ವಿಮೋಚನೆ ಸಾಧ್ಯ ಎಂಬ ವಿಚಾರದಲ್ಲಿ. ಹಿಂದೂ ಧರ್ಮದಿಂದ ದಲಿತರು ಮತ್ತೇ ಇಸ್ಲಾಮಿಗಳಾದರೆ, ದೇಶೀಯ ಕದನಕ್ಕೆ ದಾರಿಯಾಗುವುದು, ಕ್ರೈಸ್ತರಾದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಧಾರ್ಮಿಕ ಕದನವಾಗುತ್ತದೆ-ಎಂಬ ಸತ್ಯಗಳನ್ನು ಕಂಡುಕೊಂಡರು. ಆದ್ದರಿಂದ ಅವರು ಈ ದೇಶದ ಮೂಲ ಧರ್ಮವಾದ ಬೌದ್ಧ ಧರ್ಮವೊಂದೆ ದಲಿತರಿಗೆ ವಿಮೋಚನೆಯ ದಾರಿ ತೋರುತ್ತದೆಂದು ಚಿಂತಿಸಿ ಸೇರ್ಪಡೆಯಾದರು. ಬಸವ ತತ್ವಗಳನ್ನು ಗಾಳಿಗೆ ತೂರಿ ನಿಂತಿರುವ ವೀರಶೈವ ಮಠಗಳಿಂದ ನಿಜಕ್ಕೂ ದಲಿತರಿಗೆ ವಿಮೋಚನೆ ಅನ್ನುವುದು ಅಸಾಧ್ಯ ಮಾತು. ಒಂದು ವೇಳೆ ಅವುಗಳು ದಲಿತರಿಗೆ ವಿಮೋಚನೆ ತಂದು ಕೊಡುವುದಾದರೆ, ಅವುಗಳು ಈಗ ಬಂಧಿಸಿಕೊಂಡಿರುವ ವೈದಿಕ ಸಂಸ್ಕೃತಿಯಿಂದ ಮೊದಲು ಹೊರ ಬರಬೇಕು. ಕರ್ನಾಟಕದಂತಹ ಕರ್ಮಭೂಮಿಯಲ್ಲಿ ಶೈವಮೂಲದ ಸವದತ್ತಿ ಎಲ್ಲಮ್ಮ ಮತ್ತು ಚಂದ್ರಗುತ್ತಿಯ ರೇಣುಕಮ್ಮಳಿಗೆ ದಲಿತ-ಹಿಂದುಳಿದವರ ಮುಗ್ಧ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿಸುವ ಮತ್ತು ಬೆತ್ತಲೆ ಸೇವೆ ಮಾಡಿಸುವ ಹೀನಸಂಸ್ಕೃತಿ ವಿರುದ್ಧ ಇಲ್ಲಿನ ಎಷ್ಟು ಮಠಗಳು ಅದರ ವಿರುದ್ಧ ಬೀದಿಗಿಳಿದಿವೆ? ಅದು ಸಾಧ್ಯವಾದುದು ಅಂಬೇಡ್ಕರ್ ವಾದಿಯಾಗಿದ್ದ ಪ್ರೊ. ಬಿ. ಕೃಷ್ಣಪ್ಪ ನೇತೃತ್ವದ ದಸಂಸದಿಂದ. 'ವೀರಶೈವ ಜಂಗಮರು' ಬೇಡ, ಬುಡುಗ ಹಾಗೂ ಮಾಲ ಜಂಗಮರೆಂದು ಖೊಟ್ಟಿ ಜಾತಿ ಪತ್ರದ ಮೇಲೆ ದಲಿತರ ಸವಲತ್ತುಗಳನ್ನು ಲೂಟಿಗೈಯುತ್ತಿದ್ದಾಗ ಎಷ್ಟು ಮಠಗಳು ಪ್ರಾಮಾಣಿಕವಾಗಿ ಧ್ವನಿಯೆತ್ತಿವೆ? ಆವಾಗ ಕೂಗು ಹಾಕಿದವರು ಕೇವಲ ಮೂವ್ವರು ಶ್ರೀಗಳು ಮಾತ್ರ. ಕಳೆದ 5 ವರ್ಷಗಳಿಂದ ಲಿಂಗಧಾರಿ ದಲಿತರಾದ ದೇಢ (ಹೊಲೆಯ)ರ ಮೀಸಲಾತಿ ಕದಿಯುತ್ತಿರುವ ಲಿಂಗಾಯತರನ್ನು ದಂಡಿಸಲು ಯಾವ ಯಾವ ಮಠಗಳು ಏನೇನು ಕ್ರಮ ಕೈಗೊಂಡಿವೆ? ಬಸವಣ್ಣನನ್ನು ಅವರ ಜಾತಿಗಳ ಮಠಗಳೇ ಸರಿಯಾಗಿ ಅರ್ಥ ಮಾಡಿಕೊಳ್ಳದಿರುವಾಗ ಅವುಗಳು ದಲಿತರಿಗೆ ಎಲ್ಲಿಂದ ಬಸವಣ್ಣನನ್ನು ಪರಿಚಯಿಸುತ್ತವೆ? ಬಸವಣ್ಣ ರಾಜಕಾರಣದ ಮೂಲಕ ಧರ್ಮಕಾರಣ ಮಾಡಲಿಲ್ಲ. ರಾಜಕಾರಣಕ್ಕಾಗಿ ಧರ್ಮಕಾರಣವನ್ನು ಬಲಿ ಕೊಡಲಿಲ್ಲ. ಅವರೇನಾದರೂ ಅಂದು ಕಪಟ ಧರ್ಮಕಾರಣ ಮುಂದು ಮಾಡಿದ್ದರೆ, ಜಾತಿ ರಾಜಕಾರಣದ ಬೆಂಬಲ ಪಡೆಯುತ್ತಿದ್ದರು. ಆದರೆ, ಇಂದಿನ ಮಠಗಳೆಲ್ಲವೂ ನೈಜ ಧರ್ಮಕಾರಣ ಕೈ ಬಿಟ್ಟು, ಜಾತಿ ರಾಜಕಾರಣವನ್ನೇ ಜಾಸ್ತಿ-ಆಚರಿಸುತ್ತಿವೆ. ಇಂತಹ ಆಚರಣೆಯುಳ್ಳ ಮಠಗಳು ದಲಿತರಿಗೆ ಎಷ್ಟೇ ದೊಡ್ಡ-ದೊಡ್ಡ ಮಠಮಾನ್ಯಗಳನ್ನು ಕಟ್ಟಿಕೊಟ್ಟರೂ ಅವುಗಳಿಂದ ಬಸವ ತತ್ವ ಕಲಿಸುವಲ್ಲಿ ಸೋಲುತ್ತವೆ.

ಕರ್ನಾಟಕದಲ್ಲಿ ಮೂವತ್ತು ದೊಡ್ಡ ಮಠಗಳಿವೆ; ಸಾವಿರಾರು ಶಾಖಾಮಠಗಳಿವೆ. ಊರಿಗೊಂದು ಗುರುಸ್ಥಳ ಮಠಗಳಿವೆ. ಇವುಗಳೆಲ್ಲವೂ ಅಂಶಿಕವಾಗಿ ಯಾದರೂ ಬಸವ ತತ್ವವನ್ನು ನಿಯತ್ತಿನಿಂದ ಪಾಲಿಸಿದ್ದರೆ, ದಲಿತರಿಗೆ ಇಂದು ಯಾವುದೇ ಪೂರ್ವದವರ ಹೆಸರಿನ ಮಠಗಳ ಅವಶ್ಯಕತೆ ಇರುತ್ತಿರಲಿಲ್ಲ. ಅಥವಾ ಶ್ರೀ ಶ್ರೀ ಶಿವಮೂರ್ತಿಗಳಂತವರು ಶ್ರಮಪಟ್ಟು ಮಠಗಳನ್ನು ಕಟ್ಟಿಕೊಡುವ ಅವಶ್ಯಕತೆ ಬರುತ್ತಿರಲಿಲ್ಲ. ದಲಿತರ ಮುಖ್ಯ ಜಾತಿಗಳಿಗೆ ಮಠ ಕಟ್ಟಿಕೊಟ್ಟ ಮೇಲೆ, ಅವುಗಳ ಉಪಜಾತಿಗಳು ಸಹ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವುದಕ್ಕೆ ಯಾರನ್ನಾದರೂ ಹಿರೀಕರೊಬ್ಬರನ್ನು ಅಪ್ಪಿಕೊಳ್ಳುತ್ತವೆ. ಇದು ನಿರಂತರ ಪ್ರಕ್ರಿಯೆಗಳಾಗುತ್ತವೆ. ಅವಾಗ ರಾಜ್ಯದ ತುಂಬ ಮಠಗಳೇ ಮನೆಗಳಿಗಿಂತ ಹೆಚ್ಚಾಗಲೂಬಹುದು? ನೈಜ ವೀರಶೈವ ಸಂಸ್ಕೃತಿ ಅರಿಯದ ಅವುಗಳಿಂದ ಸಮಾಜಕ್ಕೆ ಸಿಗುವ ಪ್ರಯೋಜನಗಳೇನು? ಈಗಿರುವ ಮಠಗಳೆಲ್ಲವು ಸಮಾಜದ ತಳಭಾಗದಲ್ಲಿ ನಿಲ್ಲಬೇಕಾಗಿದೆ. ಅಲ್ಲಿ ನಿಂತು ತಮ್ಮ ಕರ್ತವ್ಯಗಳನ್ನು ಪುನರ್ ಅವಲೋಕಿಸಬೇಕಿದೆ. ಅವರವರ ಉಪಾಸಕರಲ್ಲಿ ನೈತಿಕ ಶಕ್ತಿ ತುಂಬಬೇಕಿದೆ. ಭಕ್ತರಲ್ಲಿರುವ ಮಾನಸಿಕ ಮೈಲಿಗೆಯನ್ನು ಶುದ್ಧಿಗೊಳಿಸಬೇಕಾಗಿದೆ. ಒಂದು ವೇಳೆ ಶ್ರೀ ಶಿವಮೂರ್ತಿಗಳಂತವರು ತಮ್ಮನ್ನು ಪ್ರಶ್ನಿಸಿದವರನ್ನು ಮೆಚ್ಚಿಸುವ ಸಲುವಾಗಿ ದಲಿತರಿಗೆ ಮಠಗಳನ್ನು ಕಟ್ಟಲು ಮುಂದಾದರೆ, ಅದಂತು ಬಸವತತ್ವ ಪರಿಪಾಲನೆ ಆಗದು. ಇದರಿಂದ ಮತ್ತಷ್ಟು ದ್ವಂದ್ವಗಳಿಗೆ ಅದು ಎಡೆಮಾಡಿಕೊಡುತ್ತವೆ. ದಲಿತರ ಸಮಸ್ಯೆ ಕೇವಲ ಧಾರ್ಮಿಕ ಪ್ರಶ್ನೆಯಲ್ಲ. ಅದೊಂದು ಸಾಮಾಜಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಹಾಗೂ ಇತ್ಯಾದಿ ಸಮಸ್ತ ಅಂಶಗಳನ್ನು ಸಂಕೀರ್ಣಗೊಳಿಸಿಕೊಂಡಿರುವ ಸಮಗ್ರ ವಿಚಾರವಾಗಿದೆ. ಮಠಗಳಿಂದಲೇ ಇವುಗಳೆಲ್ಲವೂ ಬಗೆಹರಿಯಲು ಸಾಧ್ಯವಾದರೆ ಯುವ ಶ್ರೀಗಳಿಗೆ ಲೋಕ ಬೆಂಬಲವಿದೆ. ಅದರ ಬದಲು ನಾವಿಂದು ಬದುಕುತ್ತಿರುವ ಸಮಾಜದ ಚಲನೆಗಳನ್ನು ಗಮನಿಸಿ ಅವರವರ ಮನೆಗಳಲ್ಲಿ ನಿರ್ಮಲ ಮತ್ತು ನಿರ್ವಂಚನೆಗಳಿಲ್ಲದ ವೈಯಕ್ತಿಕ ಮಠಗಳನ್ನು ಕಟ್ಟಿ ಕೊಡುವಂತಹ ಕಾಯಕದಿಂದ ಮಾತ್ರ ಬಸವತತ್ವ ಸಾರಲು ಸಾಧ್ಯ. ಇನ್ನುಳಿದ ಪ್ರಯತ್ನಗಳೆಲ್ಲವೂ ಕ್ಷಣಿಕ ಮಾತ್ರ. ●

ದಲಿತ ಚಳವಳಿ: 86ರ ನೋಟ

ದಲಿತ ಚಳುವಳಿಯ ಇಂದಿನ ಸ್ಥಿತಿಯನ್ನು ಕಂಡು ಹಲವರು ಚಳವಳಿ ದಿಕ್ಕು ತಪ್ಪಿದೆ, ನೆಲ ಕಚ್ಚಿದೆ, ಶಕ್ತಿ-ಸತ್ವ ಎರಡನ್ನೂ ಕಳೆದುಕೊಂಡಿದೆ ಎಂದು ತಮ್ಮ ನಿರಾಶೆಯನ್ನೋ, ಸಿಟ್ಟನ್ನೋ, ಟೀಕೆಯನ್ನೋ ವ್ಯಕ್ತಪಡಿಸುತ್ತಿದ್ದಾರಲ್ಲದೆ ಅದಕ್ಕೆ ತಮ್ಮ ತಿಳುವಳಿಯಕೆಯ ಮಿತಿಯಲ್ಲಿ ಹತ್ತಾರು ಕಾರಣಗಳನ್ನು ನೀಡುತ್ತಿದ್ದಾರೆ.

ಆದರೆ 80ರ ದಶಕದ ಕೊನೆಯ ಭಾಗದಲ್ಲೇ ಚಳುವಳಿಯು ವಿಘಟನೆಯ ಹಾದಿ ಹಿಡಿದಿತ್ತೆಂಬ ಬಗ್ಗೆ ಬಹಳ ಜನರಿಗೆ ತಿಳಿದಿರಲಾರದು. ಕವಲಿನ ಹಾದಿ ತುಳಿದಿದ್ದ ಅಂದಿನ ಚಳುವಳಿಯನ್ನು ಕುರಿತು 'ಸುದ್ದಿ ಸಂಗಾತಿ'ಯಲ್ಲಿ 86ರ ಸಂದರ್ಭದಲ್ಲಿ ಪ್ರಕಟಗೊಂಡಿದ್ದ ಲೇಖನವನ್ನು ಮತ್ತೊಮ್ಮೆ 'ಸಂವಾದ' ಓದುಗರಿಗಾಗಿ ನೀಡುತ್ತಿದ್ದೇವೆ.

○ ಕೋಟಿಗಾನಹಳ್ಳಿ ರಾಮಯ್ಯ

"ಸ್ವಾಭಿಮಾನ ಶೂನ್ಯ ಬದುಕಿಗಿಂತ ಸಾವೇ ಮೇಲು"

"ಮೇಕೆಗಳನ್ನು ಬಲಿ ಕೊಡುವರೇ ಹೊರತು ಸಿಂಹಗಳನ್ನಲ್ಲ"

-ಶತಮಾನಗಳ ಕಾಲ ದಾಸ್ಯದ ಬೇಡಿಗಳಲ್ಲಿ ಬೆಂದು ಹೋಗಿದ್ದ ಜನಾಂಗದ ಕೊರಳಿಂದ ಮೊಳಗಿದ ಮೊಟ್ಟ ಮೊದಲ ಸ್ವಾಭಿಮಾನದ ಸೊಲ್ಲಿದು. ಯುಗ ಯುಗಗಳ ಕತ್ತಲ ಪಯಣದ ನಡುವೆ ಕೋರೈಸಿ ಬಂದ ಮಿಂಚಿದು. ದಲಿತ ಸಮುದಾಯದ ವಿಮೋಚನೆಯ ಹರಿಕಾರ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ದಲಿತರೆದೆಯಲ್ಲಿ ಬಿತ್ತಿದ ಆತ್ಮಗೌರವ, ವಿಮೋಚನೆ, ಪ್ರೀತಿ, ಸಮಾನತೆ, ಸೋದರತೆಗಳ ಮೊಟ್ಟ ಮೊದಲ ಬೀಜವಿದು.

ಭಾರತದ ಇಂದಿನ ಯಾವುದೇ ಸ್ವಾಭಿಮಾನ ಚಳುವಳಿಯ ಬೇರು ಹಿಡಿದು ಹೊರಟರೆ ಅದು ಮುಟ್ಟುವುದು ಅಂಬೇಡ್ಕರ್‌ರಲ್ಲಿಗೇನೆ. ಈ ಹಿಂದೆ ಚರಿತ್ರೆಯಲ್ಲಿ ಇಂಥ ಪ್ರಯತ್ನ ಯಾವುದೂ ನಡೆದಿರಲಿಲ್ಲವೆ? ಹೌದು ನಡೆದಿತ್ತು. ಬುದ್ಧ, ಬಸವ, ಫುಲೆ ಮುಂತಾದ ಮಹಾನುಭಾವರು ಅಸ್ಪೃಶ್ಯತೆಯಿಂದ ಮನುಕುಲದ ಕಳಂಕ ನಿವಾರಣೆಯ ಅಗತ್ಯ ಅರಿತಿದ್ದರು. ಅಸ್ಪೃಶ್ಯತೆ, ಕೀಳಾಗಿ ಕಾಣುವ ಮನೋಧರ್ಮವನ್ನು ಕೈಬಿಟ್ಟು ಮನುಷ್ಯರಾಗುವಂತೆ ಹೇಳಿ ಇನ್ನಿಲ್ಲದಂತೆ ಹೆಣಗಿದರು. ಆದರೆ ಇವರದು ಸಾಮಾಜಿಕ ಆಧ್ಯಾತ್ಮದ ಹಾದಿ. ಸಾಕ್ಷಾತ್ಕಾರದ ಕಾಯಕ. ಇವು ಯಾವುದೂ ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಸ್ವಾಭಿಮಾನ ಚಿಗುರಿಸುವಂತ ಒಂದು ರಾಜಕೀಯ ಚಳುವಳಿಯಾಗಿ ರೂಪುಗೊಳ್ಳಲಿಲ್ಲ. ಹೀಗೆ ಒಂದು ರಾಜಕೀಯ ಆಂದೋಲನವಾಗಿ ರೂಪಗೊಂಡದ್ದು ಡಾ|| ಅಂಬೇಡ್ಕರ್ ಮತ್ತು ಅವರ ಹೋರಾಟಗಳಿಂದ, ಅದಕ್ಕೆಂದೇ ಅಸ್ಪೃಶ್ಯರ ಯಾವುದೇ ಸ್ವಾಭಿಮಾನ ಚಳುವಳಿಯ ತಾಯಿಬೇರು-ಅಂಬೇಡ್ಕರ್.

ಚರಿತ್ರೆಯ ಮಿತಿಗಳು ಎಷ್ಟೇ ಇರಲಿ, ವ್ಯಕ್ತಿ ಕೇಂದ್ರಿತ ಚಳುವಳಿಯ ವೈಫಲ್ಯ-ಸಾಫಲ್ಯಗಳು ಏನೇ ಇರಲಿ, ಅಸ್ಪೃಶ್ಯರ ಕತ್ತಲ ಪಯಣಕ್ಕೆ ದೊಂದಿಯಾದದ್ದು, ದಿಕ್ಕಾದದ್ದು, ಅಂಬೇಡ್ಕರರ ನಾಲ್ಕು ದಶಕಗಳ ಅಂದರೆ 1920 ರಿಂದ 1965ರ ಕಾಲಘಟ್ಟದ ಹೋರಾಟಗಳೇ. ಅದು ದಲಿತ ಇತಿಹಾಸದ ಪರ್ವ ಕಾಲ.

ಅಂಬೇಡ್ಕರ್ ನಂತರ ಆದದ್ದಾದರೂ ಏನು? ವಾತಾಪಿ ಜೀರ್ಣೋಭವ. ಸಂಸ್ಕೃತಿಯ ಕೊಂಡಿಗಳು ಬುದ್ಧ, ಬಸವರನ್ನು ನುಂಗಿ ನೀರು ಕುಡಿದಂತೆ ಈ ಚಳವಳಿಯನ್ನು ನುಂಗತೊಡಗಿತು.

ಒಂದು ಕಡೆ ಗಾಂಧೀಜಿಯ ಪ್ರಾಮಾಣಿಕತೆ ಮತ್ತು ನೈತಿಕತೆಯನ್ನು ಕಳೆದುಕೊಂಡ ಕಾಂಗ್ರೆಸ್, ಇನ್ನೊಂದು ಕಡೆ ಜಾತಿಯ ವಾಸ್ತವತೆಗೆ ಕಣ್ಣು ಮುಚ್ಚಿ ಕುರುಡಾದ ಕಮ್ಯುನಿಸ್ಟರು. ಮತ್ತೊಂದು ಕಡೆ ಸಮಾನತೆ ಮತ್ತು ಮಾನವೀಯತೆಯ ಗರಿಕೆ ಬೇರುಗಳನ್ನೂ ಬುಡ ಸಹಿತ ಕಿತ್ತೊಗೆಯುವ ಚಾಣಕ್ಯ ಸಂಸ್ಕೃತಿಯ ಹಿಂದೂ ಮಹಾಸಭೆ, ಆರೆಸ್ಸೆಸ್, ಬಿ.ಜೆ.ಪಿ. ಇದೆಲ್ಲದರ ನಡುವೆ ಕಂಗೆಟ್ಟ ದಲಿತರ ಹಾದಿ ಮಸಕು ಮಸಕು.

1960ರ ದಶಕ ದೇಶದಾದ್ಯಂತ ದಲಿತರು ಗರೀಬಿ ಹಠಾವೋ ಇಂದಿರಾ ಮಾಯಜಿಂಕೆಯ ಬೆನ್ನು ಹತ್ತಿದ್ದರು. ಪಶ್ಚಿಮ, ಬಂಗಾಳ, ಆಂಧ್ರ, ಕೇರಳಗಳಲ್ಲಿ ದಲಿತರು ಕೆಲವು ಸೂರ್ಯನ ಬೆನ್ನಟ್ಟಿ ಗೆಲವು ಕಾಣದೆ ಮತ್ತಷ್ಟು ಕೆಂಪು ಅರಸುತ್ತಾ ನಕ್ಸಲೀಯ ಚಳವಳಿ ನೇತಾರ ಚಾರು ಮಜುಂದಾರರ ಹಿಂದೆ ಕತ್ತಿ, ಕುಡುಗೋಲು ಹಿಡಿದು ಹಿಂಸೆಯ ಕಾಡ್ಗಿಚ್ಚು ಹೊಕ್ಕಿದ್ದರು. ತಮಿಳುನಾಡಿನಲ್ಲಿ ದ್ರಾವಿಡ ಚಳುವಳಿಯ ಕರುಡು ಬ್ರಾಹ್ಮಣ ದ್ವೇಷ ದಲಿತರನ್ನು ದಾರಿತಪ್ಪಿಸಿತ್ತು.

ಇನ್ನು ದಲಿತರ ಕರ್ಮಭೂಮಿಯಾದ ಮಹಾರಾಷ್ಟ್ರದಲ್ಲಿ ಸ್ವಯಂ ಅಂಬೇಡ್ಕರರೇ ಕಟ್ಟಿದ ರಿಪಬ್ಲಿಕನ್ ಪಕ್ಷ ಆಳುವವರ ಬಾಲಂಗೋಚಿಯಾಗಿ ದಲಿತರ ಅಳಿದುಳಿದ ಕನಸುಗಳನ್ನೂ ಧೂಳೀಪಟ ಮಾಡಿತ್ತು. ಅದರ ಬೂದಿಯಿಂದ ಎದ್ದದ್ದೇ 'ದಲಿತ ಪ್ಯಾಂಥ'ರ್ಸ್' ಚಳವಳಿ, ಇಂದಿನ ಎಲ್ಲ ದಲಿತ ಚಳವಳಿಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ಸ್ಫೂರ್ತಿ ನೀಡಿದ ಈ ಚಳವಳಿಯೂ ಒಡೆದು ಹೋಳಾಗುವ ಹಾದಿಯಲ್ಲಿತ್ತು.

ಇಂಥ ಯಾವ ಚಳವಳಿಗಳೂ ಇಲ್ಲದ ಕರ್ನಾಟಕದಲ್ಲಿ ಆಗಷ್ಟೇ ಕಣ್ಣು ಬಿಡತೊಡಗಿದ್ದ ದಲಿತ ಸಂವೇದನಾಶೀಲ ಬರಹಗಾರರು ದಿಕ್ಕು ಹರಸುತ್ತಿದ್ದರು. ನವ ನಿರ್ಮಾಣ, ಸಮಾಜವಾದಿ ಯುವಜನ ಸಭಾ, ಮಾರ್ಕ್ಸ್‌ವಾದ ಮುಂತಾಗಿ ಪ್ರಭಾವಿತರಾದ ಈ ಜನರನ್ನು ಒಂದುಗೂಡಿಸಿದ್ದು "ಬೂಸಾ ಚಳವಳಿ". ಬೂಸಾ ಚಳವಳಿ ಕರ್ನಾಟಕ ದಲಿತ ಚಳವಳಿಗೆ ಒಂದು ಕಾರಣವೇ ಹೊರತು ಕೇಂದ್ರ ಪ್ರೇರಣೆ ಅಲ್ಲ.

ಮೊದಮೊದಲು ಬರಹಗಾರರ, ಸಾಂಸ್ಕೃತಿಕ ವೇದಿಕೆಯಾಗಲು ದಲಿತ ಲೇಖಕರ ಕಲಾವಿದರ ಸಂಘಟನೆ

ಹುಟ್ಟಿಕೊಂಡಿತು. ಆದರೆ ಮೊದಲ ಸಮಾವೇಶ ಭದ್ರಾವತಿಯಲ್ಲಿ 1976ರ ಡಿಸೆಂಬರ್ 10, 11ರಂದು ನಡೆಯಿತು. ಆದಾಗಲೇ ತುರ್ತು ಪರಿಸ್ಥಿತಿ ಕರಾಳ ಛಾಯೆ ದೇಶದ ತುಂಬ ದಟ್ಟೈಸಿತ್ತು. ಜೈಲುಗಳು ತುಂಬಿ ಹೋಗಿದ್ದವು. ನಕ್ಸಲೀಯರನ್ನು ಹಾಡುಹಗಲೇ ಗುಂಡಿಕ್ಕಿ ಕೊಲ್ಲಲಾಗುತ್ತಿತ್ತು. ಕಾಮ್ರೇಡರನ್ನು ಮೇಲು ಜಾತಿ ಎಂದು ತಿಳಿದೊಡನೆ ಪೋಲಿಸರು ತಪ್ಪಿಸಿಕೊಂಡು ಹೋಗಲು ಅನುವು ಮಾಡಿ ಕೊಡತೊಡಗಿದ್ದರು. ಜಾತಿಯಲ್ಲಿ ಕೀಳಾದ ಕಾಮ್ರೇಡರ ರಕ್ತ ದಟ್ಟ ಕಾಡುಗಳ ಹಸಿರೆಲೆಗಳ ಮೇಲೆ ನಗತೊಡಗಿತ್ತು.

ಈ ನಗೆ ದಲಿತರ ನಗೆ ಹೆಚ್ಚಿಸಬಹುದೆಂದು ಇಂದಿರಾಗಾಂಧಿ ಇಪ್ಪತ್ತು ಅಂಶಗಳ ಹರಕು ಹಚ್ಚಡ ಹೊದಿಸುತ್ತಿದ್ದರು. ಕೊರಳು ಬಿಗಿದಿದ್ದ ಈ ಹಚ್ಚಡವ ನೋಡುತ್ತಾ ಭದ್ರಾವತಿಯಲ್ಲಿ ನಡೆದ 'ದಲಿತ ಲೇಖಕ ಮತ್ತು ಕಲಾವಿದರ ಬಳಗ'ದ ಸಾಹಿತ್ಯ ಸಭೆಯಲ್ಲಿ ದೇವನೂರು ಮಹಾದೇವ ಮಾತನಾಡುತ್ತಿದ್ದರು.

"ನಮ್ಮ ಸುತ್ತ ಕಣ್ಣು ಬಿಟ್ಟು ಇದು ಯಾಕೆ? ಇದು ಹೇಗೆ? ಎಂದು ಕೇಳಬೇಕು. ಕೇಳುವ ಬಾಯಿ ಮುಚ್ಚಿಸಲು ಇಪ್ಪತ್ತು ಪಾಯಿಂಟ್ ಕೊಡಬಹುದು. ನಾವು ಮತ್ತೂ ಮುಂದೆ ಹೋಗಿ ಇದು ಯಾಕೆ? ಇದು ಹೇಗೆ ಅನ್ನಬೇಕು? ಆಗ ಇಪ್ಪತ್ತೂ ನೂರಾಗುತ್ತೆ; ನೂರು-ಲಕ್ಷ ಆಗುತ್ತೆ. ಲಕ್ಷ ಪಾಯಿಂಟುಗಳೂ ಸಾಲದ ನಾವೆಲ್ಲಾ ಮತ್ತೂ ಮುಂದೆ ಹೋಗುತ್ತೇವೆ. ನಮ್ಮದೇ ಪಾಯಿಂಟುಗಳನ್ನು...."

'ದ.ಲೇ.ಕ.' ದಲಿತ ಸಂಘರ್ಷ ಸಮಿತಿಯಾಯಿತು. ಅದು ಕಣ್ಣಿಟ್ಟು ನೋಡಿತು.

ಕಂಡಿದ್ದೇನು? ಭಾರತಮಾತೆಯ ಮಾಸಿದ ಸೆರಗಾದ ಹಳ್ಳಿಗಾಡಲ್ಲಿ ದಲಿತ ಹೆಣ್ಣುಗಳ ಅತ್ಯಾಚಾರ, ಕೊಲೆ, ಸುಲಿಗೆ; ಅಸ್ಪೃಶ್ಯತೆಯ ಜಟಿಲ ಬಲೆಯಲ್ಲಿ ಸಿಕ್ಕಿಬಿದ್ದು ಬಿಡಿಸಿಕೊಳ್ಳಲಾರದ ದಲಿತರು, ಈ ಬಲೆ ಕಡಿಯುತ್ತಾ ತಮ್ಮ ಮೇಲಾಗುವ ಹಲ್ಲೆ, ದೌರ್ಜನ್ಯಗಳ ಪ್ರತಿಭಟಿಸುತ್ತಾ, ಸಂಘರ್ಷ ಸಮಿತಿ ಬೆಳೆಯತೊಡಗಿತು.

ಆ ಚಳವಳಿಯ ಅಂತರಂಗವಾಗಬೇಕಿದ್ದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸತ್ವ ಅಂಚಿಗೆ ಸರಿಯತೊಡಗಿತು. ದ.ಸಂ.ಸ. ಕಣ್ಣೆದುರು ಇಂಡಿಯಾದ ಪ್ರಾಣವಿಲ್ಲದ ಕಮ್ಯೂನಿಸ್ಟ್ ಶರೀರ ಇತ್ತು. ಅಲ್ಲಿ ಅನೇಕ ಪಾಠಗಳಿದ್ದವು. ಆದರೆ ಹಳ್ಳಿಗಾಡಿನ ಉಳ್ಳವರ ಕ್ರೌರ್ಯ ಈ ಶರೀರವನ್ನು ಮೇಲೆಳೆದುಕೊಳ್ಳುವಂತೆ ಮಾಡುವ ದುರಂತವೂ ಇತ್ತು. ಆ ಹಾದಿಯು ಹೊಳಹು, ತುಡಿತ ಹಿಡಿದ ದಿಕ್ಕು...ಪ್ರತಿಫಲಿಸತೊಡಗಿದ್ದು, ಅದು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ.

1980ರಲ್ಲಿ ಕರ್ನಾಟಕದ ಎಲ್ಲ ಜನರ ಗಮನ ಸೆಳೆದದ್ದು ಹುಣಸೇಕೋಟೆ ಶೇಷಗಿರಿಯಪ್ಪನ ಕಗ್ಗೊಲೆ ವಿರೋಧಿ ಜಾಥಾ.

70 ಕಿ.ಮೀ. ದೂರ ಕಾಲ್ನಡಗೆಯಲ್ಲಿ ಬಂದ ಈ ಜಾಥಾಗೆ ಅನೇಕ ಪ್ರಗತಿಪರ ಸಂಘಟನೆಗಳು, ಕಮ್ಯುನಿಸ್ಟ್ ಪಕ್ಷಗಳು ಬೆಂಬಲ ವ್ಯಕ್ತಪಡಿಸಿದ್ದವು.

ಗುಂಡೂರಾಯರ ಹಠಮಾರಿತನ ಮತ್ತು ಜನ ವಿರೋಧಿ ನಿಲುವಿನಿಂದಾಗಿ ಅಂದು ಪೊಲೀಸು ಲಾಠಿ, ಬೂಟುಗಳೇ ರುದ್ರನಾಟ್ಯವಾಡಿದವು. ದ.ಸಂ.ಸ. ಈ ಹೋರಾಟಕ್ಕೆ ಸಿಕ್ಕ ಜನ ಬೆಂಬಲ ಆ ನಂತರದ ಇನ್ನು ಯಾವುದೇ ಹೋರಾಟಕ್ಕೆ ದೊರೆಯಲಿಲ್ಲ. ಬಹುಶಃ 'ದಲಿತರು ಎಂದರೆ ಕೇವಲ ಹರಿಜನರು ಮಾತ್ರವಲ್ಲ. ತುಳಿತಕ್ಕೊಳಗಾದ ಎಲ್ಲರೂ' ಎನ್ನುವ ತನ್ನ ಮಾತನ್ನು ದ.ಸಂ.ಸ. ಮಾಡಿದ್ದು ಇದಕ್ಕೆ ಕಾರಣವಿರಬಹುದು.

ನಾಡಿನಾದ್ಯಂತ ತಾಲ್ಲೂಕು, ಹೋಬಳಿ ಮಟ್ಟದ ಸಮಿತಿಗಳು ಒಂದಿಲ್ಲೊಂದು ಕಾರ್ಯಕ್ರಮ ಚಟುವಟಿಕೆ

ಗುಂಡೂರಾಯರ ಹಠಮಾರಿತನ ಮತ್ತು ಜನ ವಿರೋಧಿ ನಿಲುವಿನಿಂದಾಗಿ ಅಂದು ಪೊಲೀಸು ಲಾಠಿ, ಬೂಟುಗಳೇ ರುದ್ರನಾಟ್ಯವಾಡಿದವು. ದ.ಸಂ.ಸ.ದ ಈ ಹೋರಾಟಕ್ಕೆ ಸಿಕ್ಕ ಜನ ಬೆಂಬಲ ಆ ನಂತರದ ಇನ್ನು ಯಾವುದೇ ಹೋರಾಟಕ್ಕೆ ದೊರೆಯಲಿಲ್ಲ. ಬಹುಶಃ 'ದಲಿತರು ಎಂದರೆ ಕೇವಲ ಹರಿಜನರು ಮಾತ್ರವಲ್ಲ. ತುಳಿತಕ್ಕೊಳಗಾದ ಎಲ್ಲರೂ' ಎನ್ನುವ ತನ್ನ ಮಾತನ್ನು ದ.ಸಂ.ಸ. ಅಳವಡಿಸಿ ಕೊಂಡದ್ದು ಇದಕ್ಕೆ ಕಾರಣವಿರಬಹುದು.

ನಡೆಸುತ್ತಲೇ ಬರುತ್ತಿವೆ. ಅದು ಹೋಟೆಲ್, ದೇವಸ್ಥಾನ ಪ್ರವೇಶ, ಹಲ್ಲೆ ಪ್ರತಿಭಟಿಸಿ, ಧರಣಿ, ನೀರಿಗಾಗಿ ಹೋರಾಟ, ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಮೆರವಣಿಗೆ ಇತ್ಯಾದಿ. ಈ ಎಲ್ಲ ಹೋರಾಟಗಳನ್ನು ಸ್ಥೂಲವಾಗಿ ಎರಡು ಗುಂಪಾಗಿ ವಿಂಗಡಿಸಬಹುದು. ದಾಸ್ಯವೇ ಜೀವನ ವಿಧಾನ. ಅಸಮಾನತೆಯೇ ಬದುಕಾಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ತುಳಿತಕ್ಕೊಳಪಟ್ಟ ಜನಾಂಗವೊಂದನ್ನು ತನ್ನ ಹಕ್ಕುಗಳ ಬಗ್ಗೆ ಪ್ರಜ್ಞೆ ಬೆಳೆಸಿಕೊಳ್ಳುವುದೇ ಸ್ವಾಭಿಮಾನ. ಆದರೂ ಚಳವಳಿ ಸಾಗಿ ಬಂದ ಪರಿಯನ್ನು ವಿಮರ್ಶಿಸಲು ಈ ವಿಂಗಡಣೆ ಅನಿವಾರ್ಯ.

ಇದುವರೆಗೂ ಕಮ್ಯುನಿಸ್ಟ್ ಮತ್ತು ಸೋಷಲಿಸ್ಟರು ನಡೆಸಿದ ಭೂ ಹೋರಾಟಗಳನ್ನೇ ದ.ಸಂ.ಸ. ಕೂಡಾ ಅಳವಡಿಸಿಕೊಂಡಿತು. ಗ್ರಾಮೀಣ ಭಾರತದ ದಲಿತರ ಎಲ್ಲ ಸಮಸ್ಯೆಗಳ ಮೂಲ ಭೂಮಿ ಸಮಸ್ಯೆ ಆಗಿದ್ದುದೇ ಇದಕ್ಕೊಂದು ಮಹತ್ತರ ಕಾರಣ.

1975 ರಿಂದ 76ರವರೆಗೆ ಒಂದು ವರ್ಷ ನಾಲ್ಕು ತಿಂಗಳು ನಡೆದ ಭದ್ರಾವತಿ ತಾಲ್ಲೂಕಿನ ಸಿದ್ದಿಪುರ ಭೂ ಹೋರಾಟ, ಕರ್ನಾಟಕದಲ್ಲಿ 'ಭೂ ಪರದಾರೆ ನಿಷೇಧ ಕಾಯ್ದೆ'ಯ ಜಾರಿಗೆ ಕಾರಣವಾಯಿತು.

ಆ ನಂತರ ಹಾಸನ ಜಿಲ್ಲೆಯ ಬದಿರೆಕಾವಲಿನಲ್ಲಿ ಒಂದು ಭೂ ಆಕ್ರಮಣ ಚಳುವಳಿ ನಡೆಯಿತು. ಸರ್ಕಾರದ ಪಶುಸಂಗೋಪನಾ ಇಲಾಖೆಗೆ ಸೇರಿದ 400 ಎಕರೆಯನ್ನು DSS ಸಮಿತಿ ಹೋರಾಟದ ಮೂಲಕ ಆಕ್ರಮಿಸಿಕೊಂಡು ಎಲ್ಲಾ ಜಾತಿಯ ಬಡವರಿಗೂ ಹಂಚಿತು. ಅಲ್ಲೊಂದು ಹೊಸ ಗ್ರಾಮ ಹುಟ್ಟಿತು. ಜಾತಿಗಳು ಬೇರೆ ಬೇರೆ ಆಗಿದ್ದರೂ ಎಲ್ಲರೂ ಒಂದೇ ಬಾವಿಯ ನೀರು ಬಳಸುವುದು, ಒಟ್ಟಿಗೆ ಕೂತು ಉಣ್ಣುವುದೂ ನಡೆಯಿತು. ಮೊದಮೊದಲು ಹಿಂಜರಿತ ಇದ್ದರೂ ಇದು ಒಂದು ಮಾನಸಿಕ ಸ್ಥಿತಿ ತಲುಪುವ ದಾರಿಯಲ್ಲಿರುವಾಗಲೇ ದ.ಸಂ.ಸ.ದ ಉದಾಸೀನದಿಂದಾಗಿ ಮುರಿದುಬಿತ್ತು.

ಚಿಕ್ಕಮಗಳೂರು ಜಿಲ್ಲೆಯ ಚಂಡೆಗೋಡು, ಹೆಗ್ಗಡದೇವನಕೋಟೆ ತಾಲ್ಲೂಕಿನ ದೇವಲಾಪುರ, ಕೋಲಾರ ಜಿಲ್ಲೆಯ ನಾಗಸಂದ್ರ ಮುಂತಾದೆಡೆ ದ.ಸಂ.ಸ. ಭೂ ಆಕ್ರಮಣ ಚಳುವಳಿ ನಡೆಸಿತು. ಇವೆಲ್ಲ ಚಳುವಳಿಯ ಜೀವಂತಿಕೆ ಮತ್ತು ಸಮರಶೀಲತೆಗೆ ಸಾಕ್ಷಿ.

ಆದರೆ ದಲಿತ ಸಂಘರ್ಷ ಸಮಿತಿ ಒಂದು ಅಂಶದತ್ತ ಗಮನ ಹರಿಸಲಿಲ್ಲ. ಭೂಮಿಗಾಗಿ ನಡೆಸಿದ ಹೋರಾಟಗಳಿಗೆ ನೀಡಿದಷ್ಟು ಪ್ರಾಧಾನ್ಯತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳಿಗೆ ನೀಡಲಿಲ್ಲ. ಗ್ರಾಮೀಣ ಭಾರತದ ಸ್ಫೋಟಕ ಸಾಮಾಜಿಕ ಪರಿಸ್ಥಿತಿಯ ಅರಿವು ಇದಕ್ಕೆ ಕಾರಣವಿರಬಹುದು. ಭೂ ಹೋರಾಟಕ್ಕೆ ಎಲ್ಲಾ ಜಾತಿಯ ಬಡವರನ್ನೂ ಒಂದುಗೂಡಿಸುವಂತೆ ನೀರು ಮುಟ್ಟುವ, ದೇವಸ್ಥಾನ ಪ್ರವೇಶಿಸುವ ಹೋರಾಟಕ್ಕೆ ಒಂದುಗೂಡಿಸುವುದು ಪ್ರಯಾಸ. ಇಂಥ ಹೋರಾಟಗಳಿಗೆ ಸ್ಥಳೀಯ ಬಲಿಷ್ಠ ಜಾತಿ ಹಿತಾಸಕ್ತಿಗಳು, ಪ್ರಬಲ ಪ್ರತಿರೋಧ ಒಡ್ಡುತ್ತವೆ. ನ್ಯಾಯಯುತ ಪ್ರಜ್ಞಾವಂತರ ಪ್ರಶ್ನೆಗಳೇ ಉದ್ಧಟತನ ಮತ್ತು ಸೊಕ್ಕಿನ ಪ್ರತೀಕವಾಗಿ ಕಾಣುವ ಪರಿಸ್ಥಿತಿ ಇರುವಾಗ ಇನ್ನೂ ಈ ಹೋರಾಟಗಳು ಜಾತಿ ದಂಗೆಗಳಿಗೆ ಕಾರಣವಾದರೂ ಆಶ್ಚರ್ಯ ಇಲ್ಲ. ಜೊತೆಗೆ ಅವಮಾನ ಮತ್ತು ಕೀಳರಿಮೆಯಿಂದ ಬೇಯುತ್ತಿರುವ ದಲಿತ ಯುವಕರು ದ್ವೇಷ ಮತ್ತು ಪ್ರತೀಕಾರಕ್ಕೆ ಹಾತೊರೆಯುವ ಅಪಾಯವೂ ಇದೆ...

ದಲಿತ ಸಂಘರ್ಷ ಸಮಿತಿ ಹುಟ್ಟಿ ಒಂದು ದಶಕವಾಯಿತು ಇದುವರೆಗೆ ಅನೇಕ ಹೋರಾಟಗಳನ್ನು ಕೈಗೆತ್ತಿಕೊಂಡು ನಾನಾ ಏಳು-ಬೀಳುಗಳನ್ನು ಕಂಡಿದೆ. ಅದು ತೆಗೆದುಕೊಂಡ ರಾಜಕೀಯ ನಿಲುವುಗಳು ಟೀಕೆ, ವಿಮರ್ಶೆ, ವಿವಾದಗಳಿಗೆ ಕಾರಣವಾಗಿವೆ. ಮುಖ್ಯವಾಗಿ ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಜನತಾ ಪಕ್ಷವನ್ನು ಬೆಂಬಲಿಸುವ ತೀರ್ಮಾನ ಅಲ್ಲೋಲ ಕಲ್ಲೋಲವನ್ನೇ ಉಂಟುಮಾಡಿತ್ತು. ಬಲಿಷ್ಠ ಜಾತಿ ಮತ್ತು ಜಮೀನುದಾರರ ಪಕ್ಷವಾದ ಜನತಾ ಪಕ್ಷವನ್ನು ಬೆಂಬಲಿಸುವಂತೆ ಯಾವ ಬಾಯಲ್ಲಿ ಹೇಳುವುದು ಎನ್ನುವ ಆತಂಕವೂ ಇತ್ತು. ಆ ಸಭೆಯಲ್ಲಿ ದ.ಸಂ.ಸ. ಹಿರಿಯ ನಾಯಕ ಬಿ. ಕೃಷ್ಣಪ್ಪ "ಈಗ ಬಹುಮತದಿಂದ ಈ ತೀರ್ಮಾನ ಆಗಿದೆ. ಇದರಿಂದ ಎಂಥ ಕಠಿಣ ಪರಿಸ್ಥಿತಿ ಬಂದರೂ ನಾವು ಅದನ್ನು ಎದುರಿಸಲೇಬೇಕು. ಎಷ್ಟೋ ಕಾಲದ ನಂತರ ದಲಿತರ ಜೋಪಡಿಯಲ್ಲಿ ಒಂದು ಮಣ್ಣಿನ ಹಣತೆ ಮಿಣಿಮಿಣಿ ಉರಿಯುತ್ತಿದೆ. ಹೊರಗೆ ಕತ್ತಲು ಬಿರುಗಾಳಿ ಇದೆ. ನಾವು ಈ ಹಣತೆಯನ್ನು ಕಾಪಾಡಲೇಬೇಕು" ಎಂದು ಗದ್ಗದಿತರಾಗಿ ನುಡಿದಿದ್ದರು. ಸಂಘಟನೆಯೊಂದರ ತಳಮಳಕ್ಕೆ ಕನ್ನಡಿ ಈ ನುಡಿಗಳು.

ಏಕಪಕ್ಷ, ಏಕವ್ಯಕ್ತಿಕೇಂದ್ರಿತ ಸರ್ವಾಧಿಕಾರದ ಅಪಾಯ ಮನಗಂಡು ಕೈಗೊಂಡ ತೀರ್ಮಾನ ಅದಾಗಿತ್ತು. ಯಾವುದೇ ಎಡಪಂಥೀಯ ನಿಲುವಿನ ಪಕ್ಷ, ಸಂಘಟನೆ ಇಂಥ

ಪಿರಪೇತಿ ಮಗನ ಪದನ

○ ಮಂಜುನಾಥ ಗೀತಾ



ನನ್ನ ನೀ ನೆಲಕೆ ಈಯುವಾಗ ನಿನಗೆ
ಎಷ್ಟು ನೋವಾಗಿತ್ತು ಗೊತ್ತಿರಲಿಲ್ಲ ನನಗೆ
ಎಲ್ಲಾ ಗೊತ್ತಾಗುವ ಈಗೆಲ್ಲ ಗೊತ್ತಾಗಿದೆ
ಅದಕ್ಕಿಂತಲೂ ನೋವು ಪೆಪ್ಸಿಕೋಲ ಕುಡಿದು ಆ
ಮಾತು ಹೂತು ಹೋದ ಈ ಗಂಟಲ ಬಾವು

ನಿಶೆ ಇಳಿದು ನನ್ನ ಸಾಚಾತನದ ಅರಿವಾಗಿ
ಆ ಬಗ್ಗೆ ಯೋಚನೆ ಶುರುವಾಗಿದೆ

ನೆತ್ತಿ ಮಾಸು ಆರುವ ಮುನ್ನವೇ ನಿನ್ನ
ವ್ಯಾಪಾರದ ನಾಜೂಕು ಮಾತು ಕಲಿತವನು ನಾನು
ತಾಜಾ ಮಾಲುಗಳೆದುರು ಮುದಿ ತೊಗಲ
ಕೊಳಕು ಆತ್ಮ ನೀನು-ಇತ್ಯಾದಿಯೆಲ್ಲ ಗೊತ್ತಾಗಿದೆ

ಅಪ್ಪನೆಂಬ ಅಧಮನ ನೆಪ್ಪಾಗುತ್ತಿದೆ
ಅವನ ಮೋಟುಗಾಲು ಮೊಂಡುಗ್ಯೆ ಕುಂಡುಕಣ್ಣು
ನನ್ನ ಕಣ್ಣ ಮುಂದೆ ಕುಣಿಯುತ್ತಿವೆ
ಆದರೆ ಈಗೆಲ್ಲವೂ ಆಗಿ ಹೋಗಿವೆ.

ಈಗ ನಿನ್ನ ಯೋನಿಜಾಗ ಮುಕ್ತ ಅಖಾಡವು
ನಿನ್ನ ಗರ್ಭಕ್ಕೆ ಚುಚ್ಚಿ ನೆಟ್ಟ
ಎಲ್ಲಾ ದೇಶಗಳ ಪಟಪಟ ಬಾವುಟಗಳೂ
ಮೊಲೆಗಳ ಮೇಲೆ ಅವರ ಬಣ್ಣಗಳ ಬರವಣಿಗೆಯ

ಕಗ್ಗಾಡಿನಲಿ ನಾನು ಕರಿನೇರಳೆ ಹುಡುಕುತ್ತಿದ್ದ ಆಗ
ಮುಂದೊಂದು ದಿನ ಈ ಗಿಲೀಟು ಕೈಗಳು ತಲೆ ಸ

ಅಯ್ಯಂದಿರಿಕ್ಕಿದ ನನ್ನ ತೊಗಲು ಮಾನಗಳ ಸುಲಿದು
ಬೋಳನಾಗಿಸೀ ಬೋಳು ಬಯಲಿನಲ್ಲಿ
ನನ್ನನ್ನು ನಿಲ್ಲಿಸುವಂತೆ ಒಂಟಿ ಲಂಗೋಟಿಯಲ್ಲಿ

ಕಟ್ಟಕಡೆಯ ಕಟೆಕಟೆಯಲ್ಲಿ
ಅಂತೆಲ್ಲ ಗೊತ್ತೇ ಇರಲಿಲ್ಲ ಕಣೇ ಅವ್ವಾ !

ನಾನಾ ನಮೂನೆಯ ಕೋಟುಗಳ ಕೋಟಿ ಅಪ್ಪಂದಿರಿಗೆ
ನಿನ್ನನ್ನು ಮಾರಿ ನಿನ್ನನ್ನು ಕಳೆದುಕೊಂಡಿದ್ದೇನೆ
ಆ ಕಾರಣ ನಿನ್ನನ್ನು ಹುಡುಕುತ್ತಿದ್ದೇನೆ.

ನಿದ್ದೆ ಬಿದ್ದು ಹೋದ ರಾತ್ರಿಯಷ್ಟೇ ಗೊತ್ತಾಯಿತು
ನನ್ನೆದೆ ಪೊಟರೆಯಲ್ಲೀಗ ನನ್ನಾತ್ಮದ ಗಿಡುಗವಿಲ್ಲ
ಇನ್ನು ನಾ ತಾನೇ ಏನು ಮಾಡಲಿ ಹೇಳು ?
ಆ ನನ್ನಾತ್ಮವು - ಅದು ನಿನ್ನಾತ್ಮವೂ

ಥಳಥಳಿಸುವ ಅವರ ಕಮೋಡಿನ ಜೀತಕ್ಕಿದೆ
ಬಂಗಾರ ಬಣ್ಣದ ಅವರ ಹೇಲೂ ಎಷ್ಟು
ಗಮಗುಡುತ್ತೆ
ಅಂತ ಅವರಿಂದಲೇ ಮೂಗು ಮುಂದಲೆ
ಕುಯ್ಯಿಸಿಕೊಂಡ ನಿನಗೆ ಗೊತ್ತೇ
ನನ್ನ ಹೆತ್ತ ಪಾಪಿ ಮಾತೆ !

ತೊಳಲಾಟ, ತುಮುಲವನ್ನು ಅನುಭವಿಸಲೇಬೇಕಿತ್ತು. ಸಂವಿಧಾನ, ಚುನಾವಣೆ ಚೌಕಟ್ಟಿನ ಆಚೆ ಸಶಸ್ತ್ರ ಕ್ರಾಂತಿಯ ದಾರಿ ಹಿಡಿದವರೂ ಕೂಡ ಮರಳಿದ್ದು ಇದೇ ದಾರಿಗೆ.

ದಲಿತ ಚಳುವಳಿಯ ಮೇಲೆ ಅನ್ಯ ಚಳವಳಿಗಳ ಪ್ರಭಾವದ ಬಗ್ಗೆ ಒಂದು ಮಾತು. ಮಿಲಿಟೆನ್ಸಿಯ ಹೆಸರಿನಲ್ಲಿ ಒಳಗೆ ಸುಳ್ಳಾಗಿ ಹೊರಗೆ ಘೋಷಣೆಯಾಗಿ, ಈ ಸಮಾಜದ ಎಲ್ಲ ಅನಿಷ್ಟಗಳಿಗೆ ಬೇರೊಬ್ಬರೂ ಕಾರಣ ನಮ್ಮದೇನೂ ಪಾಲೇ ಇಲ್ಲ ಎನ್ನುವ ಕೇವಲ ಸ್ಟ್ರಾಟರ್ಜಿ ಮತ್ತು ಟ್ಯಾಕ್ಟಿಕ್ಸ್‌ಗಾಗಿ ಮಾತ್ರ ಜಾತಿಯನ್ನು ಗುರುತಿಸುವ, ತಮ್ಮ ಪಕ್ಷದ ನಾಯಕತ್ವದಲ್ಲಿ ದಲಿತರು ಮತ್ತು ಮಹಿಳೆಯರಿಗೆ ನೈತಿಕ ಕಾರಣಕ್ಕಾಗಿಯೇ ಆದರೂ ಪಾಲು ಕೊಡದ, ಹಿಂಸೆ ಮತ್ತು ಹುತಾತ್ಮಿಕೆಯನ್ನು ವೈಭವೀಕರಿಸಿ ಸಿದ್ಧಾಂಥ ರೂಪಿಸಿದ ಕಮ್ಯೂನಿಸ್ಟ್ ಚಳುವಳಿಯ ಪ್ರಭಾವ ಅಲ್ಲಲ್ಲಿ ಕಂಡು ಬಂದಿದೆ.

ಈ ಅಪಾಯದಿಂದ ಆದಷ್ಟು ಬೇಗ ದೂರ ಸರಿದಷ್ಟೂ ದಲಿತ ಚಳವಳಿಗೆ ಒಳಿತು, ಅಂಬೇಡ್ಕರ್ ಈ ಅಪಾಯವನ್ನು ಅರಿತಿದ್ದರಿಂದಲೇ ಅವರು ಮಾರ್ಕ್ಸ್ ವಾದವನ್ನು ತಿರಸ್ಕರಿಸದೆ, ಭಾರತೀಯ ಮಾರ್ಕ್ಸ್‌ವಾದಿಗಳನ್ನು ಮಾತ್ರ ವಿಮರ್ಶಿಸುತ್ತಾ ಹಿಂಸಾ ಪಂಥ ವಿರುದ್ಧ ಬೌದ್ಧ ಮತವನ್ನು ಅವಲಂಬಿಸಿದ್ದು.

ಈ ನೆಲದ ಅನೇಕ ಗೊಂದಲ ಮತ್ತು ಸಂಕೀರ್ಣತೆಗಳ ನಡುವೆಯೂ ಒಂದು ದಿಕ್ಕು ಹುಡುಕಲು ಹೊರಟ ದಲಿತ ಚಳುವಳಿ ಈ ಅಂಶಗಳನ್ನು ಗಮನಿಸುವುದು ಒಳ್ಳೆಯದು.

ಜಾತಿಯ ಬಗೆಗಿನ ಗಾಂಧೀಜಿಯ ಪ್ರಾಮಾಣಿಕತೆ ಮತ್ತು ನೈತಿಕತೆ. ಅಂಬೇಡ್ಕರ್‌ರ ಸಾತ್ವಿಕ ಸಿಟ್ಟು ಮತ್ತು ಆಕ್ರೋಶ, ಮಾರ್ಕ್ಸ್ ಹೇಳಿದ ಖಾಸಗಿ ಆಸ್ತಿ ಒಡೆತನದ ನಿರ್ಮೂಲನೆ-ಇವು ದ.ಸಂ.ಸ.ದ ಸೈದ್ಧಾಂತಿಕ ಪಥಕ್ಕೆ ದೀವಿಗೆಯಾಗಬಲ್ಲವು.

ಕೊನೆಯದಾಗಿ ಒಂದು ಮಾತು. ಯಾವುದೇ ಚಳುವಳಿಗೆ ತಾಯ್ತನದ ಅಂತಃಕರಣ ದಕ್ಕದೆ ಹೋದರೆ ಅದು ಅಪೂರ್ಣ. ತುಳಿಯುವ ಜಾತಿವಾದಿಯ ಕಾಲು ನನ್ನ ಸಹಜೀವಿಯದು...ಅಥವಾ ಅವನ ಸ್ಥಾನದಲ್ಲಿ ನಾನಿದ್ದಿದ್ದರೆ ಎಂದು ಎಂಥ ಸಿಟ್ಟಿನ ಅಗ್ನಿ ಮುಖದಲ್ಲೂ ಒಂದು ಕ್ಷಣವಾದರೂ ಯೋಚಿಸಬೇಕಾದ ಹೊಣೆಗಾರಿಕೆ ದಲಿತರ ಮೇಲಿದೆ. ಹಾಗೆಯೇ ನೆಲದ ಒಡೆತನ ತಮ್ಮದಲ್ಲವಾದರೂ ಸೇವಿಸುವ ಗಾಳಿ, ನೀರಿನ ಋಣಕ್ಕಾದರೂ ಈ ಪ್ರಕೃತಿಯನ್ನು ಪ್ರೀತಿಸಿ ಕಾಪಾಡಬೇಕಾದ್ದು ಕೂಡ. ಜಾತಿ ತುಳಿತಕ್ಕೆ ಮೂಲವಾದ ಹೆಣ್ಣಿನ ಶೋಷಣೆಯನ್ನು ಮನಗಂಡು ಅದನ್ನು ಕೊನೆಗಾಣಿಸಲು ಮುಂದಾಗಬೇಕಿದೆ.

ಸೈದ್ಧಾಂತಿಕ ಭಿನ್ನತೆಗಳು ಏನೇ ಇದ್ದರೂ, ರೈತ, ಕಾರ್ಮಿಕ ಹಿಂದುಳಿದ ಜಾತಿಗಳ ಹೋರಾಟಗಳನ್ನು ತಮ್ಮದೇ ಹೋರಾಟ ಎಂದು ಪರಿಗಣಿಸಬೇಕು.

ಈ ನೆಲದಲ್ಲಿ ಮಾನವೀಯತೆಯನ್ನು ಚಿಗುರಿಸುವ ಅವಕಾಶ ಇರುವುದು ತಾರತಮ್ಯ ಅನುಭವಿಸಿರುವ ದಲಿತರು ಮತ್ತು ಹೆಣ್ಣಿಗೆ ಮಾತ್ರ. ದಲಿತ ಚಳುವಳಿಯ ಭವಿಷ್ಯ ನಿರ್ಧಾರವಾಗುವುದು ಇದರಿಂದಲೇ.

(ಸೌಜನ್ಯ : ಸುದ್ದಿ ಸಂಗಾತಿ, 13-04-1986)

ಪುಚ್ಚ ಗರಿಯ ನವಿಲು



ನನಗೆ ಈ ನೆಲದ ಮೇಲ್ಲಿ ನಡೆಯುವಾಗಲೆಲ್ಲಾ
ಆತಂಕವಾಗುತ್ತದೆ
ನಾನು ಯಾರದೋ ತಲೆಯ ಮೇಲೆ ನಡೆಯುತ್ತಿದೀನಾ
ಅಂತ
ನನ್ನ ತಲೆಯ ಮೇಲೆ ನಡೆಯುತ್ತಿರುವ ನಿಮ್ಮ ಹೆಜ್ಜೆಗಳ
ಸಪ್ಪಳ
ನನಗೆ ನನ್ನ ನಿದ್ರೆಯಲ್ಲೂ ಕೇಳಿಸುತ್ತಿದೆ
ಮುಂದುವರೆದು
ದೇವರ ನೋಡಲು ದೇವರ ಮಕ್ಕಳೇಕೆ, ದೇವಸ್ಥಾನಕ್ಕೆ
ಹೋಗಬೇಕು.
ಮಕ್ಕಳಿಗೆ ತಾಯಿಯೇ ದೇವರು
ಇಲ್ಲಿ ಮುಟ್ಟಿಸಿ ಕೊಳ್ಳುವ ಮುಟ್ಟುವ ಕೈಗಳಿಲ್ಲ
ನೂರಾರು ಪ್ರಶ್ನೆಗಳ ಹಾಕಿಕೊಂಡರು.
ಕೇಳಿಸಿ ಕೊಳ್ಳದವರ ಕಿವಿ ಮದವಿತ್ತು
ಕೇಳಿಸಿಕೊಂಡವರ ಕಣ್ಣು ನೀರಾಗಿತ್ತು ಮತ್ತು
ಕೆಂಪಾಗಿತ್ತು
ಕೂಡ.
ಹುಲಿವೇಶ ಧರಿಸಿತ್ತು ಕೇಳಿಸಿ ಕೊಂಡವರ ಮೈ
ನೆಲಮುಗಿಲು ಒಂದಾಗಿತ್ತು ಇವರ ಕುಣಿತಕ್ಕೆ
ಕೊಂದು ತಿನ್ನುವುದಕ್ಕಲ್ಲ ನಾಡ ಕಟ್ಟುವುದಕ್ಕೆ
ಹಾಡ ಕಟ್ಟಿ ಕುಣಿದಿದ್ದು
ಕಟ್ಟಿದ್ದ "ಕಾಲ" ಸಡಿಲವಾಗಲೆಂದು
ನೂರಾರು ಸಾವಿರಾರೂ ನವಿಲುಗಳ ದಂಡು
ಗರಿ ಸೇತುವೆಗಳ ಕಟ್ಟಿದವು, ನವಿಲು ನಾಟ್ಯಕ್ಕೆ
ಮೆಚ್ಚಿಸಲಿಕ್ಕಲ್ಲ
ನವಿಲಿನದೇ ರಾಜ್ಯಕ್ಕಾಗಿ.
ಬೆಳಗಾಗುವುದರೊಳಗೆ
ಗರಿ ಆಯ್ದು ಕೊಂಡವರು ನವಿಲುಗಳು ಕ್ರಾಂತಿ
ಮಾಡುತ್ತವಂತೆ
ಕೆಂಬೂತಗಳ ಕುಹುಕ.
ಮುಗಿಲು ಮೋಡಗಳ ಕಟ್ಟಿಕೊಳ್ಳುವುದು
ಆಕಾಶಕ್ಕೇನು ಅಡ್ಡಿಯಲ್ಲ
ಕಾಮನ ಬಿಲ್ಲ ಕಂಡರೆ ಯಾರಿಗೆ ಖುಷಿಯಿಲ್ಲ
ಕಾನೂನು ಬರೆದ ಕಾಲಕ್ಕೆ ಅವರು ಹೇಳಿದರೂ
ನಿಮ್ಮ ಕೈಗಳನ್ನೆ ತಿನ್ನಬೇಡಿ ಎಂದು
ಮಳೆ ಸುರಿಯುವ ಕಾಲಕ್ಕೆ
ನವಿಲು ಕುಣಿಯಬೇಕಿತ್ತು
ದಂಡು ಕಟ್ಟಿಕೊಂಡವರ ಹಾಡು ಮುಗಿದಿತ್ತು.
ನಗಲಿಲ್ಲ ಅವರು
ಸಾರಥಿ ಇಲ್ಲದ ರಥ ನಿಂತರೂ ಚಿಂತೆಯಿಲ್ಲ
ಬಿಡಬೇಡಿ ಹಿಂದಕ್ಕೆ
ಲೋಕ ಜ್ಞಾನ ಇಲ್ಲದ ನಾಡಿನಲ್ಲಿ
ನೀರು ಮುಟ್ಟಲು ನಡೆದ ಹೆಜ್ಜೆಯ ಗುರುತು
ನೀರಾಗಿ ಹರಿಯಬೇಕಾಗಿತ್ತು
ಚರಿತ್ರೆ ಮುಂದಕ್ಕೆ ಚಲಿಸಬೇಕಾಗಿತ್ತು
ಅದರ ಕಣ್ಣಲ್ಲಿ ಗೋಸುಂಬೆ ಕುಳಿತಿರುವಾಗ,
ಅವರೇನು ಮಾಡಿಯಾರು?
ಮಳೆ ಸುರಿಯುವ ಕಾಲಕ್ಕೆ ನವಿಲುಗಳೇ
ಕುಣಿಯದಿದ್ದರೇ
ನಾನೇ ಮಳೆಯಾಗಲೇ
ಅವರು ಹೇಳಿದ್ದು ಮೊದಲಿಗೆ
ಕೊನೆಗೆ
ಬುದ್ದ ಸಿಕ್ಕರೆ ಕೊಟ್ಟೀರಾ?

○ ಸುಬ್ಬು ಹೊಲೆಯಾರ್

ಬುದ್ಧ - ಬೌದ್ಧ ದಮ್ಮ - ದೇವರು ಇತ್ಯಾದಿ

1. ಬೌದ್ಧಧಮ್ಮ ಎಂದರೇನು?

ಬೌದ್ಧ ಎಂಬ ಪದವು "ಬುದಿ" ಎಂಬುದರಿಂದ ನಿಷ್ಪನ್ನವಾಗಿದೆ. ಅದರರ್ಥ "ಎಚ್ಚರಗೊಳ್ಳುವುದು" ಎಂದು. ಹಾಗಾಗಿ ಬೌದ್ಧಧಮ್ಮ ಎಂದರೆ ಎಚ್ಚರಗೊಳಿಸುವ ತತ್ವ ಎಂದು ಹೇಳಬಹುದು. ಈ ತತ್ವವು ಸಿದ್ಧಾರ್ಥ ಗೋತಮ ಎಂಬ ಬೋಧಿಸತ್ವನ ಅನುಭವಗಳನ್ನು ಆಧರಿಸಿದೆ. ಈತನನ್ನೇ ಬುದ್ಧ ಎಂದು ಕರೆಯುವುದು. ಆತ ತನ್ನ 36ನೆ ವಯಸ್ಸಿನಲ್ಲಿ ಪರಮಜ್ಞಾನವನ್ನು ಪಡೆದ. ಬೌದ್ಧಧಮ್ಮವು 2500 ವರ್ಷಗಳಷ್ಟು ಪ್ರಾಚೀನವಾದದ್ದು. ಈಗ ಇದನ್ನು ಪ್ರಪಂಚಾದ್ಯಂತ ಅವಲಂಬಿಸಿರುವವರ ಸಂಖ್ಯೆ ಸುಮಾರು ನೂರಮೂವತ್ತು ಕೋಟಿ. ಒಂದು ಶತಮಾನದ ಹಿಂದಿನವರೆಗೂ ಬೌದ್ಧಧಮ್ಮವು ಏಷ್ಯಕ್ಕೆ ಸೀಮಿತವಾಗಿತ್ತು ಆದರೆ ಯೂರೋಪ್ ಮತ್ತು ಅಮೆರಿಕಗಳಲ್ಲಿ ಇದರ ಅನುಯಾಯಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

2) ಹಾಗಾದರೆ ಬೌದ್ಧಧಮ್ಮ ಎಂದರೆ ಒಂದು ತತ್ವ ಮಾತ್ರವೇನು?

ಸಿದ್ಧಾಂತ ಎಂಬುದು "ಫಿಲಾಸಫಿ" ಎಂಬುದರ ಅನುವಾದ. ಮೂಲಪದವು ಎರಡು ಪದಗಳಿಂದಾದು : "ಫಿಲೋ" ಮತ್ತು "ಸೋಫಿಯ". "ಫಿಲೋ" ಎಂದರೆ ಪ್ರೇಮ ಹಾಗೂ "ಸೋಫಿಯ" ಎಂದರೆ ವಿವೇಕ ಎಂದರ್ಥ. ಈ ಎರಡೂ ಬೌದ್ಧಧಮ್ಮವನ್ನು ಪೂರ್ಣವಾಗಿ ವರ್ಣಿಸುತ್ತವೆ. ನಾವು ನಮ್ಮ ಬೌದ್ಧಿಕ ಸಾಮರ್ಥ್ಯವನ್ನು ಪೂರ್ಣವಾಗಿ ವಿಕಸನಗೊಳಿಸಿಕೊಳ್ಳಬೇಕು. ಇದರಿಂದ ನನಗೆ ಎಲ್ಲವೂ ಸ್ಪಷ್ಟವಾಗಿ ಅರ್ಥವಾಗುತ್ತದೆ ಎಂದು ಬೌದ್ಧಧಮ್ಮವು ಪ್ರತಿಪಾದಿಸುತ್ತದೆ. ಹಾಗೆಯೇ ನಾವು ಮೈತ್ರಿ ಹಾಗೂ ಕರುಣೆಯನ್ನು ಬೆಳೆಸಿಕೊಂಡರೆ ಇತರ ಎಲ್ಲ ಜೀವಿಗಳಿಗೂ ನಾವು ನಿಜವಾದ ಸ್ನೇಹಿತರಂತಾಗುತ್ತೇವೆ ಎಂದೂ ಅದು ಪ್ರತಿಪಾದಿಸುತ್ತದೆ. ಹಾಗಾಗಿ ಬೌದ್ಧಧಮ್ಮವು ಒಂದು ತತ್ವವೇ ಆದರೆ ಅದು ಕೇವಲ ತತ್ವವಲ್ಲ. ಅದು ಪರಮಾರ್ಥ ತತ್ವ.

3) ಬುದ್ಧ ಎನ್ನುವವನು ಯಾರು?

ಕ್ರಿಸ್ತಪೂರ್ವ 563ರಲ್ಲಿ, ಭಾರತದ ರಾಜಕುಟುಂಬವೊಂದರಲ್ಲಿ ಒಂದು ಮಗು ಹುಟ್ಟಿತು. ಅದು ಸಂಪತ್ತು ಮತ್ತು ಸಮೃದ್ಧಿಗಳ ಮಧ್ಯೆ ಬೆಳೆದರೂ, ಪ್ರಾಯದವನಾದಂತೆ ಸಂಪತ್ಸಮೃದ್ಧಿಗಳಿಂದ ಸಂತೋಷ ಖಂಡಿತವಾಗಿ ಲಭಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡನು. ಆತನು ತನ್ನ ಸುತ್ತಲೂ ಇದ್ದ ಅತೀವ ಯಾತನೆಯನ್ನು ಕಣ್ಣಾರೆ ಕಂಡು ನೊಂದು, ಮಾನವನಿಗೆ ಸಂತೋಷದ ಮಾರ್ಗ ಯಾವುದು ಎಂದು ತಿಳಿಯಲು ಪಣತೊಟ್ಟ. ತನ್ನ 29ನೇ ವರ್ಷದಲ್ಲಿ ಅವನು ಹೆಂಡತಿ ಮತ್ತು ಮಗುವನ್ನು ತೊರೆದು, ಆ ಕಾಲದ ಪರಮ ಧರ್ಮಜ್ಞಾನಿಗಳ ಸಾನ್ನಿಧ್ಯದಲ್ಲಿ ಕುಳಿತು ಜ್ಞಾನಾರ್ಜನೆ ಮಾಡಲು ನಿರ್ಧರಿಸಿದ. ಅವರು ಅವನಿಗೆ ಅನೇಕ ಬಗೆಯ

ಪರಸ್ಪರ ಪ್ರೀತಿ-ಗೌರವ, ಶಾಂತಿ-ಸಮಾನತೆ ಮತ್ತು ಶಾಂತಿ ಮುಂತಾದ ಮಾನವೀಯ ಮೌಲ್ಯಗಳ ಪ್ರತೀಕವಾದ ಬೌದ್ಧದಮ್ಮ ಜಗತ್ತಿನೆಲ್ಲೆಡೆ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಅದರ ಮೂಲ ಸ್ವರೂಪ ಮತ್ತು ಆಚರಣೆಗಳನ್ನು ಕುರಿತ ತಿಳುವಳಿಕೆ ಕೂಡ ಅನಿವಾರ್ಯ. ಇದನ್ನು ಮನಗಂಡಿರುವ 'ಸಂವಾದ'ವು ಬುದ್ಧ ಜ್ಯೋತಿ ಪ್ರಕಾಶನ ಪ್ರಕಟಿಸಿರುವ ಪೂಜ್ಯ ಎಸ್. ಧಮ್ಮಿಕರವರ **Good Question and Good Answer** ಪುಸ್ತಕ ಕನ್ನಡಾನುವಾದವನ್ನು ಓದಿಗರಿಗಾಗಿ ನೀಡುತ್ತಿದೆ. ಅನುವಾದಿಸಿರುವವರು ಡಾ|| ಪಿ.ವಿ. ನಾರಾಯಣ್

ತಿಳುವಳಿಕೆಯನ್ನೇನೋ ನೀಡಿದರು ಆದರೆ ಅವರಾರಿಗೂ ಮಾನವನ ದುಃಖಕ್ಕೆ ಕಾರಣವೇನು, ಅದನ್ನು ಹೋಗಲಾಡಿಸುವುದು ಹೇಗೆ ಎಂಬ ಅರಿವಿರಲಿಲ್ಲ. ಅನಂತರ ಆರು ವರ್ಷಗಳ ನಿರಂತರ ಅಧ್ಯಯನ ಮತ್ತು ಧ್ಯಾನಗಳ ಫಲವಾಗಿ, ಇದ್ದಕ್ಕಿದ್ದಂತೆ ತನ್ನನ್ನಾವರಿಸಿದ್ದ ಅಂಧಕಾರವೆಲ್ಲ ಕಳಚಿ ಜ್ಞಾನ ಲಭಿಸಿದ ಅನುಭವ ಆತನಿಗಾಯಿತು. ಆ ದಿನದಿಂದ ಆತನು ಬುದ್ಧ ಎಂಬ ಹೆಸರಿಗೆ ಪಾತ್ರನಾದ. ಎಂದರೆ ಎಚ್ಚೆತ್ತವನು ಎಂದರ್ಥ. ಆಮೇಲೂ ಆತ 45 ವರ್ಷಗಳ ಕಾಲ ಬದುಕಿದ್ದ. ಭಾರತಾದ್ಯಂತ ಸಂಚರಿಸಿ ತಾನು ಕಂಡದ್ದನ್ನು ಇತರರಿಗೂ ಉಪದೇಶ ಮಾಡುವುದರಲ್ಲಿ ತನ್ನ ಬದುಕನ್ನೆಲ್ಲ ಕಳೆದ. ಆತನ ಅನುಕಂಪೆ ಮತ್ತು ತಾಳ್ಮೆ ಜನಜನಿತವಾಗಿ, ಸಾವಿರಾರು ಮಂದಿ ಆತನ ಅನುಯಾಯಿಗಳಾದರು. ತನ್ನ ಎಂಬತ್ತನೆಯ ವಯಸ್ಸಿನಲ್ಲಿ, ದೇಹವು ಮುಪ್ಪು ಮತ್ತು ಕಾಯಿಲೆಯಿಂದ ಜರ್ಜರಿತವಾಗಿದ್ದಾಗ, ಆತ ಕೊನೆಯುಸಿರೆಳೆದ.

4) ತನ್ನ ಹೆಂಡತಿ ಮತ್ತು ಮಗುವನ್ನು ತೊರೆದು ಹೋದದ್ದು ಬುದ್ಧನ ಬೇಜವಾಬ್ದಾರಿತವನ್ನು ಸೂಚಿಸುವುದಲ್ಲವೇ?

ತನ್ನ ಕುಟುಂಬವನ್ನು ಬಿಟ್ಟು ಹೊರಟು ಹೋಗುವುದು ಬುದ್ಧನಿಗೂ ಸುಲಭವಾದ ಕೆಲಸವಾಗಿರಲಿಲ್ಲ. ಅಂತಿಮವಾಗಿ ತೊರೆದು ಹೋಗುವ ಮುಂಚೆ ಅವನಲ್ಲೂ ಅತೀವ ದುಃಖ ಹಾಗೂ ಅನಿಶ್ಚಿತತೆಗಳು ಉಂಟಾಗಿರಬೇಕು. ಆದರೆ ಅವನ ಮುಂದೆ ಎರಡು ಆಯ್ಕೆಗಳಿದ್ದವು; ತಾನು ತನ್ನ ಕುಟುಂಬದ ಹಿತಕ್ಕೆ ಸೀಮಿತಗೊಳ್ಳಬೇಕೋ, ಇಡೀ ಜಗತ್ತಿಗೆ ತನ್ನನ್ನು ಅರ್ಪಿಸಿಕೊಳ್ಳಬೇಕೋ ಎಂಬುದರಲ್ಲಿ ಅವನು ಒಂದನ್ನು ಮಾತ್ರ ಆಯ್ದುಕೊಳ್ಳಬೇಕಾಗಿತ್ತು. ಕೊನೆಯಲ್ಲಿ, ಅತೀವ ಅನುಕಂಪದಿಂದಾಗಿ ಇಡೀ ಜಗತ್ತಿನ ಒಳಿತಿಗಾಗಿ ತನ್ನನ್ನು ಅರ್ಪಿಸಿಕೊಂಡ, ಅವನ ಈ ತ್ಯಾಗದ ಫಲವನ್ನು ಇಂದಿಗೂ ಜಗತ್ತು ಅನುಭವಿಸುತ್ತಿದೆ. ಇದನ್ನು ಬೇಜವಾಬ್ದಾರಿತನ ಎಂದು ಹೇಳಲಾಗುವುದಿಲ್ಲ. ಪ್ರಾಯಶಃ ಯಾವನೇ ವ್ಯಕ್ತಿ ಮಾಡಬಹುದಾದ ಅತ್ಯಂತ ಅಪೂರ್ವ ತ್ಯಾಗ ಎನ್ನಬಹುದು.

5) ಬುದ್ಧನು ಈಗ ಇಲ್ಲ, ಆದರೂ ಅವನು ನಮಗೆ ಹೇಗೆ ಸಹಾಯ ಮಾಡಬಲ್ಲ?

ವಿದ್ಯುತ್ತನ್ನು ಕಂಡು ಹಿಡಿದ ಫ್ಯಾರಡೇ ಈಗ ಇಲ್ಲ ಆದರೆ ಅವನು ಕಂಡು ಹಿಡಿದ ವಿದ್ಯುತ್ತು ಈಗಲೂ ನಮಗೆ ಉಪಕಾರ ಮಾಡುತ್ತಿದೆ. ಅನೇಕ ರೋಗಗಳಿಗೆ ಔಷಧವನ್ನು ಕಂಡು ಹಿಡಿದ ಲೂಯಿ ಪಾಶ್ಚರನೂ ಈಗ ಸತ್ತಿದ್ದಾನೆ. ಆದರೆ ಅವನ ವೈದ್ಯ ವಿಜ್ಞಾನದ ಆವಿಷ್ಕಾರಗಳು ಈಗಲೂ ಜೀವಿಗಳನ್ನು ಉಳಿಸುತ್ತಿವೆ. ಅತ್ಯುತ್ತಮ ಕಲಾಕೃತಿಗಳನ್ನು ರಚಿಸಿದ ಲಿಯೊನಾರ್ಡೋ ಡ ವಿಂಚಿ ಈಗ ಮೃತನಾಗಿದ್ದಾನೆ. ಆದರೆ ಅವನ ಕಲಾಕೃತಿಗಳು ಈಗಲೂ ನಮಗೆ ಸಂತೋಷವನ್ನು ನೀಡಿ ಮನೋವಿಕಾಸಕ್ಕೆ ಕಾರಣವಾಗುತ್ತಿವೆ. ಉದಾತ್ತಚರಿತವಾದಿ ಶ್ರೇಷ್ಠ ಜನರು ಅನೇಕ ಶತಮಾನಗಳ ಹಿಂದೆಯೇ ತೀರಿಹೋಗಿರಬಹುದು, ಆದರೆ ಅವರ ಜೀವನ ಮತ್ತು ಸಾಧನೆಗಳ ಬಗ್ಗೆ ಓದಿದಾಗ ಅವರ ಕಾರ್ಯಗಳಿಂದ ನಾವು ಸ್ಫೂರ್ತಿಯನ್ನು ಪಡೆಯಬಹುದು. ಹಾಗೆಯೇ ಬುದ್ಧ ಸತ್ತು 2500 ವರ್ಷಗಳೇ ಸಂದಿವೆ. ಆದರೆ ಆತನ ಉಪದೇಶಗಳು ಜನರಿಗೆ ಇಂದೂ ಮಾರ್ಗದರ್ಶಕವಾಗಿವೆ. ಅವನ ಮಾತುಗಳಿಂದ ಜನರ ಬದುಕು ಬದಲಾಗುತ್ತಿದೆ, ಅವನ

ನಿದರ್ಶನ ಜನರಿಗೆ ಸ್ಫೂರ್ತಿದಾಯಿಯಾಗಿದೆ. ಬುದ್ಧನಂತಹವನು ಮಾತ್ರ ತಾನು ಸತ್ತ ಅನೇಕ ಶತಮಾನಗಳ ನಂತರವೂ ಇಷ್ಟು ಪ್ರಭಾವವನ್ನು ಬೀರಬಲ್ಲ.

5) ಬುದ್ಧನು ದೇವರೇನು?

ಅಲ್ಲ, ಅವನು ದೇವರಲ್ಲ, ತಾನು ದೇವರೆಂದಾಗಲೀ ದೇವಪುತ್ರನೆಂದಾಗಲೀ ಅಥವಾ ದೇವರ ಸಂದೇಶವಾಹಕನೆಂದಾಗಲೀ ಆತನೆಂದೂ ಹೇಳಿಕೊಳ್ಳಲಿಲ್ಲ. ಆತ ಒಬ್ಬ ಮಾನವ, ಪರಿಪೂರ್ಣತೆಯತ್ತ ಸಾಗಿ ಸಿದ್ಧಿ ಪಡೆದ ಮಾನವ. ಅಲ್ಲದೆ, ತನ್ನ ನಿದರ್ಶನವನ್ನು ಅನುಸರಿಸಿದರೆ ಇತರರೂ ಪರಿಪೂರ್ಣ ರಾಗಬಹುದೆಂದೂ ಬೋಧಿಸಿದವನು ಆತ.

6) ಬುದ್ಧ ದೇವರಲ್ಲದಿದ್ದರೆ, ಆತನನ್ನು ಜನ ಪೂಜಿಸುವುದೇಕೆ?

ಪೂಜೆಗಳಲ್ಲಿ ಅನೇಕ ಬಗೆಗಳಿವೆ. ಜನರು ದೇವರನ್ನು ಪೂಜಿಸಿದಾಗ ಹಾಡುತ್ತಾರೆ. ಹೊಗಳುತ್ತಾರೆ, ಅನೇಕ ವಸ್ತುಗಳನ್ನು ನೈವೇದ್ಯ ಮಾಡಿ ವರವನ್ನು ಬೇಡಿಕೊಳ್ಳುತ್ತಾರೆ. ತಮ್ಮ ಸ್ತೋತ್ರವನ್ನು ದೇವರು ಕೇಳಿಸಿಕೊಳ್ಳುತ್ತಾನೆ. ತಾನು ನೀಡಿದ್ದನ್ನು ಸ್ವೀಕರಿಸುತ್ತಾನೆ, ತಮಗೆ ಬೇಕಾದ್ದನ್ನು ನೀಡುತ್ತಾನೆ ಎಂಬುದು ಜನರ ನಂಬಿಕೆ. ಬೌದ್ಧರು ಇಂತಹ ಪೂಜೆ-ಪುನಸ್ಕಾರಗಳನ್ನು ಮಾಡುವುದಿಲ್ಲ.

ಮತ್ತೊಂದು ಬಗೆಯ ಪೂಜೆಯೆಂದರೆ, ನಾವು ಗೌರವಿಸುವ ವ್ಯಕ್ತಿಯನ್ನೋ ವಸ್ತುವನ್ನೋ ಕುರಿತು ಶ್ರದ್ಧೆಯನ್ನು ವ್ಯಕ್ತಪಡಿಸುವುದು, ಉಪಾಧ್ಯಾಯರು ತರಗತಿಯೊಳಗೆ ಕಾಲಿಡುವಾಗ ವಿದ್ಯಾರ್ಥಿಗಳು ಎದ್ದು ನಿಲ್ಲುತ್ತಾರೆ. ದೊಡ್ಡವರನ್ನು ಭೇಟಿ ಮಾಡಿದಾಗ ನಾವು ಅವರ ಕೈ ಕುಲುಕುತ್ತೇವೆ. ರಾಷ್ಟ್ರಗೀತೆಯನ್ನು ಹಾಡುವಾಗ ನಾವೆಲ್ಲ ನಮಸ್ಕರಿಸುತ್ತೇವೆ. ಇವೆಲ್ಲ ಗೌರವ ಸಮರ್ಪಣೆಯ ಬಗೆಗಳು, ಪೂಜಾ ವಿಧಾನಗಳು. ಇವುಗಳ ಮೂಲಕ ನಾವು ವಸ್ತು ಅಥವಾ ವ್ಯಕ್ತಿಗೆ ನಮ್ಮ ಗೌರವವನ್ನು ತೋರಿಸುವುದು ರೂಢಿ. ಈ ಬಗೆಯ ರೂಢಿಯನ್ನೇ ಬೌದ್ಧರು ಅನುಸರಿಸುವುದು. ಪದ್ಮಾಸನದಲ್ಲಿ ಕುಳಿತು ತನ್ನ ಕೈಗಳನ್ನು ತೊಡೆಯ ಮೇಲಿರಿಸಿಕೊಂಡು ಅನುಕಂಪಪೂರಿತ ಮುಗುಳ್ನಗೆಯನ್ನು ಹೊತ್ತ ಬುದ್ಧವಿಗ್ರಹವನ್ನು ಕಂಡಾಗ, ಶಾಂತಿ-ಪ್ರೇಮಗಳನ್ನು ಬೆಳೆಸಿಕೊಳ್ಳಬೇಕಾದ ಕರ್ತವ್ಯಭಾವ ನಮ್ಮಲ್ಲಿ ಮೂಡುತ್ತದೆ. ಎಲ್ಲೆಡೆ ಹರಡಿರುವ ಸುಗಂಧವು ಸತ್ಕಾರ್ಯಗಳ ಪ್ರಭಾವ ಎಲ್ಲೆಡೆ ಪಸರಿಸುವುದನ್ನು ನೆನಪಿಸುತ್ತದೆ. ಬೆಳಗುವ ದೀಪ ಜ್ಞಾನದೀಪ್ತಿಯನ್ನು ಸಂಕೇತಿಸುತ್ತದೆ. ಅರ್ಪಿಸಿದ ಹೂಗಳು ತಮ್ಮ ಕೋಮಲತೆ ಹಾಗೂ ಬೇಗೆ ಒಣಗುವ ಗುಣಗಳಿಂದ ನಮ್ಮಲ್ಲಿ ಜೀವನದ ನಶ್ವರತೆಯ ಬಗ್ಗೆ ಎಚ್ಚರಿಸುತ್ತವೆ. ನಾವು ಬಾಗಿ ಬುದ್ಧನ ಉಪದೇಶಗಳು ನಮಗೆ ಮಾಡಿದ ಉಪಕಾರಕ್ಕಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ಇದೇ ಬೌದ್ಧರ ಪೂಜೆಯ ವೈಶಿಷ್ಟ್ಯ.

7) ಆದರೆ ಬೌದ್ಧರು ವಿಗ್ರಹ ಪೂಜೆ ಮಾಡುತ್ತಾರೆಂದು ಕೇಳಿದ್ದೇನಲ್ಲ?

ಹಾಗೆ ಹೇಳುವವರಿಗೆ ಸರಿಯಾದ ಮಾಹಿತಿಯಿಲ್ಲ ಎಂಬುದನ್ನಿದು ಸೂಚಿಸುತ್ತದೆ. ವಿಗ್ರಹ ಎಂಬ ಪದಕ್ಕೆ ನಿಘಂಟು ಕೊಡುವ ಅರ್ಥ "ದೇವರೆಂದು ಪೂಜಿಸಲಾಗುವ ಪುತ್ಥಳಿ ಅಥವಾ ಪ್ರತಿಮೆ" ಎಂದು. ನಾವಾಗಲೇ ನೋಡಿರುವಂತೆ ಬೌದ್ಧರು ಬುದ್ಧನನ್ನು ದೇವರೆಂದು ಭಾವಿಸುವುದಿಲ್ಲ. ಹಾಗಾಗಿ ಅವರು ಯಾವುದೋ ಒಂದು ಲೋಹವನ್ನೋ ಮರವನ್ನೋ ದೇವರೆಂದು ಹೇಗೆ ನಂಬಬಲ್ಲರು? ಎಲ್ಲ ಧರ್ಮಗಳಲ್ಲೂ ಪರಿಕಲ್ಪನೆಗಳನ್ನು ಸೂಚಿಸಲು ಸಂಕೇತಗಳನ್ನು ಬಳಸುವುದು ರೂಢಿ. ತಾವೋಧಮ್ಮದಲ್ಲಿ ಯಿಂಗ್-ಯಾಂಗ್ ಎಂಬುದು ವಿರುದ್ಧ ವಸ್ತುಗಳ ಸಾಮರಸ್ಯವನ್ನು ಸೂಚಿಸುವ ಸಂಕೇತ. ಸಿಖ್ ಧರ್ಮದಲ್ಲಿ ಕತ್ತಿಯು ಆಧ್ಯಾತ್ಮಿಕ ಹೋರಾಟದ ಸಂಕೇತವಾಗಿದೆ. ಕ್ರೈಸ್ತ ಧರ್ಮದಲ್ಲಿ ಮೀನು ಕ್ರಿಸ್ತನ ಇರುವಿಕೆಯನ್ನು ಸಂಕೇತಿಸುತ್ತದೆ ಅಂತೆಯೇ, ಶಿಲುಬೆ ಆತನ

ತ್ಯಾಗದ ಸಂಕೇತ. ಹಾಗೆಯೇ, ಬೌದ್ಧಧರ್ಮದಲ್ಲಿ ಬುದ್ಧನ ಪ್ರತಿಮೆಯು ಮಾನವ ಪರಿಪೂರ್ಣತೆಯ ಸಂಕೇತ. ಅಲ್ಲದೆ, ಬುದ್ಧ ಪ್ರತಿಮೆಯು ಬೌದ್ಧಧರ್ಮದಲ್ಲಿನ ಮಾನವೀಯ ಅಂಶಗಳತ್ತ ನಮ್ಮ ಗಮನ ಸೆಳೆಯುತ್ತದೆ. ಅಂದರೆ ಬೌದ್ಧಧಮ್ಮವು ಮಾನವಕೇಂದ್ರಿತವಾದದ್ದೇ ಹೊರತೂ ದೇವಕೇಂದ್ರಿತವಾದದ್ದಲ್ಲ, ಹಾಗಾಗಿ ನಾವು ಪರಿಪೂರ್ಣತೆಗಾಗಿ ಹಾಗೂ ಜ್ಞಾನಕ್ಕಾಗಿ ಒಳಗೆ ಅರಸಬೇಕೇ ಹೊರತು ಹೊರಗಲ್ಲ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ, ಬೌದ್ಧರು ವಿಗ್ರಹಾರಾಧಕರು ಎಂಬುದು ತಪ್ಪು ಕಲ್ಪನೆ.

8) ಬೌದ್ಧ ವಿಹಾರಗಳಲ್ಲಿ ಭಕ್ತರು ಹಣದ ನೋಟುಗಳನ್ನು ಸುಡುವುದು ಮುಂತಾದ ವಿಚಿತ್ರ ಆಚರಣೆಗಳನ್ನು ನಡೆಸುತ್ತಾರಲ್ಲ, ಏಕೆ?

ಅವುಗಳ ಅರ್ಥ ತಿಳಿಯದಿದ್ದಾಗ ನಮಗೆ ಆಚರಣೆಗಳು ವಿಚಿತ್ರವಾಗಿ ಕಾಣುತ್ತವೆ. ಅವುಗಳನ್ನು ವಿಚಿತ್ರವೆಂದು ತಳ್ಳಿಹಾಕುವುದಕ್ಕಿಂತ ಅವುಗಳ ಸಾಂಕೇತಿಕತೆ ಏನು ಎಂಬುದನ್ನು ತಿಳಿಯಲು ಪ್ರಯತ್ನಿಸಬೇಕು. ಇಷ್ಟಾದರೂ, ಕೆಲವು ಬೌದ್ಧ ಆಚರಣೆಗಳು ಸಾಮಾನ್ಯ ಜನರ ಮೂಢನಂಬಿಕೆ ಹಾಗೂ ತಪ್ಪು ತಿಳಿವಳಿಕೆಗಳಿಂದ ಹುಟ್ಟಿ ಬಂದಿವೆ ಎಂಬುದನ್ನು ಒಪ್ಪಬೇಕು; ಆದರೆ ಅವೆಲ್ಲ ಬುದ್ಧನ ಉಪದೇಶಗಳೆಂದು ತಿಳಿಯಬಾರದು. ಅಂತಹ ತಪ್ಪು ತಿಳಿವಳಿಕೆಗಳು ಬೌದ್ಧಧರ್ಮದಲ್ಲಿ ಮಾತ್ರವೇ ಕಾಣುವಂಥವಲ್ಲ; ಕಾಲಕಾಲಕ್ಕೆ ಎಲ್ಲ ಧರ್ಮಗಳಲ್ಲೂ ಮೂಡಿವೆ. ಬುದ್ಧನ ಉಪದೇಶಗಳೆಲ್ಲ ಸ್ಪಷ್ಟತೆ ಹಾಗೂ ವಿವರವಾದ ವಿಶ್ಲೇಷಣೆಗಳಿಂದ ಕೂಡಿವೆ. ಅವುಗಳನ್ನು ಪೂರ್ತಿ ಅರ್ಥಮಾಡಿ ಕೊಳ್ಳಲಾರದವರ ಕಾರಣಕ್ಕಾಗಿ ಬುದ್ಧನನ್ನು ತೆಗಳುವುದು ಸರಿಯಲ್ಲ. ಒಂದು ಮಾತಿದೆ:

ಹತ್ತಿರವೇ ವೈದ್ಯನು ಇದ್ದರೂ, ರೋಗಿಯಾದವನು ತನ್ನ ರೋಗಕ್ಕೆ ಚಿಕಿತ್ಸೆ ಮಾಡಿಸಿಕೊಳ್ಳದಿದ್ದರೆ ಅದು ಅವನ ತಪ್ಪೇ ಹೊರತು, ಅದಕ್ಕಾಗಿ ವೈದ್ಯನನ್ನು ತೆಗಳಬಾರದು.

ಹಾಗೆಯೇ ಯಾವನಾದರೊಬ್ಬ ತನ್ನ ಮಾಲಿನ್ಯವೆಂಬ ರೋಗಕ್ಕೊಳಗಾಗಿ ತುಳಿತ-ದುಃಖಿಗಳಿಗೆ ಒಳಗಾಗಿಯೂ ಬುದ್ಧನ ನೆರವನ್ನು ಪಡೆಯದಿದ್ದರೆ, ಅದು ಬುದ್ಧನ ತಪ್ಪೆಂದು ಹೇಳಬಾರದು.

ಬೌದ್ಧಧಮ್ಮವನ್ನು ಮಾತ್ರವಲ್ಲ. ಯಾವುದೇ ಧರ್ಮವನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದವರ ಆಚರಣೆಗಳ ಅಳತೆಗೋಲಿನಿಂದ ಅಳೆಯಬಾರದು. ನಿಮಗೆ ಬೌದ್ಧಧಮ್ಮದ ಸಮಂಜಸ ಉಪದೇಶಗಳನ್ನು ತಿಳಿಯುವ ಆಸೆಯಿದ್ದರೆ, ಬುದ್ಧನ ಬರವಣಿಗೆಗಳನ್ನು ಓದಿರಿ ಅಥವಾ ಅವುಗಳನ್ನು ಅರ್ಥಮಾಡಿಕೊಂಡವರಿಂದ ಕೇಳಿ ತಿಳಿದುಕೊಳ್ಳಿರಿ.

9) ಬೌದ್ಧಧಮ್ಮವು ಅಷ್ಟು ಒಳ್ಳೆಯದಾದರೆ, ಕೆಲವು ಬೌದ್ಧ ಧಮ್ಮಾವಲಂಬಿ ರಾಷ್ಟ್ರಗಳು ಬಡತನವನ್ನೇಕೆ ಅನುಭವಿಸುತ್ತಿವೆ?

ಬಡತನ ಎನ್ನುವುದು ಆರ್ಥಿಕ ಬಡತನವನ್ನು ಸೂಚಿಸುವುದಾದರೆ, ಕೆಲವು ಬೌದ್ಧ ರಾಷ್ಟ್ರಗಳು ಬಡತನದಲ್ಲಿವೆ ಎಂಬ ನಿಮ್ಮ ಮಾತು ನಿಜವೇ. ಆದರೆ ಬಡತನ ಎಂಬುದು ಜೀವನದ ಗುಣಮಟ್ಟ ಕಡಿಮೆಯದು ಎಂಬರ್ಥವನ್ನು ಸೂಚಿಸುವುದಾದರೆ, ಕೆಲವು ಬೌದ್ಧ ರಾಷ್ಟ್ರಗಳು ಸಾಕಷ್ಟು ಶ್ರೀಮಂತವಾದವು ಎಂದೇ ಹೇಳಬೇಕು. ಉದಾಹರಣೆಗೆ ಅಮೆರಿಕ ಆರ್ಥಿಕವಾಗಿ ಒಂದು ಶ್ರೀಮಂತವಾದ ಹಾಗೂ ಪ್ರಬಲವಾದ ರಾಷ್ಟ್ರವೇ. ಆದರೆ ಅದು ಇಡೀ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಅಪರಾಧ ಪ್ರಮಾಣ ಹೊಂದಿದ ರಾಷ್ಟ್ರಗಳಲ್ಲೊಂದು ಲಕ್ಷಾಂತರ ವೃದ್ಧರನ್ನು ಅವರ ಮಕ್ಕಳು ಅವಜ್ಞೆ ಮಾಡಿರುವುದರಿಂದಾಗಿ, ಅವರು ವೃದ್ಧಾಶ್ರಮಗಳಲ್ಲಿ ಏಕಾಕಿತನದಿಂದ ನರಳಿ ಸಾಯುತ್ತಾರೆ. ಅಲ್ಲಿ ಕೌಟುಂಬಿಕ ಕಲಹಗಳೂ ಮಕ್ಕಳ ದುರುಪಯೋಗವೂ ಹೆಚ್ಚಾಗಿವೆ. ಮೂರು ಮದುವೆಗಳಲ್ಲಿ ಒಂದು ವಿವಾಹ ವಿಚ್ಛೇದನದಿಂದ ಕೊನೆಗೊಳ್ಳುತ್ತದೆ. ಅಶ್ಲೀಲ ಸರಕಂತೂ ಸುಲಭವಾಗಿ ದೊರೆಯುತ್ತದೆ. ಹಾಗಾಗಿ ಅದು ಆರ್ಥಿಕವಾಗಿ ಶ್ರೀಮಂತವಾದರೂ, ನೈತಿಕ ಮಟ್ಟದ ಮಟ್ಟಿಗೆ ಬಡ ರಾಷ್ಟ್ರ ಎಂದೇ ಹೇಳಬೇಕು. ಅದರ ವಿರುದ್ಧವಾಗಿ, ಆರ್ಥಿಕವಾಗಿ ಬಡತನದಿಂದ ಕೂಡಿದ ಬರ್ಮದ ಉದಾಹರಣೆಯನ್ನು ತೆಗೆದುಕೊಳ್ಳಿ. ಅಲ್ಲಿ ತಂದೆ ತಾಯಿಗಳನ್ನು ಮಕ್ಕಳು ಗೌರವದಿಂದ ಕಾಣುತ್ತಾರೆ. ಅಪರಾಧ ಪ್ರಮಾಣ ಗಣನೀಯವಾಗಿ ಕಡಿಮೆ, ಹಾಗೂ ವಿವಾಹ ವಿಚ್ಛೇದನ ಮತ್ತು ಆತ್ಮಹತ್ಯೆಗಳು ಇಲ್ಲವೇ ಇಲ್ಲ

ಎಂಬಷ್ಟು ಕನಿಷ್ಠ ಪ್ರಮಾಣದಲ್ಲಿವೆ. ಅಂತೆಯೇ ಕೌಟುಂಬಿಕ ಕಲಹ ಮತ್ತು ಮಕ್ಕಳ ದುರುಪಯೋಗಗಳೂ ಕಡಿಮೆ. ಅಲ್ಲದೆ ಅಶ್ಲೀಲ ಸರಕು ಮತ್ತು ಲೈಂಗಿಕ ಸ್ವೈರ ಎಂಬವು ಅಲ್ಲಿ ಇಲ್ಲವೇ ಇಲ್ಲ. ಅದು ಆರ್ಥಿಕವಾಗಿ ಬಡವಾದರೂ, ಅಮೆರಿಕದಂತಹ ದೇಶಕ್ಕಿಂತ ಜೀವನ ಗುಣಮಟ್ಟದ ದೃಷ್ಟಿಯಿಂದ ಹೆಚ್ಚು ಶ್ರೀಮಂತ. ಬೌದ್ಧ ರಾಷ್ಟ್ರಗಳನ್ನು ಕೇವಲ ಆರ್ಥಿಕ ಅಳತೆಗೋಲಿನಿಂದ ನೋಡಿದರೂ, ಜಪಾನ್ ಇಂದು ಜಗತ್ತಿನ ಅತ್ಯಂತ ಸಂಪದ್ಭರಿತವೂ ಆರ್ಥಿಕವಾಗಿ ಬಲಿಷ್ಠವೂ ಆದ ರಾಷ್ಟ್ರವಾಗಿದೆ. ಅಲ್ಲಿನ ಶೇಕಡ 93ರಷ್ಟು ಜನರು ತಮ್ಮನ್ನು ಬೌದ್ಧರೆಂದು ಕರೆದುಕೊಳ್ಳುತ್ತಾರೆ.

10) ಬೌದ್ಧರಲ್ಲಿ ದಾನಧರ್ಮಗಳು ಏಕೆ ಹೆಚ್ಚಾಗಿ ನಡೆಯುವುದಿಲ್ಲ?

ಪ್ರಾಯಶಃ ಬೌದ್ಧರು ತಾವು ಮಾಡಿದ ಒಳ್ಳೆಯ ಕಾರ್ಯಗಳ ಬಗ್ಗೆ ಜಂಬ ಕೊಚ್ಚಿಕೊಳ್ಳುವ ಪರಿಪಾಠ ಕಡಿಮೆ. ಅದಕ್ಕಾಗಿ ಕೆಲವು ವರ್ಷಗಳ ಹಿಂದೆ ಜಪಾನಿನ ಬೌದ್ಧ ನಾಯಕರಾದ ನಿಕ್ಕೋ ನಿರ್ವಾಣೋ ಅವರಿಗೆ ಅಂತರಧರ್ಮ ಸಾಮರಸ್ಯ ವೃದ್ಧಿಗಾಗಿ ಟೆಂಪಲ್‌ಟನ್ ಪ್ರಶಸ್ತಿಯನ್ನು ನೀಡಲಾಯಿತು. ಹಾಗೆಯೇ, ಥಾಯ್ ಬೌದ್ಧ ಸನ್ಯಾಸಿಯೊಬ್ಬರಿಗೆ ಮಾದಕದ್ರವ್ಯವ್ಯಸನಿಗಳ ಉದ್ಧಾರಕ್ಕೆ ಅವರು ಮಾಡಿದ ಅತ್ಯುತ್ತಮ ಕಾರ್ಯಕ್ಕಾಗಿ ಪ್ರತಿಷ್ಠಿತ ಮ್ಯಾಗ್ಸೇಸ್ಸೇ ಪ್ರಶಸ್ತಿ ಬಂತು. 1987ರಲ್ಲಿ, ಮತ್ತೊಬ್ಬ ಥಾಯ್ ಬೌದ್ಧ ಸನ್ಯಾಸಿ ಪೂಜ್ಯ ಕಾಂತಾಯಾಪಿವತ್ ಅವರಿಗೆ ಹಳ್ಳಿಗಾಡಿನ ನಿರ್ವಸಿತ ಮಕ್ಕಳಿಗೆ ಅನೇಕ ವರ್ಷಗಳು ಮಾಡಿದ ಸಹಾಯಕ್ಕಾಗಿ ನಾರ್ವೆಯ ಮಕ್ಕಳ ಶಾಂತಿ ಪ್ರಶಸ್ತಿ ಲಭ್ಯವಾಯಿತು. ಭಾರತದ ಬಡಜನರ ಒಳಿತಿಗಾಗಿ ಪಶ್ಚಿಮ ಬೌದ್ಧ ಸನ್ಯಾಸಿವರ್ಗದಿಂದ ಆಗುತ್ತಿರುವ ವ್ಯಾಪಕವಾದ ಸಮಾಜ ಸುಧಾರಣಾ ಕಾರ್ಯಗಳ ಬಗ್ಗೆ ಹೇಳಿದಷ್ಟೂ ಕಡಿಮೆಯೇ. ಅವರು ಅನೇಕ ಶಾಲೆಗಳನ್ನೂ, ಬಾಲಶುಶ್ರೂಷಾ ಕೇಂದ್ರಗಳನ್ನೂ ಔಷಧಾಲಯಗಳನ್ನೂ ತಮ್ಮ ಕಾಲ ಮೇಲೆ ನಿಂತುಕೊಳ್ಳಲು ಸಹಾಯಕವಾದ ಗುಡಿ ಕೈಗಾರಿಕೆಗಳನ್ನೂ ಸ್ಥಾಪಿಸಿದ್ದಾರೆ. ಇತರರಿಗೆ ಮಾಡಿದ ಸಹಾಯವನ್ನು ಬೌದ್ಧರು ಇತರ ಮತಾವಲಂಬಿಗಳಂತೆಯೇ ತಮ್ಮ ಧಾರ್ಮಿಕ ಕಾರ್ಯವೆಂದು ಭಾವಿಸುತ್ತಾರೆ. ಅವುಗಳನ್ನು ನಿಶ್ಶಬ್ದವಾಗಿಯೂ ತಮ್ಮನ್ನು ಮುಂದು ಮಾಡಿಕೊಳ್ಳದೆಯೂ ನೆರವೇರಿಸುತ್ತಾರೆ. ಆದ್ದರಿಂದಲೇ ಅವರ ದಾನಕಾರ್ಯಗಳ ಬಗ್ಗೆ ನಿಮಗೆ ಹೆಚ್ಚು ಗೊತ್ತಾಗುವುದಿಲ್ಲ.

11) ಬೌದ್ಧಧರ್ಮದಲ್ಲಿ ಅಷ್ಟೊಂದು ಪ್ರಭೇದಗಳಿರಲು ಕಾರಣವೇನು?

ಸಕ್ಕರೆಯಲ್ಲಿ ಅನೇಕ ಪ್ರಭೇದಗಳಿವೆಯಲ್ಲ; ಕಂದು ಸಕ್ಕರೆ, ಕಲ್ಲು ಸಕ್ಕರೆ, ಪಾಕ ಮತ್ತು ಗಟ್ಟಿ ಸಕ್ಕರೆ ಮುಂತಾದವು, ಆದರೆ ಇವೆಲ್ಲ ಸಕ್ಕರೆಯೇ ಮತ್ತು ಅವೆಲ್ಲದರ ರುಚಿಯೂ ಸಿಹಿಯೇ. ಅದನ್ನು ತಯಾರಿಸುವ ವಿಧಾನದಲ್ಲಿ ವ್ಯತ್ಯಾಸಗಳಿರುವಂತೆಯೇ, ಅವುಗಳನ್ನು ಬಳಸುವುದರಲ್ಲಿಯೂ ವಿವಿಧ ರೀತಿಗಳಿವೆ. ಬೌದ್ಧಧಮ್ಮವು

ಒಂದೇ ತೇರಾವಾದ, ಜೆನ್, ಶುದ್ಧ ಭೂ ಬೌದ್ಧಧರ್ಮ, ಯೋಗಾಚಾರ ಮತ್ತು ವಜ್ರಯಾನ ಎಂಬ ವಿವಿಧ ಪಂಥಗಳಿವೆ. ಆದರೆ ಅವೆಲ್ಲ ಬೌದ್ಧಧಮ್ಮವೇ ಅವೆಲ್ಲಕ್ಕೂ ಒಂದೇ ರುಚಿ ಸ್ವತಂತ್ರ ಸ್ಥಿತಿ. ಬೌದ್ಧಧಮ್ಮವು ತಾನು ಸಲ್ಲಬೇಕಾದ ವಿವಿಧ ಸಂಸ್ಕೃತಿಗಳಿಗೆ ಅನುಗುಣವಾದ ರೀತಿಯಲ್ಲಿ ವಿವಿಧ ಪಂಥಗಳ ರೂಪಗಳನ್ನು ಧರಿಸಿದೆ. ಕಾಲಾನುಕಾಲಕ್ಕೆ ಅದನ್ನು ಬೇರೆ ಬೇರೆಯಾಗಿ ಅರ್ಥೈಸಲಾಗಿದೆ. ಆದರೆ ಎಲ್ಲದರ ಕೇಂದ್ರವೂ ಚತುಃ ಸತ್ಯಗಳು ಹಾಗೂ ಅಷ್ಟಾಂಗಿಕ ಮಾರ್ಗಗಳೇ. ಬೌದ್ಧಧಮ್ಮವನ್ನೊಳಗೊಂಡಂತೆ ಎಲ್ಲ ಪ್ರಮುಖ ಧರ್ಮಗಳೂ ವಿವಿಧ ಶಾಖೆಗಳಗಿ ಪಂಥಗಳಾಗಿ ಒಡೆದಿವೆ. ಆದರೆ ಬೌದ್ಧಧರ್ಮದ ವಿವಿಧ ಶಾಖೆಗಳು ಇದುವರೆಗೆ ಎಂದೂ ಪರಸ್ಪರ ಸಂಘರ್ಷದಲ್ಲಿ ತೊಡಗಿಲ್ಲ. ಪರಸ್ಪರ ದೂಷಣೆಯಲ್ಲಿ ತೊಡಗಿಲ್ಲ. ಅವರು ಇತರ ಪಂಥಗಳ ವಿಹಾರಕ್ಕೆ ಹೋಗುತ್ತಾರೆ. ಜೊತೆಯಲ್ಲಿ ಪೂಜೆ ಪ್ರಾರ್ಥನೆ ಸಲ್ಲಿಸುತ್ತಾರೆ. ಇಂಥ ಸಹನೆ ಮತ್ತು ಪರಸ್ಪರ ಅರಿವು ತುಂಬ ಅಪರೂಪ.

12) ನೀವು ಬೌದ್ಧಧಮ್ಮದ ಬಗ್ಗೆ ತುಂಬ ಆದರವುಳ್ಳವರು. ನೀವು ನಿಮ್ಮ ಧರ್ಮ ಮಾತ್ರ ಸರಿ, ಮಿಕ್ಕವೆಲ್ಲ ತಪ್ಪು ಎಂದು ಭಾವಿಸುವಂತಿದೆಯಲ್ಲ?

ಬುದ್ಧನ ಉಪದೇಶಗಳನ್ನು ಅರ್ಥಮಾಡಿಕೊಂಡಿರುವ ಯಾವ ಬೌದ್ಧಧಮ್ಮಾವಲಂಬಿಯೇ ಆಗಲಿ, ಮಿಕ್ಕ ಧರ್ಮಗಳನ್ನು ತಪ್ಪು ಎಂದು ಎಂದೂ ಪರಿಗಣಿಸುವುದಿಲ್ಲ. ಇತರ ಧರ್ಮಗಳ ಬಗ್ಗೆ ಅರಿತುಕೊಳ್ಳುವ ನಿಜವಾದ ಆಸಕ್ತಿ ಇರುವ ಮುಕ್ತ ಮನಸ್ಸಿನ ಯಾರೂ ಆ ರೀತಿ ಯೋಚಿಸಲು ಸಾಧ್ಯವಿಲ್ಲ. ವಿವಿಧ ಧರ್ಮಗಳ ಬಗ್ಗೆ ಅಧ್ಯಯನ ನಡೆಸಿದಾಗ ನಿಮ್ಮ ಗಮನಕ್ಕೆ ಬರುವ ಮೊದಲನೆಯ ಅಂಶವೆಂದರೆ, ಅವುಗಳಲ್ಲಿ ಯಾವ ಯಾವ ಅಂಶಗಳು ಸಮಾನವಾಗಿವೆ ಎಂಬುದು. ಎಲ್ಲ ಮತಗಳೂ ಪ್ರಸ್ತುತದಲ್ಲಿ ಮಾನವನ ಸ್ಥಿತಿಯು ತೃಪ್ತಿಕರವಾಗಿಲ್ಲ ಎಂಬುದನ್ನು ಒಪ್ಪುತ್ತವೆ. ಮಾನವನ ಸ್ಥಿತಿಯು ಉತ್ತಮಗೊಳ್ಳಲು ನಮ್ಮ ದೃಷ್ಟಿಕೋನ ಹಾಗೂ ವರ್ತನೆಗಳು ಬದಲಾಗಬೇಕು ಎಂದು ಎಲ್ಲ ಧರ್ಮಗಳೂ ಭಾವಿಸುತ್ತವೆ. ಎಲ್ಲ ಧರ್ಮಗಳ ಉಪದೇಶಗಳೂ ಪ್ರೇಮ, ಅನುಕಂಪ, ತಾಳ್ಮೆ, ಔದಾರ್ಯ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಪ್ರತಿಪಾದಿಸುತ್ತವೆ ಹಾಗೂ ಯಾವುದೋ ಒಂದು ಅತ್ಯಂತಿಕ ಶಕ್ತಿಯ ಇರುವಿಕೆಯನ್ನು ಒಪ್ಪಿಕೊಳ್ಳುತ್ತವೆ.

ಇವೆಲ್ಲವನ್ನೂ ಅವು ವರ್ಣಿಸಲು ಮತ್ತು ವಿವರಿಸಲು ವಿವಿಧ ಭಾಷೆಗಳನ್ನು, ವಿವಿಧ ಹೆಸರುಗಳನ್ನು ಮತ್ತು ವಿವಿಧ ಸಂಕೇತಗಳನ್ನು ಬಳಸುತ್ತವೆ. ತಮ್ಮ ದೃಷ್ಟಿಕೋನಕ್ಕೆ ಮಾತ್ರ ಅಂಟಿಕೊಳ್ಳುವ ಸಂಕುಚಿತ ಮನೋಭಾವದಿಂದಾಗಿ ಮತೀಯ ಅಸಹನೆ, ಹೆಮ್ಮೆ ಹಾಗೂ ಮಡಿವಂತಿಕೆಗಳು ಉಂಟಾಗುತ್ತವೆ.

ಒಂದು ಬಟ್ಟಲನ್ನು ಒಬ್ಬ ಇಂಗ್ಲೀಷಿನವನು, ಒಬ್ಬ ಫ್ರೆಂಚ್ ವ್ಯಕ್ತಿ, ಒಬ್ಬ ಚೈನೀ ಮನುಷ್ಯ ಹಾಗೂ ಒಬ್ಬ ಇಂಡೋನೇಷಿಯದವನು ನೋಡುತ್ತಿದ್ದಾರೆ ಎಂದು ಭಾವಿಸಿಕೊಳ್ಳಿ. ಇಂಗ್ಲೀಷಿನವನು "ಅದು ಒಂದು ಕಪ್" ಎನ್ನುತ್ತಾನೆ; ಫ್ರೆಂಚ್ ವ್ಯಕ್ತಿ "ಅಲ್ಲ, ಅದೊಂದು ಟಸ್" ಎನ್ನುತ್ತಾನೆ; ಚೈನೀ ಮನುಷ್ಯ "ನೀವಿಬ್ಬರು ಹೇಳುವುದೂ ಸರಿಯಲ್ಲ. ಅದು ಪೇ" ಎಂಬ ಅಭಿಪ್ರಾಯವನ್ನು ಮುಂದಿಡುತ್ತಾನೆ. ಇಂಡೋನೇಷಿಯನ್ ವ್ಯಕ್ತಿ ಅವರನ್ನು ಕಂಡು ನಕ್ಕು, "ಎಂಥ ಮೂರ್ಖರಯ್ಯಾ ನೀವು. ಅದು ಕವಾನ್ ಎಂಬುದು ಗೊತ್ತಿಲ್ಲವೇ?" ಎಂದು ನುಡಿಯುತ್ತಾನೆ. ಇಂಗ್ಲೀಷಿನವನು ಒಂದು ನಿಘಂಟನ್ನು ತಂದು ತೋರಿಸಿ, "ನಾನು ಹೇಳಿದ್ದು ನಿಜ ಎಂದು ಸಾಧಿಸಿ ತೋರಿಸಬಲ್ಲೆ. ನಮ್ಮ ನಿಘಂಟಿನಲ್ಲಿ ಹಾಗೆಯೇ ಇರುವುದು" ಎನ್ನುತ್ತಾನೆ. "ಹಾಗಾದರೆ, ನಿಮ್ಮ ನಿಘಂಟೇ ಸರಿಯಿಲ್ಲ" ಎಂದು ಹೇಳುವ ಫ್ರೆಂಚ್ ವ್ಯಕ್ತಿ. "ಯಾಕೆಂದರೆ, ನಮ್ಮ ನಿಘಂಟು ಅದನ್ನು ಟಸ್ ಎಂದು ಕರೆಯುತ್ತದೆ"

ಎಂದು ಮಾರ್ನುಡಿಯುತ್ತಾನೆ. ಅವರನ್ನು ಕಂಡು ಚೈನೀ ವ್ಯಕ್ತಿ ತಿರಸ್ಕಾರದಿಂದ ಉತ್ತರಿಸುತ್ತಾನೆ: "ನಮ್ಮ ನಿಘಂಟು ನಿಮ್ಮದಕ್ಕಿಂತ ಸಾವಿರಾರು ವರ್ಷಗಳಷ್ಟು ಹಳೆಯದು. ಹಾಗಾಗಿ ಅದರಲ್ಲಿರುವುದು ಸರಿಯಾಗಿರಬೇಕು. ಅಲ್ಲದೆ, ಇತರ ಭಾಷೆಗಳನ್ನು ಆಡುವ ಜನಕ್ಕಿಂತ ಚೈನೀ ಭಾಷೆಯನ್ನಾಡುವವರ ಸಂಖ್ಯೆ ತುಂಬ ಹೆಚ್ಚು. ಆದ್ದರಿಂದ ಅದು ಪೇ". ಹೀಗೆ ಅವರೆಲ್ಲ ತಮ್ಮ ತಮ್ಮಲ್ಲಿ ವಾದ ಮಾಡುತ್ತ ಜಗಳ ಕಾಯುತ್ತ ಇರಬೇಕಾದರೆ, ಒಬ್ಬ ಬೌದ್ಧಧಮ್ಮಾವಲಂಬಿಯು ಬಂದು ಆ ಬಟ್ಟಲಿನಿಂದ ಕುಡಿಯುತ್ತಾನೆ. ಕುಡಿದಾದ ಮೇಲೆ, ಇತರರಿಗೆ ಅವನನ್ನುತ್ತಾನೆ : "ಇದನ್ನು ನೀವು ಕಪ್ ಎಂದಾದರೂ ಕರೆಯಿರಿ, ಟಸ್ ಎಂದಾದರೂ ಅನ್ನಿ. ಪೇ ಅಥವಾ ಕವಾನ್ ಎಂದು ಹೇಳಿ, ಬಟ್ಟಲಿನ ಉದ್ದೇಶ ಅದನ್ನು ಉಪಯೋಗಿಸುವುದು. ವಾಗ್ವಾದ ಬಿಟ್ಟು ಕುಡಿಯಿರಿ, ಜಗಳ ಕಾಯುವುದನ್ನು ನಿಲ್ಲಿಸಿ ನಿಮ್ಮ ಬಾಯಾರಿಕೆಯನ್ನು ನೀಗಿಸಿಕೊಳ್ಳಿ" ಇತರ ಮತಗಳ ಬಗ್ಗೆ ಬೌದ್ಧ ಮತಾವಲಂಬಿಯ ದೃಷ್ಟಿ ಇದು.

13) ಬೌದ್ಧಧಮ್ಮವು ವೈಜ್ಞಾನಿಕವಾದುದೇ?

ಈ ಪ್ರಶ್ನೆಗೆ ಉತ್ತರಿಸುವ ಮೊದಲು, ವಿಜ್ಞಾನ ಎಂದರೇನು ಎಂಬುದನ್ನು ವಿವರಿಸಬೇಕಾದ್ದು ಅವಶ್ಯಕ. ನಿಘಂಟಿನ ಪ್ರಕಾರ "ವಿಜ್ಞಾನ" ಎಂದರೆ, "ವಸ್ತುಸ್ಥಿತಿಗಳನ್ನು ನೋಡುವ ಮತ್ತು ಪರೀಕ್ಷಿಸುವ ಹಾಗೂ ಸಾಮಾನ್ಯ ಪ್ರಕೃತಿ ನಿಯಮಗಳನ್ನು ರೂಪಿಸುವ ಒಂದು ವ್ಯವಸ್ಥೆಗೆ ಒಳಪಡಬಹುದಾದ ಜ್ಞಾನ" ಅಂಥ ಆ ಜ್ಞಾನದ ಒಂದು ಶಾಖೆ, ನಿಖರವಾಗಿ ಅಧ್ಯಯನ ಮಾಡಬಹುದಾದದ್ದು.

ಬೌದ್ಧಧಮ್ಮದ ಕೆಲವು ಅಂಶಗಳು ಈ ಸೂತ್ರಕ್ಕೆ ಹೊಂದಿಕೊಳ್ಳಲಾರವು. ಆದರೆ ಬೌದ್ಧಧಮ್ಮದ ಕೇಂದ್ರ ತತ್ವವಾದ ನಾಲ್ಕು ಶ್ರೇಷ್ಠ ಸತ್ಯಗಳು ಖಂಡಿತವಾಗಿ ಇದಕ್ಕನುಗುಣವಾಗಿದೆ. ಮೊದಲ ಉದಾತ್ತ ಸತ್ಯವಾದ ದುಃಖ ಎಂಬ ಅನುಭವವನ್ನು ಸೂತ್ರೀಕರಿಸಿ ಹೇಳಬಹುದು. ಅನುಭವಿಸಬಹುದು ಮತ್ತು ಅಳೆಯಬಹುದು. ಎರಡನೆಯ ಉದಾತ್ತ ಸತ್ಯವು ದುಃಖಕ್ಕೆ ಸಹಜ ಕಾರಣವಿರುತ್ತದೆ, ಹಂಬಲವಿರುತ್ತದೆ ಎನ್ನುವುದನ್ನು ಕೂಡ ನಾವು ಸೂತ್ರೀಕರಿಸಿ ಹೇಳಬಹುದು, ಅನುಭವಿಸಬಹುದು ಹಾಗೂ ಅಳೆಯಬಹುದು. ದುಃಖವನ್ನು ಆಧ್ಯಾತ್ಮಿಕ ಪರಿಕಲ್ಪನೆಯಂತೆಯಾಗಲೀ ಪೌರಾಣಿಕ ಪರಿಕಲ್ಪನೆಯಾಗಿಯಾಗಲೀ ವಿವರಿಸುವ ಪ್ರಯತ್ನಗಳು ನಡೆದಿಲ್ಲ. ಮೂರನೆಯ ಉದಾತ್ತ ಸತ್ಯದ ಪ್ರಕಾರ ದುಃಖವು ಕೊನೆಗೊಳ್ಳುವುದು, ದೇವರ ಮೇಲೆ ಭಾರ ಹಾಕುವುದರಿಂದ ಅಲ್ಲ, ನಂಬಿಕೆ ಅಥವಾ ಪ್ರಾರ್ಥನೆಗಳಿಂದ ಅಲ್ಲ, ಅದರ ಕಾರಣವನ್ನು ತೆಗೆದು ಹಾಕುವುದರಿಂದ, ಇದು ಸ್ವಯಂವೇದ್ಯ, ನಾಲ್ಕನೆಯ ಉದಾತ್ತ ಸತ್ಯವು ಪ್ರತಿಪಾದಿಸುವುದೆಂದರೆ, ದುಃಖವನ್ನು ಕೊನೆಗೊಳಿಸುವ ಮಾರ್ಗವು ಆಧ್ಯಾತ್ಮಿಕತೆಯೊಂದಿಗೆ ಸಂಬಂಧ ಪಡದೆ, ಕೆಲವು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವುದನ್ನು ಅವಲಂಬಿಸುತ್ತದೆ ಮತ್ತು ವರ್ತನೆಯು ಪರೀಕ್ಷೆಗೆ ಒಳಪಡಿಸಬಹುದಾದದ್ದು ಎಂಬುದನ್ನು, ಬೌದ್ಧಧಮ್ಮವೂ ವಿಜ್ಞಾನದಂತೆಯೇ ದೇವರ ಅಸ್ತಿತ್ವವನ್ನು ಅಲ್ಲಗಳೆಯುತ್ತದೆ ಹಾಗೂ ವಿಶ್ವದ ಕಾರಣ ಮತ್ತು ಕಾರ್ಯ ವಿಧಾನಗಳನ್ನು ಪ್ರಕೃತಿ ನಿಯಮಗಳ ಮೂಲಕ ವಿವರಿಸುತ್ತದೆ. ಇವೆಲ್ಲವೂ ಅದರ ವೈಜ್ಞಾನಿಕ ಮನೋಧರ್ಮವನ್ನು ಪ್ರಕಟಪಡಿಸುತ್ತದೆ. ಬುದ್ಧನು ಸದಾ ಹೇಳುತ್ತಿದ್ದುದೆಂದರೆ ನಾವು ಕುರುಡು ನಂಬಿಕೆಗೆ ಜೋತು ಬೀಳದೆ ಪ್ರಶ್ನಿಸುತ್ತ, ಪರೀಕ್ಷೆಗೆ ಒಳಪಡಿಸುತ್ತ, ಅನ್ವೇಷಣೆ ಮಾಡುತ್ತ, ನಮ್ಮ ಅನುಭವಗಳ ಮೇಲೆ ಅವಲಂಬಿಸುತ್ತ ಇರಬೇಕೆಂಬುದನ್ನು, ಇದು ನಿಶ್ಚಿತವಾಗಿ ವೈಜ್ಞಾನಿಕ ವರ್ತುಲದೊಳಗೇ ಇದೆ. ಬುದ್ಧನು ಹೇಳಿದ್ದೆಂದರೆ:

ವೈಚಾರಿಕತೆ ಅಥವಾ ಸಂಪ್ರದಾಯಗಳನ್ನಾಗಲೀ ವದಂತಿಗಳನ್ನಾಗಲೀ ಪವಿತ್ರ ಧಾರ್ಮಿಕ ಕೃತಿಗಳನ್ನಾಗಲೀ ಕೇಳಿದ್ದು ಅಥವಾ ಬರಿಯ ತರ್ಕವನ್ನಾಗಲೀ ಅನುಸರಿಸಬೇಡಿ ಯಾವುದೋ ಒಂದು ವಿಷಯದ ಬಗ್ಗೆ ಪಕ್ಷಪಾತ ತಾಳಿಯಾಗಲೀ ಅಥವಾ ಮತ್ತೊಬ್ಬ ವ್ಯಕ್ತಿಯ ವ್ಯಕ್ತ ಸಾಮರ್ಥ್ಯವನ್ನಾಗಲೀ ಅಥವಾ ಆತ ನಮ್ಮ ಗುರು ಎಂಬ ಭಾವನೆಯನ್ನಾಗಲೀ ಆಧರಿಸದಿರಿ. ಯಾವುದು ಸರಿ ಎಂದು ನಿಮಗೇ ಮನವರಿಕೆಯಾಗಿರುವುದೋ, ಯಾವುದು ದೂಷಣಮುಕ್ತವಾಗಿರುವುದೋ, ವಿವೇಕಿಗಳು ಯಾವುದನ್ನು ಮೆಚ್ಚುತ್ತಾರೋ, ಯಾವುದನ್ನು ಪರೀಕ್ಷಿಸಿ ಅನುಸರಿಸಿದರೆ ಆನಂದವುಂಟಾಗುವುದೋ, ಅಂಥದನ್ನು ಮಾತ್ರ ಅನುಸರಿಸಿರಿ.

ಹೀಗಾಗಿ ಬೌದ್ಧಧಮ್ಮವನ್ನು ನಾವು ಸಂಪೂರ್ಣ ವೈಜ್ಞಾನಿಕವೆಂದು ಕರೆಯಲಾಗದಿದ್ದರೂ, ಅದರಲ್ಲಿ ವೈಜ್ಞಾನಿಕ ದೋರಣೆಯಿದೆಯೆಂದೂ, ಇತರ ಧರ್ಮಗಳಿಗಿಂತ ಅದು ಹೆಚ್ಚು ವೈಜ್ಞಾನಿಕವೆಂದೂ ಹೇಳಬಹುದು. ಇಪ್ಪತ್ತನೆಯ ಶತಮಾನದ ಅತ್ಯಂತ ಮೇಧಾವಿ ವಿಜ್ಞಾನಿಯಾದ ಆಲ್ಬರ್ಟ್ ಐನ್‌ಸ್ಟೈನ್ ಬೌದ್ಧಧಮ್ಮದ ಬಗ್ಗೆ ಹೇಳಿರುವ ಈ ಕೆಳಕಂಡ ಮಾತುಗಳು ಗಮನಾರ್ಹವಾಗಿವೆ:

"ಭವಿಷ್ಯದ ಧರ್ಮವು ವಿಶ್ವಕೇಂದ್ರಿತವಾಗಿರುತ್ತದೆ. ಅದು ಸಾಕಾರ ದೇವರ ಕಲ್ಪನೆಯನ್ನು ಮೀರಿದುದೂ, ಧರ್ಮಸತ್ವ ಹಾಗೂ ದೈವಶಾಸ್ತ್ರಗಳಿಗೆ ಹೊರತಾಗಿರುವುದೂ ಆಗಿರಬೇಕಾಗುತ್ತದೆ. ಲೌಕಿಕ ಹಾಗೂ ಆಧ್ಯಾತ್ಮಿಕ ಅಂಶಗಳೆರಡನ್ನೂ ಒಳಗೊಂಡಿದ್ದು, ಎಲ್ಲ ವಸ್ತುಗಳ ಅನುಭವಗಳನ್ನು ಅಂದರೆ ಲೌಕಿಕ ಹಾಗೂ ಆಧ್ಯಾತ್ಮಿಕ ಮತ್ತು ಇವೆರಡರ ಸಮ್ಮಿಳನದ ಅನುಭವಗಳಿಂದ ಪ್ರಾಪ್ತವಾದ ಒಂದು ವಿಶಿಷ್ಟ ಧರ್ಮದೃಷ್ಟಿಯನ್ನು ಆಧರಿಸಿರಬೇಕಾಗುತ್ತದೆ. ಬೌದ್ಧಧಮ್ಮವು ಈ ಆಶಯಕ್ಕೆ ಅನುಗುಣವಾಗಿದೆ. ಆಧುನಿಕ ವೈಜ್ಞಾನಿಕ ಅವಶ್ಯಕತೆಗಳಿಗೆ ಹೊಂದಿಕೊಳ್ಳಬಲ್ಲ ಯಾವುದಾದರೂ ಧರ್ಮವಿರುವುದಾದರೆ, ಅದು ಬೌದ್ಧಧಮ್ಮವೇ".

(ಮುಂದುವರೆಯುವುದು...)

ಪುಸ್ತಕ ಬೇಕಾದಲ್ಲಿ

ಬುದ್ಧ ಜ್ಯೋತಿ ಪ್ರಕಾಶನ
ನೆರೆಗ್ಯಾತನಹಳ್ಳಿ, ಟಿ. ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ
ಇವರಿಗೆ ಬರೆದು ತರಿಸಿಕೊಳ್ಳಬಹುದು.
ಬೆಲೆ ರೂ. 30/-



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :

'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ಭಗವದ್ಗೀತೆ : ಒಂದು ವೈಚಾರಿಕ ಒಳನೋಟ

ಕೃಷ್ಣಾರ್ಜುನರು ಈಗಲೂ ಇದ್ದಾರೆ !

ಸಾರನಾಥ ಸ್ತೂಪದಲ್ಲಿನ ನಾಲ್ಕು ಸಿಂಹಗಳು ನಾಲ್ಕು ದಿಕ್ಕಿನೆಡೆಗೆ ನೋಡುತ್ತವೆ. ಯಾವುದೇ ನೆಲೆಯಲ್ಲಿ ನಿಂತು ನೋಡಿದರೂ ಅವುಗಳ ನಾಲ್ಕೂ ಮುಖಗಳನ್ನು ನೋಡಲು ಸಾಧ್ಯವಿಲ್ಲ. ಒಂದು ಮುಖ ಸ್ಪಷ್ಟವಾಗಿ ಇನ್ನೆರಡು ಮುಖಗಳು ಭಾಗಶಃ ಕಾಣಿಸುತ್ತವೆ ಅಷ್ಟೇ. ಅದೇ ರೀತಿ ಎಲ್ಲ ವಸ್ತು, ವ್ಯಕ್ತಿ, ವಿಷಯಗಳೂ ಕೂಡ.

ಇಂಥ'ಲ್ಲಿ ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ಗೀತೆಯನ್ನು ಗ್ರಹಿಸುವಲ್ಲಿ ಕಾಣಸಿಗುವುದು ಅದರ ಒಂದು ಮುಖ ಮಾತ್ರ. ಇನ್ನೆರಡು ಮುಖಗಳ ಭಾಗಶಃ ಪರಿಚಯವೂ ಸಾಧ್ಯವಿಲ್ಲ. ಏಕೆಂದರೆ ಸಾಂಪ್ರದಾಯಿಕ ದೃಷ್ಟಿಕೋನದ ನಿಲುವು ಕುದುರೆಗೆ ಪಟ್ಟೆ ಕಟ್ಟಿದಂತೆ; ಏಕಮುಖಿ ನೋಟ. ಅದಕ್ಕಿರುವ ಕಾರಣ ಇಷ್ಟೇ! ಅದು ತಾನು ನೋಡುತ್ತಿರುವುದು, ಹೇಳುತ್ತಿರುವುದು ಪರಿಪೂರ್ಣ ಸತ್ಯ; ಪ್ರಶ್ನಾತೀತ ಎಂದು ಭಾವಿಸುತ್ತದೆ. ಅಥವಾ ಹಾಗೆ ಭಾವಿಸಿದಂತೆ ವರ್ತಿಸುತ್ತದೆ.

ಒಂದು ಮಟ್ಟಿಗೆ ಈ ದೃಷ್ಟಿಕೋನ ಸಮಗ್ರ ಭಾರತವನ್ನು ಆವರಿಸಿರುವಾಗ ಗೀತೆಯ ಮತ್ತೊಂದು ಮುಖವನ್ನು ಗ್ರಹಿಸುವ ಪ್ರಯತ್ನ ಅಲ್ಲಲ್ಲಿ ನಡೆದಿದೆ. ಆದರೆ ಕನ್ನಡದಲ್ಲಿ ಅಂತಹ ಪ್ರಯತ್ನಗಳು ಒಂದು ವಿರಳ. ಹೀಗಿರುವಲ್ಲಿ ಪ್ರೊ|| ಬಿ.ವಿ. ವೀರಭದ್ರಪ್ಪ ಅವರು ತಮ್ಮ "ಭಗವದ್ಗೀತೆ; ಒಂದು ವೈಚಾರಿಕ ಒಳನೋಟ "ಕೃತಿಯ ಮೂಲಕ ಆ ಕೆಲಸವನ್ನು ಮಾಡಿದ್ದಾರೆ ಎನ್ನುವುದಕ್ಕಾಗಿ ಪ್ರಜ್ಞಾವಂತ ಕನ್ನಡಿಗರು ಸಂತೋಷಪಡಬೇಕು. ಅದಕ್ಕಾಗಿ ಬಿ.ವಿ. ವೀರಭದ್ರಪ್ಪ ಅವರು ಅಭಿನಂದನಾರ್ಹರು.

ಯಾವುದೇ ವಸ್ತು, ಕೃತಿ, ವ್ಯಕ್ತಿಯ ಸಾಧ್ಯತೆ-ಅಸಾಧ್ಯತೆಗಳನ್ನು ಅವು ಇಟ್ಟುಕೊಂಡಿರುವ ಮಿತಿಯ ಒಳಗೆ ನೋಡಬೇಕಲ್ಲದೆ ಅದರ ಆಚೆಗೆ ಹೋಗಿ ಖಂಡಿಸುವುದೋ ಮಂಡಿಸುವುದೋ ಸರಿಯೆನಿಸದು. ಇಂಥಲ್ಲಿ ಪ್ರಸ್ತುತ ಕೃತಿಯ ಬಗ್ಗೆ ಹೇಳುವ ಮೊದಲು ಅದರ ಮಿತಿಯನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಕೃತಿಯ ಹೆಸರೇ ಸೂಚಿಸುವಂತೆ ಇದು ಗೀತೆಯ ಒಂದು ವೈಚಾರಿಕ ಒಳನೋಟವೇ ಹೊರತು ಸಮಗ್ರವಲ್ಲ. ಯಾವನೇ ಒಬ್ಬ ವಿನಯಶೀಲ ಸತ್ಯಾನ್ವೇಷಕ ತನ್ನ ಅಭಿಪ್ರಾಯವನ್ನು ಸಮಗ್ರ, ಪರಿಪೂರ್ಣವೆಂದು ಹೇಳಲಾರ. ಯಾವ ಲೇಖಕನೂ ಇದಕ್ಕಿಂತ ವಿನಮ್ರವಾಗಿ ಹೇಳಲು ಸಾಧ್ಯವಿಲ್ಲ. ಈ ಕೃತಿ ರಚನೆಯಾಗಿರುವುದು ಸಮಕಾಲೀನ ಸುಧಾರಣವಾದಿ ನೆಲೆಯಲ್ಲಿ. ಅಂಥಲ್ಲಿ ಲೇಖಕರು ತಮ್ಮ ನೆಲೆಯಲ್ಲಿ ನಿಂತು ನೋಡಿದಾಗ ಕಾಣಿಸುವ ಗೀತೆಯ ಒಂದು ಮುಖವನ್ನು ವಸ್ತುನಿಷ್ಠವಾಗಿ, ನಿಖರವಾಗಿ ಮುಂದಿಟ್ಟಿದ್ದಾರೆ ಮತ್ತು ಗೀತೆಯ ಒಂದು ಮುಖಕ್ಕೆ ಫೋಕಸ್ ಕೊಡುವಾಗಲೂ ಅದರ ಆಚೀಚಿನ ಇನ್ನೆರಡು ಮುಖಗಳಲ್ಲಿ ಅಲ್ಲಲ್ಲಿ ಬೆಳಕು ಹಾಯಿಸಿದ್ದಾರೆ. ಸಂಸ್ಕೃತಿ ಪ್ರಧಾನ ಎನ್ನಲಾದ ಗೀತೆಯನ್ನು ಆರ್ಥಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಿರುವ ಲೇಖಕರು ಗೀತೆಯ ಆರ್ಥಿಕವಾದಿ ಒಳ ನಿಲುವುಗಳನ್ನು ಸಮರ್ಥವಾಗಿ ವ್ಯಾಖ್ಯಾನಿಸಿದ್ದಾರೆ. ಮಹಾಭಾರತ ಯುದ್ಧದಲ್ಲಿ ಯುದ್ಧದ ಸರ್ವಸಿದ್ಧತೆಗಳೂ ಮುಗಿದ ನಂತರ ತಾನು ಯುದ್ಧ ಮಾಡುವುದಿಲ್ಲ ಎನ್ನುವ ಅರ್ಜುನನನ್ನು ಯುದ್ಧ ಮಾಡಿಸುವುದಕ್ಕಾಗಿ ಕೃಷ್ಣ ಏನೇನೋ ಬೋಧಿಸಿದ್ದರೆ ಅದು ಸರಿಯೇ ತಪ್ಪೇ ಎಂದು ವಿಶ್ಲೇಷಿಸಬೇಕಾದ್ದು ಇಂದಿನ ಅಗತ್ಯವೇನಲ್ಲ. ಆ ಸಂದರ್ಭದಲ್ಲಿ ಕೃಷ್ಣನಿಗೆ ಅದರ ಅನಿವಾರ್ಯತೆ ಇದ್ದಿರಬಹುದು ಲೇಖಕರಿಗೆ ಅದು ತಿಳಿದಿದೆ. ಆದರೆ ಅವರು ವಿಶ್ಲೇಷಿಸಿರುವುದಕ್ಕೆ ಮುಖ್ಯ ಕಾರಣ ಚಾರಿತ್ರಿಕ ಮತ್ತು ಸಮಕಾಲೀನ ಸಂದರ್ಭ. ಲೇಖಕರೇ ಹೇಳುವಂತೆ ಜನರ ಕಡು ಬಡತನ, ಕಷ್ಟಕಾರ್ಪಣ್ಯಗಳಿಗೆ ಬಂಡಾಯ ಮನೋಧರ್ಮವನ್ನು ಹತ್ತಿಕ್ಕುವುದಕ್ಕೆ ಗೀತೆಯ ಕೊಡುಗೆ ಏನು (ಪುಟ 138) ಎಂಬುದನ್ನು ಹೇಳುವುದು ಅವರ ಉದ್ದೇಶ. ಗೀತೆ, ಚರಿತ್ರೆಯಲ್ಲಿ, ಭಾರತದ ಸುಧಾರಣಾವಾದಿ ನೆಲೆಯನ್ನು ಬೆಳೆಯಗೊಡದಿರುವಲ್ಲಿ ಮತ್ತು ಪ್ರಸ್ತುತ ಕಾಲಮಾನದಲ್ಲಿಯೂ ಸುಧಾರಣಾ ಪ್ರಯತ್ನಗಳಿಗೆ ತಡೆ ಒಡ್ಡುತ್ತಿರುವಲ್ಲಿ ಲೇಖಕರ ಪ್ರಯತ್ನ ಮಹತ್ವಪೂರ್ಣವಾದುದು. ಲೇಖಕರು ಗೀತಾಚಾರ್ಯನನ್ನು ಒಬ್ಬ ರಾಜನೀತಿಜ್ಞನಾಗಿ, ಬೋಧಕನಾಗಿ ಲೌಕಿಕ ಸಂದರ್ಭದಲ್ಲಿ ಸ್ವೀಕರಿಸಿದ್ದಾರೆಯೇ ಹೊರತು ದೇವರೆಂಬ ನೆಲೆಯಲ್ಲಿ ಅಲ್ಲ. ಇಂಥಲ್ಲಿ 'ದೇವದ ಗೀತಾಚಾರ್ಯವನ್ನು ಪ್ರಶ್ನಿಸುವುದು ಸರಿಯೇ?" ಎಂದರೆ ಅದು ಲೇಖಕರ ಮಿತಿಯನ್ನು ದಾಟಿ ಪ್ರಶ್ನಿಸುವ ಕೆಲಸವಾಗುತ್ತದೆ. ಲೇಖಕರು ಯಾವ ದೃಷ್ಟಿಕೋನದಲ್ಲಿ ಸ್ವೀಕರಿಸಬೇಕು ಎನ್ನುವ ಅಧಿಕಾರ ಯಾರಿಗೂ ಇಲ್ಲ. ಅವರು ಸ್ವೀಕರಿಸಿರುವುದನ್ನು ಹೇಗೆ ಹೇಳಿದ್ದಾರೆ ಎನ್ನಬಹುದಷ್ಟೆ (ಲೇಖಕನ ನಿಲುವೇ ಖಂಡನೀಯ ಎನ್ನುವ ವರ್ಗ ಇರುವುದರಿಂದ ಈ ಮಾತು ಹೇಳಬೇಕಾಗಿದೆ)

ಕಟ್ಟಕಡೆಯದಾಗಿ ಲೇಖಕರ ವಾದ ವೈಖರಿಯನ್ನು ನೋಡಿದ ಕೆಲವು ಓದುಗರಿಗೆ ಒಂದು ಸಂದೇಹ ಬರಲು ಸಾಧ್ಯವಿದೆ. ಗೀತೆ ರಚನೆಯಾದ ಕಾಲಮಾನದಲ್ಲಿ ಲೇಖಕರು ಗುರುತಿಸಿರುವ ಗೀತೆಯ ಉದ್ದೇಶಗಳು ಯಥಾರ್ಥ ವಿರಬಹುದೇ? ಅಂದಿನ ಬೌದ್ಧಿಕ ಮಟ್ಟ ಈ ಮಟ್ಟಿನ ತಂತ್ರಗಾರಿಕೆಗೆ ತಲುಪಿದ್ದಿರಬಹುದೇ? ಒಂದರ ಮೂಲಕ ಇನ್ನೊಂದು ಮತ್ತೊಂದನ್ನು ಸಾಧಿಸುವ ಚಾಣಾಕ್ಷಮತಿ ಇದ್ದಿರಬಹುದೇ? ಎಂಬ ಸಂಶಯ ಹೊರ ಬಂದುದು. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳದೆ ಹೋದರೆ, ಲೇಖಕರು ಅಂದಿನ ವಿದ್ಯಾಮಾನವನ್ನು ಇಂದಿನ ಕಾಲಘಟ್ಟದಲ್ಲಿ ನಿಂತು ಅರ್ಥೈಸಿದ್ದಾರೆಯೇ ಹೊರತು

ಭಗವದ್ಗೀತೆ ಒಂದು ವೈಚಾರಿಕ ಒಳನೋಟ
ಲೇ : ಬಿ.ವಿ. ವೀರಭದ್ರಪ್ಪ
ಪ್ರಕಾಶಕರು : ನವ ಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು - 560 001 ಬೆಲೆ : ರೂ. 50/-

ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ಗೀತೆಯನ್ನು ಗ್ರಹಿಸುವಲ್ಲಿ ಕಾಣಸಿಗುವುದು ಅದರ ಒಂದು ಮುಖ ಮಾತ್ರ. ಇನ್ನೆರಡು ಮುಖಗಳ ಭಾಗಶಃ ಪರಿಚಯವೂ ಸಾಧ್ಯವಿಲ್ಲ. ಏಕೆಂದರೆ ಸಾಂಪ್ರದಾಯಿಕ ದೃಷ್ಟಿಕೋನದ ನಿಲುವು ಕುದುರೆಗೆ ಪಟ್ಟೆ ಕಟ್ಟಿದಂತೆ; ಏಕಮುಖಿ ನೋಟ. ಅದಕ್ಕಿರುವ ಕಾರಣ ಇಷ್ಟೇ! ಅದು ತಾನು ನೋಡುತ್ತಿರುವುದು, ಹೇಳುತ್ತಿರುವುದು ಪರಿಪೂರ್ಣ ಸತ್ಯ; ಪ್ರಶ್ನಾತೀತ ಎಂದು ಭಾವಿಸುತ್ತದೆ. ಅಥವಾ ಹಾಗೆ ಭಾವಿಸಿದಂತೆ ವರ್ತಿಸುತ್ತದೆ.

○ ಅರವಿಂದ ಚೊಕ್ಕಾಡಿ

ಅಂದಿನ ಕಾಲಮಾನದಲ್ಲಿ ನಿಂತು ಅದನ್ನು ನೋಡಿಲ್ಲವೆನಿಸಬಹುದು.

ಆದರೆ ಈ ಸಂಶಯದ ಅಗತ್ಯವಿಲ್ಲ. ಮೂರು ನೆಲೆಗಳ ಮೂಲಕ ಅದನ್ನು ವಿಷದೀಕರಿಸಬಹುದು. ಡಾ|| ಜಿ. ರಾಮಕೃಷ್ಣ ಅವರು ಪ್ರಾಚೀನ ಭಾರತದ ವೈಜ್ಞಾನಿಕ ಪ್ರಗತಿಯನ್ನು ಅರ್ಥೈಸುತ್ತಾ ಅಂದಿನ ಬೌದ್ಧಿಕ ಮಟ್ಟ ವೈಜ್ಞಾನಿಕ ಸಾಧನೆಯಲ್ಲಿ ಆ ಕಾಲಕ್ಕೆ ದೊಡ್ಡದೇ ಎನ್ನಬಹುದಾದಷ್ಟು ಉಚ್ಚತಮವಾಗಿತ್ತು ಎನ್ನುವ ಅಭಿಪ್ರಾಯ ಹೊಂದಿದ್ದಾರೆ. (ನೋಡಿ : ಭಾರತೀಯ ವಿಜ್ಞಾನದ ಹಾದಿ ಡಾ.ಜಿ. ರಾಮಕೃಷ್ಣ-ಹಂಪಿ ವಿವಿ ಪ್ರಕಟಣೆ). ವೈಜ್ಞಾನಿಕ ಸಾಧನೆಯಲ್ಲಿ ಆ ಕಾಲಕ್ಕೆ ದೊಡ್ಡದು (ಅಂದರೆ ನಮ್ಮ ಕಾಲಕ್ಕೆ ಒಂದು ದೊಡ್ಡದು ಎನ್ನುವಂಥದಲ್ಲ) ಎನ್ನುವಂಥದಾಗಿದ್ದರೂ ಸಾಮಾಜಿಕ ನೆಲೆಯಲ್ಲಿ ನಮ್ಮ ಬೌದ್ಧಿಕ ಮಟ್ಟಕ್ಕೆ ಸರಿಸಮ ಬುದ್ಧಿ ಮತ್ತೆ ಇದ್ದಿರಬೇಕು. ಇಲ್ಲದಿದ್ದರೆ ಅಂದಿನ ಪರಿಮಿತ ಸೌಕರ್ಯಗಳೆಡೆಯಲ್ಲಿ ಅಂತಹ ವೈಜ್ಞಾನಿಕ ಮೂಡಿ ಬರುತ್ತಿರಲಿಲ್ಲ. ಡಾ|| ಜಿ.ಆರ್. ಅವರ ಅಭಿಪ್ರಾಯವನ್ನು ಸುಧಾರಣಾ ಪರ ವಿಚಾರಧಾರೆ, ಪ್ರಾಚೀನ ಕಾಲದ ಒಂದು ಹಂತದ ಬೌದ್ಧಿಕ ಮಟ್ಟವನ್ನು ಒಪ್ಪಿಕೊಂಡಿರುವುದಕ್ಕೆ ಪ್ರಾತಿನಿಧಿಕವಾಗಿ ತೆಗೆದುಕೊಂಡಿದ್ದೇನೆ.

ಎರಡನೆಯದಾಗಿ ಸ್ವಾಮಿ ದಯಾನಂದ ಸರಸ್ವತಿಯವರು ವೇದಗಳಿಗೆ ಕೊಡುವ ವ್ಯಾಖ್ಯಾನಗಳನ್ನು ನೋಡಿದರೆ ಅವರೂ ಅಂದಿನ ಬೌದ್ಧಿಕ ಉಚ್ಚಮಟ್ಟವನ್ನು ಒಪ್ಪಿಕೊಂಡಿರುವುದನ್ನು ಕಾಣಬಹುದು. ಸಂಪ್ರದಾಯ ಶೀಲ ವಿಚಾರಧಾರೆಗೆ ಪ್ರಾತಿನಿಧಿಕವಾಗಿ ದಯಾನಂದರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇನೆ. ಅಲ್ಲದೆ ಇಂದಿನ ಸಂಪ್ರದಾಯಶೀಲ ವಿಚಾರವಂತರು, ಪುಷ್ಪಕ ವಿಮಾನ, ಸಂಜೀವಿನಿ ಇತ್ಯಾದಿಗಳನ್ನೆಲ್ಲ ಪ್ರಾಚೀನರಿಗೆ ಆರೋಪಿಸಿ ನಮಗಿಂತ ಹೆಚ್ಚು ಬುದ್ಧಿವಂತರನ್ನಾಗಿಸಿದ್ದಾರೆ! ಅದು ಸತ್ಯವೆಂದೇನೂ ನನ್ನ ಅಭಿಪ್ರಾಯವಲ್ಲ. ಆದರೆ ಇತ್ತಂಡಗಳೂ ಪ್ರಾಚೀನರ ಬೌದ್ಧಿಕ ಮಟ್ಟವನ್ನು ಒಪ್ಪಿಕೊಂಡಿರುವುದಕ್ಕೆ ಈ ಎರಡು ಅಂಶಗಳು ಸಾಕ್ಷಿಯಾಗುತ್ತವೆ.

ಮೂರನೆಯದಾಗಿ ಚಾರಿತ್ರಿಕ ದಾಖಲೆಗಳು : ವೇದಗಳು, ಸ್ಮೃತಿ-ಸೂತ್ರಗಳು, ಚಾರ್ವಾಕ ಸಿದ್ಧಾಂತ, ಜೈನ-ಬೌದ್ಧ ಚಿಂತನೆಗಳು, ಕೌಟಿಲ್ಯನ ಅರ್ಥಶಾಸ್ತ್ರ ಇವೆಲ್ಲ ಪ್ರಾಚೀನರ ಬೌದ್ಧಿಕ ಔನ್ನತ್ಯಕ್ಕೆ, ಅವರ ಸೂಕ್ಷ್ಮ ಒಳನೋಟ ಪ್ರಜ್ಞೆಗೆ ಸಾಕ್ಷಿಯಾಗುತ್ತವೆ.

ಹೀಗಿರುವಾಗಿ ಗೀತಾಚಾರ್ಯನ ಉದ್ದೇಶದ ಬಗ್ಗೆ ಲೇಖಕರು ಆಡುವ ಮಾತುಗಳನ್ನು ಇಂದಿನ ಕಾಲಮಾನದಲ್ಲಿ ನಿಂತು ಅಂದಿನದನ್ನು ನೋಡುವ ಪ್ರಯತ್ನ ಎನ್ನಲು ಬರುವುದಿಲ್ಲ. ಗೀತಾಚಾರ್ಯನ ಉದ್ದೇಶವನ್ನು ಅರ್ಥೈಸುವ ಲೇಖಕರ ವಾದಕ್ಕೆ ವಸ್ತುವಾಗುವ ಅರ್ಹತೆ, ಅವರ ಪ್ರಶ್ನೆಗಳಿಗೆ ಉತ್ತರಿಸುವ ಬದ್ಧತೆ ಗೀತೆಗಿದೆ. ಏಕೆಂದರೆ ಗೀತಾಚಾರ್ಯನ ಬೌದ್ಧಿಕ ಮಟ್ಟ ಯಾವ ಕಾರಣಕ್ಕೂ ಸಣ್ಣದೇನಲ್ಲ.

ಪ್ರಸ್ತುತ ಕೃತಿಯ ಮಿತಿ ಮತ್ತು ಸಾಮರ್ಥ್ಯದ ಇಷ್ಟು ಅಂಶಗಳನ್ನು ಮುಂದಿಟ್ಟುಕೊಂಡು ಒಬ್ಬ ಲೇಖಕನ ಕೃತಿ

ಗೀತಾಚಾರ್ಯನ ಉದ್ದೇಶದ ಬಗ್ಗೆ ಲೇಖಕರು ಆಡುವ ಮಾತುಗಳನ್ನು ಇಂದಿನ ಕಾಲಮಾನದಲ್ಲಿ ನಿಂತು ಅಂದಿನದನ್ನು ನೋಡುವ ಪ್ರಯತ್ನ ಎನ್ನಲು ಬರುವುದಿಲ್ಲ. ಗೀತಾಚಾರ್ಯನ ಉದ್ದೇಶವನ್ನು ಅರ್ಥೈಸುವ ಲೇಖಕರ ವಾದಕ್ಕೆ ವಸ್ತುವಾಗುವ ಅರ್ಹತೆ, ಅವರ ಪ್ರಶ್ನೆಗಳಿಗೆ ಉತ್ತರಿಸುವ ಬದ್ಧತೆ ಗೀತೆಗಿದೆ. ಏಕೆಂದರೆ ಗೀತಾಚಾರ್ಯನ ಬೌದ್ಧಿಕ ಮಟ್ಟ ಯಾವ ಕಾರಣಕ್ಕೂ ಸಣ್ಣದೇನಲ್ಲ.

ಮತ್ತೊಬ್ಬ ಲೇಖಕನಿಗೆ ಮುಖಾಮುಖಿಯಾದಾಗ ಏನೆಲ್ಲ ಅನಿಸುತ್ತದೆಯೋ ಅದನ್ನು ಹೇಳುವ ಮತ್ತು ಅಲ್ಲಲ್ಲಿ ಲೇಖಕರು ಎತ್ತುವ ಪ್ರಶ್ನೆಗಳಿಗೆ ಧ್ವನಿಪೂರ್ಣವಾಗಿ ಅವರೇ ಕೊಟ್ಟಿರುವ ಉತ್ತರಗಳನ್ನು ಸ್ಪಷ್ಟ ಮಾತುಗಳಲ್ಲಿ ಕಂಡರಿಸುವ ಪ್ರಯತ್ನ ಮಾಡುತ್ತೇನೆ.

ಸಾಕಷ್ಟು ಚರ್ಚೆ ಮತ್ತು ಸಾಕ್ಷ್ಯಾಧಾರಗಳ ಸಹಿತ ಗೀತೆಯ ಕಾಲವನ್ನು ಸುಮಾರು ಕ್ರಿ.ಪೂ. 500 ರಿಂದ ಕ್ರಿ.ಶ. 300 ಎಂದು ಒಪ್ಪಿಕೊಳ್ಳುವ ಲೇಖಕರು ಮೂವರು ಬೇರೆ ಬೇರೆ ಲೇಖಕರಿಂದ ಗೀತೆ ರಚನೆಯಾಯಿತು ಎಂಬುದನ್ನು ಭಾಗಶಃ ಸಮ್ಮತಿಸುತ್ತಾರೆ. ಆದರೆ ಮುಂದೆ ಮಹಾಭಾರತ ಯುದ್ಧ ಪ್ರಸಂಗವನ್ನು ಆಧರಿಸಿ ತಮ್ಮ ಅಭಿಪ್ರಾಯ ಮಂಡಿಸುತ್ತಾ ಹೋಗುತ್ತಾರೆ. ಅದರಿಂದಾಗಿ ಗೀತಾಚಾರ್ಯನ ಉದ್ದೇಶದ ಹೊರ ಆವರಣವನ್ನು ಕಂಡರಿಸುವಲ್ಲಿ ಸ್ವಲ್ಪ ತೊಂದರೆ ಆದಂತಿದೆ. ಆದ ಕಾರಣ ಲೇಖಕರು ಕೊಡುವ ಉತ್ತರ ಕೆಲವೆಡೆ ಧ್ವನಿಪೂರ್ಣವಾಗಿ ಬಿಡುತ್ತದೆ. ನನಗನಿಸುವಂತೆ ಲೇಖಕರು ಮಹಾಭಾರತ ಪ್ರಸಂಗವನ್ನೇ ಆಧರಿಸಿ ವಾದ ಮಂಡನೆ ಮಾಡಿರುವುದಕ್ಕೆ ಅಪೇಕ್ಷಣೀಯವಾದ ಒಂದು ದೊಡ್ಡ ಉದ್ದೇಶವೊಂದಿದೆ. ಅದೇನೆಂದರೆ ಓದುಗನಿಗೆ ಸುಲಭವಾಗಿ ತಮ್ಮ ಅಭಿಪ್ರಾಯವನ್ನು ತಲುಪಿಸುವ ಸರಳೀಕರಣದ ಸೂತ್ರ. ಅಂಥಲ್ಲಿ ಗೀತೆಯಲ್ಲಿ ಕಾಣಿಸುವ ವೈರುಧ್ಯಗಳಿಗೆ ಕಾರಣಕೊಡುವಲ್ಲಿ ಅವರು ಧ್ವನಿಪೂರ್ಣರಾಗಿಬಿಡುತ್ತಾರೆ. ಹೀಗಿರುವಾಗ ಅವರು ಹಿಂದೆ ಚರ್ಚಿಸಿರುವ ವಿಷಯಗಳ ಆಧಾರದಲ್ಲಿ ವೈರುಧ್ಯಕ್ಕೆ ಕಾರಣ ಹುಡುಕಬೇಕಾಗುತ್ತದೆ. ಉದಾಹರಣೆಗೆ ಗೀತೆಯ ಮೊದಲ ಹಂತದಲ್ಲಿ ಪ್ರಭಾವಿಯಾಗಿ ಮೂಡಿ ಬಂದಿರುವ ಸಾಂಖ್ಯ ಚಿಂತನೆ, ಚಾರ್ವಾಕ, ಬೌದ್ಧ, ಜೈನ ಸಿದ್ಧಾಂತಗಳ ಚೌರ್ಯ, ಎರಡನೆ ಹಂತದಲ್ಲಿ ವೇದಾಂತದೆಡೆಗೆ ಸಾಗುವ ನಿದರ್ಶನ, ಮೂರನೆ ಹಂತದಲ್ಲಿ ಪರಿಪೂರ್ಣ ವೇದಾಂತ ಮತ್ತು ದೈವತ್ವಕ್ಕೆ ಶರಣಾಗತಿ. ಪ್ರಾಯಶಃ ಇದಕ್ಕಿರುವ ಕಾರಣವೇನೆಂದರೆ ಗೀತೆಯ ಪ್ರಾರಂಭದ ಹಂತ ರಚನೆಯಾದದ್ದು ಬೌದ್ಧ, ಜೈನ, ಚಾರ್ವಾಕ ಸಿದ್ಧಾಂತಗಳು ಪ್ರಭಾವಶಾಲಿಯಾಗಿದ್ದಾಗ, ಎರಡನೆ ಹಂತ ರಚನೆಯಾದದ್ದು ಅವು ಅವನತಿಯತ್ತ ಮುಖ ಮಾಡಿದ್ದಾಗ ಮತ್ತು ಮೂರನೆಯ ಹಂತದ ರಚನೆ ಅವುಗಳ ಅವನತಿ ಕಾಲದಲ್ಲಿ, ಆದರೆ ಮೂರು ಲೇಖಕರ (ಅಥವಾ ಇನ್ನೂ ಹೆಚ್ಚಿನ) ಉದ್ದೇಶ ಒಂದೇ. ನವ ವೈದಿಕ ಸಿದ್ಧಾಂತದ ಮಂಡನೆ ಲೇಖಕರು ಪ್ರಸ್ತಾಪಿಸಿರುವ ಸೂಕ್ಷ್ಮ ಒಳನೋಟಗಳನ್ನು ಆಧರಿಸಿ ಹೇಳುವುದಾದರೆ,

ಅರ್ಜುನ ಮತ್ತು ಕೃಷ್ಣರನ್ನು ಸಾಂಕೇತಿಕ ಅರ್ಥದ ಮೂಲಕ ಗ್ರಹಿಸಬೇಕಾಗುತ್ತದೆ. ಲೇಖಕರು ತಮ್ಮ ಪ್ರಬುದ್ಧ ಶಿಸ್ತು ಬದ್ಧ ಅಧ್ಯಯನದ ಮೂಲಕ ಕೃತಿಯ ಪ್ರಾರಂಭದಲ್ಲಿ ಮಹಾಭಾರತ ಯುದ್ಧ ಸಂದರ್ಭದಲ್ಲಿ ಗೀತೆ ರಚನೆಯಾದುದಲ್ಲವೆಂದು ಅಭಿಪ್ರಾಯಿಸಿದ್ದಾರೆ. ಅದನ್ನು ಒಂದು ಸುಲಭದ ತರ್ಕದಲ್ಲಿ ಗ್ರಹಿಸಬಹುದು. ಮಹಾಭಾರತದ ಹೇಳಿಕೆಯ ಪ್ರಕಾರ ಸರಿ ಸುಮಾರು ಹದಿನೆಂಟು ಅಕ್ಷೋಹಿಣಿ ಸೈನ್ಯ ಕುರುಕ್ಷೇತ್ರದಲ್ಲಿ ಜಮಾಯಿಸಿತ್ತು. ಆದರೆ ಕುರುಕ್ಷೇತ್ರದ ನಿಜವಾದ ಸ್ಥಳ ವ್ಯಾಪ್ತಿಯಲ್ಲಿ ಅಷ್ಟೊಂದು ಜನ ಜಮಾಯಿಸಲು ಸಾಧ್ಯವಿಲ್ಲ. ಅಂಥಲ್ಲಿ ಸಣ್ಣ ಘಟನೆಯೊಂದನ್ನು ವ್ಯಾಸರು ಬೃಹತ್ ಆಗಿ ಒಂದು ಕಾಲಮಾನದ ಚಾರಿತ್ರಿಕ ಸಂಗತಿಗಳನ್ನು ವಿಸ್ತರಿಸುತ್ತಾ ದಾಖಲಿಸಿದರಷ್ಟೇ. ಹಾಗೆಯೇ ಯುದ್ಧಭೂಮಿಯಲ್ಲಿ ಹದಿನೆಂಟು ಅಧ್ಯಾಯಗಳ ತತ್ತ್ವೋಪದೇಶ ಮಾಡಲು ಬರುವುದಿಲ್ಲ. ಕೃಷ್ಣಾರ್ಜುನರು ತತ್ತ್ವೋಪದೇಶದಲ್ಲಿ ನಿರತರಾಗಿರುವಾಗ ಪ್ರತಿಪಕ್ಷದ ಮುಖಂಡ ತನ್ನ ಸೈನಿಕರಿಗೆ, "ನಿಲ್ಲು! ನಿಲ್ಲು! ಅವನು ತತ್ತ್ವೋಪದೇಶ ಮಾಡುತ್ತಿದ್ದಾನೆ. ಅದು ಮುಗಿಯಲಿ, ಆಮೇಲೆ ಯುದ್ಧ ಮಾಡೋಣ" ಎನ್ನುತ್ತಾನೆಯೇ? ಅಲ್ಲದೆ ಧರ್ಮ ಯುದ್ಧದ ನೀತಿಯಲ್ಲಿ ತತ್ತ್ವೋಪದೇಶಕ್ಕೆ ಕಾಲಾವಕಾಶಕೊಡಬೇಕೆಂಬ ನಿಯಮವಿರುವುದು ತಿಳಿದಿಲ್ಲ. ಕೃಷ್ಣಾರ್ಜುನರು ತಮ್ಮ ತತ್ತ್ವೋಪದೇಶ ಮುಗಿಯುವ ತನಕ ಯುದ್ಧ ಮಾಡಬೇಡಿ ಎಂದು ಕೌರವರಲ್ಲಿ ವಿನಂತಿಸಿಕೊಂಡಿದ್ದರು ಎಂಬ ಉಲ್ಲೇಖ ಮಹಾಭಾರತದಲ್ಲಿ ಇಲ್ಲ. ಹೀಗಾಗಿ ಗೀತೆಯಲ್ಲಿನ ಕೃಷ್ಣಾರ್ಜುನರು ಸಾಂಕೇತಿಕ ಪ್ರತಿನಿಧಿಗಳಾಗುತ್ತಾರೆ. ಹೇಗೆ ಎನ್ನಲು ಪ್ರಸ್ತುತ ಕೃತಿಯಲ್ಲಿ ನಿರೂಪಿಸಲಾಗಿರುವ ವಿಚಾರಗಳನ್ನು ಗಮನಿಸಬೇಕು.

ಬೌದ್ಧ ಮತ್ತು ಜೈನ ಧರ್ಮೀಯರ ನೆಲೆ ಮೂಲತಃ ಕ್ಷತ್ರಿಯ ಕುಲವಾಗಿದ್ದು ಬ್ರಾಹ್ಮಣಶಾಹಿಗೆ ವಿರುದ್ಧವಾಗಿತ್ತು. ಚಾರ್ವಾಕ, ಸಾಂಖ್ಯ ಸಿದ್ಧಾಂತಗಳು ಜನರನ್ನು ತಲುಪಿ ಸಮಾನತೆಯ ಸಾಧ್ಯತೆ, ಶ್ರಮ ಗೌರವ ಬಹಳವಿತ್ತು. ಕ್ರಮೇಣ ಬೌದ್ಧ ಧರ್ಮ ಅವನತಿಯಾಗತೊಡಗಿತು. ಬೌದ್ಧರನ್ನು ನಿರ್ದಯವಾಗಿ ಕೊಲ್ಲಲಾಯಿತು. ನವ ವೈದಿಕಶಾಹಿ ಸಿದ್ಧಾಂತ ಪ್ರಚುರ ಪಡಿಸಲಾಯಿತು.

ಈ ಸ್ಥಿತಿಯಲ್ಲಿ ಗೀತಾಚಾರ್ಯ ಕಂಡರಿಸುವ ಮಹಾಭಾರತ, ವೇದವ್ಯಾಸ ಭಾರತವಲ್ಲ. ನವವೈದಿಕಶಾಹಿಯ ಸ್ಥಾಪನೆಗಾಗಿ ನಡೆಯಬೇಕಾದ ಮಹಾಭಾರತ ಯುದ್ಧ. ಅಂದರೆ ಬೌದ್ಧ, ಚಾರ್ವಾಕ ಮುಂತಾದರವನ್ನು ನಾಮಾವಶೇಷ ಮಾಡಬೇಕಾದ ರಕ್ತಪಾತ. ಆದರೆ ಅವರೆಲ್ಲ ಕ್ಷತ್ರಿಯರು (ಮುಖ್ಯವಾಗಿ ಬ್ರಾಹ್ಮಣರಲ್ಲ) ಎಂದುಕೊಂಡರೆ ಅವರನ್ನು ಕೊಲ್ಲುವಂತೆ

ಕರೆ ಕೊಟ್ಟಿರುವುದು ಕ್ಷತ್ರಿಯನಾದ ಅರ್ಜುನನಿಗೆ! ಈ ಅಂಶವನ್ನು ನವ ವೈದಿಕ ಸಿದ್ಧಾಂತವನ್ನು ಸ್ಥಾಪಿಸಿದ ಗುಪ್ತ ವಂಶಕ್ಕೆ ಹೋಲಿಸಿ ಅರ್ಜುನನ್ನು ಗುಪ್ತ ಚಕ್ರವರ್ತಿಗಳ ಸಾಂಕೇತಿಕ ಪ್ರತಿನಿಧಿಯಾಗಿ ಸ್ವೀಕರಿಸಬೇಕಾಗುತ್ತದೆ. ತತ್ವೋಪದೇಶಕ್ಕೆ ಮೊದಲಿನ ಅರ್ಜುನನೆಂದರೆ ಬೌದ್ಧ ಧರ್ಮ ಸಿದ್ಧಾಂತವನ್ನು ಒಪ್ಪಿಕೊಂಡು ವೈದಿಕ ಸಿದ್ಧಾಂತವನ್ನು ಅಂಗೀಕರಿಸಿರುವ ಕ್ಷತ್ರಿಯರು. ಅವರನ್ನು ಪರಿಪೂರ್ಣವಾಗಿ ವೈದಿಕತೆಯ ಕಡೆಗೆ ತರುವ ಕೆಲಸ ಗೀತಾಚಾರ್ಯನದು. ಕೃಷ್ಣನ ಪಾತ್ರವೂ ಇಲ್ಲಿ ಗಮನಾರ್ಹ. ಹುಟ್ಟಿನಲ್ಲಿ ಆತ ಗೊಲ್ಲ. ವೃತ್ತಿಯಲ್ಲಿ ಕ್ಷತ್ರಿಯ ಬುದ್ಧಿಯಲ್ಲಿ ಬ್ರಾಹ್ಮಣ "ಅವರವರ ಗುಣಸ್ವಭಾವಗಳಿಗೆ ಅನುಗುಣವಾಗಿ ಜಾತಿಗಳನ್ನು ನಾನು ಸೃಷ್ಟಿಸಿದೆ" ಎನ್ನುವ ಗೀತಾಚಾರ್ಯನ ಮಾತಿಗೆ ಪುಷ್ಟಿಕೊಡುವಂತೆ ಹುಟ್ಟಿನ ಮೂಲಕ ಜಾತಿ ನಿರ್ಧಾರವಾಗದಿರುವ ಪಾತ್ರ ಕೃಷ್ಣನದು. ಆದರೆ ಅವನ ಉದ್ದೇಶ ಹುಟ್ಟಿನ ಮೂಲಕ ಜಾತಿಯನ್ನು ಗುರುತಿಸುವ ವ್ಯವಸ್ಥೆಯ ಸ್ಥಾಪನೆ. ಇಲ್ಲಿ ಅಡಗಿರುವ ತಂತ್ರವೇನೆಂದರೆ, ಬೌದ್ಧ, ಚಾರ್ವಾಕಾದಿ ನಂಬಿಕೆಯ ಜಾತ್ಯಾತೀತ ಮನೋಭೂಮಿಕೆಯನ್ನೇ ಬಳಸಿಕೊಂಡು ಜಾತೀಯತೆಯ ಸ್ಥಾಪನೆ ಹೀಗೆ ನವಮಹಾಭಾರತ ಯುದ್ಧಕ್ಕಾಗಿ ಮಹಾಭಾರತದ ಕೃಷ್ಣನ ಪಾತ್ರವನ್ನು ತಂದಿರಿಸಿರುವ ಬೌದ್ಧಿಕ ಕ್ಷಮತೆಗೆ ಬೆರಗಾಗಬೇಕಾಗುತ್ತದೆ. ಕೃಷ್ಣನೊಬ್ಬನ ಮೂಲಕ ಮೂರು ಜಾತಿಗಳನ್ನು ಗುರುತಿಸಿ ಸಿದ್ಧಾಂತವನ್ನು ಸಮಾಜದ ಎಲ್ಲರಿಗೂ ತಲುಪಿಸುವ ಯೋಜನೆಗೆ ಆಶ್ಚರ್ಯಚಕಿತವಾಗಬೇಕಾಗುತ್ತದೆ. ಈ ಯೋಜನೆಗೆ ಅನಿವಾರ್ಯವಾಗಿ ಕ್ಷತ್ರಿಯರನ್ನು ಅವಲಂಬಿಸಲೇಬೇಕಾಗಿತ್ತು. ಏಕೆಂದರೆ ಗೀತೆಯ ಸಿದ್ಧಾಂತದ ಮೂಲಕ ಎಲ್ಲ ಜನರನ್ನೂ ಹಿಡಿದಿಡಲು ಬರುವಂತಿರಲಿಲ್ಲ. ಈ ಸಿದ್ಧಾಂತವನ್ನು ಒಪ್ಪಿಕೊಂಡ ಕ್ಷತ್ರಿಯರು ತಮ್ಮ ಆಳ್ವಿಕೆಯಲ್ಲಿ ಅದನ್ನು ಜನರ ಮೇಲೆ ಹೇರಬೇಕಾಗಿತ್ತು. ಕೃಷ್ಣ, ಜೀವಿಗಳ ಎಲ್ಲ ವರ್ಗದಲ್ಲಿ ಬಲಿಷ್ಠವಾಗಿರುವುದರಲ್ಲಿ ತಾನಿದ್ದೇನೆ ಎಂದಿರುವುದು ಇದಕ್ಕಾಗಿಯೇ. ತಾನೇ ಇರುವ ಬಲಿಷ್ಠ ರಾಜನ ಹೇರಿಕೆಯನ್ನು ಜನರು ಸಹಿಸಿಕೊಳ್ಳಬೇಕೆಂದು! ಅಂತಹ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸುವುದು ಗೀತಾಚಾರ್ಯನ ಉದ್ದೇಶವಾಗಿತ್ತು. ಇಲ್ಲಿ ಲೇಖಕರು ಕೃಷ್ಣ ಬಲಿಷ್ಠಶಕ್ತಿಯಲ್ಲಿ ಇದ್ದಾನೆ ಎನ್ನುವುದನ್ನು ಸರ್ವಾಧಿಕಾರದ ಪುಷ್ಟೀಕರಣದ ಉಪಮೆಯೊಂದಿಗೆ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಗೀತೆಯ ಎಲ್ಲ ಹಂತಗಳಲ್ಲೂ ಕರ್ಮ-ಜ್ಞಾನದ ತಾಕಲಾಟ, ಯಾವುದು ಮುಖ್ಯ ಎನ್ನುವ ಜಿಜ್ಞಾಸೆ (ದೈವಿಕ ಬೋಧನೆಯನ್ನು ಹೊರತು ಪಡಿಸಿ) ಇದೆ. ಅದು ಗೀತೆಯ ಎಲ್ಲ ಲೇಖಕರನ್ನೂ ಕಾಡಿದ ಪ್ರಶ್ನೆ. ಏಕೆಂದರೆ ಮೂಲ ಉದ್ದೇಶದ ಈಡೇರಿಕೆಗಾಗಿ ಕ್ಷತ್ರಿಯರ ಕರ್ಮ ಅಗತ್ಯವಿತ್ತು. ಆದರೆ ಉದ್ದೇಶದ ಮೂಲ ಆಧಾರ ಬ್ರಹ್ಮಜ್ಞಾನವಾಗಿತ್ತು. ಪ್ರಾಯಶಃ ಬ್ರಹ್ಮಜ್ಞಾನ ವೈದಿಕರದ್ದು ಇವೆರಡನ್ನೂ, ಜೊತೆಯಾಗಿ ಕೊಂಡೊಯ್ಯುವುದಕ್ಕಿರುವ ಪ್ರಾಮಾಣಿಕ ಮಾರ್ಗವೆಂದರೆ ಮೇಲು ವರ್ಗದ ದುರಾಸೆಯನ್ನು ಸ್ಪಷ್ಟಪಡಿಸುವುದು. ಆದರೆ ಯಾರೂ ಅದಕ್ಕೆ ಸಿದ್ಧರಾಗಲಾರರಲ್ಲವೇ? ಹಾಗೆಯೇ ಗೀತಾಚಾರ್ಯನೂ ಅದಕ್ಕಾಗಿಯೇ ಈ ತಾಕಲಾಟ.

ಹಿಂದೂ ಧರ್ಮದ ಎಲ್ಲ ಅಂಶಗಳನ್ನೂ ಸಮನ್ವಯಗೊಳಿಸಲು ಯತ್ನಿಸಿದ ಗೀತಾಚಾರ್ಯ ಯಾವುದನ್ನೂ ಕೊನೆಮುಟ್ಟಿಸಲಿಲ್ಲ ಎಂದಿದ್ದಾರೆ ಲೇಖಕರು ಅದು ನಿಜವೇ. ಆದರೇ ಇಲ್ಲೊಂದು ಬದಲಾವಣೆಯಾಗಿದೆ. ಅದಕ್ಕೆ ಬುದ್ಧಪೂರ್ವ ಹಿಂದೂ ಧರ್ಮ ಮತ್ತು ಗುಪ್ತಕಾಲೀನ ಹಿಂದೂ ಧರ್ಮದ ವ್ಯತ್ಯಾಸಗಳನ್ನು ಗಮನಿಸಬೇಕು. ಬುದ್ಧಪೂರ್ವ ಹಿಂದೂ ಧರ್ಮದಲ್ಲಿ ಜಾತಿ ವ್ಯವಸ್ಥೆ ಇತ್ತು. ದಬ್ಬಾಳಿಕೆ ಇತ್ತು. ಯಜ್ಞಯಾಗಾದಿಗಳಿದ್ದು, ಆ ಹೆಸರಿನಲ್ಲಿ ಸಂಪತ್ತಿನ ಲೂಟಿ ನಡೆಯುತ್ತಿತ್ತು. ಆ ಕಾರಣಕ್ಕಾಗಿಯೇ ಬೌದ್ಧ ಧರ್ಮ, ಜೈನ ಧರ್ಮ, ಚಾರ್ವಾಕ ಪಂಥಗಳೆಲ್ಲ ಕಾಣಿಸಿಕೊಂಡವು. ಇಷ್ಟೆಲ್ಲ ಇದ್ದಾಗ್ಯೂ ಬುದ್ಧಪೂರ್ವ ಹಿಂದೂ ಧರ್ಮ ಗುಪ್ತಕಾಲೀನ ಹಿಂದೂ ಧರ್ಮದಷ್ಟು ಕಟುವಾಗಿರಲಿಲ್ಲ ಎನ್ನುವುದನ್ನು ಗಮನಿಸಬೇಕು. ಅದಕ್ಕೆ ಬೌದ್ಧ, ಜೈನ, ಚಾರ್ವಾಕ ಇತ್ಯಾದಿ ಧರ್ಮ/ಪಂಥಗಳು ಬೆಳೆದು ನಿಂತುದೇ ಸಾಕ್ಷಿ. ಅಂದರೆ ಅಷ್ಟರಮಟ್ಟಿಗೆ ಅಲ್ಲಿ ಅವಕಾಶವಿತ್ತು. ಆದರೆ ಗುಪ್ತ ಮತ್ತು ಗುಪ್ತಾನಂತರ ಕಾಲದಲ್ಲಿ ಸುಮಾರು ಪಾಶ್ಚಾತ್ಯರ ಪ್ರವೇಶದ ತನಕ ಹಿಂದೂ ಧರ್ಮ ತನಗೆ ಪ್ರತಿಶಕ್ತಿಯನ್ನು ಬೆಳೆಯಗೊಡಲಿಲ್ಲ (ಈ ನಡುವೆ ಕಂಡು ಬರುವ ಬಸವಣ್ಣನವರ ಕಲ್ಯಾಣದ ಕ್ರಾಂತಿ ಇದೆಯಾದರೂ ವಿಶಾಲ ಭಾರತದ ವ್ಯಾಪ್ತಿಯಲ್ಲಿ ಅದನ್ನು ಬೌದ್ಧ, ಜೈನ ಧರ್ಮ, ಚಾರ್ವಾಕ ಪಂಥಗಳೊಂದಿಗೆ ಹೋಲಿಸಲಾಗದು) ಹಾಗೆಯೇ ಉಪನಿಷತ್ತು, ಪುರಾಣಗಳು ದೈವತ್ವಕ್ಕೆ ಸಂಪೂರ್ಣ ಶರಣಾಗತಿಯನ್ನು ಹೇಳುತ್ತಲೇ ದೈವತ್ವವನ್ನು ಪ್ರಶ್ನಿಸುವ ಮನುಷ್ಯನನ್ನು ಗೌರವಿಸಿವೆ(ಉದಾ: ನಚಿಕೇತ-ಕಠೋಪನಿಷತ್ತು) ಹಿಂದೂ ದೇವತೆಗಳು ಪೌರಾಣಿಕ ಕಲ್ಪನೆಯಂತೆ ಮನುಷ್ಯರಿಂದ ಶಕ್ತಿವಂತರೆನ್ನುವುದನ್ನು ಬಿಟ್ಟರೆ ಅವರೆಲ್ಲರೂ ಮನುಷ್ಯರ ಒಡನಾಡಿಗಳಾಗಿ, ಮನುಷ್ಯರಂತೆ ಹಸಿವು, ಬಾಯಾರಿಕೆ, ಕಾಮ-ಕ್ರೋಧ-ಜಗಳಗಳೆಲ್ಲ ಇದ್ದಂಥ ವ್ಯಕ್ತಿತ್ವಗಳೇ. ಆದರೆ ಗುಪ್ತ ಮತ್ತು ಗುಪ್ತಾ ನಂತರದ ದೇವತೆಗಳ ಆರಾಧನೆ ಸಂಪೂರ್ಣ ಶರಣಾಗತಿಗೆ ಬದ್ಧವಾಯಿತು. ಈ ನಿಲುಮೆಯಲ್ಲಿ ಗೀತೆಯ ದಟ್ಟ ಪ್ರಭಾವ ಇರುವುದನ್ನು ಗಮನಿಸಬೇಕು. ಪ್ರಾಯಶಃ ಹಿಂದಿನ ಹಿಂದೂ ಧರ್ಮದ ನಮ್ಯತೆಯಿಂದಾಗಿ ಹೊಸ ಪಂಥ / ಧರ್ಮಗಳ ಉಗಮವಾಗಲು ಅವಕಾಶ ವುಂಟಾದುದನ್ನು ಗಮನಿಸಿದ ಗೀತಾಚಾರ್ಯ ಧರ್ಮವನ್ನು ಕಟುವಾಗಿಸಿದ ಧರ್ಮಕ್ಕೆ ಕಾಠಿಣ್ಯ ತೊಡಿಸಲು ಏನೆಲ್ಲ ಬೇಕೋ ಅದೆಲ್ಲವನ್ನೂ ತನ್ನ ಪೂರ್ವಜರಿಂದ ಸ್ವೀಕರಿಸಿದ. ಧರ್ಮವನ್ನು ಆರ್ಗನೈಸ್ ಮಾಡಿದ. ಅಂದರೆ ಬಹುಶಃ ಹಿಂದೂ ಧರ್ಮದಲ್ಲಿ ಮೂಲಭೂತವಾದ, ಕೋಮುವಾದದ ಆರಂಭವನ್ನು ಇಲ್ಲಿಂದ ಗುರುತಿಸಬೇಕಾಗುತ್ತದೆ. ಏಕೆಂದರೆ ಹಿಂದೂ ಧರ್ಮ ಅನ್-ಆರ್ಗನೈಸ್ಡ್ ಆಗಿದ್ದಾಗೆಲ್ಲ ಎಷ್ಟೇ ಕೆಡುಕುಗಳಿದ್ದಾಗ್ಯೂ ಮೂಲಭೂತವಾದ, ಕೋಮುವಾದದ ಸ್ವರೂಪ ತಾಳಿದ್ದು ಕಂಡು ಬರುತ್ತಿಲ್ಲ. ಗೀತಾಚಾರ್ಯನಿಗೆ ತತ್ವ ಸಮನ್ವಯ ಸಾಧ್ಯವಾಗದೆ ಹೋದರೂ ಉದ್ದೇಶವನ್ನು ಸಾಧಿಸಿದ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

> ಯುದ್ಧಭೂಮಿಯಲ್ಲಿ ಹದಿನೆಂಟು ಅಧ್ಯಾಯಗಳ ತತ್ವೋಪದೇಶ ಮಾಡಲು ಬರುವುದಿಲ್ಲ. ಕೃಷ್ಣಾರ್ಜುನರು ತತ್ವೋಪದೇಶದಲ್ಲಿ ನಿರತರಾಗಿರುವಾಗ ಪ್ರತಿಪಕ್ಷದ ಮುಖಂಡ ತನ್ನ ಸೈನಿಕರಿಗೆ, "ನಿಲ್ಲು! ನಿಲ್ಲು! ಅವನು ತತ್ವೋಪದೇಶ ಮಾಡುತ್ತಿದ್ದಾನೆ. ಅದು ಮುಗಿಯಲಿ, ಆಮೇಲೆ ಯುದ್ಧ ಮಾಡೋಣ" ಎನ್ನುತ್ತಾನೆಯೇ? ಅಲ್ಲದೆ ಧರ್ಮ ಯುದ್ಧದ ನೀತಿಯಲ್ಲಿ ತತ್ವೋಪದೇಶಕ್ಕೆ ಕಾಲಾವಕಾಶಕೊಡಬೇಕೆಂಬ ನಿಯಮವಿರುವುದು ತಿಳಿದಿಲ್ಲ.

ಸದ್ಯದ ಪರಿಸ್ಥಿತಿಯಲ್ಲಿ ವೀರಭದ್ರಪ್ಪನವರ ಈ ಕೃತಿಗೆ ವಿಶೇಷವಾದ ಮಹತ್ವವಿದೆ. ಪ್ರಸ್ತುತ ಭಾರತ ಒಂದು ವಿಭಿನ್ನ ಸಾಂಸ್ಕೃತಿಕ ಮಜಲನ್ನು ಪ್ರವೇಶಿಸುತ್ತಿದೆ. ಬುದ್ಧಿ ಪೂರ್ವ ಯುಗದ ಹಿಂದೂ ಧರ್ಮವನ್ನು ನಿರಾಕರಿಸಿ, ಆ ನಂತರ ವೈಚಾರಿಕ ಕ್ರಾಂತಿ ನಡೆಯಿತು. ಮತ್ತೆ ವೈಚಾರಿಕ ಕ್ರಾಂತಿಯನ್ನು ಹತ್ತಿಕ್ಕಿ ಕಟುತರ ಹಿಂದೂ ಧರ್ಮದ ಪುನಃ ಸ್ಥಾಪನೆಗೆ ಗೀತೆ ಬಹುದೊಡ್ಡ ಕೊಡುಗೆ ಕೊಟ್ಟಿತು. (ವೈಚಾರಿಕ ಕ್ರಾಂತಿಯ ವೈಫಲ್ಯಕ್ಕೆ ಕಾರಣವಾದ ಸ್ವದೌರ್ಬಲ್ಯಗಳೇನು ಎನ್ನುವುದು ಕೂಡಾ ಚರ್ಚಾರ್ಹ ವಿಷಯ) ನಂತರ ಪಾಶ್ಚಾತ್ಯ ಪ್ರವೇಶದಿಂದ ಮತ್ತೆ ವೈಚಾರಿಕ ಪ್ರಜ್ಞೆ ಜಾಗೃತವಾಗತೊಡಗಿತು. ಇದೀಗ ರಾಮಜನ್ಮಭೂಮಿ ಪ್ರಸ್ತಾಪದ ಬಳಿಕ ನಮ್ಮ ಹಿಂದೂ ಧರ್ಮದ ಪುನಃ ಸ್ಥಾಪನೆಯ ಪ್ರಯತ್ನ ವೇಗವಾಗಿ ನಡೆಯತೊಡಗಿದೆ. ಖಂಡಿತವಾಗಿಯೂ ಈ ಎಲ್ಲ ವಿಚಾರಗಳಲ್ಲಿ ಸ್ವರೂಪಾತ್ಮಕ ಭಿನ್ನತೆ ಇದೆ. ಆದರೆ ಎಲ್ಲೋ ಒಂದು ಕಡೆ ಒಂದಕ್ಕೊಂದು ಹೋಲಿಕೆಯಾಗುತ್ತದೆ ಎಂಬುದನ್ನು ಗಮನಿಸಬೇಕು.

ವೈಚಾರಿಕ ಕ್ರಾಂತಿಯ ಮಟ್ಟಿಗೆ ಹೇಳುವುದಾದರೆ ಬೌದ್ಧಯುಗ ಮತ್ತು ಬ್ರಿಟಿಷ್ ಚಕ್ರಾಧಿಪತ್ಯ-ಸ್ವಾತಂತ್ರ್ಯಾನಂತರದ ಪ್ರಾರಂಭಿಕ ದಶಕಗಳಲ್ಲಿ (ವೈಚಾರಿಕ ಕ್ರಾಂತಿಯ ಮಟ್ಟಿಗಷ್ಟೇ ಈ ಹೋಲಿಕೆ ಸ್ವೀಕೃತ) ಒಂದು ರೀತಿಯ ಹೋಲಿಕೆ ಇದೆ. ಬೌದ್ಧ ಯುಗದಲ್ಲಿ ಹೇಗೆ ವೈಚಾರಿಕ ಕ್ರಾಂತಿಯನ್ನು ಅಲ್ಲಗಳೆಯುವ ಕಾರ್ಯ ನಡೆಯಿತೋ ಹಾಗೆಯೇ, ಆಧುನಿಕ ಭಾರತದಲ್ಲಿ ಹಿಂದುತ್ವ ಸಿದ್ಧಾಂತ, ದೇಶ ವಿಭಜನೆ, ಗಾಂಧಿ ಹತ್ಯೆಗಳೆಲ್ಲ ಕಂಡು ಬರುತ್ತವೆ. ಗೀತೆ, ಲೇಖಕರು ಅರ್ಥಪೂರ್ಣವಾಗಿ ಕರೆದಿರುವಂತೆ ನವ ಹಿಂದುತ್ವ ಸ್ಥಾಪನೆಗೆ ಹೇಗೆ ಪೋಷಕವಾಯಿತೋ ಆಧುನಿಕ ಭಾರತದಲ್ಲಿ ರಾಮಜನ್ಮಭೂಮಿಯ ಪ್ರಸ್ತಾಪದ ಮೂಲಕ ನವ್ಯ ಹಿಂದುತ್ವವನ್ನು ನೆಲೆಗೊಳಿಸುವ ನಿಚ್ಚಳ ಸೂಚನೆಗಳು ಕಂಡು

ಬರುತ್ತಿವೆ. ಗೀತೆಯ ಮೊದಲ ಹಂತ ರಚನೆಯಾದಂತೆ ರಾಮಜನ್ಮಭೂಮಿ ಪ್ರಸ್ತಾಪ ಉಗ್ರತೆಗಿಳಿಯುವ ಮೊದಲಿನ ಪೂರ್ವಸಿದ್ಧತೆಗಳು ಕಾಣಿಸುತ್ತವೆ. ಅಂದರೆ ಕೃಷ್ಣಾರ್ಜುನರು ಈಗಲೂ ಇದ್ದಾರೆ. ಇಲ್ಲೀಗ ಅರ್ಜುನ ಇಬ್ಭಾಗವಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಕ್ಷತ್ರಿಯ ಅರ್ಜುನನನ್ನು ದಲಿತರಲ್ಲಿ, ಶೂದ್ರರಲ್ಲಿ ಹುಡುಕಲಾಗುತ್ತಿದೆ. ಅವರನ್ನು ನಿಸ್ಸಂಕೋಚವಾಗಿ ಜನಾಂಗೀಯ ನಿರ್ಮೂಲನಾ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಬೌದ್ಧಿಕ ಅರ್ಜುನರು ನಮ್ಮ ನಡುವಿನ ಚಿಂತನಶೀಲರಲ್ಲಿದ್ದಾನೆ. ವ್ಯಕ್ತಿ ಗೌರವಕ್ಕೆ ಕುಂದು ಬರಬಾರದೆಂಬ ಕಾರಣಕ್ಕಾಗಿ ಅವರ ಹೆಸರು ಪ್ರಸ್ತಾಪಿಸುವುದಿಲ್ಲ. ಆದರೆ ಅಂತಹ ವಿಚಾರಶೀಲರನ್ನು ವಾಚಕರು ಸ್ಮರಿಸಿಕೊಳ್ಳಬಹುದು. ಅಂತಹ ವಿಚಾರಶೀಲರು ಅರ್ಜುನನಂತೆ ಗೊಂದಲದಲ್ಲಿ ಮುಳುಗಿರುತ್ತಾರೆ. ಆ ಕುರಿತು ಒಂದು ನಿದರ್ಶನ ಹೇಳಬೇಕು. ಇತ್ತೀಚೆಗೆ ನಮ್ಮ ನಾಡಿನ ಗೌರವಾನ್ವಿತ ಇತಿಹಾಸ ಸಂಶೋಧಕರೊಬ್ಬರು, "ಮುಸ್ಲಿಮರ ಹತ್ಯೆ ನಡೆದಾಗ ಖಂಡಿಸುವ ಜಾತ್ಯಾತೀತರು ಹಿಂದೂಗಳ ಹತ್ಯೆ ನಡೆದಾಗ ಖಂಡಿಸುವುದಿಲ್ಲ" ಎಂದರಷ್ಟೇ ಅಲ್ಲದೆ ಹಿಂದುತ್ವದ ವಕ್ತಾರರಂತೆ ಪತ್ರಿಕಾ ಹೇಳಿಕೆ ಕೊಟ್ಟರು. ಅವರು ಪ್ರಸ್ತಾಪಿಸಿದ ಮೊದಲ ವಿಚಾರ ಔಚಿತ್ಯ ಪೂರ್ಣವಾದುದೇ. ಮುಸ್ಲಿಮರ ಹತ್ಯೆಯನ್ನು ಖಂಡಿಸುವವರು ಹಿಂದೂಗಳ ಹತ್ಯೆಯನ್ನು ಖಂಡಿಸಿಲ್ಲವೆಂದರೆ ಅದು ತಪ್ಪೇ. ಅದನ್ನು ಸರಿ ಎನ್ನುವ ಪ್ರಶ್ನೆ ಇಲ್ಲ. ಹಾಗಂತ ಮುಸ್ಲಿಮರ ಹತ್ಯೆಯನ್ನು ಸಮರ್ಥಿಸಲು ಬರುವುದಿಲ್ಲ ಅಲ್ಲವೇ? ಹಿಂದುತ್ವದ ವಕ್ತಾರರಾಗಿ ಅವರು ಮಾಡಿದ ಕೆಲಸ ಇದೇ ಪ್ರಾಯಶಃ ಅರ್ಜುನನಂತಹ ಗೊಂದಲಮಯ ವಿಚಾರಶೀಲರು ಮಾತ್ರ ಈ ಕಾರ್ಯಕ್ಕೆ ಮುಂದಾಗಬಲ್ಲರು.

ಗೀತೆಯ ಹೊಸ ಅವತಾರ !

ಸೌಜನ್ಯ : ಇಂಡಿಯಾ ಟುಡೇ ಕಲಾವಿದ : ಲಿಜಿತ್ ನಿನನ್



ಒಂದೆಡೆ ಲೇಖಕರು, "ಗೀತಾಚಾರ್ಯ ಅಂತಿಮ ತೀರ್ಮಾನ ಕೊಡುವಲ್ಲಿ ವಿರೋಧಿಗಳು ಅದನ್ನು ಒಪ್ಪಿಕೊಳ್ಳದಿದ್ದರೆ ಘೋರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸುತ್ತಾನೆ. ಬೆದರಿಕೆ ಒಡ್ಡುತ್ತಾನೆ. ಶಪಿಸುವ ಮಟ್ಟಕ್ಕೆ ಇಳಿಯುತ್ತಾನೆ. ದೃಢ ಸಂಕಲ್ಪದ ಆತ್ಮವಿಶ್ವಾದ ಬುದ್ಧಿಜೀವಿಗಳನ್ನು ಧೃತಿಗೆಡಿಸುವುದೇ ಈ ಎಲ್ಲದರ ಉದ್ದೇಶ" (ಪುಟ 99-100) ಎನ್ನುತ್ತಾರೆ.

ಲೇಖಕರ ಈ ಮಾತನ್ನು ಸಮ್ಮತಿಸಲು ಕಷ್ಟವಾಗುತ್ತದೆ. ಗೀತಾಚಾರ್ಯನ ಉದ್ದೇಶ ಅರ್ಜುನನಂಥ ಗೊಂದಲ ಮನಸ್ಥಿತಿಯವರನ್ನು ತನ್ನೆಡೆಗೆ ಸೆಳೆಯುವುದೇ ಹೊರತು ದೃಢಮನಸ್ಕ ವಿಚಾರಶೀಲರನ್ನಲ್ಲ. ಅವರನ್ನು ಹೇಗೆ ಮಾಡಿದರೂ ತನ್ನೆಡೆಗೆ ಸೆಳೆಯಲಾಗುವುದಿಲ್ಲವಲ್ಲ ಎನ್ನುವ ಅಸಹಾಯಕತೆಯಲ್ಲಿ ಮೂಡಿ ಬರುವ ಆಕ್ರೋಶದಿಂದ ಆತ ತನ್ನ ವಿರೋಧಿಗಳನ್ನು ಶಪಿಸುತ್ತಾನೆ ಅಷ್ಟೇ. ಅದೇ ಪರಿಪಾಠ ಈಗಲೂ ಇದೆ. ರೋಮಿಲಾಥಾಪರ್, ಆರ್.ಎಸ್. ಶರ್ಮಾರಂಥ ಇತಿಹಾಸಕಾರರನ್ನು ನಮ್ಮ ಮಾನವ ಸಂಪನ್ಮೂಲ ಸಚಿವರು ಬೌದ್ಧಿಕ ಭಯೋತ್ಪಾದಕರೆಂದು ಕರೆದಿಲ್ಲವೇ? ಬುದ್ಧಿ ಜೀವಿಗಳನ್ನು ಸಮುದ್ರಕ್ಕೆ ಎಸೆಯಬೇಕು ಎಂದಿಲ್ಲವೇ? ಹಾಗೆಯೇ ಗೀತಾಚಾರ್ಯನ ಸಹಜ ಆಕ್ರೋಶ ಹೀಗೆ ಹೇಳಿಸಿದೆ ಅಷ್ಟೇ. ಮೇಲ್ಕಾಣಿಸಿದ ಇತಿಹಾಸಕಾರನನ್ನು ಬೌದ್ಧಿಕ ಭಯೋತ್ಪಾದಕರೆಂದಾಕ್ಷಣ ಅವರೇನೂ ಧೃತಿಗೆಟ್ಟಿಲ್ಲ. ಅವರು ಧೃತಿಗೆಡುವುದಿಲ್ಲ ವೆನ್ನುವುದು ಮಾನವ ಸಂಪನ್ಮೂಲ ಸಚಿವರಿಗೂ ಗೊತ್ತಿದೆ. ಅದೇ ರೀತಿ ತನ್ನ ಮಾತುಗಳಿಂದ ದೃಢ ಮನಸ್ಕರು ಧೃತಿಗೆಡುವುದಿಲ್ಲವೆಂದು ಚತುರನಾದ ಗೀತಾಚಾರ್ಯನಿಗೂ ತಿಳಿದಿರುವಂಥದೇ. ಆದರೆ ಅಂಥವರ ಚಾರಿತ್ರ್ಯಹರಣ ಮಾಡುವುದಕ್ಕಾಗಿ, ಯೋಚಿಸುವ ಶಕ್ತಿ ಇಲ್ಲದವರನ್ನು ಸದಾ ದಾಸ್ಯದಲ್ಲಿಡುವುದಕ್ಕಾಗಿ, ಗೊಂದಲದಲ್ಲಿರುವವರನ್ನು ತಮ್ಮೆಡೆಗೆ ಸೆಳೆದುಕೊಳ್ಳುವುದಕ್ಕಾಗಿ ಇಂತಹ ಮಾತುಗಳು ಬರುತ್ತವೆ. ಇಂಥಲ್ಲಿ ಪ್ರಸ್ತುತ ಕೃತಿ ದೃಢ ಮನಸ್ಕ ವಿಚಾರಶೀಲ ಲೇಖನದ ದಿಟ್ಟ ಹೆಜ್ಜೆಯ ಸಂಕೇತವಾಗಿ ನಿಲ್ಲುತ್ತವೆ ಎನ್ನುವಲ್ಲಿ ಸಂಶಯವಿಲ್ಲ.

ನಿಷ್ಕಾಮ ಕರ್ಮ ಮಾಡಬೇಕೆಂದು ಗೀತಾಚಾರ್ಯ ಉಪದೇಶಿಸಿದ್ದು ವೇತನ ಕೇಳುವುದನ್ನು ನಿಷೇಧಿಸುತ್ತಾನೆ ಮತ್ತು ಕೆಲಸ ಮಾಡದೆ ಇರುವುದನ್ನು ನಿಷೇಧಿಸುತ್ತಾನೆ ಎಂದಿರುವುದರ ಉದ್ದೇಶ, ಮೇಲು ವರ್ಗ ನಿರಂತರವಾಗಿ ಕೆಳವರ್ಗದ ಸೇವೆಯನ್ನು ಅನುಭವಿಸುತ್ತಾ ಸುಖದಿಂದ ಬಾಳುವುದು ಎಂದು ಲೇಖಕರು ಗುರುತಿಸಿದ್ದಾರೆ. ಇಂದಿನ ಗೀತಾಚಾರ್ಯರಿಗೆ ಕೆಳವರ್ಗದ ಸೇವೆ ಮುಖ್ಯ ವಸ್ತುವೇನಲ್ಲ. ಏಕೆಂದರೆ ಯಂತ್ರಗಳಿವೆ. ಆದರೆ ಇರುವ ಮಾನವ ಶಕ್ತಿಗೆ ಏನಾದರೂ ದಾರಿ ತೋರಿಸದಿದ್ದರೆ ಅವರ ಕಷ್ಟ ಕಾರ್ಪಣ್ಯಗಳಿಗಾಗಿ ಬಂಡೆದ್ದು ತಮ್ಮ ಅಧಿಕಾರಕ್ಕೆ ಸಂಚಕಾರ ತರುತ್ತಾರೆಂದು ಗೊತ್ತಿದೆ. ಅದಕ್ಕಾಗಿ ಹಿಂದುತ್ವದ (ಅದು ಜಾಗತಿಕ ಇಸ್ಲಾಮೀಕರಣವೂ ಆಗಬಹುದು) ನಿಷ್ಕಾಮಕರ್ಮವನ್ನು ಬೋಧಿಸುತ್ತಿದ್ದಾರೆ.

ಲೇಖಕರು ಗುರುತಿಸಿರುವಂತೆ ಅರ್ಜುನನ ನೇರ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡದ ಗೀತಾಚಾರ್ಯ ಇನ್ನೊಂದು ನೆಲೆಗೆ ಜಿಗಿಯುತ್ತಾನೆ. ಬೆನ್ನುಡಿಯಲ್ಲಿ ಡಾ|| ಜಿ. ರಾಮಕೃಷ್ಣ ಅವರು ಹೇಳಿರುವಂತೆ, "ನಮ್ಮವರನ್ನೆಲ್ಲ ಕೊಲ್ಲುವುದು ಸರಿಯೇ? ಎಂಬ ಪ್ರಶ್ನೆಗೆ ಕೊಲ್ಲುವುದು ಕೊಲ್ಲಿಸಿಕೊಳ್ಳುವುದು ಎಂಬುದೆಲ್ಲ ಭ್ರಮೆ" ಎನ್ನುವ ಉತ್ತರ ಗೀತಾಚಾರ್ಯನದು. ಲೇಖಕರು ಈ ವಿಷಯವನ್ನು ವಿಸ್ತೃತ ಚರ್ಚೆಯಲ್ಲಿ ಹಿಡಿದಿಟ್ಟಿದ್ದಾರೆ. ಇಂದಿನ ಗೀತಾಚಾರ್ಯರು ಇದಕ್ಕೆ ಬಂದು ದೂರದವರೇನಲ್ಲ. ನಿರುದ್ಯೋಗ, ಬಡತನ, ಕೊಳಚೆ ವಾಸ, ಸ್ವಾತಂತ್ರ್ಯಹರಣ, ದಬ್ಬಾಳಿಕೆ, ಜಾಗತೀಕರಣದಿಂದಾಗುವ ನೋವುಗಳಿಗೆಲ್ಲ ಏನು ಪರಿಹಾರ ಎಂದರೆ, ಹಿಂದುತ್ವವೇ ಮುಖ್ಯವಾದ್ದರಿಂದ ಈ ಪ್ರಶ್ನೆಗಳೆಲ್ಲ ಅಪ್ರಸ್ತುತ ಎಂದು ಉತ್ತರಿಸಿದರೆ ಹೇಗೆ? ಹೀಗೆ ಉತ್ತರಿಸುತ್ತಿಲ್ಲ. ಆದರೆ ಧ್ವನಿ ಪೂರ್ಣ ಉತ್ತರ ಇದೇ. ಗೀತೆಯಲ್ಲಿ ಸರ್ವಾಧಿಕಾರಿ ಮನೋಭಾವ ಹೇಗೆ ಕಾಣಿಸಿಕೊಂಡಿದೆ ಎನ್ನುತ್ತಾರೆ ಲೇಖಕರು. ಅಲ್ಲಿ ನವ ವೈದಿಕ ಸಿದ್ಧಾಂತದಲ್ಲಿ ಸರ್ವಾಧಿಕಾರ ಬಲಗೊಂಡಿರುವಂತೆ ಈಗಿನ ನವ್ಯ ಹಿಂದೂ ವಾದದಲ್ಲೂ ಸರ್ವಾಧಿಕಾರಿ ಧೋರಣೆ ಸ್ಪಷ್ಟವಾಗಿ ಇದೆ. ತಮ್ಮ ಅಭಿಪ್ರಾಯವನ್ನು ಒಪ್ಪದವರೆಲ್ಲ ದೇಶಾಭಿಮಾನ ಇಲ್ಲದವರು ಎಂಬ ಸಿದ್ಧಾಂತ ಇಂದಿನದು. ಗೀತಾಚಾರ್ಯ ಸಂಪೂರ್ಣ ಶರಣಾಗತಿ ಬಯಸುತ್ತಾನೆ, ವಿಶ್ವರೂಪ ದರ್ಶನಕ್ಕೆ ಅರ್ಜುನನ ಈ ಕಣ್ಣಿನಿಂದ ನೋಡಲಾರೆ ದಿವ್ಯ ಚಕ್ಷು ಕೊಡುತ್ತೇನೆ ಎನ್ನುವ ಗೀತಾಚಾರ್ಯ ಅರ್ಜುನನ ವಿಮರ್ಶಾ ಕಣ್ಣನ್ನು, ಪ್ರಶ್ನಾ ಮನೋಭಾವವನ್ನು ಕಿತ್ತೆಸೆದು ಮುಗ್ಧ ಕಣ್ಣು ಕೊಟ್ಟಿದ್ದಾನೆ ಎಂದು ವ್ಯಾಖ್ಯಾನಿಸುವ ಲೇಖಕರು ಸಮಂಜಸವಾಗಿ ಹೇಳಿದ್ದಾರೆ. ಸರ್ವಾಧಿಕಾರಿಗಳ ರೀತಿಯೇ ಹೀಗೆ. ಬಲಾಢ್ಯರಾದ ಮುಗ್ಧರು, ಪ್ರಶ್ನಿಸದವರು, ಸಂದೇಹ ಇಲ್ಲದೆ ಆಜ್ಞೆ ಪಾಲಿಸುವವರು ಅವರಿಗೆ ಬೇಕು. ಕೃಷ್ಣ ದಿವ್ಯ ಜ್ಞಾನ, ಮುಕ್ತಿಯ ಪ್ರಲೋಭನೆ ಒಡ್ಡಿದಂತೆ ಇಂದಿನ ಜನತಾಂತ್ರಿಕ ಸರ್ವಾಧಿಕಾರಿಗಳು ಹಿಂದುತ್ವದ, ನಂಬಿಕೆಯ ಅಮೂರ್ತ ಪ್ರಲೋಭನೆ ಒಡ್ಡುತ್ತಿದ್ದಾರೆ. ಕೃಷ್ಣನ ಪ್ರಲೋಭನೆ ಅರ್ಜುನನ ಮಾನವೀಯ, ಸುಸಂಸ್ಕೃತ ನಡವಳಿಕೆಯನ್ನು ಕಿತ್ತು ಹಾಕಿ ರಕ್ತಪಾತಕ್ಕೆ ನಾಂದಿಹಾಡಿದಂತೆ ಹಿಂದುತ್ವದ ಪ್ರಲೋಭವೆ ಮತ್ತೊಂದು ರಕ್ತಪಾತಕ್ಕೆ ಕರೆ ಕೊಡುತ್ತಿರುವಂತಿದೆ. ಇಂತಹ ಸಂಕೀರ್ಣ ಕಾಲ ಘಟ್ಟದಲ್ಲಿ ವೀರಭದ್ರಪ್ಪನವರ ಕೃತಿ ಮಹತ್ವವಾದುದನ್ನೇನೋ ಸೂಚಿಸುತ್ತದೆಯಲ್ಲವೇ? ನವ್ಯ ಮಹಾಭಾರತ ನಡೆದೀತೇ? ನಡೆಯದಿರಲೆಂದು ಹಾರೈಸಬಹುದು. ಆದರೆ ಕಾಲಮಾನದ

(33ನೇ ಪುಟಕ್ಕೆ)

ವಾಸ್ತವ

'ನ್ಯಾಷನಲ್ ಜಿಯೋಗ್ರಫಿಕ್' ಕಂಡ
ಭಾರತದ ಅಸ್ಪೃಶ್ಯರು



> ಭಾರತ ಮತ್ತೆ ಮತ್ತೆ ನಾಗರೀಕ ವಿಶ್ವದೆದುರು ನಾಚಿ ತಲೆ ತಗ್ಗಿಸುವುದು ನಡೆಯುತ್ತಲೇ ಇದೆ. ಅದಕ್ಕೆ ಕಾರಣ ಬೇರೇನೂ ಅಲ್ಲ ಶತಮಾನಗಳಿಂದ ತಾನು ನಿರಂತರವಾಗಿ ಪೋಷಿಸಿಕೊಂಡು ಬಂದ ಲಿಂಗ, ಜಾತಿ ಮತ್ತು ಧರ್ಮಾಧಾರಿತ ತಾರತಮ್ಯಗಳಿಂದಾಗಿ.
>
> ಈ ತಾರತಮ್ಯದಿಂದಾಗಿ ದೇಶದೆಲ್ಲೆಡೆ ನಿತ್ಯ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಹೇರಲಾಗುತ್ತಿರುವ ಅಮಾನುಷ ಪದ್ಧತಿಗಳನ್ನು ವರದಿ ಮಾಡುವಲ್ಲಿ ಜಾಣ ಕುರುಡು ಪ್ರದರ್ಶಿಸುವ ಪತ್ರಿಕೋದ್ಯಮದೆದುರು, ನ್ಯಾಷನಲ್ ಜಿಯಾಗ್ರಫಿಕ್‌ನಂತಹ ಅಂತರರಾಷ್ಟ್ರೀಯ ಇಂಗ್ಲೀಷ್ ನಿಯತಕಾಲಿಕವೊಂದು ಮಹಾನ್ ಭಾರತೀಯ ಮಾನವಂತರ ಮೂಗಿನಡಿಯಲ್ಲೇ ಜೀವಂತ ಇರುವ ಅಸ್ಪೃಶ್ಯತೆ ಕುರಿತು ಇತ್ತೀಚೆಗೆ ಸಚಿತ್ರ ವರದಿ ಮಾಡಿದೆ.
>
> ○ ಡಾ|| ನಟರಾಜ್ ಹುಳಿಯಾರ್

'ನ್ಯಾಷನಲ್ ಜಿಯೋಗ್ರಫಿಕ್' ಎಂಬ ಪ್ರಭಾವಶಾಲಿ ಇಂಗ್ಲಿಷ್ ಮಾಸಪತ್ರಿಕೆಯನ್ನು ನೀವು ಗಮನಿಸಿರಬಹುದು. ಪ್ರಧಾನವಾಗಿ ಫೋಟೋ-ಬರಹಗಳ ಮೂಲಕವೇ ಓದುಗರನ್ನು ತಲುಪುವ ಈ ಅಂತರರಾಷ್ಟ್ರೀಯ ಪತ್ರಿಕೆ ತನ್ನ ಜೂನ್ 2003ರ ಸಂಚಿಕೆಯಲ್ಲಿ ಭಾರತದ ಅಸ್ಪೃಶ್ಯರು (India's Untouchables) ಎಂಬ ಮುಖಪುಟ ಲೇಖನ ಪ್ರಕಟಿಸಿರುವುದು ಭಾರತದ ಹಿರಿಮೆಯ ಬಗ್ಗೆ ಕಡಲಿನಾಚೆ ಶಂಖ ಬಾರಿಸುವ ಹಿಂದೂವಾದಿಗಳಿಗೆ ಒಂದು ಗಳಿಗೆಯಾದರೂ ಇರಿಸು ಮುರಿಸುಂಟುಮಾಡಿರಬಹುದು; ಇಪ್ಪತ್ತೊಂದನೆಯ ಶತಮಾನದಲ್ಲೂ ಭಾರತ ಇಷ್ಟು ಬರ್ಬರವಾಗಿರುವುದನ್ನು ಕಂಡು ವಿದೇಶೀಯರು ದಂಗಾಗಿರಬಹುದು. ಈ ಚಿತ್ರ-ಲೇಖನ ಪ್ರಕಟಿಸುತ್ತಾ 'ಜಿಯೋಗ್ರಫಿಕ್'ನ ಸಂಪಾದಕ, 'ಅಮೆರಿಕಾದ ಕಪ್ಪು ಜನರ ದಾರುಣ ಸ್ಥಿತಿಯನ್ನು ಹಾಗೂ ಅದಕ್ಕೆ ಕಾರಣವಾದ ಬಿಳಿಯರ ಪೂರ್ವಗ್ರಹವನ್ನು ಒಂದು ಕಾಲಕ್ಕೆ ಬಿಂಬಿಸಿದ ಫೋಟೋಗಳು ಕಪ್ಪು ಜನರ ನಾಗರಿಕ ಹಕ್ಕುಗಳ ಚಳವಳಿಗೆ ನೆರವಾದುದನ್ನು ನೆನಪಿಸಿಕೊಳ್ಳುತ್ತಾನೆ. ಅಂಥ ಆತ್ಮಸಾಕ್ಷಿ ಭಾರತಕ್ಕಿದೆಯೇ ಎಂಬ ಪ್ರಶ್ನೆಯೊಂದಿಗೇ ಈ ಲೇಖನವನ್ನು ಪ್ರವೇಶಿಸಬಹುದು.

'ನ್ಯಾಷನಲ್ ಜಿಯೋಗ್ರಫಿಕ್'ನ ವರದಿಗಾರ ಟಾಮ್ ಓನೀಲ್ ಹಾಗೂ ಫೋಟೋಗ್ರಾಫರ್ ವಿಲಿಯಂ ಅಲರ್ಡ್ ರೂಪಿಸಿರುವ ಈ ಚಿತ್ರ-ಲೇಖನದ ಆರಂಭದಲ್ಲಿ ಎರಡೂ ಕಾಲು ಕತ್ತರಿಸಲಾದ ದಲಿತ ಯುವಕನ ಚಿತ್ರವಿದೆ. ಹಿಂದೂಶಾಸ್ತ್ರಗಳೇ ಅಸ್ಪೃಶ್ಯತೆಯ ಮೂಲ ಎಂಬ ನಿಲುವಿನೊಂದಿಗೇ ಈ ಬರಹ ಶುರುವಾಗುತ್ತದೆ. ಭಾರತದ ಈ ಅಡ್ಡಾಟದಲ್ಲಿ ವರದಿಗಾರ ಟಾಮ್‌ಗೆ ಮೊದಲು ಸಿಕ್ಕವನು ರಾಜಸ್ತಾನದ ಕಾರ್ಖಡಾ ಎಂಬ ಹಳ್ಳಿಯ ಗಿರಿಧಾರಿಲಾಲ್ ಮೌರ್ಯ. ಗಿರಿಧಾರಿಲಾಲ್ ತನ್ನ ಹಳ್ಳಿಯ ಆಚೆ ಪುಟ್ಟ ನೆಲ ಕೊಂಡ. ಹಳ್ಳಿಯ ಬಾವಿಯ ನೀರು ತಮಗೂ ಬೇಕೆಂದು ಪೊಲೀಸರ ಬಳಿ, ಅಧಿಕಾರಿಗಳ ಬಳಿ ಹೋದ. ಅವತ್ತು ರಾತ್ರಿ ಮೌರ್ಯ ಪೇಟೆಗೆ ಹೋಗಿದ್ದಾಗ ಎಂಟು ಜನ ರಜಪೂತರು ಅವನ ಮನೆಯ ಬೇಲಿ ಕಿತ್ತರು, ಟ್ರ್ಯಾಕ್ಟರು ಕದ್ದರು; ಹೆಂಡತಿ, ಮಗಳನ್ನು ಬಡಿದು ಅವರ ಮನೆ ಸುಟ್ಟರು. ಅವತ್ತು ಊರುಬಿಟ್ಟ ಮೌರ್ಯ ಎರಡು ವರ್ಷಗಳಾದ ಮೇಲೆ ಊರಿಗೆ ಮರಳಿದ್ದಾನೆ. ಅದೂ ನಾಗರಿಕ ಹಕ್ಕುಗಳ ಲಾಯರು ಕೇಸು ತೆಗೆದುಕೊಂಡ ಮೇಲೆ, ಅವನ ಮನೆ ಸುಟ್ಟವರು ಆರಾಮಾಗಿ ಓಡಾಡುತ್ತಲೇ ಇದ್ದಾರೆ. ಕೇಸು ಎಳೆಯುತ್ತಲೇ ಇದೆ. ಆದರೂ ಈಗ ದಲಿತರಿಗೆ ಕೊಳವೆ ಬಾವಿಯ ನೀರು ಸಿಕ್ಕಿದೆ. ಮಗ ಕಾಲೇಜಿಗೆ ಹೋಗುತ್ತಾನೆ. ಇವೆಲ್ಲ ಗಿರಿಧರನಲ್ಲಿ ಸ್ವಲ್ಪವಾದರೂ ಭರವಸೆ ಮೂಡಿಸಿವೆ. ಆದರೂ 'ಯಾಕಾದರೂ ನನ್ನನ್ನು ದೇವರು ಈ ನೆಲದಲ್ಲಿ ಹುಟ್ಟಿಸಿದನೋ?' ಎಂಬ ಅವನ ನೋವು ಹಾಗೂ ಸಿಟ್ಟು ಅಷ್ಟು ಸುಲಭವಾಗಿ ಮಾಯವಾಗುವಂಥದ್ದಲ್ಲ.

ಹೀಗೆ ಇಂಡಿಯಾವನ್ನು ನೋಡನೋಡುತ್ತಾ ವರದಿಗಾರ ಟಾಮ್‌ಗೆ ಇಲ್ಲಿನ ಧರ್ಮ, ಜಾತಿಗಳ ಪೆಡಸು ಲೋಕದ ಮೇಲು ಪದರವಾದರೂ ತಿಳಿಯುತ್ತಾ ಹೋಗುತ್ತದೆ. ಬಿಳಿಯರು ಕರಿಯರನ್ನು ದ್ವೇಷಿಸಲು ಇದ್ದಿರಬಹುದಾದ ಬಣ್ಣದ ಕಾರಣವೂ ಇಲ್ಲಿರಲಿಲ್ಲ. ಇಲ್ಲಿನ ಅಸ್ಪೃಶ್ಯರಿಗೂ ಇತರ ಭಾರತೀಯರಿಗೂ ಚರ್ಮದ ಬಣ್ಣದಲ್ಲಿ ಕೂಡ ವ್ಯತ್ಯಾಸವಿಲ್ಲ. ಹೀಗಿದ್ದೂ ಈ ಅಸ್ಪೃಶ್ಯತೆಯ ಆಚರಣೆ ಶತಮಾನಗಳಿಂದ ನಡೆಯುತ್ತಿರುವುದು ವಿಚಿತ್ರವೆಂದು ಟಾಮ್‌ಗೆ ಅನಿಸಿದ್ದರೆ ಆಶ್ಚರ್ಯವಿಲ್ಲ. ಆದರೆ ಇಂಡಿಯಾದಲ್ಲಿ ಮೈಬಣ್ಣದಿಂದ ಜಾತಿಯನ್ನು ಗುರುತಿಸುವುದು ಕಷ್ಟವಾದರೂ, ಇಲ್ಲಿ ಜಾತಿಯನ್ನು ಬಚ್ಚಿಡುವುದು ಯಾಕೆ ಕಷ್ಟ ಎಂಬುದನ್ನು ಜವಹರಲಾಲ್‌ನೆಹರೂ ವಿಶ್ವವಿದ್ಯಾಲಯದ ಅಧ್ಯಾಪಕ ಸುಖದೇವ್ ಥೋರಟ್ ಟಾಮ್‌ಗೆ ಮನವರಿಕೆ ಮಾಡಿಕೊಡುತ್ತಾನೆ: 'ಹಿಂದೂಗಳು ಇನ್ನೊಬ್ಬನ ಸಾಮಾಜಿಕ ಹಿನ್ನೆಲೆಯನ್ನು (ಅಂದರೆ ಜಾತಿಯನ್ನು) ತಿಳಿಯದೆ ಸಂಬಂಧ ಬೆಳೆಸಲು ಹಿಂಜರಿಯುತ್ತಾರೆ; ಒಂದೆರಡು ತಿಂಗಳಲ್ಲೇ ಹೇಗೋ ಜಾತಿ ಗೊತ್ತಾಗಿಯೇ ಬಿಡುತ್ತದೆ. ಮನೆತನದ ಹೆಸರು, ಹಳ್ಳಿಯ ವಿಳಾಸ, ದೈಹಿಕ ವರ್ತನೆ....ಹೀಗೆ ಯಾವುದಾದರೊಂದು ಕುರುಹು ಸಿಕ್ಕೇ ಬಿಡುತ್ತದೆ'

ಹಿಂದೂ ಶಾಸ್ತ್ರಗಳು ಯಾವುವು ಯಾವುವನ್ನು 'ಅಪವಿತ್ರ'ವಾದ ಕೆಲಸಗಳೆಂದು ಕರೆಯುತ್ತದೋ ಅವನ್ನೆಲ್ಲಾ ಅಸ್ಪೃಶ್ಯರು ಮಾಡಲೇಬೇಕಾಗಿರುವುದನ್ನು ನೋಡುವ ಟಾಮ್‌ಗೆ, ಜಮೀನ್ದಾರರ ಹೊಲಗದ್ದೆಗಳಲ್ಲಿ 'ಶುದ್ಧ' ಕೆಲಸ ಮಾಡುವ ಅಸ್ಪೃಶ್ಯರನ್ನೂ 'ಅಶುದ್ಧ'ರೆಂದೇ ಕಾಣುವುದು ಯಾಕೆಂದು ಅರ್ಥವಾಗುವುದಿಲ್ಲ. ಮೇಲು ನೋಟಕ್ಕೆ ಸ್ವತಂತ್ರವಾಗಿ ಕಾಣುವ ಈ ಸಮಾಜ ಭೇದ ಭಾವ ಅನ್ನುವುದು ಇರದಿದ್ದರೆ ರಥ ನಡೆಯುವುದಿಲ್ಲ ಎಂಬ ಸ್ಥಿತಿ ತಲುಪಿಬಿಟ್ಟಿರುವುದನ್ನೂ, ಇಲ್ಲಿ ಅಸ್ಪೃಶ್ಯರು ಸಮಾಜದ ಕಟ್ಟ ಕಡೆಯ ಸ್ತರದಲ್ಲಿ ಸಿಕ್ಕುಬಿದ್ದಿರುವುದನ್ನೂ ಅರಿಯುವ ಟಾಮ್‌ಗೆ, ಭಾರತದ ಅಸ್ಪೃಶ್ಯರು ಈ ಸ್ಥಿತಿಯಿಂದ ಹೊರಬರಲು ನಡೆಸಿದ ಹೋರಾಟಗಳ ಘಟ್ಟಗಳು, ಅವರಿಗೆ ನೆರವಾದ ಸರ್ಕಾರಿ ಕಾರ್ಯಕ್ರಮಗಳು ಸ್ಥೂಲವಾಗಿ ಪರಿಚಯವಾಗತೊಡಗುತ್ತವೆ. 1950ರಲ್ಲಿ ಅಸ್ಪೃಶ್ಯರ ಅಂದಿನ ಜನಸಂಖ್ಯೆಗೆ ಅನುಗುಣವಾಗಿ ಶೇಕಡ ಹದಿನೈದರ ಮೀಸಲಾತಿಯನ್ನು ಜಾರಿಗೆ ತಂದ ಮೇಲೆ ಕೂಡ 1981ರಲ್ಲಿ ಗುಜರಾತಿನಲ್ಲಿ ಅಸ್ಪೃಶ್ಯ ಹುಡುಗನೊಬ್ಬನಿಗೆ ಮೆಡಿಕಲ್ ಸೀಟು ನೀಡಿದ್ದರಿಂದ (ಮೇಲುಜಾತಿಯ ಹುಡುಗನೊಬ್ಬನಿಗೆ ಆ ಸೀಟ್ ಸಿಕ್ಕದೇ ಹೋಗಿದ್ದರಿಂದ) ಸುಮಾರು 78 ದಿನಗಳ ಕಾಲ ನಿರಂತರವಾಗಿ ಗುಂಪು ಘರ್ಷಣೆಗಳು ನಡೆದ ವಿವರಗಳನ್ನೂ ಟಾಮ್ ಕಲೆ ಹಾಕುತ್ತಾನೆ.

ಸಾಫ್ಟ್‌ವೇರ್ ಉದ್ಯಮ, ಸೆಟಲೈಟುಗಳು, ನ್ಯೂಕ್ಲಿಯರ್ ಬಾಂಬುಗಳು ಎಲ್ಲ ಇಲ್ಲಿವೆಯೆಂದು ಬಡಾಯಿಕೊಚ್ಚುವ ಈ 'ಅಭಿವೃದ್ಧಿ ಶೀಲ' 'ಮಾದರಿ' ರಾಷ್ಟ್ರದಲ್ಲಿ ಹದಿನಾರು ಕೋಟಿ ಅಸ್ಪೃಶ್ಯರಿದ್ದಾರೆ ಎಂಬ ಅಂಕಿ-ಅಂಶ ಟಾಮ್‌ನನ್ನು ದಂಗುಬಡಿಸುತ್ತದೆ. ಕಳೆದ ಚಳಿಗಾಲದಲ್ಲಿ ಟಾಮ್ ಇಂಡಿಯಾದಲ್ಲಿದ್ದ. ಆಗಂತೂ, ಅಸ್ಪೃಶ್ಯ ಹುಡುಗನ ಮುಖದ ಮೇಲೆ ಆಸಿಡ್ ಎಸೆದ ಘಟನೆ ಅಥವಾ ಗಂಡನ ಮುಂದೆಯೇ ಹೆಂಡತಿಯ ಮೇಲೆ ಅತ್ಯಾಚಾರವೆಸಿಗಿದ ಘಟನೆ ಅಥ'ವಾ ಇಂಥ' ಯಾವುದಾದರೊಂದು ಘಟನೆಯಿಲ್ಲದ ಒಂದು ದಿನವೂ ಇರಲಿಲ್ಲ ಎಂದು ಟಾಮ್ ಬರೆಯುತ್ತಾನೆ.

ಇಂಥ ಹಿಂಸಾಮಯ ಇಂಡಿಯಾದ 'ಪವಿತ್ರ' ಸ್ಥಳವಾದ ಕಾಶಿಯಲ್ಲಿ ಸಿಕ್ಕಿದ ಬ್ರಾಹ್ಮಣ ಪೂಜಾರಿ ತ್ರಿಪಾಠಿ ಹೆಮ್ಮೆಯಿಂದ ಟಾಮ್‌ಗೆ ಹೇಳುತ್ತಾನೆ: 'ಒಬ್ಬೊಬ್ಬ ಹಿಂದೂವಿನ ಒಳಗೂ ಮನು ಕೆತ್ತಲ್ಪಟ್ಟಿದ್ದಾನೆ...ನಿಜವಾದ ಬ್ರಾಹ್ಮಣನೊಬ್ಬ ಎಂದೂ ಅಸ್ಪೃಶ್ಯನ ಸಂಪರ್ಕಕ್ಕೆ ಬರಕೂಡದು. ಅಷ್ಟೇ ಯಾಕೆ, ಗಾಂಧಿಯ ಪಾದವನ್ನು ಕೂಡ ನಿಜವಾದ ಬ್ರಾಹ್ಮಣನೊಬ್ಬ ಸ್ಪರ್ಶಿಸುತ್ತಿರಲಿಲ್ಲ. ಯಾಕೆಂದರೆ ಗಾಂಧಿ ವೈಶ್ಯ; ಬ್ರಾಹ್ಮಣರು ವೈಶ್ಯರಿಗಿಂತ ದೊಡ್ಡವರು'.

ಇಂಥ 'ಶುದ್ಧ' ಬ್ರಾಹ್ಮಣ ತ್ರಿಪಾಠಿಯ ಕಾಶಿಯಲ್ಲಿ ಹೆಣ ಸುಡುವ ದೋಮ್ ಸಮುದಾಯವೊಂದು ಟಾಮ್‌ನ ಕಣ್ಣಿಗೆ ಬೀಳುತ್ತದೆ. ಬೇರೆಡೆಯಿಂದ 'ಪವಿತ್ರ'ಗಂಗೆಯಲ್ಲಿ ತೇಲಿ ಬಿಡಲು ತಂದ ಹೆಣಗಳನ್ನು ಸುಡುವವರು ಈ ದೋಮ್‌ಗಳು. ಅದೃಷ್ಟವಿದ್ದರೆ ಬೂದಿ ಆರಿದ ಮೇಲೆ ಒಂದು ಚಿನ್ನದ ಹಲ್ಲೋ, ಮೂಗು ನತ್ತೋ ಸಿಗುತ್ತದೆಂದು ಕಾಯುವ ದೋಮ್‌ಗಳು ಚಕಚಕನೆ ಹೆಣ ಇಳಿಸುವ, ಸುಡುವ ಕೆಲಸ ಮಾಡುವುದನ್ನು ಟಾಮ್ ದಾಖಲಿಸುತ್ತಾ ಹೋಗುತ್ತಾನೆ.

ಇವೆಲ್ಲಕ್ಕಿಂತ ಟಾಮ್‌ಗೆ ಭಯಾನಕವಾಗಿ ಕಾಣುವುದು ಶ್ರೇಣಿಯಲ್ಲಿ ದೋಮ್ ಜನರಿಗಿಂತ ಕೆಳಗಿರುವ ಮಲ ಹೊರುವ ಭಂಗಿಗಳು, ಪಾಖಿಗಳು, ಸಿಕ್ಕಲಿಯಾರ್‌ಗಳು. ಭಾರತದ ಎಲ್ಲ ರಾಜ್ಯಗಳೂ ಈ ಮಲ ತೆಗೆಯುವ, ಮಲ ಹೊರುವ ಪದ್ಧತಿಯನ್ನು ನಿಷೇಧಿಸಿವೆಯಾದರೂ ಮುನಿಸಿಪಾಲಿಟಿಗಳು ಅಸ್ಪೃಶ್ಯ ಜಾತಿಗಳ ಜನರನ್ನು ಮಲ ಹೊರುವ ಕೆಲಸಕ್ಕಾಗಿ ನೇಮಿಸಿಕೊಳ್ಳುತ್ತಲೇ ಇವೆ. ಉಳಿದ ಅಸ್ಪೃಶ್ಯರು ಇವರು ಮಾಡಿದ ಅಡಿಗೆ ಉಣ್ಣುವುದಿಲ್ಲ; ಅವರ ಕೈಯಿನ ನೀರು ಕುಡಿಯುವುದಿಲ್ಲ. ಅಹಮದಾಬಾದ್‌ನಲ್ಲೇ ಇಂಥ 10,000 ಜನ ಭಂಗಿಗಳಿದ್ದಾರೆ. ಒಂದು ಬೆಳಗ್ಗೆ ಅಹಮದಾಬಾದ್ ನಗರದಲ್ಲಿ ಇಂಥ ಭಂಗಿಗಳ ಒಂದು ಗುಂಪನ್ನು ಟಾಮ್ ಫಾಲೋ ಮಾಡುತ್ತಾನೆ. ಟಾಮ್ ನೋಡ ನೋಡುತ್ತಿರುವಂತೆಯೇ ದಿನೇಶ್ ಪರ್ಮಾರ್ ಎಂಬ ಭಂಗಿ ಮ್ಯಾನ್‌ಹೋಲ್ ಒಳಗೆ ಇಳಿಯುವಾಗ ಎಲ್ಲ ಮನುಷ್ಯರಂತೆ ಒಂದು ಗಳಿಗೆ ಹೇಸಿಕೊಂಡರೂ, ಥಟ್ಟನೆ ಅದರೊಳಕ್ಕಿಳಿಯುತ್ತಾನೆ. ಕೈಕ ವಚ್ರಗಳಾಗಲೀ, ಮುಖಕ್ಕೆ ಗ್ಯಾಸ್ ಮುಖವಾಡಗಳಾಗಲೀ ಇಲ್ಲದೆ ಕೆಲಸ ಮಾಡುವ ದಿನೇಶ್ ಒಂದು ಬಕೆಟ್‌ನ ನಂತರ ಇನ್ನೊಂದು ಬಕೆಟ್

ತಂತ್ರಜ್ಞಾನದಲ್ಲಿ ಇನ್ನಿಲ್ಲದ ಯಶಸ್ಸು ಕಾಣುತ್ತಿರುವ ಭಾರತದ ಅಸ್ಪೃಶ್ಯರು ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ಅತ್ಯಂತ ಅನೈರ್ಮಲ್ಯ ವಾತಾವರಣದಲ್ಲಿ ಚರ್ಮ ಹದ ಮಾಡುವುದು ತಪ್ಪದ ಕಾಯಕ

ಮಲವನ್ನು ಮೇಲೆತ್ತಿ ಎತ್ತಿ ಬೀದಿಗೆ ಸುರಿಯುತ್ತಾನೆ. ಹಿಂಡುಗಟ್ಟಲೆ ನೊಣಗಳು ಅವನನ್ನು ಭಯಾನಕವಾಗಿ ಮುತ್ತಿಕೊಳ್ಳುತ್ತವೆ. ಮೋರಿಯ ಕೆಳಗೆ ಒಸರುತ್ತಿದ್ದ ಕಾರ್ಬನ್ ಮಾನಾಕ್ಸೈಡಿನಿಂದಾಗಿ ಅವನ ತಲೆ ಸುತ್ತತೊಡಗುತ್ತದೆ. ಮೇಸ್ತ್ರಿ 'ಒಂದು ನಿಮಿಷ ಹೊರಗೆ ಬಾ' ಎನ್ನುವಂತೆ ಕತ್ತು ಆಡಿಸುತ್ತಾನೆ. ದಿನೇಶ್ ಮೇಲೆ ಹತ್ತಿ ಬರುತ್ತಾನೆ. ಕಳೆದ ವರ್ಷವಷ್ಟೇ ಮೋರಿಗಳ ವಿಷಾನಿಲವನ್ನು ಉಸಿರಾಡಿ ಮೂವತ್ತು ಜನ ಭಂಗಿಗಳು ಅಹಮದಾಬಾದಿನಲ್ಲಿ ಸತ್ತಿದ್ದರೆಂಬ ಅಂಕಿ-ಅಂಶ ಟಾಮ್‌ಗೆ ಸಿಗುತ್ತದೆ.

ಕುಡಿಯುವ ನೀರಿಗೂ 'ಮುಟ್ಟ'ನ ಸೋಂಕು

ದಿನೇಶ್ ಪರ್ಮಾರ್ ಒಂದರ ಮೇಲೊಂದರಂತೆ ಮ್ಯಾನ್ ಹೋಲ್‌ಗಳಿಗೆ ಇಳಿಯುತ್ತಾ ಹೋಗುತ್ತಾನೆ. ಸೆರಗಿನಿಂದ ಮೂಗು ಮುಚ್ಚಿಕೊಂಡ ಹೆಂಗಸರು ತಮ್ಮ ಮನೆಯ ಕಕ್ಕಸುಗಳು ಕಟ್ಟಿಕೊಂಡಿವೆಯೆಂದು ದೂರಲು ಹೊರಬರುತ್ತಿದ್ದಾರೆ. ಕೊನೆಯ ಮ್ಯಾನ್‌ಹೋಲ್‌ನ ಕೆಲಸ ಮುಗಿದ ಮೇಲೆ ಕೈಕಾಲು, ತೋಳುಗಳ ಮೇಲೆಲ್ಲಾ ಕೆಸರು ಚೆಲ್ಲಿಕೊಂಡ ಪರ್ಮಾರ್ ಕರುಣಾಜನಕವಾಗಿ ಹಾದಿಯಲ್ಲಿ ನಿಂತಿದ್ದಾನೆ. ಅಲ್ಲಿ ನಿಂತದ್ದ ಹೆಂಗಸರನ್ನು ಒಂದು ಚೆಂಬು ನೀರು, ಚೂರು ಸೋಪು ಬೇಕೆಂದು ಕೇಳುತ್ತಾನೆ. ಆ ಹೆಂಗಸರು ಕದಲುವುದೇ ಇಲ್ಲ. ಕೊನೆಗೂ ಯಾರೋ ಒಬ್ಬಾಕೆ ನೀರು ಕೊಡುತ್ತಾಳೆ. ಅಲ್ಲೇ ಕೈಕಾಲು, ಮೈ, ತಲೆ ತೊಳೆದುಕೊಳ್ಳುವ ಪರ್ಮಾರ್‌ಗೆ ಎಷ್ಟೋ ಕಡೆ ಹೀಗೆ ತೊಳೆಯಲು ನೀರು ಕೂಡ ಸಿಗುವುದಿಲ್ಲ. 'ಇದು ನನ್ನ ಕರ್ಮ, ನನಗೆ ಬೇರೆ ಕೆಲಸ ಸಿಕ್ಕಿಲ್ಲ' ಎನ್ನುತ್ತಾನೆ ಪರ್ಮಾರ್. ಮಗಳನ್ನಾದರೂ ಓದಿಸಿ ಒಳ್ಳೆಯ ಕೆಲಸಕ್ಕೆ ಸೇರಿಸುವ ಆಸೆ ಅವನನ್ನು ಹಾಗೆ ಮುಂದಕ್ಕೊಯ್ಯುತ್ತದೆ.

ಅಸ್ಪೃಶ್ಯತೆಯ ವಿರುದ್ಧ ಹೋರಾಟ ಸಾರುವಲ್ಲಿ ಗಾಂಧೀಜಿಯವರ ಹೆಜ್ಜೆ ಆ ನಂತರ ಅಂಬೇಡ್ಕರ್ ಅವರ ನಿರ್ಣಾಯಕ ಪಾತ್ರ. ಗಾಂಧಿ-ಅಂಬೇಡ್ಕರ್ ಭಿನ್ನಾಭಿಪ್ರಾಯ ಇವನ್ನೆಲ್ಲಾ ಚರ್ಚಿಸುವ ಟಾಮ್, ಅಂಬೇಡ್ಕರ್ ಭಾರತದುದ್ದಕ್ಕೂ ಪ್ರತಿಮೆ, ಪೋಸ್ಟರ್‌ಗಳಲ್ಲಿ, ಇನ್ನಿತರ ಹೋರಾಟಗಳಲ್ಲಿ ಜೀವಂತವಾಗಿರುವುದನ್ನು ಗಮನಿಸುತ್ತಾನೆ. ಮುಂಬಯಿಯ ರಮಾಭಾಯೀ ಕಾಲೋನಿ ಎಂಬ ಸ್ಲಮ್ಮಿನ ಮೂಲೆ ಮೂಲೆಗಳಲ್ಲೂ ಅಂಬೇಡ್ಕರ್ ಮುಖವೇ ಟಾಮ್‌ಗೆ ಗೋಚರಿಸುತ್ತದೆ. ಆದರೆ ಅಲ್ಲಿ ಕೂಡ ತೆರೆದ ಮೋರಿಗಳು, ದುಸ್ಥಿತಿಯಲ್ಲಿರುವ ಸ್ಕೂಲುಗಳು, ಕಾಯಿಲೆಯಿಂದ ಬಳಲುವ ಜನ. ಹಾಗಾದರೆ ಇಲ್ಲೂ ಅಂಬೇಡ್ಕರ್ ಕೊನೆಗೂ ಏನನ್ನೂ ಬದಲಿಸಲಿಲ್ಲವೆ? ಎಂಬ ವಿಷಾದ ಈ ವರದಿಗಾರನನ್ನು ಮುತ್ತುತ್ತದೆ. ಆದರೂ, ರಮಾಭಾಯೀ ಸ್ಲಮ್ಮಿನಲ್ಲಿ ಎಲ್ಲ ಜಾತಿಯ ಜನ ಒಟ್ಟಾಗಿ ಬದುಕುತ್ತಾರೆ, ಒಂದೇ ಬಾವಿಯ ನೀರು ಕುಡಿಯುತ್ತಾರೆ, ಇಲ್ಲಿ ಜಾತಿಯ ಕಟ್ಟುಗಳು ಮುರಿದಿವೆ ಎಂಬುದು ಅವನಿಗೆ ಆಶಾದಾಯಕವಾಗಿ ಕಾಣುತ್ತದೆ.

ಅಂಬೇಡ್ಕರ್ ನಂತರ ಬಹುದೊಡ್ಡ ನಾಯಕರನ್ನು ಈ ಸಮುದಾಯ ಕಾಣಲಿಲ್ಲವೆಂದುಕೊಳ್ಳುವ ಟಾಮ್‌ಗೆ ಗುಜರಾತಿನ ನವ ಸರ್ಜನ್ ಟ್ರಸ್ಟಿನ (ಹೊಸ ಆರಂಭ ಟ್ರಸ್ಟ್) ಮಾರ್ಟಿನ್ ಮಕ್ವಾನ್‌ಥರದವರ ನಾಗರಿಕ ಹಕ್ಕುಗಳ ಹೋರಾಟ ಹಾಗೂ 2001ರಲ್ಲಿ ದಕ್ಷಿಣ ಆಫ್ರಿಕಾದ ದರ್ಬಾನಿನಲ್ಲಿ ವರ್ಣಭೇದ ನೀತಿಯನ್ನು ವಿರೋಧಿಸಿದ ಸಮಾವೇಶಕ್ಕೆ ಆತ ಅಸ್ಪೃಶ್ಯನಾಯಕರನ್ನು ಕರೆದುಕೊಂಡು ಹೋಗಿದ್ದು-ಇವೆಲ್ಲ ಬಹು ದೊಡ್ಡ ಬೆಳವಣಿಗೆಗಳಂತೆ ಕಾಣುತ್ತವೆ. ಆದರೂ ಮಕ್ವಾನ್

(42ನೇ ಪುಟಕ್ಕೆ)

ವಿಸ್ತೃತ ಅಂಬೇಡ್ಕರ್ ವಾದದಿಂದ ವಿಮೋಚನೆ

ಪುರೋಹಿತಶಾಹಿಗಳ ಧಾರ್ಮಿಕ ಕಂದಾಚಾರಗಳು ಮತ್ತು ಪಟ್ಟಭದ್ರರ ಸಾಮಾಜಿಕ-ಆರ್ಥಿಕ ಅಸಮಾನತೆಗಳ ಸಂಕೋಲೆಗಳಿಗೆ ಸಿಕ್ಕು, ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿ ನಲುಗುತ್ತಿದ್ದ ದಲಿತರು, ಅಂಬೇಡ್ಕರ್‌ರವರ ಹೋರಾಟ-ತ್ಯಾಗ ಮತ್ತು ಸಂವಿಧಾನಬದ್ಧ ಹಕ್ಕು-ಅವಕಾಶಗಳಿಂದಾಗಿ ಒಂದಿಷ್ಟು ಸ್ಥಾನ-ಮಾನಗಳನ್ನು ಪಡೆಯುವಂತಾಗಿದ್ದರೂ, ಇದರಿಂದ ಇಡೀ ದಲಿತ ಸಮುದಾಯದ ಪ್ರಗತಿಯಾಗಲೀ, ಬಾಬಾ ಸಾಹೇಬರ ಕನಸು ಹಾಗೂ ಸಂವಿಧಾನದ ಆಶಯವಾಗಲೀ ಈಡೇರಿದಂತಾಗಿಲ್ಲದಿರುವುದು ಇತಿಹಾಸದ ಅಣಕವೇ ಸರಿ.

ಒಂದು ಕಡೆ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ದಲಿತರ ಬಗ್ಗೆ ಬರೀ ಭರವಸೆಗಳನ್ನು ನೀಡುತ್ತಾ, ಸಿಗುತ್ತಿದ್ದ ಅಷ್ಟಿಷ್ಟು ಅವಕಾಶಗಳೂ ಕೈಗೆಟುಕದಂತೆ ನೋಡಿಕೊಳ್ಳುತ್ತಾ, ತಮ್ಮ ಕುತಂತ್ರದಿಂದ ದಲಿತರ ಒಗ್ಗಟ್ಟಿಗೂ ಕಲ್ಲು ಹಾಕುತ್ತಿದ್ದರೆ, ಮತ್ತೊಂದು ಕಡೆ ಕೇವಲ ಕ್ಷುಲ್ಲಕ ಕಾರಣದಿಂದ ಬಲಿಷ್ಠರ ಕೈಗೊಂಬೆಗಳಾಗಿರುವ ದಲಿತ ಸಮುದಾಯದಲ್ಲೇ ಪರಸ್ಪರ ನಂಬಿಕೆ, ಒಗ್ಗಟ್ಟು ಮತ್ತು ಪ್ರಗತಿಯ ಆಶಯಗಳಿಗೆ ಧಕ್ಕೆಯಾಗುವ ಪ್ರಸಂಗಗಳು ಹೆಚ್ಚುತ್ತಿರುವುದು ವಿಷಾದನೀಯ.

ಈ ಎಲ್ಲಾ ಒತ್ತಡಗಳ ಮಧ್ಯೆಯು ದಲಿತರು-ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಹೊಸ ಆಲೋಚನೆಗಳತ್ತ ಕೊಂಡೊಯ್ಯು ಸಂಕಷ್ಟದಲ್ಲಿರುವ ಈ ವರ್ಗಗಳನ್ನು ಉತ್ತಮ ಬದುಕು, ಚಿಂತನೆ, ಸಂಘಟನೆ ಹಾಗೂ ಅಭಿವೃದ್ಧಿಯತ್ತ ಯೋಚಿಸುವಂತೆ ಮಾಡುವ ಉದ್ದೇಶ ಹೊತ್ತಿರುವ "ಸಂವಾದ"ವು ಸಮಾಜದ ಮುಖ್ಯವಾಹಿನಿಯಲ್ಲಿರುವ ಚಿಂತಕರಿಗೆ ಕೆಲವು ಪ್ರಶ್ನೆಗಳನ್ನು ಕೇಳಿತು. ಕೆಲವು ಸಂಚಿಕೆಗಳಲ್ಲಿ ಈ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ಪ್ರಕಟಿಸುವ ಮೂಲಕ ಅರ್ಥಪೂರ್ಣ ಚರ್ಚೆಗೆ ಸಂವಾದ ವೇದಿಕೆಯಾಗಲಿದೆ. ಓದುಗರೂ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

1) **ಅಂಬೇಡ್ಕರ್ ವಾದದ ಪ್ರಸ್ತುತತೆ ಬಗ್ಗೆ ನಿಮ್ಮ ಅಭಿಪ್ರಾಯವೇನು ಹಾಗೂ ಅಂಬೇಡ್ಕರ್ ವಾದದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯವೆ?**
2) **ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೇಕೆ? ದಲಿತರ ರಾಜಕೀಯ ಗೊತ್ತುಗುರಿ ಹೇಗಿರಬೇಕು? ಬಿಎಸ್‌ಪಿ ದಲಿತರ ಹಿತ ಕಾಯಬಲ್ಲುದೆ?**
3) **ಧಾರ್ಮಿಕವಾಗಿ ದಲಿತರ ಆಯ್ಕೆ ಏನು? ದಲಿತರು ಹಿಂದೂ ಸಮಾಜದೊಳಗೇ ಇದ್ದು ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವೆ? ಅಥವಾ ಮತಾಂತರ ದಲಿತರ ಸಮಸ್ಯೆಗೆ ಪರಿಹಾರವೇ?**
4) **ಮೀಸಲಾತಿಯಿಂದ ದಲಿತರಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುತ್ತಿದೆಯೆ? ದಲಿತರ ಪ್ರಗತಿಗೆ ಮೀಸಲಾತಿಯೇ ಪರ್ಯಾಯವೇ? (18%ನೊಳಗೇ ಸಿಕ್ಕಿಕೊಂಡು 82% ಅವಕಾಶಗಳಿಂದ ವಂಚಿತರಾಗುತ್ತಿಲ್ಲವೇ?)**
5) **ಜಾಗತೀಕರಣದಿಂದ ದಲಿತರ ಬದುಕು ಬದಲಾದೀತೆ? ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ತಮ್ಮ ಗೌರವಯುತ ಪಾಲು ಪಡೆಯಲು ಏನು ಮಾಡಬೇಕು?**



○ ಡಾ|| ಜಿ. ರಾಮಕೃಷ್ಣ
ವಿಚಾರವಾದಿಗಳು, ಚಿಂತಕರು

1. ಸಮಾಜದ ರೋಗರುಜಿನಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಯಾವುದೇ ಪ್ರಯತ್ನವೂ ವ್ಯರ್ಥವಲ್ಲ. ಅದು ಸದಾ ಪ್ರಸ್ತುತತೆಯನ್ನು ಹೊಂದಿರುತ್ತದೆ. ಅಂಬೇಡ್ಕರ್ ಅವರು ಮಂಡಿಸಿದ್ದ ವಾದಗಳನ್ನು ಕೇವಲ ಸಾಮಾಜಿಕ ಮತ್ತು ಸಾಂಸ್ಕೃತಿಕ ನಿಟ್ಟಿನಲ್ಲಿ ನೋಡುವುದು ಸಾಲದು. ಅವರು ಇವಕ್ಕೆ ಪೂರಕವಾಗಿ ಇಡೀ ಆರ್ಥಿಕ ವ್ಯವಸ್ಥೆಯ ಬಗೆಗೂ ಒಂದು ಸ್ಪಷ್ಟ ನಿಲುವನ್ನು ತಾಳಿದ್ದರು. ದೇಶದ ದುಡಿಯುವ ಜನರೆಲ್ಲರ ಆಸಕ್ತಿಗಳೂ ಇಂದು ಒಂದು ಅಭಿಪ್ರಾಯವನ್ನು ಅವರು ಹಲವು ಬಾರಿ ವ್ಯಕ್ತಪಡಿಸಿದ್ದಾರೆ. ಅದನ್ನು ಗಮನಿಸದೆ ಅಂಬೇಡ್ಕರ್ ಚಿಂತನೆಯನ್ನು ಕುಬ್ಜಗೊಳಿಸುವ ಪ್ರವೃತ್ತಿ ಆಗಾಗ ಕಂಡು ಬರುತ್ತಿದೆ. ದಲಿತರ ವಿಮೋಚನೆಗೆ ಈ ರೀತಿಯ ವಿಸ್ತೃತ ಅಂಬೇಡ್ಕರ್ ವಾದ ಮಾತ್ರ ಸಾಧನವಾಗಬಲ್ಲದು. ಉತ್ಪಾದನಾ ಸಂಬಂಧಗಳನ್ನು ಬದಲಾಯಿಸದೆ ಸಾಮಾಜಿಕ ಏರು ಪೇರುಗಳನ್ನು ಸರಿಪಡಿಸಿ ಸಮಾನತೆಯನ್ನು ಸ್ಥಾಪಿಸುವುದು ಆಗದ ಮಾತು.

2. ದಲಿತರಲ್ಲಿ ಏಕಮುಖ ಚಿಂತನೆ ಸಾಧ್ಯವಾಗದಿರಲು ಅವರ ವಿಭಿನ್ನ ಆಸಕ್ತಿಗಳು ಕಾರಣವಾಗಿವೆ. ಪ್ರಾಥಮಿಕ ಶಾಲೆಯ ಘಟ್ಟವನ್ನು ಕೂಡ ತಟಾಯಿಸಲು ಸಾಧ್ಯವಾಗದೆ ಹಿಂದುಳಿದಿರುವ ದಲಿತರು, ಕೆಲವು ಸೌಲಭ್ಯಗಳನ್ನು ಪಡೆದ ದಲಿತರ ಜೊತೆ ಸಮಾನಸ್ಕಂಧರಾಗಿ ಬಾಳಲು ಸಾಧ್ಯವಾಗುತ್ತಿಲ್ಲ. ಜೊತೆಗೆ, ಇಡೀ ಸಮುದಾಯದ ಏಳಿಗೆಯ ಬಗ್ಗೆ ಕಾರ್ಯಾಚರಣೆಗಳು ನಡೆದಿಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿದೆ. ಸಾರ್ವತ್ರಿಕ ಅಭಿವೃದ್ಧಿಯು ದಲಿತರ ಮೂಲ ಆಶಯವಾದಾಗ ಪರಿಸ್ಥಿತಿ ಭಿನ್ನವಾಗುತ್ತದೆ. ದಲಿತರ ರಾಜಕೀಯ ಗೊತ್ತುಗುರಿಯು ಡಾ|| ಅಂಬೇಡ್ಕರ್ ಬಹು ಹಿಂದೆಯೇ ಸೂಚಿಸಿದ್ದಂತೆ ಸ್ವತಂತ್ರವಾಗಿ ಅಧಿಕಾರ ಪಡೆಯುವುದೇ ಆಗಿರಬೇಕು. ಅದಕ್ಕೆ ಮಂಗಾಟಗಳು ಮಾರ್ಗವಲ್ಲ. ಶತಮಾನಗಳ ಹಿಂಸೆ ಮತ್ತು ದೌರ್ಜನ್ಯಗಳನ್ನು ಗುಟ್ಟಾಗಿಯೇ ಸಮರ್ಥಿಸುವಂತಹ ಬಣಗಳೊಡನೆ ಸೇರಿ ರಾಜಕೀಯ ಅಧಿಕಾರ ಪಡೆದರೆ ಅಧಿಕಾರದಲ್ಲಿರುವವರಿಗೆ ಒಳ್ಳೆಯದಾಗಬಹುದೇನೋ, ಆದರೆ ದಲಿತ ಸಮುದಾಯಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಬಹುಜನ ಸಮಾಜ ಪಕ್ಷವು ದಲಿತರ ಹಿತವನ್ನು ಕಾಯುವುದಿರಲಿ, ಸಂಪೂರ್ಣವಾಗಿ ಬಲಿ ಕೊಟ್ಟಿದೆ ಎನ್ನಬೇಕಾಗುತ್ತದೆ.

3. ಹಿಂದೂ ಸಮಾಜವು ಮೂಲತಃ ಶ್ರೇಣೀಕೃತ ಸಮಾಜ, ಅಸ್ಪೃಶ್ಯತೆಯನ್ನು ಮೀರಿ ನಿಲ್ಲದ ಸಮಾಜ, ಅದರಲ್ಲಿ ಅಂತರ್ಗತವಾಗಿ ದಲಿತರು ಸಾಧಿಸಬಹುದಾದ್ದು ಅತ್ಯಲ್ಪ. ಹಿಂದೂ ಸಮಾಜವು ತನ್ನ ಧಾರ್ಮಿಕ ಜಡ್ಡುತನವನ್ನು ಕಳೆದುಕೊಂಡ ನಂತರ ಸನ್ನಿವೇಶ ಬೇರೆಯೇ ಇರುತ್ತದೆ. ಆದರೆ ಈಗ ಹಾಗಿಲ್ಲ. ಆದ್ದರಿಂದ ಧಾರ್ಮಿಕ ವ್ಯಕ್ತಿತ್ವ ಬೆಳೆಸುವುದನ್ನು ಒತ್ತಟ್ಟಿಗಿಟ್ಟು ಆರ್ಥಿಕ-ಸಾಮಾಜಿಕ ಪ್ರಶ್ನೆಗಳಿಗೆ ಆದ್ಯತೆ ಕೊಡಬೇಕಾದ್ದು ಅನಿವಾರ್ಯ. ಮತಾಂತರವು ದಲಿತರ ಸಮಸ್ಯೆಗೆ ಪರಿಹಾರವಲ್ಲ. ಏಕೆಂದರೆ ಬೇರೆ ಮತಗಳಡಿಯಲ್ಲೂ ವ್ಯಾವಹಾರಿಕವಾಗಿ ಬೇರೆ ರೀತಿಯ ಶ್ರೇಣೀಕರಣ ಅಸ್ತಿತ್ವದಲ್ಲಿದೆ. ಮುಖ್ಯವಾಗಿ, ಧಾರ್ಮಿಕ ಸಂಸ್ಥೆಗಳು ಇಹದ ಬವಣೆಗೆ ಪರಿಹಾರ ನೀಡುವುದು ಪರದ ಕಡೆಗೆ ಬೊಟ್ಟು ಮಾಡುವ ಮೂಲಕ ಇದು ಯೋಗ್ಯವಾದ ಮಾದರಿಯಲ್ಲ.

4. ಮೀಸಲಾತಿಯು ಸಾರ್ವಕಾಲಿಕವಾಗಿ ಉಳಿಯುವಂತಹ ಏರ್ಪಾಡಲ್ಲ, ಹಾಗೆ ಆಗಲೂಬಾರದು. ಈಗಾಗಲೆ ಅದರ ವಿರುದ್ಧ ಧ್ವನಿ ಏರುತ್ತಿದೆಯೆಂಬುದನ್ನು ಮರೆಯಬಾರದು. ಕೇವಲ ಸ್ಪರ್ಧಾತ್ಮಕ ಮನೋಭಾವದಿಂದ ಯಶಸ್ಸು ಸಿಗುತ್ತದೆ ಎಂಬ ಕಲ್ಪನೆ ಸರಿಯಲ್ಲ. ಸ್ಪರ್ಧೆಗೆ

ದಲಿತರದೇ ಧರ್ಮ ರೂಪುಗೊಳ್ಳಬೇಕು

○ ಡಾ. ಸಿದ್ಧಲಿಂಗಯ್ಯ, ಸಾಹಿತಿಗಳು, ಚಿಂತಕರು

1. ಅಂಬೇಡ್ಕರ್‌ವಾದ ಎಂದಿಗಿಂತ ಈ ದಿನಗಳಲ್ಲಿ ಹೆಚ್ಚು ಪ್ರಸ್ತುತವಾಗಿದೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ವೇಗವನ್ನು ತಗ್ಗಿಸುವ ಕೆಲಸ ಆಗಬೇಕಾದರೆ, ಅಂಬೇಡ್ಕರ್ ವಾದವೇ ನಮಗೆ ನೆರವಿಗೆ ಬರಬೇಕು. ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ನೀಡುತ್ತಿರುವ ಈ ಸನ್ನಿವೇಶದಲ್ಲಿ ಅಂಬೇಡ್ಕರ್‌ವಾದ, ಸರ್ಕಾರ ಮತ್ತು ಸಮಾಜದ ಕಣ್ಣು ತೆರಸಬೇಕಾಗಿದೆ.

ಅಂಬೇಡ್ಕರ್‌ವಾದ ಪ್ರಧಾನವಾಗಿ, ಉಳಿದ ಪ್ರಗತಿ ಪರ ಚಿಂತನೆಗಳು ಪೂರಕವಾಗಿ ಆದರೆ ಅಷ್ಟೇ ಅನಿವಾರ್ಯವಾಗಿ ಪ್ರಭಾವ ಬೀರಬೇಕಾಗಿದೆ. ಅಂಬೇಡ್ಕರ್‌ರವರು ಕನಸು ಕಂಡ ವರ್ಗ ರಹಿತ, ವರ್ಣ ರಹಿತ ಸಮಾಜದ ರಚನೆಗೆ ಎಲ್ಲಾ ಪ್ರಗತಿ ಪರ, ಎಡ, ಪ್ರಜಾಸತ್ತಾತ್ಮಕ ಚಿಂತನೆಗಳ ಒತ್ತಾಸೆ ಬೇಕಾಗಿದೆ.

2. ಸಂಪೂರ್ಣವಾದ ಜಾಗೃತಿಯಿಂದ ದಲಿತ ವರ್ಗದವರು ಒಂದೇ ದಿಕ್ಕಿನಲ್ಲಿ ಯೋಚನೆ ಮಾಡುವ ಪರಿಸ್ಥಿತಿ ಏರ್ಪಡುತ್ತದೆ ಎಂಬ ನಂಬಿಕೆ ನನಗಿದೆ. ಸಂಪೂರ್ಣ ಜಾಗೃತಿ ಆಗುವ ತನಕ ಗೊಂದಲಗಳು ಅನಿವಾರ್ಯ ಇವುಗಳನ್ನು ಮೀರುವ ಕೆಲಸ ಆಗಬೇಕಾಗಿದೆ. ಸಂಪೂರ್ಣ ಜಾಗೃತಿ ಆದರ್ಶ ಎನ್ನಿಸಿದರೂ ಕೂಡ ಅದು ನಮ್ಮ ಗುರಿಯಾಗಬೇಕು. ಈ ಪ್ರಕ್ರಿಯೆಯಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುವುದು ಸಹಜ. ಇದನ್ನು ಪ್ರಜಾಸತ್ತಾತ್ಮಕವಾಗಿ ಪರಿಹರಿಸಿಕೊಳ್ಳಬೇಕು.

ದಲಿತ ರಾಜಕೀಯ ಸಮಾಜದ ಎಲ್ಲಾ ಶೋಷಿತರನ್ನು ಸಂಕಷ್ಟಗಳಿಂದ ಬಿಡುಗಡೆ ಮಾಡಿ, ಆತ್ಮ ಸ್ಥೈರ್ಯವನ್ನು ತುಂಬುವ ಆಶಯವನ್ನು ಹೊಂದಿರಬೇಕು. ಸೀಮಿತ, ಸಂಕುಚಿತ ದೃಷ್ಟಿಕೋನ ಎಂದೂ ದಲಿತ ರಾಜಕಾರಣವಾಗುವುದಿಲ್ಲ. ಅಪಮಾನಿತವಾದ ಎಲ್ಲಾ ವರ್ಗಗಳನ್ನು ತನ್ನ ಜೊತೆಯಲ್ಲಿ ಕೊಂಡೊಯ್ಯುವ ವಿಶ್ವಾಸ ಮತ್ತು ಶಕ್ತಿ ಬಂದಾಗ ಮಾತ್ರ ದಲಿತ ರಾಜಕಾರಣ ಅರ್ಥಪೂರ್ಣವಾಗುತ್ತದೆ.

ಬಿಎಸ್‌ಪಿ ರಾಜಕಾರಣವನ್ನು ಕುರಿತು ಈಗಲೇ ಏನು ಹೇಳಲಾಗದು, ಕಾನ್ಶಿರಾಂ ಮತ್ತು ಮಾಯವತಿಯವರು ಉತ್ತರ ಭಾರತದಲ್ಲಿ ವಿಶಿಷ್ಟವಾದ ರಾಜಕೀಯ ಪ್ರಯೋಗವನ್ನು ಮಾಡುತ್ತಿದ್ದಾರೆ. ಅದರ ಫಲಶ್ರುತಿಯನ್ನು ನೋಡಿ ಈ ಬಗ್ಗೆ ಪ್ರತಿಕ್ರಿಯಿಸಬಹುದು.

3. ಹಿಂದೂ ಸಮಾಜದಲ್ಲೇ ಉಳಿಯುವುದು ಅಥವಾ, ಮತಾಂತರಗೊಳ್ಳುವುದು ಎರಡು ಕೂಡ ನನಗೆ ಸೇರದ ಸಂಗತಿಗಳು. ದಲಿತರು ಸ್ವತಂತ್ರ ಜನಾಂಗವೆಂಬುದು ನನ್ನ ಭಾವನೆ. ಎಲ್ಲಾ ಧರ್ಮಗಳ ಮಾನವೀಯ ಕ್ರಾಂತಿಕಾರಿ ಅಂಶಗಳನ್ನು ಅಳವಡಿಸಿಕೊಂಡು, ದಲಿತರ ಒಂದು ಧರ್ಮರೂಪುಗೊಳ್ಳುವುದು ಒಳ್ಳೆಯದು. ಈ ನಿಟ್ಟಿನಲ್ಲಿ ದಲಿತ ವರ್ಗದವರ ನಂಬಿಕೆಗಳು ಪುರಾಣಗಳು ದೇವಾನುದೇವತೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಅಧ್ಯಯನ ಮಾಡುವ ಅಗತ್ಯವಿದೆ.

4. ಮೀಸಲಾತಿ ದಲಿತರ ಅಭಿವೃದ್ಧಿಯ ದಿಕ್ಕಿನ ಒಂದು ಸಾಧನ. ಬಹಳ ಜನ ಇದೊಂದೇ ಸಾಧನವೆಂದೇ ಭಾವಿಸಿರುವುದು ತಪ್ಪು ಗ್ರಹಿಕೆಗೆ ಕಾರಣವಾಗಿದೆ. ದಲಿತರು ಮೀಸಲಾತಿಯನ್ನು ಬಳಸಿಕೊಂಡು ಕಣ್ಣು ತೆರೆಯುತ್ತಿರುವುದು ನಿಜ. ಆದರೆ ಅದೇ ಮೀಸಲಾತಿ ಮಾಯವಾಗುತ್ತಿರುವ ಸಂದರ್ಭದಲ್ಲಿ ತಮ್ಮ ಚಲನಾಶೀಲತೆಗೆ ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳುವ ಅಗತ್ಯವಿದೆ.

ದೇಶದ ಒಟ್ಟು ಸಂಪತ್ತಿನಲ್ಲಿ ದಲಿತರು ಶೇ. 18ರಷ್ಟನ್ನು ಅಲ್ಲ ಶೇ. 25ರಷ್ಟು ಪಡೆಯಬೇಕಾಗಿದೆ. ಆದರೆ ಈ ಸಂಪತ್ತಿನಲ್ಲಿ ದಲಿತರು ಪಡೆದಿರುವುದು ಶೇ 12ರಷ್ಟು ದಾಟಿಲ್ಲ ಎಂಬುದು ನನ್ನ ಗ್ರಹಿಕೆ.

ಸರ್ಕಾರಗಳ ಸಂವಿಧಾನಾತ್ಮಕ ಮತ್ತು ಸಕಾರಾತ್ಮಕ ಕ್ರಮಗಳಿಂದ ದಲಿತರ ಜನಸಂಖ್ಯೆಯ ಒಟ್ಟು ಶೇ. 2ರಷ್ಟು ಜನ ಕಳೆದ 55 ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ್ದಾರೆ ಎಂಬ ಹೇಳಿಕೆಯನ್ನು ನಾನು ಇತ್ತೀಚೆಗೆ ಗಮನಿಸಿದೆ. ಬಹುಶಃ ಎಲ್ಲಾ ಜಾತಿಗಳ ಬಡವರ ಸ್ಥಿತಿಯೂ ಇದೇ ಆಗಿದೆ. ಈಗ ಆಗಬೇಕಾಗಿರುವುದು ದುರ್ಬಲರ ಸಬಲೀಕರಣ. ಮೀಸಲಾತಿ ಇದ್ದರೆ ಅದನ್ನು ಬಳಸಿಕೊಂಡು ಇಲ್ಲದಿದ್ದರೆ, ಪರ್ಯಾಯ ಮಾರ್ಗಗಳನ್ನು ಹುಡುಕಿಕೊಂಡು ದಲಿತ ವರ್ಗದವರು ಚಲಿಸಬೇಕಾಗಿದೆ.

5. ಜಾಗತೀಕರಣ ದಲಿತರ ಪಾಲಿಗೆ ದುಃಸ್ವಪ್ನವಾಗುವ ಸೂಚನೆ ಇದೆ. ಜಗತ್ತಿನಾದ್ಯಂತ ಬಡವರ ಸಂಖ್ಯೆ ತೀವ್ರವಾಗಿ ಹೆಚ್ಚುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ. ಒಂದಿಬ್ಬರು ಶ್ರೀಮಂತರು ಉಳಿದವರೆಲ್ಲ ಬಡವರು ಎಂಬ ಚಿತ್ರ ಮೂಡುವುದು ನಾಗರೀಕ ಸಮಾಜಕ್ಕೆ ಅಪಾಯಕಾರಿಯಾಗುತ್ತದೆ. ಆದ್ದರಿಂದ ಜಾಗತೀಕರಣ ದಲಿತರಿಗೆ ಜಗತ್ತಿನ ಎಲ್ಲ ಬಡವರ ಹಿತಕ್ಕೆ ಮಾರಕವಾಗಿದೆ.



> ಹಿಂದೂ ಸಮಾಜದಲ್ಲೇ ಉಳಿಯುವುದು ಅಥವಾ, ಮತಾಂತರಗೊಳ್ಳುವುದು ಎರಡು ಕೂಡ ನನಗೆ ಸೇರದ ಸಂಗತಿಗಳು. ದಲಿತರು ಸ್ವತಂತ್ರ ಜನಾಂಗವೆಂಬುದು ನನ್ನ ಭಾವನೆ. ಎಲ್ಲಾ ಧರ್ಮಗಳ ಮಾನವೀಯ ಕ್ರಾಂತಿಕಾರಿ ಅಂಶಗಳನ್ನು ಅಳವಡಿಸಿಕೊಂಡು, ದಲಿತರ ಒಂದು ಧರ್ಮರೂಪುಗೊಳ್ಳುವುದು ಒಳ್ಳೆಯದು.

ಸಮಾಜದ ಮುಖ್ಯವಾಹಿನಿಯಲ್ಲಿ ದಲಿತರು ಸಮಪಾಲು ಪಡೆಯಲು ವ್ಯಕ್ತಿಗತ ಸಾಧನೆಯ ಜೊತೆಗೆ ಸಾಮೂಹಿಕ ಹೋರಾಟವನ್ನು ಹಮ್ಮಿಕೊಳ್ಳದೇ ಅನ್ಯ ಮಾರ್ಗವಿಲ್ಲ. ●

ಅನುಕೂಲವಾದ ಸಿದ್ಧತೆ ಇರಬೇಕು, ವಾತಾವರಣ ಇರಬೇಕು. ಇಲ್ಲದಿದ್ದರೆ ಸೋಲು ಕಟ್ಟಿಟ್ಟದ್ದು. ಮೀಸಲಾತಿಯ ಪ್ರಯೋಜನ ದಕ್ಕದಿರುವ ದಲಿತರಿಗೆ ಪರಿಹಾರವೇನೆಂಬ ಪ್ರಶ್ನೆ ಗೌಣವಲ್ಲ. ಸಮಾನ ಅವಕಾಶಗಳ ಸ್ಪಷ್ಟವಾದ ರಚನೆಯೇ ಪ್ರಾಯೋಗಿಕವಾಗಿ ಉಪಯುಕ್ತವಾದ ಪರಿಹಾರ. ಎರಡು-ಮೂರನೆಯ ತಲೆಮಾರಿನವರಿಗೂ ಮೀಸಲಾತಿ ಅಗತ್ಯವೆನ್ನುವುದಾದರೆ ಮೀಸಲಾತಿಯಿಂದ ಯಾವ ಪ್ರಯೋಜನವೂ ಆಗಿಲ್ಲವೆಂದು ಅರ್ಥವಾದೀತು. ಹಾಗೆಂದು ಈಗಲೇ ಮೀಸಲಾತಿಯನ್ನು ಪೂರ್ತಿಯಾಗಿ ಕೈಬಿಟ್ಟರೆ ವಂಚಿತರು ಸದಾಕಾಲಕ್ಕೂ ಹಾಗೇ ಉಳಿಯಬೇಕಾಗುತ್ತದೆ. ಮಾನ್ಯ ಇನ್ಫೋಸಿಸ್ ನಾರಾಯಣಮೂರ್ತಿಯವರು ಅದರ ಬಗ್ಗೆ ವ್ಯಸನ ತಾಳದಿರಬಹುದು, ಆದರೆ ಸಮಾಜ ಅದನ್ನು ಹಾಗೆ ಅವಗಣನೆಗೆ ಗುರಿ ಮಾಡುವಂತಿಲ್ಲ.

5. ಜಾಗತೀಕರಣವೆಂದರೆ ನಿಜಾರ್ಥದಲ್ಲಿ ಹೊಸ ರೀತಿಯ ವಸಾಹತೀಕರಣವೆಂದರ್ಥ. ಇಡೀ ದೇಶಕ್ಕೆ ಕುತ್ತುಂಟಾಗುವ ದುಷ್ಟ ನೀತಿಯಿಂದ ದೇಶದ ಯಾವ ದುಡಿಯುವ ಬಣಕ್ಕೂ ಒಳ್ಳೆಯದಾಗಲು ಸಾಧ್ಯವಿಲ್ಲ. ಯಾರೋ ಕೆಲವರು ಒಂದಿಷ್ಟು ರೊಟ್ಟಿ ತುಣುಕುಗಳನ್ನು ಆಯ್ದುಕೊಳ್ಳಬಹುದು, ಅಷ್ಟೆ. ದೇಶದ ಆಳುವ ವರ್ಗಕ್ಕೆ ಮಾತ್ರ ಜಾಗತೀಕರಣದಿಂದ ಸಂಪತ್ತು ಕೊಳ್ಳೆಹೊಡೆಯಲು ಸಾಧ್ಯವಾಗಬಹುದು; ದುಡಿಯುವವರಿಗೆ, ದಲಿತರಿಗೆ, ಸಂಕಷ್ಟಗಳ ಸರಮಾಲೆಯಷ್ಟೇ ಸಿಕ್ಕೀತು. ಮುಖ್ಯವಾಹಿನಿಯಲ್ಲಿ ಗೌರವಯುತ ಪಾಲು ಪಡೆಯಲು ದಲಿತರು ಹೋರಾಟ ನಡೆಸಬೇಕು ಮತ್ತು ದೇಶದ ಎಲ್ಲ ದುಡಿಯುವ ಜನರ ಹೋರಾಟದ ಮಂಚೂಣಿಯಲ್ಲಿ ನಿಲ್ಲಬೇಕು. ಹೋರಾಟವು ಮುಖ್ಯವಾಹಿನಿಯಾಗಿ ಪರಿವರ್ತನೆಗೊಂಡಾಗ ದಲಿತರೂ ಸೇರಿದಂತೆ ಎಲ್ಲ ದುಡಿಯುವ ಜನರೂ ತಮ್ಮ ಗೌರವಯುತ ಪಾಲು ಪಡೆಯುತ್ತಾರೆ. ಇದಕ್ಕೆ ಕಾಲುಹಾದಿಗಳಿಲ್ಲ, ಇರುವುದೊಂದೇ ನೇರಮಾರ್ಗ. ಆದರೆ ದಲಿತರ ಬಗ್ಗೆ ಉಪೇಕ್ಷೆ ತಾಳುವ ಜನ ದುಡಿಯುವವರಲ್ಲೂ ಇದ್ದಾರೆ. ಅವರೊಡನೆಯೂ ಸೆಣಸಾಟ ಅವಶ್ಯಕ. ●

ಚಳವಳಿ ಎಂದೂ ಜಂಗಮ ಸ್ಥಿತಿಯಲ್ಲಿರಬೇಕು...

○ ಜಿ.ಕೆ. ಗೋವಿಂದರಾವ್
ಕಲಾವಿದರು, ಚಿಂತಕರು

1. ಡಾ|| ಅಂಬೇಡ್ಕರ್ ಕೇವಲ ಒಬ್ಬ ಚಿಂತಕರಷ್ಟೇ ಅಲ್ಲ. ಈ ದೇಶದ ಇತಿಹಾಸದ ದಿಕ್ಕನ್ನೇ ಬದಲಿಸ ಹೊರಟ ಕೆಲವೇ ಮಂದಿ ಮಹಾಪುರುಷರಲ್ಲಿ ಒಬ್ಬರು. ಮತ್ತು ಅವರ ಚಿಂತನೆ, ಅವರ ಆಂದೋಲನ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿಯೆ ತನ್ನ ಅಸ್ತಿತ್ವವನ್ನು ಪಡೆದುಕೊಂಡಿದ್ದರಿಂದ ಮತ್ತೂ ಅಷ್ಟು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಆದರೆ ಯಾವನೊಬ್ಬ ಚಿಂತಕನನ್ನೇ ಅವಲಂಬಿಸಿ ಒಂದು ಚಳುವಳಿ ಉಳಿಯುವುದಿಲ್ಲ. ಸ್ವಾತಂತ್ರ್ಯ, ಸಮಾನತೆಗಳೆಂದರೆ ಅದೊಂದು ಚಳುವಳಿ. ಚಳವಳಿ ಎಂದೂ ಜಂಗಮ ಸ್ಥಿತಿಯಲ್ಲಿರಬೇಕು. ಮಹಾಪುರುಷನ ಚಿಂತನೆಗಳು ಅಸ್ತಿವಾರವಾದರೆ ನಂತರದವರು ಅಸ್ತಿವಾರದ ಮೇಲೆ ಕಟ್ಟುವ ಶಿಲ್ಪಕ್ಕೆ ಆಯಾಮಗಳನ್ನು, ಬಣ್ಣಗಳನ್ನು, ನೀಡುತ್ತಲಿರಬೇಕು. ಇಲ್ಲದಿದ್ದರೆ ಅಂಬೇಡ್ಕರ್‌ವಾದವೂ ಕೂಡ ಒಂದು ವ್ಯವಸ್ಥಿತ ಧರ್ಮ ಕಟ್ಟುವ ಮಠದ ಕಟ್ಟು ಕಟ್ಟಳೆಗಳಾಗಿಬಿಡುತ್ತವೆ ಮಾತ್ರ. ಆದ್ದರಿಂದಲೇ 'ಅಂಬೇಡ್ಕರ್‌ವಾದದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯವೆ' ಎಂಬ ಪ್ರಶ್ನೆಗೂ ಮೇಲಿನ ವಿವರಣೆಯಲ್ಲಿಯೇ ಉತ್ತರವಿದೆ ಎಂದು ತಿಳಿಯುತ್ತೇನೆ. ಜೀವಂತವಾಗಿ ಸ್ಪಂದಿಸುವ ಮೂಲಕ ಮಾತ್ರ ನಾವು ಒಂದು ತತ್ವವನ್ನೂ, ಒಂದು ನಂಬಿಕೆಯನ್ನೂ, ಭವಿಷ್ಯದ ಕನಸನ್ನೂ ಬೆಚ್ಚಗೆ ಇರಿಸಿಕೊಳ್ಳಬಹುದು ಎಂದೇ ಜವಾಬ್ದಾರಿ ಈಗಿನವರ ಮೇಲೆ ಇರುವುದು-ದಲಿತರ, ದಲಿತೇತರ ಎಲ್ಲರ ಮೇಲೂ.

2. 'ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲವೇಕೆ? ಎಂಬ ಪ್ರಶ್ನೆಗೆ ದಲಿತ ವರ್ಗಕ್ಕೆ ಸೇರಿದವರೇ ಗಂಭೀರವಾಗಿ ಪ್ರಾಮಾಣಿಕವಾಗಿ, ನಿಸ್ವಾರ್ಥದಿಂದ ಮತ್ತು ನಿಷ್ಠುರ ಧೈರ್ಯದಿಂದ ಯೋಚಿಸಿ ಉತ್ತರಗಳನ್ನು ಕಂಡುಕೊಳ್ಳಬೇಕು. 'ಒಡೆದು ಆಳುವ'ಸಿದ್ಧಾಂತವನ್ನು ಅವಲಂಭಿಸಿಯೇ ಸಾಮಾಜಿಕ, ರಾಜಕೀಯ ಶಕ್ತಿಗಳು ತಮ್ಮ ಪ್ರಭಾವಗಳನ್ನು ಬೀರುವುದು ಎಂಬ ಪ್ರಾಥಮಿಕ ಸತ್ಯವನ್ನು ಮರೆತು ನಾನು ಒಡೆದುಕೊಳ್ಳುತ್ತ ಹೋದರೆ ಆಳುವವರ್ಗಕ್ಕೆ, ಉಚ್ಚವರ್ಗಗಳಿಗೆ, ಶೋಷಿತರಿಗೆ, ನಾವುಗಳೇ ದಾರಿಸುಗಮಮಾಡಿಕೊಟ್ಟಂತೆ ಎಂಬುದನ್ನು ನಾವು ಮರೆಯಬಾರದು. ಒಂದು ಸಂಘಟನೆಯೆಂದರೆ ಭಿನ್ನಾಭಿಪ್ರಾಯಗಳು ಅನಿವಾರ್ಯ. ಆದರೆ ಹೊರಗಿನ ಲೋಕಕ್ಕೆ ಒಗ್ಗಟ್ಟಿನಲ್ಲಿ ಏಕಮುಖೀ ಹೋರಾಟಕ್ಕೆ ನಿತಂವರ ನಾವು ಎಂಬುದರ ಬಗ್ಗೆ ಅನುಮಾನವೇ ಬರಬಾರದು, ಹಾಗೆ ನಮ್ಮ ಚಳುವಳಿಯನ್ನು ರೂಪಿಸಬೇಕು. ಇದನ್ನು ಸಾಧಿಸುವುದು ಕಷ್ಟ ನಿಜ. ಆದರೆ ಗುರಿಗಳು ಎಂದೂ ಸುಲಭವಾಗಿ ದಕ್ಕುವಂತಹವಲ್ಲವಲ್ಲ. 'ರಾಜಕೀಯ ಗೊತ್ತುಗುರಿ'ಗಳು ಪ್ರಪ್ರಥಮವಾಗಿ ಸಮಾನತೆ ಹಾಗೂ ವ್ಯಕ್ತಿ ಘನತೆ ಇವುಗಳನ್ನು ಸಾಧಿಸುವುದರಲ್ಲಿರಬೇಕು. ಆರ್ಥಿಕ



ಸಮಾನತೆ ಎಲ್ಲಕ್ಕೂ ಅಡಿಪಾಯ. ಅಧಿಕಾರ ಗಳಿಸಿ ಇವನ್ನು ಸಾಧಿಸುವುದಕ್ಕಾದರೆ ಸಂತೋಷ. ಅಧಿಕಾರವಿಲ್ಲದೆಯೂ ನಮ್ಮ ಜನಗಳ ಅಂದರೆ ಇಲ್ಲಿ ದಲಿತ ವರ್ಗಗಳ ಮಧ್ಯೆ ನಮ್ಮನ್ನು ಸಂಪೂರ್ಣ ಗುರುತಿಸಿಕೊಂಡು ಹೋರಾಟ ಮಾಡುತ್ತಲೂ ನಾವು ರಾಜಕೀಯವಾಗಿ ಪ್ರಸ್ತುತವಾಗುತ್ತಲಿರಬಹುದು. 'ಬಿ.ಎಸ್.ಪಿ. ದಲಿತರ ಹಿತಕಾಯಬಲ್ಲದೆ?'-ಉತ್ತರ ಪ್ರದೇಶದಲ್ಲಿ ದಲಿತ ನಾಯಕಿ ಮಾಯಾವತಿ. 'ಮನುವಾದಿ ಬಿ.ಜೆ.ಪಿ. ಸಖ್ಯದಲ್ಲಿ ಮುಖ್ಯಮಂತ್ರಿಯಾಗಿ ಯಾವ ಬಗೆಯ ದಲಿತೋದ್ಧಾರ ಸಾಧಿಸಲು ಬಯಸುತ್ತಿದ್ದಾರೋ ನನಗೆ ಗೊತ್ತಿಲ್ಲ. ಅಂಬೇಡ್ಕರ್ ಅವರು ದಲಿತ ಉದ್ಧಾರಕ್ಕೆ ಅಧಿಕಾರ ಪಡೆಯುವುದು ಬಹು ಮುಖ್ಯ ಎಂದದ್ದು ನಿಜ. ಆದರೆ ಉತ್ತರ ಪ್ರದೇಶದಲ್ಲಿ ಸದ್ಯದ ರಾಜಕೀಯ ಹೊಂದಾಣಿಕೆಯಂಥ ಪ್ರಸಂಗ ಉದ್ಧರಿಸಿ ಶೋಷಿತರು ಶೋಷಕರೊಡನೆ ಕೈ ಜೋಡಿಸಿ ಅಧಿಕಾರದಲ್ಲಿರ ಬೇಕಾದಂಥ ಸ್ಥಿತಿಯ ಬಗ್ಗೆ ಅವರು ಕನಸು ಮನಸ್ಸಿನಲ್ಲಿಯೂ ಎಣಿಸಿದ್ದಿರಕ್ಕಿಲ್ಲ.

3. ವಿ.ಎಚ್.ಪಿ. ಮತ್ತು ಇತರೆ ಸಂಘ ಪರಿವಾರವು ದಲಿತರನ್ನು 'ನೀವುಗಳೇ ಮೂಲ ಹಿಂದೂಗಳು' ಎಂದು ಉಬ್ಬಿಸುತ್ತ ತಾವು ಮಾಡಬಯಸುವ ಎಲ್ಲ ನೀಚ ಕೆಲಸಗಳನ್ನು ಅವರ ಕೈಲೇ ಮಾಡಿಸುವುದಕ್ಕೆ ಆರಂಭಿಸಿದ್ದಾರೆ. ಇದು ಶೋಷಣೆಯ ಇನ್ನೊಂದು ರೂಪ. ಇದಕ್ಕೆ ದಲಿತರ ಉತ್ತರವೇನಾಗಬೇಕು? ನನಗನ್ನಿಸುವಂತೆ ಈ ಪರಿವಾರದ ಜನಕ್ಕೆ ದಲಿತರು ಹೇಳಬೇಕಾದದ್ದಿಷ್ಟೆ: 'ಸರಿ ಹಾಗಾದರೆ, ನಾನು ಮೂಲ ಹಿಂದೂಗಳಾದರೆ, ನೀವು ಹಿಂದೂಗಳಲ್ಲ. ಅಥವಾ ನೀವು ಹಿಂದೂಗಳಾದರೆ ನಾವು ಹಿಂದೂಗಳಲ್ಲ ಅಷ್ಟೆ. ಚಾಲ್ತಿಯಲ್ಲಿರುವ ಈ ಹಿಂದೂ ಎಂಬ ಶಬ್ದದ ಬಗ್ಗೆಯೇ ನಾವು ಅನುಮಾನಗಳನ್ನು ವ್ಯಕ್ತಪಡಿಸುತ್ತ ಹೋಗಬೇಕು. ಹಿಂದೂ ಎಂಬ ಶಬ್ದ, ಪಕ್ಕದಲ್ಲಿ ಮುಸಲ್ಮಾನ, ಕ್ರಿಶ್ಚಿಯನ್ ಇದ್ದರೆ ಮಾತ್ರ ಬಳಕೆಗೆ ಬರುವುದು. ಇಲ್ಲದಿದ್ದರೆ-ಅಂದರೆ ಇಬ್ಬರು ಹಿಂದೂಗಳೇ ಇದ್ದಾಗ-ನಾವುಗಳು ಬ್ರಾಹ್ಮಣರು, ಶೂದ್ರರು, ದಲಿತರು ಇತ್ಯಾದಿ. ನಮ್ಮ 'ಹಿಂದೂ' ಶಬ್ದವನ್ನು ಹಿಂದುಗಳಲ್ಲದ ಕೋಮುಗಳಿಗಾಗಿ ಚಾಲ್ತಿಯಲ್ಲಿಟ್ಟಿರುವುದಕ್ಕಿಂತ 'ಮತಾಂತರ'ಗೊಂಡು 'ಮನುಷ್ಯ ಧರ್ಮ'ಕ್ಕೆ 'ಪ್ರಕೃತಿ ಧರ್ಮಕ್ಕೆ' ಸೇರುವುದು ಒಳ್ಳೆಯದು. ಕೊಂಚ ರೋಮ್ಯಾಂಟಿಕ್ಕಾಗಿ ಕಂಡರೂ ಇದೇ ನಮ್ಮ ಮುಂದಿರಬೇಕಾದ ಒಂದು ಅಗಾಧ ಸ್ವರೂಪದ ಧ್ಯೇಯವಾಗಬೇಕು.

4. 'ದಲಿತರ ಪ್ರಗತಿಗೆ ಮೀಸಲಾತಿಯೇ ಪರ್ಯಾಯವೇ?' ಎಂಬುದಕ್ಕೆ ಉತ್ತರ ಖಂಡಿತವಾಗಿ, 'ಇಲ್ಲ' ಎಂದೇ. ದಲಿತೇತರರು ಮೀಸಲಾತಿಯ ಬಗ್ಗೆ ವೈಜ್ಞಾನಿಕವಾಗಿ, ಮಾನವೀಯವಾಗಿ ಅರ್ಥಮಾಡಿಕೊಳ್ಳುವುದು ಹಾಗೂ ಮಾನಸಿಕವಾಗಿ ಸಂಪೂರ್ಣ ಬೆಂಬಲಕೊಡುವುದು ಎಷ್ಟು ಅವಶ್ಯವೋ ಅಷ್ಟೇ ಅವಶ್ಯ ದಲಿತರು 'ಈ ಮೀಸಲಾತಿ' ಎಂಬುದು 'ನನ್ನ ಪ್ರಗತಿಗೆ, ನನ್ನ ಪ್ರತಿಭೆಗೆ, ನನ್ನ ಒಳಗಿನ ಸಾಧ್ಯತೆಗಳಿಗೆ' ಒಂದು ಪುಶ್ ಕೊಡುವುದಷ್ಟೆ ಹೊರತು ಮೀಸಲಾತಿಯನ್ನೇ ನಂಬಿ ನಾನು ವ್ಯಕ್ತಿತ್ವ ರೂಪಿಸಿಕೊಳ್ಳಬೇಕಾಗಿಲ್ಲ ಎಂದು ತಿಳಿಯುವುದು. ಈ ಮನೋಭಾವ ಬೆಳೆಯದಿದ್ದರೆ! ಮೀಸಲಾತಿಯಿಂದ ದಲಿತರಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗಿ ಬಿಡುವ ಅಪಾಯಗಳಿರುತ್ತವೆ.

5. ಜಾಗತೀಕರಣ ಇಡೀ ಜಗತ್ತನ್ನೇ ವ್ಯಾಪಿಸಿ ರಕ್ತ ಬಸಿಯುತ್ತಿರುವ ಒಂದು ಪಿಡುಗು. ದಲಿತರಿಗೆ ವಿಶೇಷವಾಗಿ ಇದರಿಂದ ಹೆಚ್ಚು ಅನುಕೂಲವಾಗಲೀ ಅಥವಾ ಬೇರೆಯವರಿಗಿಂತ ಹೆಚ್ಚು ಅನಾನುಕೂಲವಾಗುತ್ತದೆಂದು ಹೇಳುವುದು ತಪ್ಪಾಗಬಹುದು.

'ಸಮಾಜದ ಮುಖ್ಯವಾಹಿನಿ' ಎಂದರೆ ಯಾರ ವಿವರಣೆಯ ಪ್ರಕಾರ ಮುಖ್ಯವಾಹಿನಿ ಎಂದು ಕೇಳಬೇಕಾಗುತ್ತದೆ. ಸಂಘ ಪರಿವಾರದ 'ಮುಖ್ಯವಾಹಿನಿ' ಒಂದು. ಗಾಂಧೀಜಿ, ಅಂಬೇಡ್ಕರ್, ಬಸವಣ್ಣ ಇವರುಗಳ 'ಮುಖ್ಯವಾಹಿನಿ' ವಿವರಣೆ ಬೇರೆ-

'ಮುಖ್ಯವಾಹಿನಿ' ಎಂಬುದೊಂದು ಇಂದಿಗೂ ಖಚಿತವಾಗಿ ಶಬ್ದಗಳ ಹಿಡಿತಕ್ಕೆ ಸಿಗದ ಮಾತು. ಅನುಭವಕ್ಕೆ ಮಾತ್ರ ಸಿಗುವಂಥದು. ಈ ಅನುಭವದಲ್ಲಿ ಮನುಷ್ಯನ ಭೂತ ಭವಿಷ್ಯತ್ತುಗಳ ಕಲ್ಪನೆಯಿದೆ. ವರ್ತಮಾನದಲ್ಲಿ ನಡೆದುಕೊಳ್ಳಬೇಕಾದ ರೀತಿಯ ರೂಪುರೇಷೆಗಳಿವೆ. ಮತ್ತು ಬಹುಮುಖ್ಯವಾಗಿ ಮನುಕುಲದ ದಿನದಿಂದ ದಿನದ ಪ್ರಗತಿಯ ಕುರಿತಾದ ಕಳಕಳಿಗಳಿವೆ. ಈ ಕಳಕಳಿಯನ್ನು ಜೀವಂತರಾಗಿರಿಸಿಕೊಳ್ಳುವುದು. ಮನುಷ್ಯ ನಿರ್ಧಾರಿತ 'ಮುಖ್ಯವಾಹಿನಿ'ಯಲ್ಲಿ ಭಾಗಿಯಾಗುವುದರಲ್ಲಿ, ಪ್ರಕೃತಿ ನಿರ್ಧರಿತ 'ಮುಖ್ಯವಾಹಿನಿ'ಯಲ್ಲಿ ಸೇರ್ಪಡೆಯಾಗುವುದಕ್ಕೆ. ●

ಬಿಎಸ್‌ಪಿ & ಡಿಎಸ್‌ಎಸ್‌ಗೆ ದಲಿತರ ಹಿತಕಾಯಲು ಸಾಧ್ಯವಿಲ್ಲ

○ ಪ್ರೊ|| ಸಿ.ಜಿ.ಕೆ.
ರಂಗತಜ್ಞರು, ಚಿಂತಕರು

1. ತಿರುಕ್ಕುರಳ್‌ನಿಂದ ಇಂದಿನ ತನಕ ಹಲವು ಸಂತರು ಚಿಂತಕರು ಸಾಮಾಜಿಕ ಕಳಕಳಿ ತೋರಿಸಿ ಸಮಾಜದ ಉನ್ನತಿಗೆ ನಾಂದಿ ಹಾಡಿದ್ದಾರೆ. ಬುದ್ಧ, ಮಹಾವೀರ, ಬಸವ, ಅಲ್ಲಮ ಮುಂತಾದವರು ಎಲ್ಲರ ವಾದದಲ್ಲಿ ಒಂದು ಬೆನ್ನೆಲುಬಿನ ವಾದವನ್ನು ಸೇರಿಸುತ್ತಾ, ವಾದಗಳನ್ನು ಪುನರ್ ಅರ್ಥೈಸುತ್ತಾ ತಿದ್ದಿಕೊಳ್ಳುತ್ತಾ ಹತ್ತು ಹಲವು ಬದಲಾವಣೆಗಳನ್ನು ತಂದಿದ್ದಾರೆ. ಈ ಹಿನ್ನೆಲೆಯಲ್ಲೇ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ವಾದವನ್ನು ನಾವು ಗಮನಿಸಬೇಕಾಗಿದೆ. ನನಗೆ ತಿಳಿದಂತೆ ಇಂದು ಅಂಬೇಡ್ಕರ್‌ವಾದವನ್ನು ನಿಶ್ಚಯಗತಿಯಲ್ಲಿ ಅರ್ಥವಾಡಿಕೊಳ್ಳುವವರು, ಅರ್ಥೈಸುವವರು ಸಂಖ್ಯೆಯಲ್ಲಿ ಕಡಿಮೆ ಎನ್ನಬಹುದು. ಮೂಲತಃ ಡಾ|| ಅಂಬೇಡ್ಕರ್‌ರವರು ಒಬ್ಬ ಅರ್ಥ ಶಾಸ್ತ್ರದ ವಿದ್ಯಾರ್ಥಿ. ಇವರು ಕೊಟ್ಟ Concept ಅಂದು ಜಗತ್ತಿಗೆ ಹೊಸದು ಅಂದರೆ "Seizure of Mobility" ಅಂದರೆ ಒಬ್ಬ ವ್ಯಕ್ತಿಯ ಮೇಲ್‌ಸ್ತರದ ಚಲನಾ ಶೀಲತೆಯನ್ನು ಜಾತಿ ಧರ್ಮದ ಹೆಸರಿನಲ್ಲಿ ಸ್ಥಗಿತಗೊಳಿಸುವುದು.

ಈ ಹಿನ್ನಲೆಯಲ್ಲಿ ಕಾರ್ಲ್ ಮಾರ್ಕ್ಸ್, ಗಾಂಧೀ, ಅಂಬೇಡ್ಕರ್‌ರವರು ಯಾವುದೇ ಸ್ಥಗಿತವನ್ನು ವಿರೋಧಿಸಿದವರು. ಎಲ್ಲಾ ಹಿನ್ನಡೆಗೂ ಕಾರಣ ಆರ್ಥಿಕ ಸಾಮಾಜಿಕ ತುಳಿತವೆಂಬುದು ಈ ಮೂರು ಜನರ ಅಭಿಪ್ರಾಯಗಳಾಗಿದ್ದವು. ಮಾರ್ಕ್ಸ್‌ರವರು ವರ್ಗ ಸಂಘರ್ಷವನ್ನು ಪ್ರತಿಪಾದಿಸಿದರೆ, ಡಾ|| ಅಂಬೇಡ್ಕರ್‌ರವರು ಜಾತಿ ಸಂಘರ್ಷದ ತಾರ್ಕಿಕ ತೀರ್ಮಾನಗಳನ್ನು ಹೆಚ್ಚು ಪ್ರತಿಪಾದಿಸಿದರು. ಮಹಾತ್ಮ ಗಾಂಧೀಜಿಯವರು ಉಳ್ಳವರನ್ನು ಒಲಿಸಬೇಕು. ಇಲ್ಲದವರನ್ನು ಮೇಲೆತ್ತಬೇಕು ಎಂಬುವ ವಾದವನ್ನು ಪ್ರತಿಪಾದಿಸಿದರೂ, ಈ ಮೂವರ ವಾದದಲ್ಲಿ, ಒಂದಂಶವನ್ನು ಗಮನಿಸಬಹುದಾದರೆ ಅದು ಮನುಷ್ಯ ಕುಲದ "ಸ್ಥಗಿತದ ವಿರೋಧವಾದ". ಆದರೆ ಈ ಮೂವರು ಅಂದಿನ ಕಾಲಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅಭ್ಯಾಸ ಮಾಡಿದ್ದವರು ಹಾಗೆಯೇ ಕೈಗಾರಿಕಾ ಕ್ರಾಂತಿ ಮತ್ತು ಕೃಷಿ ಕ್ರಾಂತಿಯ ಬಗ್ಗೆ ಹೆಚ್ಚು ತಿಳಿದಿದ್ದವರು.

ಅಂಬೇಡ್ಕರ್‌ರವರ ಮೂಲ ಮಂತ್ರವಾಗಿದ್ದ "ಸಾಮಾಜಿಕ ಬಹಿಷ್ಕಾರದ ವಿರುದ್ಧದ ವಾದ" ಇದನ್ನೇ ಅವರು "Seizure of Social Mobility" ಎಂದಿದ್ದು, ಈ ಹಿನ್ನಲೆಯಲ್ಲಿ ಇಂದಿನ ಸಾಮಾಜಿಕ ಬಹಿಷ್ಕಾರಕ್ಕೆ ಅಂದಿಗಿಂತ ಹಲವು ಹತ್ತು ಹೊಸ ಕಾರಣಗಳು ಸೇರಿಕೊಂಡಿವೆ. ಅಂದು ಸ್ಪೃಶ್ಯ ಮತ್ತು ಅಸ್ಪೃಶ್ಯ ಇದ್ದಿದ್ದರೆ, ಇಂದು ಅಸ್ಪೃಶ್ಯರಲ್ಲೇ ಸ್ಪೃಶ್ಯ ಮತ್ತು ಅಸ್ಪೃಶ್ಯರ ಗುಂಪುಗಳು, ಈ ಗುಂಪುಗಳು ಮತ್ತಷ್ಟು ಗುಂಪುಗಳಾಗುತ್ತಿರುವುದು, ಅಸ್ಪೃಶ್ಯರಲ್ಲಿ ಹೊಸ ಪುರೋಹಿತಶಾಹಿ ಗುಂಪು ಸೇರಿರುವುದು, ಅಂಬೇಡ್ಕರ್ ಇಂದು ಇದ್ದಿದ್ದರೆ ಅದರ ವಿರೋಧವೇ ಮಾತುಗಳನ್ನು ಎತ್ತುತ್ತಿದ್ದರು.

ಅಂಬೇಡ್ಕರ್ ವಾದವನ್ನು ಯಥಾವತ್ತಾಗಿ ಅರ್ಥೈಸಿದರೂ ಅಂಬೇಡ್ಕರ್ ವಾದವು ಹಲವು ನಿಚ್ಚಳ ಹೊಳಪನ್ನು ನೀಡುತ್ತದೆ ಸಮಾಜದ ಪ್ರಗತಿಗಾಗಿ.

ಜಂಗಮ ಸ್ವರೂಪಿ ಹಾಗೂ ಸಾಮಾಜಿಕ ಕಳಕಳಿಯಿರುವ ವಾದಗಳು ಪುರೋಹಿತಶಾಹಿ ಮತ್ತು ಹೊಸ ಪುರೋಹಿತ ಶಾಹಿ ಆಯಾಮಗಳನ್ನು ತಿರುಗಿಸುತ್ತಾ ಅವಕ್ಕೆ ಸವಾಲೆಸೆಯುವ ನಿಟ್ಟಿನಲ್ಲಿ ಅಂಬೇಡ್ಕರ್ ವಾದವೆನ್ನುವುದು ಮೂಲ ಸೆಲೆಯಾಗಬೇಕು. ಅದರೊಟ್ಟಿಗೆ ಸೂಕ್ತವಾದಗಳು ಅವುಗಳಾಗಿಯೇ ಬಂದು ಅಂಬೇಡ್ಕರ್ ವಾದಕ್ಕೆ ಸೇರಿದರೆ ಸ್ವಾಗತಿಸಬೇಕು.

2. ನಿಮ್ಮ 2ನೇ ಪ್ರಶ್ನೆಗೆ ಮೇಲಿನ ಉತ್ತರವೇ ಸಾಕಷ್ಟು ಇದೆ. ಬಿ.ಎಸ್.ಪಿ. ದಲಿತರ ಹಿತ ಕಾಯಬಲ್ಲುದೇ. ಎಂಬ ಪ್ರಶ್ನೆಗೆ ಬಿ.ಎಸ್.ಪಿ. ಅಲ್ಲ, DSS ರಾಜಕೀಯ ಪಕ್ಷವಾದರೂ ದಲಿತರ ಹಿತಕಾಯಲು ಸಾಧ್ಯವಿಲ್ಲ. ಕಾರಣ ಸ್ಪಷ್ಟ ಹಿಂದೆ ದೆವ್ವವಾಗಿದ್ದವನು ಇಂದು ಹೇಗೆ ದೇವರಾಗಲು ಸಾಧ್ಯ ಸಾಮಾಜಿಕ ಹಿನ್ನಡೆಗೆ ಹೊಂದಿರುವ ಸಮಾಜ ತನ್ನ ಪ್ರಗತಿಗಾಗಿ ಮುನ್ನಡೆ ಸಾಧಿಸುವ ಹಂತದಲ್ಲೇ ಸಾಮಾಜಿಕ ರಾಜಕಾರಣವು ಮರೆತಿದ್ದು ದುರಂತ. ನಮ್ಮಲ್ಲಿ ಇದ್ದಕ್ಕಿದ್ದಂತೆ ಅರುಣ್‌ಶೌರಿಯ ಪುಸ್ತಕವನ್ನು ಸುಟ್ಟು, ಮರುದಿನ ಅವರ ಪಕ್ಕದಲ್ಲೇ ನಿಂತು ಅಧಿಕಾರ ಸ್ವೀಕಾರ ಮಾಡಿದರೆ ಕಳ್ಳನನ್ನು ನಂಬಿದರೂ ಇವರನ್ನು, ನಂಬಬಾರದು ಎನ್ನುವ ಗಾದೆಗೆ ವಿಶೇಷ ಅರ್ಥ ನೀಡಬಹುದು. ಇತಿಹಾಸ ಗಮನಿಸಿದರೆ, ಅಧಿಕಾರ ಅಂತಸ್ತನ್ನು ತಿರಸ್ಕರಿಸಿದವನೇ ಸಮಾಜದ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿದವನು ಎಂದು ಅರಿಯಬಹುದು. ಆದರೆ ಇಲ್ಲಿ ಹೋರಾಟ, ಕರಪತ್ರ ರೋಲ್‌ಕಾಲ್, ವಿಧಾನಸೌಧದ ಮೆಟ್ಟಿಲುಗಳು ಇತ್ಯಾದಿಗಳ ಈ ಹಿನ್ನೆಲೆಯಲ್ಲಿ ಇಂದಿನ ಜಾಗತೀಕರಣ ಖಾಸಗೀಕರಣ ಉದಾರೀಕರಣದ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ದೊಂಬರಾಟವನ್ನು ಹೆಚ್ಚಾಗುವುದನ್ನು ದಲಿತ ನಿಲ್ಲಿಸಲೇಬೇಕು. ಈ ಹಿನ್ನಲೆಯಲ್ಲಿ ಕೆಳಸ್ತರದ ಧ್ವನಿ ಮುಖ್ಯ ಮಂತ್ರಿಗಳಿಗೆ ಅರ್ಪಿತವಾಗುವ ಪುಸ್ತಕಗಳಿಗೆ ಧ್ವನಿಯಾಗಬಾರದು.

3. ಪ್ರಶ್ನೆಯಲ್ಲೇ ತಪ್ಪಿದೆ ಎನ್ನುವುದು ನನ್ನ ಭಾವನೆ. ಯಾರ ಗೌರವ ಸಂಪಾದನೆ ಮಾಡಬೇಕಾಗಿದೆ. ನೈತಿಕ ಗೌರವ ಇದ್ದರೆ ಧಾರ್ಮಿಕ ನಂಬಿಕೆಗಳು ನಮ್ಮನ್ನು ಛಿದ್ರಗೊಳಿಸಿರುವುದು ನಮಗೆ ಗೊತ್ತಿದೆ. ಮತಾಂತರ ಗೊಂಡ ಕ್ರೈಸ್ತನನ್ನು ದಲಿತ ಕ್ರೈಸ್ತ ಎಂದು ಯಾಕೆ ಕರೆಯುತ್ತಿದ್ದಾರೆ. ಹೀಗಾಗಿ ಧರ್ಮ ಜಾತಿ ದೇವರು ದಲಿತರಿಗೆ ಗೌರವ ತರುವುದಿಲ್ಲವೆಂದೇ ನನ್ನ ಭಾವನೆ. ಅವರವರ ಮಾರಮ್ಮ ಮುಳ್ಕಟ್ಟಮ್ಮ, ಪಟಾಲಮ್ಮ ಮಾತ್ರ ಅವರಿಗೆ ಗೌರವ ತರಬಹುದು. ಗೌರಿ ಗಣೇಶ ಅಲ್ಲ, ಸತ್ಯನಾರಾಯಣ ಅಲ್ಲ.

4. ಮೀಸಲಾತಿ ಎಂಬುವುದು ಇಂದು ತನ್ನ ಎಲ್ಲಾ ಅರ್ಥವನ್ನು ಊಸರವಳ್ಳಿತರ ಬದಲಾಯಿಸುತ್ತಿದೆ. ಕೆಟ್ಟ ವ್ಯವಸ್ಥೆಯೊಂದನ್ನು ನಂಬಿ ಅದರಲ್ಲಿ ಕನಿಷ್ಠ ಗೌರವ ಸಂಪಾದಿಸಲು ಮೀಸಲಾತಿಯ ಮೊರೆ ಹೋಗಬೇಕಾಗಿದೆ. ಮೀಸಲಾತಿ ಒಬ್ಬ ದಲಿತನ ನೈಜ ಹಕ್ಕು. ಈ ಮೀಸಲಾತಿ ಸೌಲಭ್ಯ ಪಡೆದ ಪ್ರತಿವ್ಯಕ್ತಿಯು ಚಿಕ್ಕ ಕಾರ್ಪಸ್‌ಫಂಡನ್ನು ರೂಪಿಸಬೇಕು. ಹಾಗೆಯೇ ಕಾರ್ಪಸ್ ಫಂಡ್ ಮೀಸಲಾತಿಯ ಯಾವ ಸೌಲಭ್ಯವನ್ನೂ ಪಡೆಯದ ಕಟ್ಟ ಕಡೆಯ ದಲಿತನಿಗೆ ಮೀಸಲಾಗಿರಬೇಕು, ಬಹುಶಃ ಇಂತಹ ಅರ್ಥವಂತ ತಿಳುವಳಿಕೆಯನ್ನು ರೂಪಿಸಲೇ ಬೇಕಾದದ್ದು ಇಂದಿನ ಪ್ರಪ್ರಥಮ ಕರ್ತವ್ಯ. ಕಾರಣ ಯಾವ ಸರ್ಕಾರಗಳು ದಲಿತರ ನಿಜ ಮನಸ್ಥಿತಿಯನ್ನು ಅರಿಯಲು ಸಾಧ್ಯವಾಗಿಲ್ಲ, ಈ ಹಿನ್ನಲೆಯಲ್ಲಿ ಮೀಸಲಾತಿಯ ಬಗ್ಗೆ ಬೇರೆ ಚರ್ಚೆಯೇ ನಮ್ಮಲ್ಲಾಗಬೇಕು.

5. ಜಾಗತೀಕರಣ ಹೊಸದಲ್ಲ ಹಳೆಯದೇ, ಇದರ ಬಣ್ಣ ಹಲವು ಹತ್ತು ಸಲ ಬದಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂದಿನಿಂದಲೂ ಮುಂಚೂಣಿಯಲ್ಲಿರುವವರು ದಲಿತರೇ. ಮುಂಚೂಣಿಗೆ ಬಂದು ಜಾತಿಕೆಡಿಸಿಕೊಂಡವರೇ ಬಹು ಜನ. ಈ ಹಿನ್ನೆಲೆಯಲ್ಲಿ ಸವಿಸ್ತಾರವಾದ ದಲಿತ ಪ್ರಜ್ಞೆಯನ್ನು ರೂಪಿಸಿಕೊಳ್ಳಬೇಕು. ಅದು ಗೋಪಾಲಗೌಡರ ಹೋರಾಟದಲ್ಲಿ ಕಾಣಬಹುದು. ಟಿಕಾಯತ್‌ರ ಹೋರಾಟದಲ್ಲಿ ಕಾಣಬಹುದು. ಈ ಹಿನ್ನಲೆಯಲ್ಲಿ ದಲಿತ ಪ್ರಜ್ಞೆ ಯಾವ ಬೇಸ್ತುಗೂ ಬೀಳದೆ ಮುನ್ನಡೆಯಬೇಕಾಗಿದೆ. ಈ ಮುನ್ನಡೆಯಲ್ಲಿ ಸಾಮಾಜಿಕ ಸ್ಥಗಿತಕ್ಕೆ ಉತ್ತರ ನೀಡಬಹುದು. ಎಲ್ಲಾ ವಾದಗಳು ಒಂದೊಂದು ವಾದದೊಳಗೂ ನುಸುಳಿದಾಗ ಆಯಾ ಕಾಲಕ್ಕೆ ಆಯಾ ಸಮಸ್ಯೆಗಳಿಗೆ ಪರಿಹಾರ ನೀಡಬಹುದು. ●

ದಲಿತರು ರಾಜಕೀಯ ಶಕ್ತಿಯಾಗಿ ಬೆಳೆಯಬೇಕು

○ ಡಾ|| ಕಮಲಾ ಹಂಪನಾ
ಸಾಹಿತಿಗಳು, ಚಿಂತಕರು



ಜಾಗತೀಕರಣದ ಅನುಕೂಲ-ಅನಾನುಕೂಲದ ವಿಷಯದಲ್ಲಿ ಇತರರಂತೆ ದಲಿತರೂ ಭಾಜನರಾಗುತ್ತಾರೆ. ಇಲ್ಲಿಯೂ ಸ್ಪರ್ಧಾತ್ಮಕವಾಗಿಯೇ ದಲಿತರು ತಮ್ಮ ಬದುಕನ್ನು ಬದಲಾಯಿಸಿ ಕೊಳ್ಳಬೇಕಾಗುತ್ತದೆ. ಇದೊಂದು ಮುಕ್ತ ಬಯಲು, ಶಕ್ತಿ ಇದ್ದವನು ಓಡಿ ಗುರಿ ಮುಟ್ಟುತ್ತಾನೆ. ಇಲ್ಲಿ ದಲಿತನಿಗೆ ಯಾವ ರಿಯಾಯಿತಿಯೂ ಇಲ್ಲ.

1) ಐದು ಪ್ರಶ್ನೆಗಳೂ ತುಂಬ ಚರ್ಚೆಗೆ ಒಳಗಾಗಬೇಕಾದ ಹಾಗೂ ಬೇರೆ ಬೇರೆ ಆಯಾಮಗಳಿಂದ ವಿಶ್ಲೇಷಿಸಬೇಕಾದ ವಿಷಯಗಳಾಗಿವೆ. ಇಂಥ ಪ್ರಶ್ನೆಗಳು ಇಂದಿನ ಪ್ರಸ್ತುತತೆಯೂ ಹೌದು, ಇಲ್ಲಿ ದೊರೆಯುವ ಸಲಹೆ, ಸೂಚನೆ, ಅಭಿಪ್ರಾಯಗಳು ದಲಿತರ ಬದುಕಿನ ಬೆಳಕಿನಕಿಂಡಿಗಳಾಗಬಹುದು.

ಎಲ್ಲ ವಾದಗಳೂ ಕಾಲದ ಪ್ರಸ್ತುತತೆಯ ಒರೆಗಲ್ಲಿಗೆ ಒಡ್ಡಿಕೊಳ್ಳುತ್ತವೆ. ಡಾ|| ಬಿ.ಆರ್. ಅಂಬೇಡ್ಕರ್‌ರರ ವಾದವೂ ಈ ನಿಕಷದಿಂದ ಹೊರಗೆ ಉಳಿದಿಲ್ಲ. ಆದರೆ ದಲಿತರ ವಿಷಯದಲ್ಲಿನ ಅಂಬೇಡ್ಕರರ ವಾದ ಅವರ ಕಾಲದ ತೀವ್ರತೆಗಿಂತಲೂ ಇಂದು ಹೆಚ್ಚು ತೀವ್ರತರವಾಗಿದೆ. ಸಂವಿಧಾನ ದತ್ತವಾಗಿ, ಕಾನೂನಿನನ್ವಯ ಕೆಲವು ಸವಲತ್ತುಗಳು ದೊರೆತಿರುವುದು ನಿಜವಾದರೂ ಅವುಗಳು ಸಂಪೂರ್ಣ ಅರ್ಥದಲ್ಲಿ, ದಲಿತರಿಗೆ ಇನ್ನೂ ದೊರೆಯುವಲ್ಲಿ ಗಗನ ಕುಸುಮಗಳಾಗಿಯೇ ಇವೆ.

ಅಂಬೇಡ್ಕರರ ವಾದ ಒಂದರಿಂದಲೇ ದಲಿತರ ವಿಮೋಚನೆ ಸಾಧ್ಯವಿಲ್ಲ. ದಲಿತರು ಇನ್ನೂ ಗಟ್ಟಿಗೊಳ್ಳಬೇಕಾಗಿದೆ. ತಮ್ಮ ಹಕ್ಕುಗಳಿಗೆ ಮಾತ್ರ ಹೋರಾಟ ಮಾಡದೆ ಬಾಧ್ಯತೆಗಳನ್ನು ಅರಿಯಬೇಕಿದೆ. ಜನಾಂಗವನ್ನು ಎಚ್ಚರಿಸಿ ಮುಂದೊಯ್ಯಬೇಕಾದ ಅಗತ್ಯವೂ ಇದೆ, ಅನಿವಾರ್ಯತೆಯೂ ಇದೆ. ಡಾ|| ಅಂಬೇಡ್ಕರರ ಕಾಲದಲ್ಲಿನ ಸಮಸ್ಯೆಗಳು ಒಂದು ಕಡೆಯಾದರೆ ಇಂದು ಎದುರಿಸಬೇಕಾದ ಹೊಸ ಸವಾಲುಗಳು ಇನ್ನೊಂದು ಕಡೆ. ಮೇಲ್ವರ್ಗದವರ ಹುನ್ನಾರಗಳು, ಕಪಟ ನಾಟಕಗಳು- ಇವುಗಳಿಗೆ ಪರಿಹಾರದ ಹೊಸ ಮಾರ್ಗಗಳ ಅಗತ್ಯವೂ ಇದೆ.

2) ಒಂದಾಗುವುದರಿಂದ ತಾವೊಂದು ದೊಡ್ಡ ಶಕ್ತಿಯಾಗಬಲ್ಲೆವು, ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮನ್ನು ಸ್ಥಾಪಿಸಿಕೊಳ್ಳಬಹುದು-ಎನ್ನುವ ಅರಿವು ದಲಿತ ಸಮುದಾಯದಲ್ಲಿ ಇನ್ನೂ ದಟ್ಟವಾಗಿ ಮೂಡದೆ ಇರುವುದು ಒಂದು ಅಂಶ. ಈ ಎಚ್ಚರಿಕೆ ಹೊಂದಿ ಹೆಜ್ಜೆಯಿಡಲು ಪ್ರಯತ್ನಿಸುವ ಕೆಲವರು ದಲಿತರನ್ನು ಮೇಲ್ಜಾತಿಯವರು ಒಂದಾಗಲು ಬಿಡದಿರುವುದು ತಮ್ಮ ಸ್ವಾರ್ಥಕ್ಕಾಗಿ ದಲಿತರಲ್ಲಿ ಕೆಲವರು ಮೇಲ್ಜಾತಿಯವರ ಕೈಗೊಂಬೆಗಳಾಗಿ ವರ್ತಿಸುವುದು, ತಾವೇ ಆಮಿಷಗಳಿಗೆ ಒಳಗಾಗುವುದು, ತಮ್ಮ ತಮ್ಮ ಜಾತಿ-ಮತಗಳಲ್ಲಿಯೇ ಇರುವ ಭೇದ-ಭಾವಗಳು-ಈ ಕಾರಣಗಳಿಂದ ದಲಿತರು ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲ.

ದಲಿತರು ರಾಜಕೀಯ ಶಕ್ತಿಯಾಗಿ ಬೆಳೆಯಬೇಕು. ಅದಕ್ಕೆ ಬೇಕಾದ ಒಗ್ಗಟ್ಟು, ಪೂರ್ವಸಿದ್ಧತೆ, ಚಾಣಕ್ಯತನ, ಶಿಕ್ಷಣ ಪಡೆಯಬೇಕಿದೆ. ಜನ ಹೃದಯ ಗೆಲ್ಲಬೇಕು. ಇಂದು ಒಂದು ಜನಾಂಗದ ಬೆಳವಣಿಗೆಗೆ ಇತರ ಶಕ್ತಿಗಳಂತೆಯೇ ರಾಜಕೀಯ ಶಕ್ತಿಯೂ ಮುಖ್ಯ. ಈ ದಿಸೆಯಲ್ಲಿ ದಲಿತ ರಾಜಕೀಯ ಮುಖಂಡರು ಕಾರ್ಯೋನ್ಮುಖರಾಗಬೇಕು. ಈಗಾಗಲೇ ರಾಜಕೀಯ ರಂಗದಲ್ಲಿರುವವರು, ಯುವಶಕ್ತಿಗೆ ಮಾರ್ಗದರ್ಶಕರಾಗಿ ಬೆಳೆಸಬೇಕು. ಪಕ್ಷಯಾವುದಾದರೇನು? ರಾಜಕೀಯ ಮುಖಂಡರು ಆ ಕ್ಷೇತ್ರದಲ್ಲಿ ತಾವು ಬೆಳೆದು ಜನಾಂಗಕ್ಕೆ ಶಕ್ತಿ ತುಂಬಬೇಕು.

ದಲಿತರಿಗೆ ದೊರೆತಿರುವ ಅವಕಾಶಗಳನ್ನು ಸಂಪೂರ್ಣ ಅರ್ಥದಲ್ಲಿ ಬಳಸಿಕೊಳ್ಳಲು ಬೇಕಾದ ಶಿಕ್ಷಣ, ವಿದ್ಯಾಭ್ಯಾಸ, ಮಾರ್ಗದರ್ಶನ, ಇವುಗಳ ಅರಿವಿನ ಕೊರತೆ ಇದೆ. ಸ್ವಾತಂತ್ರ್ಯ ಬಂದು ಐದು ದಶಕಗಳು ಕಳೆದಿವೆ. ದಲಿತ ಹೋರಾಟ ಪ್ರಾರಂಭವಾಗಿ ಕೆಲವು ದಶಕಗಳು ಉರುಳಿವೆ. ಈಗಲಾದರೂ ದಲಿತ ಜನಾಂಗದ ಬೆಳವಣಿಗೆಗೆ ಸಹಿಸದ ಸವರ್ಣೀಯರ ಕಿರುಕುಳವನ್ನು ಹೋಗಲಾಡಿಸಿ ಕೊಳ್ಳಬೇಕಿದೆ. ತಾವೇ ಬೆಳೆಯಬೇಕೆಂಬ ಅರಿವು, ಛಲವನ್ನು ಬೆಳೆಸಿಕೊಳ್ಳಬೇಕಿದೆ. ಏಕೆಂದರೆ ದಲಿತರ ಸಮಸ್ಯೆಗಳನ್ನು ದಲಿತರೇ ನಿವಾರಿಸಿಕೊಳ್ಳಬೇಕಿದೆ.

3) ಧರ್ಮ ವೈಯಕ್ತಿಕ ನೆಲೆಯದು. ವ್ಯಕ್ತಿಯು ತನಗೆ ಇಷ್ಟವಾದ ಧರ್ಮವನ್ನು ಆಚರಿಸಲು ನಮ್ಮ ದೇಶದಲ್ಲಿ ಅವಕಾಶವಿದೆ. ದಲಿತ, ಇತರ ಸಮಾಜದ ವ್ಯಕ್ತಿಗಳಂತೆ ಶೈಕ್ಷಣಿಕವಾಗಿ ಔದ್ಯೋಗಿಕವಾಗಿ, ಸಾಮಾಜಿಕವಾಗಿ ಬೆಳೆದಾಗ ಹಿಂದೂ ಸಮಾಜದೊಳಗೆ ಗೌರವಯುತ ಅಸ್ತಿತ್ವ ಪಡೆಯಲು ಸಾಧ್ಯವಿದೆ. ಅದಕ್ಕೆ ಕೆಲವಾರು ನಿದರ್ಶನಗಳಿವೆ. ಕಾಲ ಬದಲಾಗುತ್ತಿದೆ. ಎಲ್ಲ ಸಮುದಾಯದ ನಿಲುವುಗಳೂ ಬದಲಾಗಲು ಪ್ರಾರಂಭಿಸಿವೆ.

ಕಿತ್ತು ತಿನ್ನುವ ಬಡತನ, ಅಜ್ಞಾನ, ಮೂಢನಂಬಿಕೆ ಇವುಗಳಿಗೆ ಒಳಗಾಗಿರುವ ದಲಿತರಲ್ಲಿ ಕೆಲವರು ಕೆಲವು ಸವಲತ್ತುಗಳಿಗೆ ಮತಾಂತರಗೊಂಡರೆ ಆಶ್ಚರ್ಯಪಡಬೇಕಿಲ್ಲ. ಸಾಮಾಜಿಕ ಸ್ಥಾನ-ಮಾನವೂ ಅದರಲ್ಲಿ ಮುಖ್ಯವಾದ ಒಂದಂಶವಾಗಿರುತ್ತದೆ. ಆದರೆ ಮತಾಂತರ ಒಂದರಿಂದಲೇ ದಲಿತರ ಸಮಸ್ಯೆಗಳೆಲ್ಲವೂ ನಿವಾರಣೆಯಾಗುವುದಿಲ್ಲ. ಅಲ್ಲಿ ಮತ್ತೊಂದು ರೀತಿಯ ಸಮಸ್ಯೆ ತಲೆದೋರುತ್ತದೆ.

4) ಸ್ಪರ್ಧಾತ್ಮಕ ಮನೋಭಾವ ಕಡಿಮೆಯಾಗುವುದಿಲ್ಲ. ದಲಿತರು ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸ್ಥಾನ ಪಡೆಯುವವರೆಗೂ ಮೀಸಲಾತಿಯ ಅಗತ್ಯವಿದೆ. ದಲಿತರ ಪ್ರಗತಿಗೆ ಮೀಸಲಾತಿ ಒಂದೇ ಪರ್ಯಾಯವಲ್ಲದಿದ್ದರೂ ಅವರ ಪ್ರಗತಿಯ ಅಗತ್ಯಗಳಲ್ಲಿ ಮೀಸಲಾತಿಯೂ ಒಂದಾಗಿದೆ.

5) ಜಾಗತೀಕರಣದ ಅನುಕೂಲ-ಅನಾನುಕೂಲದ ವಿಷಯದಲ್ಲಿ ಇತರರಂತೆ ದಲಿತರೂ ಭಾಜನರಾಗುತ್ತಾರೆ. ಇಲ್ಲಿಯೂ ಸ್ಪರ್ಧಾತ್ಮಕವಾಗಿಯೇ ದಲಿತರು ತಮ್ಮ ಬದುಕನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಇದೊಂದು ಮುಕ್ತ ಬಯಲು, ಶಕ್ತಿ ಇದ್ದವನು ಓಡಿ ಗುರಿ ಮುಟ್ಟುತ್ತಾನೆ. ಇಲ್ಲಿ ದಲಿತನಿಗೆ ಯಾವ ರಿಯಾಯಿತಿಯೂ ಇಲ್ಲ.

ಸಮಾಜದ ಮುಖ್ಯವಾಹಿನಿಯಲ್ಲಿ ತನ್ನ ವ್ಯಕ್ತಿತ್ವವನ್ನು ದಲಿತ ರೂಪಿಸಿಕೊಳ್ಳಬೇಕು. ಗೌರವಯುತ ಪಾಲು ಪಡೆಯಲು ನಿರಂತರ ಶ್ರಮ-ಶ್ರದ್ಧೆ ಬೇಕಾಗುತ್ತದೆ. ಮೇಲ್ಜಾತಿ-ಮೇಲ್ವರ್ಗದವರ ಅಡೆ-ತಡೆಗಳ ಮಧ್ಯೆಯೂ ಆತ್ಮವಿಶ್ವಾಸದಿಂದ, ಧೈರ್ಯದಿಂದ ಸವಾಲುಗಳನ್ನು ಸ್ವೀಕರಿಸಿ ಮುನ್ನಡೆಯಬೇಕಿದೆ. ಇತರರು ಹತ್ತು ಪಟ್ಟು ಕೆಲಸ ಮಾಡಿ ನೂರು ಪಟ್ಟು ಪ್ರಯೋಜನ ಪಡೆಯುತ್ತಾರೆ. ದಲಿತನೊಬ್ಬ ನೂರು ಪಟ್ಟು ಉತ್ತಮ ಕೆಲಸ ಮಾಡಿದರೂ ಹತ್ತು ಪಟ್ಟು ಪ್ರಯೋಜನ ಪಡೆಯುವುದು ಅನುಮಾನವಾಗಿದೆ. ಇದಕ್ಕೆ ಕಾರಣಗಳ ದೊಡ್ಡ ಪಟ್ಟಿಯನ್ನೇ ಕೊಡಬಹುದು. ಹೀಗಾಗದಂತೆ ತಡೆಗಟ್ಟಲು ದಲಿತರು ಹೋರಾಡಬೇಕಿದೆ. ಹಕ್ಕು-ಬಾಧ್ಯತೆ ಎರಡನ್ನೂ ಅರಿತು ದಲಿತರು ಅಭ್ಯುದಯದ ಮಾರ್ಗಸೂತ್ರವನ್ನು ಕಂಡುಕೊಳ್ಳಬೇಕಿದೆ.

ದಲಿತ ಎನ್ನುವ ಕಾರಣಕ್ಕೆ ಅಧಿಕಾರ-ಅಂತಸ್ತು ದೊರೆತಾಗ ಮರೆಯಬಾರದು. ದಲಿತ ಎನ್ನುವ ಕಾರಣಕ್ಕೆ ಎಲ್ಲರ ಕಾಲಿಗೂ ಬೀಳಬಾರದು, ಯಾರ ಕಾಲೂ ಹಿಡಿಯಬಾರದು. ದಲಿತರ ಆಚಾರ ವಿಚಾರಗಳು ಅವರ ಗೌರವವನ್ನು ಹೆಚ್ಚಿಸುವಂತಿರಬೇಕು. ಇತರರು ಗೌರವಿಸುವಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಹೊರಗಿನ ಸವಲತ್ತು ಹಾಗೂ ಸಹಾಯ ಸಹಕಾರಗಳು ದಲಿತರ ಬೆಳವಣಿಗೆಗೆ ಎಷ್ಟು ಮುಖ್ಯವೋ ತನ್ನ ಒಳಗಿನ ಅಂತಃಸತ್ವವನ್ನು ಬೆಳೆಸಿಕೊಳ್ಳುವುದು ಅಷ್ಟೇ ಮುಖ್ಯ. ●

ರಾಜಕೀಯ ಪಕ್ಷಗಳಿಂದ ದಲಿತರ ಹಿತ ಅಸಾಧ್ಯ

○ ಪುರುಷೋತ್ತಮ ದಾಸ್
ಕಾರ್ಮಿಕ ಮುಖಂಡರು



1 ಯಾವುದೇ ವಾದವು ಒಬ್ಬ ವ್ಯಕ್ತಿಗೆ ಸೀಮಿತವಾಗಿರುವುದಿಲ್ಲ. ಸಾಮಾನ್ಯವಾಗಿ ಪ್ರತಿಯೊಬ್ಬ ಮಹಾನ್ ವ್ಯಕ್ತಿಗಳು ನಿರೂಪಿಸಿದವಾದವು, ಸಮಾಜದ ಏರುಪೇರು. ಶೋಷಿತ ವರ್ಗದವರ ಏಳಿಗೆ ಹಾಗೂ ಎಲ್ಲರ ಉದ್ಧಾರಕ್ಕಾಗಿ ಶ್ರಮಿಸುವುದೇ ಆಗಿದೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ವಾದವು ಕೇವಲ ದಲಿತರಿಗೆ ಸೀಮಿತವಾಗಿಲ್ಲ. ಎಲ್ಲಾ ಬಡವ ವರ್ಗದವರ ಆಶಾಕಿರಣವಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಅಂಬೇಡ್ಕರ್ ವಾದವನ್ನು ಮುಂದಿಟ್ಟುಕೊಂಡು ದಲಿತರು ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಇನ್ನೂ ಅಡ್ಡಿ ಆತಂಕಗಳು ನಿವಾರಣೆಗೆ ಒದ್ದಾಡಬೇಕಾಗಿದೆ. ಅವುಗಳನ್ನು ನಿವಾರಿಸಿಕೊಳ್ಳುವ ಉಪಾಯವನ್ನು ದಲಿತರು ಕಂಡುಕೊಳ್ಳಬೇಕಾಗಿದೆ. ಎಲ್ಲಾ ಶಕ್ತಿಗಳನ್ನು ಮೀರಿ ದಲಿತರು ಬೆಳೆಯಬೇಕಾದರೆ ಅಂಬೇಡ್ಕರ್ ಚಿಂತನೆಯನ್ನು ಅರಗಿಸಿಕೊಳ್ಳಬೇಕು. ದಲಿತರು ವೈಜ್ಞಾನಿಕ ಮನೋಭಾವ ರೂಢಿಸಿಕೊಂಡು ಎಲ್ಲಾ ಕ್ಷೇತ್ರದ ಅರಿವನ್ನು ಪಡೆದುಕೊಂಡು ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರವನ್ನು ಹುಡುಕಿಕೊಳ್ಳಬೇಕು. ಹಾಗಾದಾಗ ಮಾತ್ರ ಅಂಬೇಡ್ಕರ್ ಹೋರಾಟದ ಹಾದಿ ನಮಗೆ ಬೆಳಕಾಗಲು ಸಾಧ್ಯವಾಗುತ್ತದೆ.

2) ಸಮಾಜದಲ್ಲಿರುವ ಧಾರ್ಮಿಕ ಕಟ್ಟುಪಾಡು, ಸಂಪ್ರದಾಯ ಆಚರಣೆಗಳು ರೂಢಿಗತವಾಗಿ ಬಂದಿರುವ ನಿಯಮಗಳು ಬಲವಾಗಿ ಗಟ್ಟಿಗೊಂಡು ಮೇಲು ಕೀಳು ಎನ್ನುವ ತಪ್ಪು ಕಲ್ಪನೆ ದಲಿತರಲ್ಲೂ ಬೇರೂರಿದೆ. ಇದರಿಂದ ದಲಿತರು ಕೂಡ ಒಂದೇ ಸಮುದಾಯವಾಗಿ ಯೋಚಿಸಲು ಸಾಧ್ಯವಾಗುತ್ತಿಲ್ಲ.

ಈಗಿರುವ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಪ್ರತ್ಯೇಕವಾಗಿ ದಲಿತರ ಹಿತ ಕಾಯುತ್ತದೆ ಎಂಬುದು ನಮಗೆ ನಂಬಲು ಸಾಧ್ಯವಿಲ್ಲದಂತಹ ಮಾತು. ಇಂದಿನ ರಾಜಕೀಯ ಸ್ಥಿತಿಯೇ ಹಾಗಿದೆ. ಬಿಎಸ್‌ಪಿಗೆ ಅಧಿಕಾರ ಸಿಕ್ಕಿದರೆ ಅದು ಯಾವ ರೀತಿ ಆಡಳಿತ ಮಾಡುತ್ತದೆ ಎನ್ನುವುದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ ಆ ಸಂದರ್ಭಕ್ಕಾಗಿ ಕಾಯಬೇಕು. ದಲಿತರೆಲ್ಲರೂ ಸೇರಿ ಬಿಎಸ್‌ಪಿಯನ್ನು ಕಟ್ಟುತ್ತಿರುವುದು ಖುಷಿ ಕೊಡುವ ವಿಷಯ. ಏನೂ ಇಲ್ಲದವನಿಗೆ ಏನಾದರೂ ಇದೆ ಎನ್ನುವ ಆಶಾ ಭಾವನೆಯನ್ನು ದಲಿತರು ಬಿ.ಎಸ್.ಪಿ.ಯಲ್ಲಿ ಭರವಸೆ ಇಟ್ಟಿದ್ದಾರೆ.

3) ದಲಿತರಿಗೆ ಧಾರ್ಮಿಕವಾಗಿ ಆಯ್ಕೆಯ ಅವಶ್ಯಕತೆ ಇದೆ. ಧರ್ಮವು ಎಲ್ಲಾಕಾಲಕ್ಕೂ ಎಲ್ಲರಿಗೂ ಶಾಂತಿಯನ್ನು ಹಿತವನ್ನು ಕೊಡುವ ದಾರಿ ಬೆಳಕಾಗಬೇಕು. ಇದೊಂದು ಕತ್ತಲೆಯ ಕೋಣೆಯಲ್ಲಿ ಬೆಳಕಿನ ಕಿಂಡಿಯನ್ನು ಇಟ್ಟಂತೆ. ಆದರೆ ಈಗಿನ ಸಮಾಜದಲ್ಲಿ ಕೆಲವರಿಗಷ್ಟೆ ಬೆಳಕು, ಉಳಿದವರಿಗೆ ಕತ್ತಲೆಯಾಗಿದೆ.

ದಲಿತರನ್ನು ಜಗತ್ತೇ ಗೌರವಿಸಬೇಕು. ದಲಿತರು ನಿರಂತರ ಶೋಷಣೆ, ದಬ್ಬಾಳಿಕೆ, ಹಿಂಸೆ, ಅವಮಾನ, ಕ್ರೌರ್ಯವನ್ನು ಸಾವಿರಾರು ವರ್ಷಗಳಿಂದ ಸಹಿಸಿಕೊಂಡು ಬಂದಿದ್ದಾರೆ. ಎಲ್ಲೂ ಸಿಡಿದೆದ್ದು ರಕ್ತ ಪಾತಕ್ಕೆ ಎಡೆಮಾಡಿಕೊಟ್ಟಿಲ್ಲ. ಬ್ರಾಹ್ಮಣ್ಯದ ಉರಿತಾಪದಿಂದ ಬಿಡಿಸಿಕೊಂಡು ಹಿಂದೂ ಸಮಾಜದಲ್ಲಿನ ಮೌಢ್ಯವನ್ನು ಹೋಗಲಾಡಿಸಿ ಮಾನವ ಕುಲಕ್ಕೆ ಹೊಸ ಬೆಳಕಾಗುವ ಧರ್ಮದ ಅವಶ್ಯಕತೆ ದಲಿತರಿಗೆ ಅನಿವಾರ್ಯ. ಮತಾಂತರ ಒಂದರಿಂದಲೇ ಗೌರವಯುತವಾಗಿ ಬದುಕಲು ಸಾಧ್ಯವಾಗಲಾರದು. ಗೌರವಯುತ ಬದುಕು ಎನ್ನುವುದು ಧರ್ಮದ ಜೊತೆ ಇಟ್ಟು ನೋಡುವುದಕ್ಕಿಂತಲೂ ವ್ಯಕ್ತಿಯ ಬದುಕಿನ ಮೇಲೆ ನಿಂತಿರುತ್ತದೆ. ನಮ್ಮ ಪರಿಸರದ ಪರಿವರ್ತನೆಯ ಜೊತೆಗೆ ಇನ್ನುಳಿದವರ ಬದಲಾವಣೆಯ ಅಗತ್ಯವಿದೆ. ಒಳ್ಳೆಯ ಸಮಾಜವನ್ನು ಕಟ್ಟಲು ಎಲ್ಲಾ ವರ್ಗದವರ ಪಾತ್ರ ಮುಖ್ಯ. ಇದೊಂದು ಮನೆ ಕಟ್ಟಿದ ಹಾಗೆ.

4) ದಲಿತರಿಗೆ ಏನೂ ಇಲ್ಲದ ಸ್ಥಿತಿಯಲ್ಲಿ ಅವಕಾಶ ಸಿಕ್ಕಿದ್ದು ಮೀಸಲಾತಿಯಿಂದ. ಇದು ಕೋಟ್ಯಾಂತರ ಜನರಿಗೆ ದಾರಿ ದೀಪವಾಗಿದೆ. ಅಷ್ಟೋ ಇಷ್ಟೋ ಸಮಾಜದಲ್ಲಿ ತಲೆ ಎತ್ತಿ ನಿಲ್ಲುವುದಕ್ಕೆ ಸಾಧ್ಯವಾಗಿದೆ. ಈಗಾಗಲೇ ಮೀಸಲಾತಿಯನ್ನು ಪಡೆದುಕೊಂಡಿರುವ ದಲಿತರು ಇನ್ನು ಅವಕಾಶದಿಂದ ವಂಚಿತರಾದ ದಲಿತರಿಗೆ ಕಲ್ಪಿಸಿಕೊಡುವ ಔದಾರ್ಯವನ್ನು ರೂಢಿಸಿಕೊಳ್ಳಬೇಕು.

5) ಜಾಗತೀಕರಣದಿಂದ ದಲಿತರ ಬದುಕು ಸುಧಾರಿಸುತ್ತಿರುವ ಯಾವ ಸೂಚನೆಯು ಕಾಣುತ್ತಿಲ್ಲ. ಆದರೆ ಅದಕ್ಕೆ ಕಾಯುತ್ತಾ ಕೂರುವುದು ಸಲ್ಲ. ಬದಲಾವಣೆಯ ಬದುಕಿಗೆ ತಾವೇ ಹೊಂದಿಕೊಂಡು ಆರ್ಥಿಕವಾಗಿ ಸದೃಢವಾಗಬೇಕಾಗಿದೆ. ದಲಿತರಿಗೆ ಉನ್ನತ ಶಿಕ್ಷಣದ ಅಗತ್ಯವಿದ್ದು, ಆ ಮೂಲಕ ಜೀವನ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ. ಯಾವ ರಾಜಕೀಯ ಪಕ್ಷ ಬಂದರೂ ಉದ್ಧಾರ ಮಾಡಲು ಸಾಧ್ಯವಿಲ್ಲ. ನಮ್ಮ ಪ್ರಗತಿಗೆ ನಾವೇ ಕಾರಣ ಎನ್ನುವ ಭಾವನೆ ಬೆಳಸಿಕೊಂಡಾಗ, ಜಾಗತೀಕರಣದಿಂದಲೂ ದಲಿತರು ಮುಕ್ತಿ ಪಡೆಯಬಹುದು. ●

ವಿವೇಕಾನಂದರ ವಿಚಾರಗಳು

ಚಂಡಾಲನಿಗೆ ವಿದ್ಯಾಭ್ಯಾಸದ ಅವಶ್ಯಕತೆ ಇರುವಷ್ಟು ಬ್ರಾಹ್ಮಣನಿಗೆ ಇಲ್ಲ. ಬ್ರಾಹ್ಮಣನ ಮಗನಿಗೆ ಒಬ್ಬ ಉಪಾಧ್ಯಾಯನು ಬೇಕಾದರೆ ಚಂಡಾಲನ ಮಗನಿಗೆ ಹತ್ತು ಉಪಾಧ್ಯಾಯರು ಬೇಕು. ಜನನಾರಭ್ಯ ಪ್ರಕೃತಿಯು ಯಾರಿಗೆ ಸೂಕ್ಷ್ಮ ಬುದ್ಧಿಯನ್ನು ಕೊಟ್ಟಿಲ್ಲವೋ, ಅಂತಹವರಿಗೆ ಹೆಚ್ಚು ಸಹಾಯವನ್ನು ಒದಗಿಸಿಕೊಡಬೇಕು.

ನಮ್ಮ ದುಃಖಕ್ಕೆ, ನಮ್ಮ ಅವನತಿಗೆ ನಾವೇ ಕಾರಣಕರ್ತರು. ನಮ್ಮ ಅದೃಷ್ಟಕ್ಕೆ ನಾವೇ ಹೊಣೆ. ನಮ್ಮ ಶ್ರೀಮಂತಕುಲೀನ ವಂಶಸ್ಥರು ಜನಸಾಮಾನ್ಯರನ್ನು ತುಳಿಯುತ್ತಾ ಹೋದರು. ಅವರು ನಿರಾಶರಾಗಿ ಈ ಕೋಟಲೆಯಲ್ಲಿ ತಾವು ಮನುಷ್ಯರೆಂಬುದನ್ನು ಮರೆತರು. ಹಲವು ಶತಮಾನಗಳಿಂದ ಅವರು ಕಟ್ಟಿಗೆ ಒಡೆಯುವ, ನೀರೆಳೆಯುವ ಶ್ರಮಜೀವಿಗಳಾಗಿರುವರು. ಈಗ ಅವರು ಹುಟ್ಟು ಗುಲಾಮರು. ತಮ್ಮ ಕೆಲಸವೇ ಜೀತಮಾಡುವುದು ಎಂಬ ದೃಢನಂಬಿಕೆ ಇಂದು ಅವರಲ್ಲಿ ಬಂದು ಹೋಗಿದೆ. ನಾವು ಈಗ ಎಷ್ಟೇ ವಿದ್ಯಾವಂತರಾಗಿದ್ದರೂ ಆ ಶ್ರಮಜೀವಿಗಳಿಗೆ ಒಂದು ಒಳ್ಳೆಯ ಮಾತನ್ನು ಆಡಿದೆವೆ? ಆ ಬಡವರನ್ನು ಮೇಲೆತ್ತುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಇದು ಮಾತ್ರವಲ್ಲ, ಪಾಶ್ಚಾತ್ಯರಿಂದ ಬಂದ ಅನುವಂಶಿಕತೆ ಮುಂತಾದ ನಿರರ್ಥಕ ಸಿದ್ಧಾಂತಗಳ ಸಹಾಯದಿಂದ ರಾಕ್ಷಸೀಯ ಸಿದ್ಧಾಂತಗಳನ್ನು ತಯಾರು ಮಾಡುತ್ತಿರುವೆವು. ದೀನರನ್ನು ಮತ್ತೂ ಹೆಚ್ಚಾಗಿ ಪೀಡಿಸುವುದಕ್ಕೆ ಇದು...ಹೇ ಬ್ರಾಹ್ಮಣರೇ, ಅನುವಂಶಿಕವಾಗಿ ಬಂದ ಗುಣಗಳ ಪ್ರಕಾರ ಬ್ರಾಹ್ಮಣನಿಗೆ ಹೊಲೆಯನಿಗಿಂತ ಹೆಚ್ಚು ವಿದ್ಯಾಭ್ಯಾಸಕ್ಕೆ ಯೋಗ್ಯತೆ ಇದ್ದರೆ ಹೊಲೆಯನ ವಿದ್ಯಾಭ್ಯಾಸಕ್ಕೆ ಎಲ್ಲ ಹಣವನ್ನೂ ಖರ್ಚುಮಾಡಿ, ಬ್ರಾಹ್ಮಣನಿಗೆ ಖರ್ಚುಮಾಡಬೇಡಿ. ದುರ್ಬಲರಿಗೆ ಕೊಡಿ. ಅಲ್ಲಿ ನಿಮ್ಮ ದಾನವೆಲ್ಲಾ ಬೇಕಾಗಿದೆ. ಬ್ರಾಹ್ಮಣ ಹೆಚ್ಚು ಬುದ್ಧಿವಂತನಾಗಿದ್ದರೆ ಹೆಚ್ಚು ಸಹಾಯವಿಲ್ಲದೆ ಬುದ್ಧಿವಂತನಾಗಬಲ್ಲ. ಉಳಿದವರು ಬುದ್ಧಿವಂತರಾಗಿಲ್ಲದೆ ಇದ್ದರೆ ಅವರಿಗೇ ಶಿಕ್ಷಣ ಮತ್ತು ಗುರುಗಳೆಲ್ಲ ಮೀಸಲಾಗಿರಲಿ. ನಾನು ಅರಿತುಕೊಂಡಿರುವಂತೆ ಇದೇ ನ್ಯಾಯ, ಇದೇ ವಿವೇಕ. ●

ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು



○ ಕೆ.ವಿ. ಸುಬ್ಬಣ್ಣ

ಅನುಭವ



ಜಯ ಪಡೆಯುತ್ತೇನೆ ಝೆನ್ ಪಡೆಯುತ್ತೇವೆ ಎಂದು ಸಂಕಲ್ಪಸಿಕೊಂಡ ಸುಭೂತಿ ಎನ್ನುವಾತ, ಅದಕ್ಕಾಗಿ ದೀರ್ಘ ಹಂಬಲಿಸಿಕೊಂಡು ಶ್ರಮಿಸಿದ. ಕ್ರಮೇಣ, ತಾನು ಇಡೀ ಸಂಕಲ್ಪವೇ ಆಗಿಬಿಟ್ಟ. ಕ್ರಮೇಣ, ಜಯ ಆದ, ಝೆನ್ ಆದ.

ಆದರೆ ಹೀಗಾಗುವಾಗ ತಾನು ಉಳಿದಿರಲಿಲ್ಲ, ಕಳೆದುಹೋಗಿದ್ದ. ತಾನೆ ಇಲ್ಲದಿರುವಾಗ ಜಯ ಎಲ್ಲಿ, ಝೆನ್ ಎಲ್ಲಿ? ಇದ್ದದ್ದು-ಸರ್ವತ್ರ ಮಹಾಶೂನ್ಯವೊಂದೇ. ಆ ಮಹಾಶೂನ್ಯದಲ್ಲಿ ಮಾತ್ರ ಎಲ್ಲವೂ ಇದ್ದವು.

ಅಲ್ಲ

ಒಬ್ಬ ಭಿಕ್ಷು, ಗುರು ನನ್‌ಸೆನ್‌ನ ಹತ್ತಿರ ಬಂದ. 'ಗುರುವೇ ಹೇಳಿ, ಯಾವ ಗುರುವೂ ಯಾವತ್ತೂ ಉಪದೇಶಿಸದೆ ಇರುವಂಥ ಬೋಧೆಯುಂಟೆ?' ಎಂದು ಪ್ರಶ್ನಿಸಿದ.

'ಉಂಟಪ್ಪ' ಎಂದ ನನ್‌ಸೆನ್

'ಯಾವುದು? ಹೇಳುತ್ತೀರಾ?' ಎಂದು ಭಿಕ್ಷು ಪ್ರಶ್ನಿಸಿದ.

ನನ್‌ಸೆನ್ ಹೇಳಿದ-'ಹೇಳುತ್ತೇನೆ, ಕೇಳಿಕೋ, ಬುದ್ಧ ಅಲ್ಲ, ವಸ್ತು ಅಲ್ಲ, ಚಿಂತನೆ ಅಲ್ಲ'.

ಇಲ್ಲದ ಬೆರಳನ್ನು ಎತ್ತಿದ

ಗುತೆಯಿ ಎನ್ನುವ ಗುರು. ಆತನಿಗೆ ಝೆನ್ ಬಗ್ಗೆ ಯಾವುದೇ ಪ್ರಶ್ನೆಯನ್ನು ಉತ್ತರಿಸುವಾಗ ಬೆರಳೆತ್ತುವುದು ರೂಢಿಯಾಗಿ ಹೋಗಿತ್ತು. ಅವನ ಶಿಷ್ಯರಲ್ಲಿ ಎಳೆಯನಾಗಿದ್ದವನೊಬ್ಬ ಅದನ್ನು ಅನುಕರಿಸಲು ತೊಡಗಿದ. ಗುತೆಯಿ, ಬೋಧಿಸುತ್ತಿರುವಾಗ ಒಂದೊಂದು ಸಲ ಬೆರಳೆತ್ತಿದಾಗಲೂ ಈ ಹುಡುಗ ತಾನೂ ಬೆರಳೆತ್ತುತ್ತಿದ್ದ. ಅದನ್ನು ಕಂಡು ಎಲ್ಲರೂ ನಗುತ್ತಿದ್ದರು.

ಒಂದು ದಿನ ಗುತೆಯಿ, ಅದನ್ನು ಕಂಡ, ಆತ, ಹುಡುಗನ ಕೈಯನ್ನು ಹಿಡಿದುಕೊಂಡ. ತನ್ನ ಚೂರಿಯನ್ನು ತೆಗೆದು, ಅಲುಗನ್ನು ಹೊರಗೆ ಸೆಳೆದು ಅದರಿಂದ ಹುಡುಗನ ಬೆರಳನ್ನು ಕತ್ತರಿಸಿ ದೂರ ಎಸೆದುಬಿಟ್ಟ. ಹುಡುಗ ನೋವಿನಿಂದ ಅರಚಿಕೊಳ್ಳುತ್ತ ಓಡ ತೊಡಗಿದ.

'ನಿಲ್ಲು' ಎಂದು ಗುತೆಯಿ ಅಬ್ಬರಿಸಿದ. ಹುಡುಗ ನಿಂತ. ಕಣ್ಣಲ್ಲಿ ನೀರು ತುಂಬಿಕೊಂಡು ಗುರುವಿನ ಕಡೆ ನೋಡಿದ. ಗುತೆಯಿ ಬೆರಳೆತ್ತಿದ. ಹುಡುಗನೂ ಬೆರಳೆತ್ತಿದ. ಆಗ ತತ್‌ಕ್ಷಣ, ಆತನಿಗೆ ತನ್ನ ಬೆರಳಿಲ್ಲ ವೆಂಬುದು ಅರಿವಾಯಿತು. ಒಂದೂ ಕ್ಷಣ ತಳುವಿದ. ಅನಂತರ, ಬಾಗಿ ನಮಸ್ಕರಿಸಿದ.

ಅರ್ಥವಾಗದ್ದು

ವಿದ್ಯಾರ್ಥಿಯಾಗಿ ಅಭ್ಯಾಸ ಮಾಡುತ್ತಿದ್ದ ಡೊಕೊ, ಒಬ್ಬ ಝೆನ್ ಗುರುವಿನ ಹತ್ತಿರ ಹೋಗಿ ಪ್ರಶ್ನೆ ಮಾಡಿದ-'ನಾನು ಸತ್ಯವನ್ನು ಅರಸುತ್ತಿದ್ದೇನೆ. ಅದನ್ನು ಪಡೆಯಬೇಕಾದರೆ ಮನಸ್ಸನ್ನು ಯಾವ ಸ್ಥಿತಿಯಲ್ಲಿಟ್ಟುಕೊಂಡಿರಬೇಕು, ಮತ್ತು ಯಾವ ಸಾಧನೆಯನ್ನು ಮಾಡಬೇಕು?'

ಗುರು ಹೇಳಿದ-'ಮನಸ್ಸು ಎನ್ನುವುದಿಲ್ಲ. ಹಾಗಿರುವಾಗ ಅದನ್ನು ಯಾವುದೇ ಸ್ಥಿತಿಯಲ್ಲಿಡುವ ಮಾತೇ ಇಲ್ಲ. ಸತ್ಯ ಎನ್ನುವುದಿಲ್ಲ. ಹಾಗಿರುವಾಗ ಅದಕ್ಕಾಗಿ ಸಾಧನೆ ಮಾಡುವುದೆಲ್ಲಿ ಬಂತು?'

ಡೊಕೊ ಮತ್ತೆ ಪ್ರಶ್ನೆ ಮಾಡಿದ-'ಸಾಧನೆ ಮಾಡಲಿಕ್ಕೆ ಮನಸ್ಸು ಎಂಬುದೇ ಇಲ್ಲವಾದ ಪಕ್ಷದಲ್ಲಿ, ಅರಸುವುದಕ್ಕೆ ಸತ್ಯ ಎಂಬುದೇ ಇಲ್ಲವಾದ ಪಕ್ಷದಲ್ಲಿ-ಝೆನ್ ಅಧ್ಯಯನ ಮಾಡುತ್ತೇವೆ ಅದಕ್ಕಾಗಿ ಸಾಧನೆ ರೂಢಿಸಿಕೊಳ್ಳುತ್ತೇವೆ ಅಂತ ಸಂಕಲ್ಪಿಸಿಕೊಂಡು ಈ ಭಿಕ್ಷುಗಳೆಲ್ಲ ನಿತ್ಯವೂ ನಿಮ್ಮ ಸುತ್ತ ಕೂಡಿಕೊಳ್ಳುತ್ತಾರಲ್ಲ, ಏಕೆ?'

ಗುರು ಹೇಳಿದ-'ಇಲ್ಲಿ ಒಂದು ಅಂಗುಲ ಸ್ಥಳವೂ ಇಲ್ಲವಲ್ಲಪ್ಪ, ಭಿಕ್ಷುಗಳು ಬಂದು ಕೂಡಿಕೊಳ್ಳುವುದು ಹೇಗೆ? ನನಗೆ ನಾಲಗೆಯೇ ಇಲ್ಲ, ನಾನುಕರೆಯುವುದು ಹೇಗೆ? ಅವರು ಬರುವುದು ಹೇಗೆ? ನಾನು ಬೋಧಿಸುವುದಾದರೂ ಹೇಗೆ?'

'ಓ ಸುಳ್ಳನ್ನು ಹೇಳುತ್ತಿದ್ದೀರಲ್ಲ' ಎಂದ ಡೊಕೊ.

'ಬೇರೆಯವರ ಜತೆ ಮಾತಾಡಲಿಕ್ಕೆ ನಾಲಿಗೆಯೇ ಇಲ್ಲದಿರುವಾಗ, ನಾನು ನಿನಗೆ ಹೇಗೆ ತಾನೆ ಸುಳ್ಳು ಹೇಳುತ್ತೇನಪ್ಪಾ?' ಎಂದ ಗುರು.

ಡೊಕೊ ಗೊಂದಲಗೊಂಡು ಖಿನ್ನವಾಗಿ ಹೇಳಿದ-'ನಿಮ್ಮ ದಾರಿಯೇ ತಿಳಿಯುವುದಿಲ್ಲ. ಅರ್ಥವೇ ಆಗುವುದಿಲ್ಲ'

ಗುರು ಉತ್ತರಿಸಿದ-

'ನಾನೇ ನನಗೆ ಅರ್ಥವಾಗುವುದಿಲ್ಲಪ್ಪ'

ತಗೋ ಬೆಳಕು



ಟೊಕುಸಸ್ ಅಧ್ಯಯನದಲ್ಲಿ ತೊಡಗಿಕೊಂಡಿದ್ದವ, ದಿನವೂ ಸಂಜೆಯ ಹೊತ್ತು, ಜಿಜ್ಞಾಸೆ ಮಾಡಿ ಬೋಧ ಪಡೆಯುವುದಕ್ಕಾಗಿ ಗುರು ರ್‍ಯುತನ್‌ನ ಹತ್ತಿರ ಬರುತ್ತಿದ್ದ. ಒಂದು ಸಂಜೆ, ಪ್ರಶ್ನೋತ್ತರಗಳಲ್ಲಿ ರಾತ್ರಿ ಹೊತ್ತಾಗಿಬಿಟ್ಟಿತು.

'ಇನ್ನು ಮಲಗಲು ಹೋಗಬಹುದಲ್ಲ?' ಎಂದ ರ್‍ಯುತನ್.

ಟೊಕುಸಸ್, ಗುರುವಿಗೆ ನಮಸ್ಕರಿಸಿ ಎದ್ದು ತೆರೆ ಸರಿಸಿ ಹೊರಕ್ಕೆ ನೋಡಿದ. 'ತುಂಬ ಕತ್ತಲಾಗಿದೆ' ಎಂದ.

'ತಗೊ, ಈ ಮೇಣದ ಬತ್ತಿ ತೆಗೆದುಕೊ' ಎಂದು ಗುರು ಅದನ್ನು ಹೊತ್ತಿಸಿಕೊಟ್ಟ.

ಟೊಕುಸಸ್, ಕೈನೀಡಿ ಅದನ್ನು ತೆಗೆದುಕೊಂಡ.

ಗುರು, ಮುಂದಕ್ಕೆ ಬಾಗಿ ಮೇಣದಬತ್ತಿಯನ್ನು ಊದಿ ಆರಿಸಿದ.

ಬೋಧಿಧರ್ಮನ ಗಡ್ಡ

ಅಲ್ಲಿ, ಬೋಧಿಧರ್ಮನ ದೊಡ್ಡದೊಂದು ಚಿತ್ರವನ್ನು ನೇತು ಹಾಕಿದ್ದರು. ಅದರಲ್ಲಿ ಆತನ ಸೊಂಪಾದ ಗಡ್ಡ ಎದ್ದು ಕಾಣುತ್ತಿತ್ತು.

ಆ ಚಿತ್ರವನ್ನೇ ದೀರ್ಘಕಾಲ ನೋಡುತ್ತ ನಿಂತಿದ್ದ ವಾಕುಅನ್, ಅನಂತರ, ಹೀಗೆ ಉದ್ಗರಿಸಿದ-

'ಬೋಧಿಧರ್ಮನಿಗೆ ಗಡ್ಡವೇ ಇಲ್ಲವಲ್ಲ, ಯಾಕೆ?'



ಎರಡು ಅರ್ಥಗಳು

ಪ್ರಖ್ಯಾತ ಯೋಧನೆಂದು ಹೆಸರಾದವನೊಬ್ಬ, ಗುರು ಹಕುಇನ್‌ನ ಹತ್ತಿರ ಬಂದು ಹೀಗೆ ಪ್ರಶ್ನೆ ಮಾಡಿದ-'ಗುರುವೇ, ಹೇಳಿ, ಸ್ವರ್ಗ ಎಂಬುದೊಂದು ಮತ್ತು ನರಕ ಎಂಬುದೊಂದು ನಿಜವಾಗಿ ಉಂಟೆ?'

'ನೀನು ಯಾರಪ್ಪಾ?' ಎಂದು ಹಕುಇನ್ ಕೇಳಿದ.

'ನಾನು, ಮಹಾನ್ ಚಕ್ರವರ್ತಿಗಳ ಅಂಗರಕ್ಷಕ ದಳದಲ್ಲಿರುವ ಯೋಧ' ಎಂದ. ಆತ.

'ಎಂಥಾ ಅಸಂಬದ್ಧ, ನಿನ್ನನ್ನು ತನ್ನ ಅಂಗರಕ್ಷಕನನ್ನಾಗಿ ಇಟ್ಟುಕೊಳ್ಳುವ ಚಕ್ರವರ್ತಿ ಅವನೆಂಥವನಿದ್ದಾನು. ನನಗಂತೂ ನೀನೊಬ್ಬ ತಿರುಪೆಯವನ ಹಾಗೆ ಕಾಣುತ್ತೀಯೆ' ಎಂದ ಹಕುಇನ್. ಈ ಮಾತು ಕೇಳಿದ್ದೇ ಆ ಯೋಧ ಕ್ರೋಧಗೊಂಡು ತನ್ನ ಭಾರೀ ಖಡ್ಗವನ್ನೆತ್ತಿ ಝಳಪಿಸಿದ.

'ಓಹೋ ನಿನ್ನಲ್ಲಿ ಕತ್ತಿಯೂ ಉಂಟು. ಆದರೆ, ತೀರಾ ಸವಕಲು ಕತ್ತಿ ಇದು. ಅದರಿಂದ ನನ್ನ ತಲೆ ಹಾರಿಸುವುದು ಅಸಾಧ್ಯ. ಆಣೆ ಮಾಡಿ ಹೇಳುತ್ತೇನೆ, ಹರಿತವಿಲ್ಲದ ಸವಕಲು ಕತ್ತಿ ಇದು' ಎಂದ ಹಕುಇನ್.

ಈ ಮಾತು ಕೇಳಿ ಯೋಧನಿಗೆ ತಡೆಯಲಿಕ್ಕಾಗಲಿಲ್ಲ. ಆತ ಕತ್ತಿ ಝಳಪಿಸುತ್ತಾ ಗುರುವಿನ ಮೇಲೆ ಏರಿ ಹೋದ. ಗುರು, ತಡೆದು ಹೇಳಿದ-'ನೋಡಪ್ಪಾ, ಈಗ ನಿನ್ನ ಪ್ರಶ್ನೆಯಲ್ಲಿ ಅರ್ಥಕ್ಕೆ ಉತ್ತರ ಸಿಕ್ಕಿತು. ನೀನು ನರಕದ ಬಾಗಿಲು ತೆರೆದಿದ್ದೀಯೆ'.

ಯೋಧ, ಹಿಂದಕ್ಕೆ ಸರಿದು ತನ್ನ ಕತ್ತಿಯನ್ನು ಒರೆಗೆ ನೂಕಿ ಗುರುವಿಗೆ ಮಣಿದ. ಆಗ, ಗುರು ಹೇಳಿದ-'ನಿನ್ನ ಪ್ರಶ್ನೆಯ ಮತ್ತೊಂದು ಅರ್ಥಕ್ಕೂ ಉತ್ತರ ಸಿಕ್ಕಿತು, ನೋಡು, ಈಗ ನೀನು ಸ್ವರ್ಗದ ಬಾಗಿಲು ತೆರೆಯುತ್ತಿದ್ದೀಯೆ'.

ಹೊರಬಂತು ಕಂಡೆಯಾ

ರಿಕೋ ಎಂಬಾತ ಉನ್ನತ ಅಧಿಕಾರಲ್ಲಿದ್ದವನು. ಒಮ್ಮೆ ಆತ, ಗುರು ನನ್‌ಸೆನ್ ಹತ್ತಿರಕ್ಕೆ ಬಂದು, ಬಾತುಕೋಳಿಯ ಒಗಟನ್ನು ಬಿಡಿಸುವುದು ಹೇಗೆ ಎಂದು ಪ್ರಶ್ನೆ ಮಾಡಿದ-

'ಒಬ್ಬ, ಬಾತುಕೋಳಿಯ ಚಿಕ್ಕ ಮರಿಯೊಂದನ್ನು ಹಿಡಿದು ಒಂದು ಸೀಸೆಯಲ್ಲಿ ತುಂಬಿಡುತ್ತಾನೆ; ದಿನವೂ ಸೀಸೆಯ ಬಾಯಿಯ ಮೂಲಕ ಅದಕ್ಕೆ ಆಹಾರ ಕೊಟ್ಟು ಪೋಷಣೆ ಮಾಡುತ್ತಾನೆ; ಕ್ರಮೇಣ, ಬಾತುಕೋಳಿ ಬೆಳೆಯುತ್ತ ಹೋಗುತ್ತದೆ; ಕಡೆಗೊಮ್ಮೆ ಇಡೀ ಸೀಸೆ ತುಂಬುವಷ್ಟು ಬೆಳೆಯುತ್ತದೆ; ಆಗ, ಬಾತುಕೋಳಿಗೆ ಪೆಟ್ಟಾಗದ ಹಾಗೆ, ಸೀಸೆಯೂ ಒಡೆಯದ ಹಾಗೆ ಅದನ್ನು ಹೊರಕ್ಕೆ ತೆಗೆಯುವುದು ಹೇಗೆ?'



'ರಿಕೋ' ಎಂದು ಒಮ್ಮೆ ಅಬ್ಬರಿಸಿ ಅರಚಿದ, ನನ್‌ಸೆನ್. 'ಗುರುವೇ' ಎಂದು ಬಾಗಿದ, ರಿಕೋ.

ನನ್‌ಸೆನ್, ತಟಕ್ಕನೆ ಬಲವಾಗಿ ಚಪ್ಪಾಳೆ ಹೊಡೆದು ಹೇಳಿದ-'ಕಂಡೆಯಾ, ಬಾತುಕೋಳಿ ಹೊರಬಂತು'.

ಹೊಳೆಯಿತು ಉಳಿಯಲಿಲ್ಲ

ಒಬ್ಬ ಝೆನ್ ಕವಿ ನೋಡಿದ-
ಬಿದಿರಿನ ನೆರಳು
ಸೋಪಾನ ಸಾಲುಗಳ ಗುಡಿಸುತ್ತಿದೆ-ಗುಡಿಸಿದರು
ದೂಳಿಲ್ಲವಲ್ಲ.
ತಿಂಗಳ ಕೋಲು ಕೊಳದ ಆಳಕ್ಕಿಳಿದು
ಕಲಕುತ್ತಿದೆ-ಕಲಕಿದರು
ನೀರಲ್ಲಿ ಗುರುತುಳಿಯಲಿಲ್ಲ.

ಬೆತ್ತಲಾದವನ ಯೋಚನೆ

ಗುರು ರ್‍ಯೊಕೆನ್, ಬೆಟ್ಟದ ತಪ್ಪಲಿನಲ್ಲಿ ಬಡ ಜೋಪಡಿಯೊಂದರಲ್ಲಿ ವಾಸ ಮಾಡಿಕೊಂಡಿದ್ದ. ಅವೊತ್ತು ರಾತ್ರಿ ಆಕಾಶದಲ್ಲಿ ಚಂದ್ರ ಬೆಳಗುತ್ತಿದ್ದ. ನೆಲದ ಮೇಲೆ ಎಲ್ಲೆಲ್ಲೂ ಬೆಳದಿಂಗಳು ಹಾಸಿಕೊಂಡಿತ್ತು. ಎಲ್ಲೋ ಹೊರಗೆ ಹೋಗಿದ್ದ ರ್‍ಯೊಕೆನ್, ಅದೇ ತಾನೆ ಗುಡಿಸಲಿಗೆ ಮರಳಿದ. ಒಳಗೆ ಯಾರೋ ಇದ್ದ ಹಾಗೆ ಕಂಡಿತು. ಪ್ರವೇಶಿಸಿ ನೋಡಿದರೆ, ಯಾವನೋ ಒಬ್ಬ ಕಳ್ಳ. ಏನಾದರೂ ವಸ್ತು ಸಿಕ್ಕೀತೇ ಎಂದು ಆತ ಮೂಲೆಯಲ್ಲಿ ತಡಕಾಡುತ್ತಿದ್ದ. ಆದರೆ ರ್‍ಯೊಕೆನ್ ಅಸಂಗ್ರಹದ ವ್ರತವನ್ನು ಕೈಗೊಂಡನಾದ್ದರಿಂದ ಗುಡಿಸಲಲ್ಲಿ ಏನೇನೂ ಇರಲಿಲ್ಲ.

ರ್‍ಯೊಕೆನ್‌ಗೆ ಖೇದವಾಯಿತು. 'ಪಾಪ, ಅಯ್ಯಾ, ನಿನ್ನನ್ನು ನೋಡಿ ಖೇದವಾಗುತ್ತದೆ. ಎಷ್ಟು ದೂರದಿಂದ ಬಂದೆಯೋ ಏನೋ, ಏನೂ ಸಿಕ್ಕದೆ ನಿರಾಸೆಗೊಂಡಿದ್ದೀಯೆ. ಹೇಗೂ ನೀನು ಬರಿಗೈಯಲ್ಲಿ ಹಿಂತಿರುಗಬಾರದು. ಇಗೊ, ಈ ನನ್ನ ಬಟ್ಟೆಗಳನ್ನಾದರೂ ತೆಗೆದುಕೋ' ಎಂದು ಹೇಳಿ ರ್‍ಯೊಕೆನ್, ತಾನು ತೊಟ್ಟ ಬಟ್ಟೆಗಳೆಲ್ಲವನ್ನೂ ಬಿಚ್ಚಿ ಆತನಿಗೆ ಕೊಟ್ಟ.

ಕಳ್ಳ ಹೊರಟುಹೋದ ಮೇಲೆ, ಬೆತ್ತಲೆಯಾಗಿದ್ದ ರ್‍ಯೊಕೆನ್ ಗುಡಿಸಲಿನ ಹೊರಗೆ ಬಂದು ಕೂತ. ತನ್ನಲ್ಲೇ ಹೀಗೆ ಚಿಂತಿಸಿದ-

'ಪಾಪ, ಬಡಪಾಯಿ, ಇಲ್ಲಿಯ ತನಕ ಆಸೆಯಿಂದ ಹುಡುಕಿಕೊಂಡು ಬಂದ. ಕೊಂಚ ಬೆಲೆಯುಳ್ಳ ವಸ್ತು ಕೊಡಲಾಗಲಿಲ್ಲವಲ್ಲ. ಈ ಬೆಳಗುವ ಚಂದ್ರನನ್ನು ಅವನಿಗೆ ಎತ್ತಿ ಕೊಡಲು ಸಾಧ್ಯವಾಗಿದ್ದರೆ...!'

ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಒಂದಾಗಬೇಕು ಏಕೆ?

ಅಜಿತ್ ನಿನಾನ್, ಇಂಡಿಯಾ ಟುಡೇ

ಭಾರತವು ಹಿಂದೆಂದಿಗಿಂತಲೂ ಹೆಚ್ಚಿನ ಸಂಕಷ್ಟದ ಸ್ಥಿತಿಯನ್ನು ಇಂದು ಎದುರಿಸುತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಎರಡು ನೂರು ವರ್ಷಗಳವರೆಗೆ ನೇರವಾಗಿ ಭಾರತವನ್ನು ಆಳುತ್ತಾ ಭಾರತದ ಸಂಪತ್ತನ್ನು ದೋಚಿ ಇಂಗ್ಲೆಂಡ್‌ಗೆ ಸಾಗಿಸಿದರು. ಈ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಎಲ್ಲ ಜಾತಿ, ಧರ್ಮ ಮತ್ತು ವರ್ಗಗಳ ಜನ ಒಂದಾಗಿ ಹೋರಾಡುತ್ತ ರಾಜಕೀಯ ಸ್ವಾತಂತ್ರ್ಯಗಳಿಸಿದರು. ಭಾರತದ ಜನ ಮೊದಲ ಬಾರಿಗೆ ಸಾಮೂಹಿಕವಾಗಿ ತಮ್ಮ ಜಾತಿ ಮತ್ತು ಧರ್ಮಗಳನ್ನು ಮೀರಿ ಒಂದು ಉದ್ದೇಶಕ್ಕಾಗಿ, ಒಂದಾದದ್ದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಾತ್ರ.

ಅದಕ್ಕೂ ಹಿಂದೆ ಈ ದೇಶದಲ್ಲಿ ಸಾಕಷ್ಟು ಜಾತ್ಯತೀತ ಆಂದೋಲನಗಳಾಗಿವೆ. ಲೋಕಾಯುತರು, ಜೈನರು, ಬೌದ್ಧರು ಶರಣರು, ಸಿಖ್ಖರು, ಸಂತರು, ಸೂಫಿಸಂತರು, ದಾಸರು ಮತ್ತು ತತ್ವಪದಕಾರರು ಜಾತ್ಯತೀತ ಸಮಾಜವನ್ನು ಸೃಷ್ಟಿಸಲು ಹೆಣಗಿದರು. ಜನಸಮುದಾಯದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದರು. ಆದರೆ ಔದ್ಯೋಗಿಕ ಕ್ರಾಂತಿ ವಿಜ್ಞಾನ, ತಂತ್ರಜ್ಞಾನ, ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆ ಮತ್ತು ತೀವ್ರವಾದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಭಾರತೀಯರು ತಮ್ಮ ತಮ್ಮ ಜಾತಿ ಮತ್ತು ಧರ್ಮಗಳ ಲಕ್ಷ್ಮಣರೇಖೆಗಳನ್ನು ದಾಟಿ ಬೀದಿಯ ಮೇಲಾದರೂ ಒಂದಾಗುವುದನ್ನು ಕಲಿತರು.

ದುಃಖದ ವಿಚಾರವೆಂದರೆ ಈ ಒಂದಾಗುವಿಕೆ ಭಾರತೀಯನ ವ್ಯಕ್ತಿತ್ವದ ಮೇಲೆ ಆಂತರಿಕ ಪ್ರಭಾವ ಬೀರುವಲ್ಲಿ ಹೆಚ್ಚಿನ ಯಶಸ್ಸು ಸಾಧಿಸಲಿಲ್ಲ. ಸದ್ಯ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದುಹೋದರೂ ಭಾರತೀಯರು ಇದಕ್ಕಿಂತ ಹೆಚ್ಚಿನದನ್ನು ಕಲಿಯಲು ಸಾಧ್ಯವಾಗುವಂಥ ವಾತಾವರಣ ಸೃಷ್ಟಿಯಾಗಲಿಲ್ಲ. ಜಾತಿಗಳು ಹಾಗೇ ಉಳಿದುಕೊಂಡವು. ದೈಹಿಕವಾಗಿದ್ದ ಅಸ್ಪೃಶ್ಯತೆ ಒಂದಿಷ್ಟು ತೊಲಗಿತು. ಆದರೆ ಮಾನಸಿಕವಾಗಿ ಬೆಳೆಯುತ್ತಲೇ ಹೋಯಿತು ಜಾತಿ-ಜಾತಿಗಳ ಮತ್ತು ಧರ್ಮ ಧರ್ಮಗಳ ಮಧ್ಯೆ ಇರುವ ಅಪನಂಬಿಕೆ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಕೋಮುವಾದಿ ಶಕ್ತಿಗಳು ಇದರ ಲಾಭವನ್ನು ಪಡೆದುಕೊಂಡು ಇಡೀ ದೇಶವನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಳ್ಳಲು ಹವಣಿಸುತ್ತಿವೆ.

ಸನಾತನ ವೈದಿಕರ ಈ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳವರು ಸವರ್ಣೀಯರೆನಿಸಿ ಎಲ್ಲ ಸೌಲಭ್ಯಗಳನ್ನು ಪಡೆದರು. ಆದರೆ ಶೂದ್ರರು ಯಾವುದೇ ಹಕ್ಕುಗಳಿಲ್ಲದೆ ಬದುಕುವಂಥ ಸ್ಥಿತಿಗೆ ಇಳಿದರು. ಇವರೆಲ್ಲ ಮೂಲನಿವಾಸಿಗಳೇ ಆಗಿದ್ದರು. ಇವರಲ್ಲಿ ಅನೇಕರು ಕಾಡು ಸೇರಿ ಆದಿವಾಸಿಗಳಾದರು. ಆದರೆ ಇತರ ಅನೇಕರು ಈ ಕ್ರೂರ ವ್ಯವಸ್ಥೆಯ ವಿರುದ್ಧ ಹೋರಾಡುತ್ತ ಅಲ್ಲೇ ಉಳಿದರು. ಈ ಹೋರಾಟಗಾರರಿಗೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದರು.

ಹೀಗೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದ ಶೂದ್ರರೇ ಅಸ್ಪೃಶ್ಯರು ಅವರು ಊರಿನ ಹೊರಗಡೆಯ ಜಾಗದಲ್ಲಿ ಬದುಕುವಂತಾಯಿತು. ಇದೊಂದು ಭಯಂಕರವಾದ ಅಪಾರ್ಥೈಡ್ ವ್ಯವಸ್ಥೆ. ಅಪಾರ್ಥೈಡ್ ಎಂದರೆ ಪ್ರತ್ಯೇಕವಾಗಿ ಬದುಕುವುದು ಹೀಗೆ ಅಪಾರ್ಥೈಡ್ ವ್ಯವಸ್ಥೆ ಭಾರತದಲ್ಲೇ ಮೊದಲ ಬಾರಿಗೆ ಪ್ರಾರಂಭವಾಯಿತು.

○ ರಂಜಾನ್ ದರ್ಗಾ

ಜಾತ್ಯತೀತ ಭಾರತದ ದುರಂತವೆಂದರೆ... ಅಲ್ಪಸಂಖ್ಯಾತರು ಹಿಂದುಳಿದವರು ಮತ್ತು ಪರಿಶಿಷ್ಟರಲ್ಲಿನ ಅನೇಕರು ಬೆಳೆಯುತ್ತಿರುವ ಕೋಮುವಾದಿ ಶಕ್ತಿಗಳ ಜೊತೆ ಕೈಗೂಡಿಸುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳು ಭಾರತವನ್ನು ಬಂಡವಾಳ ಹೂಡುವ ತಾಣ ಮತ್ತು ತಮ್ಮ ವಸ್ತುಗಳನ್ನು ಮಾರಾಟ ಮಾಡುವ ಮಾರುಕಟ್ಟೆ ಎಂದು ಪರಿಗಣಿಸಿದ್ದಾರೆ. ಅವರಿಗೆ ಭಾರತೀಯರೆಂದರೆ ತಮ್ಮ ಬಂಡವಾಳವೃದ್ಧಿಗಾಗಿ ಇರುವ ಕೂಲಿಗಳು ಮತ್ತು ತಮ್ಮ ವಸ್ತುಗಳನ್ನು ಕೊಳ್ಳುವ ಗ್ರಾಹಕರು ಮಾತ್ರ. ಈ ಸಾಮ್ರಾಜ್ಯಶಾಹಿಗಳು ತಮ್ಮ ಅಭಿವೃದ್ಧಿಗಾಗಿ, ಸೃಷ್ಟಿಸಿದ ಜಾಗತೀಕರಣ, ಉದಾರೀಕರಣ, ಬಹು ರಾಷ್ಟ್ರೀಯ ಕಂಪನಿಗಳ ವಿದೇಶಿ ಬಂಡವಾಳ ಮುಕ್ತ ಆಮದು ನೀತಿ ಮತ್ತು ಭಾರತದ ರಾಜ್ಯಶಕ್ತಿಯನ್ನು ಸಂಪೂರ್ಣವಾಗಿ ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಳ್ಳಲು ಹವಣಿಸುತ್ತಿರುವ ಕೋಮುವಾದಿಗಳ ಕುತಂತ್ರಗಳು ಜೊತೆ ಜೊತೆಯಾಗಿ ಹೋಗುತ್ತಿವೆ. ದೇಶವನ್ನು ರಾಜಕೀಯವಾಗಿ ಬಹುಮತದಿಂದ ಆಳುವ ಹೆಬ್ಬಯಕೆ ಹೊಂದಿರುವ ಕೋಮುವಾದಿ ಶಕ್ತಿಗಳಿಗೆ ಸಾಮ್ರಾಜ್ಯಶಾಹಿಗಳು ಕುಮ್ಮಕ್ಕು ಕೊಡುತ್ತಿದ್ದಾರೆ.

ಕೋಮುವಾದಿ ಶಕ್ತಿಗಳನ್ನು ತಮ್ಮ ಹಿತಾಸಕ್ತಿಗಳಿಂದ ಅನುಗುಣವಾಗಿ ಬಳಸಿಕೊಳ್ಳುತ್ತ ಭಾರತವನ್ನು ಆರ್ಥಿಕವಾಗಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದು ಸಾಮ್ರಾಜ್ಯಶಾಹಿಗಳ ಮುಖ್ಯ ಗುರಿಯಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ದೇಶವನ್ನು ಪ್ರತ್ಯಕ್ಷವಾಗಿ ಆಳಿದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಪರೋಕ್ಷವಾಗಿ ಆಳಲು ಶತಪ್ರಯತ್ನ ನಡೆಸಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಸುಲಿಗೆ ಕಣ್ಣಿಗೆ ಹೊಡೆಯುವಂತಿತ್ತು. ಕಪ್ಪು ಬಿಳುಪಾಗಿತ್ತು. ಬಿಳಿಯರ ವಿರುದ್ಧದ ಹೋರಾಟಕ್ಕಾಗಿ ಜನಸಮುದಾಯವನ್ನು ಅಣಿಗೊಳಿಸುವುದು ಭಾರೀ ಕಷ್ಟಕರವೇನಾಗಿರಲಿಲ್ಲ.

ಆದರೆ ಉದಾರೀಕರಣ ಮತ್ತು ಜಾಗತೀಕರಣದ ಮೂಲಕ ದೇಶವನ್ನು ಹೊರಗಿನಿಂದಲೇ ಆಳಲೆತ್ನಿಸುತ್ತಿರುವ

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬಗ್ಗೆ ಮತ್ತು ವಿವಿಧ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ಜನ ಸಮುದಾಯದಲ್ಲಿ ಅರಿವು ಮೂಡಿಸುವುದು ಅತ್ಯಂತ ಕಷ್ಟಕರವಾಗಿದೆ. ಮಹಾತ್ಮಗಾಂಧೀಜಿಯವರು ತಮ್ಮ ಅನುಯಾಯಿಗಳು ಮತ್ತು ಜನಶಕ್ತಿಯ ಸಹಾಯದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಹೊರ ಹಾಕುವಲ್ಲಿ ಯಶಸ್ವಿಯಾದರು. ಆದರೆ ಇಂದಿನ ನಮ್ಮ ರಾಷ್ಟ್ರನಾಯಕರು ಮತ್ತು ಇತರೆ ಹಲವಾರು ರಾಜ್ಯ ನಾಯಕರು ಸೇರಿ ಸಾಮ್ರಾಜ್ಯಶಾಹಿಗಳು ದೇಶದ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸಲು ಸಾಧ್ಯವಾಗುವಂಥ ವಾತಾವರಣವನ್ನು ಸೃಷ್ಟಿಸುವ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ.

ಸಾಮ್ರಾಜ್ಯಶಾಹಿಗಳಿಗೆ ಲಾಭವಾಗುವಂಥ ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ತೀವ್ರವಾಗುತ್ತಿವೆ. ಇಂಥ ವಿಷಮ ವಾತಾವರಣದಲ್ಲಿ ನಾವು ಮೌಲ್ಯವಿಹೀನರಾಗುತ್ತಿದ್ದೇವೆ. ಮನುಷ್ಯ ಸಂಬಂಧದಲ್ಲಿ ಕೂಡ ಹಣವೇ ಪ್ರಧಾನವಾಗುತ್ತಿದೆ. ಹಣವಿಲ್ಲದೆ ಮನುಷ್ಯ ಬದುಕಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಂದರಲ್ಲಿ ನಿರುದ್ಯೋಗ, ಹಿಂಸೆ, ಕ್ರೌರ್ಯ, ಅಸಹಾಯಕತೆ ಮತ್ತು ವಿಘ್ನ ಸಂತೋಷಗಳು ತಾಂಡವವಾಡುತ್ತಿವೆ. ಜನಸಮೂಹದಲ್ಲಿ ಮಾನವ ಒಂಟಿಯಾಗುತ್ತಿದ್ದಾನೆ. ರಸ್ತೆಯಲ್ಲಿ ಸಾವಿರಾರು ಜನರ ಮಧ್ಯೆ ಕೂಡ ಒಬ್ಬನೇ ಮಾತನಾಡುತ್ತ ಹೋಗುವಂಥ ದುರಂತಕ್ಕೆ ಒಳಗಾಗಿದ್ದಾನೆ.

ನಿರುದ್ಯೋಗ, ಹಸಿವು ಮುಂತಾದ ಸಮಸ್ಯೆಗಳಿಂದಾಗಿ ಸ್ವಾರ್ಥ ಮತ್ತು ಹಿಂಸೆ ಬದುಕಿನಲ್ಲಿ ಅನಿವಾರ್ಯ ಎಂಬ ನಿರ್ಧಾರಕ್ಕೆ ಬಂದವರ ಕೈಗಳು ಕೋಮುಗಲಭೆಗಳಲ್ಲಿ ಕ್ರಿಯಾಶೀಲವಾಗುತ್ತಿವೆ. ಒಂಟಿಯಾಗಿರುವ ಅಬಲೆಯರ ಕೊರಳ ಸರಗಳನ್ನು ಎಳೆಯಲು ಮುಂದಾಗುತ್ತಿವೆ. ಹಣಕ್ಕಾಗಿ ಹಸುಗೂಸುಗಳನ್ನು ಕೊಲ್ಲುತ್ತಿವೆ. ಅಲ್ಪಸಂಖ್ಯಾತರು, ರೈತರು, ಸಣ್ಣ ಕೈಗಾರಿಕೆಗಳನ್ನು ನಡೆಸುವವರು, ಕೆಳವರ್ಗ ಮತ್ತು ಕೆಳಜಾತಿಗಳ ಬಹುಪಾಲು ಬಡವರು ಹಾಗೂ ಮಧ್ಯಮ ವರ್ಗದವರು ಹೊಸ ಆರ್ಥಿಕ ನೀತಿಗೆ ಬಲಿಯಾಗುತ್ತಿದ್ದಾರೆ. ಇಂಥ ವಿಷಮ ವಾತಾವರಣದಲ್ಲಿ ನವಭಾರತದ ನಿರ್ಮಾಣವಾಗಬೇಕಿದೆ. ಸುಲಿಗೆ ಇಲ್ಲದ ವ್ಯವಸ್ಥೆಗಾಗಿ ತುಳಿತಕ್ಕೊಳಗಾದವರೆಲ್ಲ ಒಂದಾಗಬೇಕಿದೆ. ಎಲ್ಲ ರೀತಿಯ ಶೋಷಣೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕಿದೆ ಎಲ್ಲಕ್ಕೂ ಮುಂಚೆ ಧಾರ್ಮಿಕ ಫ್ಯಾಸಿಸಂನ ಅಟ್ಟಹಾಸದ ಹುಟ್ಟಡಗಿಸಲು ಸಂಸದೀಯ ವ್ಯವಸ್ಥೆಯ ಪ್ರಜಾಪ್ರಭುತ್ವವನ್ನಾದರೂ ಉಳಿಸಿ ಕೊಳ್ಳಬೇಕಾಗಿದೆ. ಆದರೆ ಹೇಗೆ ಎಂಬುದು ಯಕ್ಷ ಪ್ರಶ್ನೆಯಂತಾಗಿದೆ.

ಭಾರತೀಯ ಪ್ರಜಾಪ್ರಭುತ್ವದ ತಳಹದಿ

ಗೌತಮ ಬುದ್ಧ ಮಹಪರಿನಿರ್ವಾಣ ಹೊಂದುವುದಕ್ಕೆ ಮುನ್ನ ಆತನ ಪರಮ ಶಿಷ್ಯ ಆನಂದನು, ಬೌದ್ಧ ಸಂಘಕ್ಕೆ ನಾಯಕನನ್ನು ಸೂಚಿಸುವ ಬಗ್ಗೆ ಮನವಿ ಮಾಡಿದ ಸಂಘದ ಭಿಕ್ಷುಗಳೇ ತಮ್ಮ ನಾಯಕನ ಆಯ್ಕೆ ಮಾಡಿಕೊಳ್ಳುವರು ಎಂದು ಬುದ್ಧ ತಿಳಿಸಿದ ಹೀಗೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ಉದಯವಾಯಿತು. ಶರಣರ ಅನುಭವ ಮಂಟಪವು ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಶರಣರು ದೇವರನ್ನು ವಿವಿಧ ಹೆಸರುಗಳಿಂದ ಕರೆದರೂ ನಿರಾಕಾರನಾದ ಆ ಒಬ್ಬನೇ ದೇವರನ್ನು ಅಂತಃಸಾಕ್ಷಿಯಾಗಿಟ್ಟುಕೊಂಡು ತಮ್ಮ ತಪ್ಪುಗಳನ್ನು ಎತ್ತಿತೋರಿಸುತ್ತ ತಿದ್ದಿಕೊಂಡರು.

ನ್ಯಾಯ ನಿಷ್ಠುರಿಗಳಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತ ಸಮಾಜವನ್ನು ತಿದ್ದಲು ಯತ್ನಿಸಿದರು. ನಮ್ಮಲ್ಲಿ ಪ್ರಜಾಪ್ರಭುತ್ವ ರೂಪುಗೊಳ್ಳಲು ಇಂಥ ಆದರ್ಶಗಳೂ ಸಹಕಾರಿಯಾಗಲಿಲ್ಲ. ಆದರೆ ಭಾರತದಲ್ಲಿ ವಿವಿಧ ಜಾತಿ, ಉದ್ಯೋಗ ಮತ್ತು ಧರ್ಮಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಹಿನ್ನಲೆಯಲ್ಲಿ ರೂಪುಗೊಂಡ ನಿಯಂತ್ರಿಸುವ ಸಂಸದೀಯ ಪ್ರಜಾಪ್ರಭುತ್ವಗಳು ರೂಢಿಯಲ್ಲಿವೆ.

ಸಾಂಪ್ರದಾಯಿಕ ಪ್ರಜಾಪ್ರಭುತ್ವವೆಂಬುದು ಅನಿವಾರ್ಯ ಪರಿಕಲ್ಪನೆಯಾಗಿದೆ. ಕೆಳಜಾತಿಗಳ ಜನ ತಮ್ಮನ್ನು ಜಾತಿಗಳಲ್ಲಿ ಗುರುತಿಸಿಕೊಂಡು ತಮ್ಮತನವನ್ನು ಉಳಿಸಿಕೊಳ್ಳುವುದು ಈ ಪರಿಕಲ್ಪನೆಯಿಂದ ಸಾಧ್ಯ

ವಿರಾಟ್‌ಪುರುಷನ ಮುಖದಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ ಮತ್ತು ಪಾದದಿಂದ ಶೂದ್ರ ಹುಟ್ಟಿದ ಎಂದು ಹೇಳುವ ಋಗ್ವೇದದ ಪುರುಷ ಸೂಕ್ತದ ಆಧಾರದ ಮೇಲೆ ನಮ್ಮ ಸಮಾಜವು ಸುಲಿಗೆ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಲೇ ಶ್ರೇಣೀಕೃತವಾಗಿ ಬೆಳೆಯಿತು. ಈ ಸಮಾಜದ ವಿವಿಧ ಹಂತಗಳಲ್ಲಿ ತುಳಿತಕ್ಕೊಳಗಾದವರು ತಮ್ಮ ಸ್ಥಿತಿಗತಿಗೆ ತಮ್ಮ ಪ್ರಾರಬ್ಧ ಕರ್ಮವೇ ಕಾರಣ ಎಂದು ಭಾವಿಸುವಂತೆ ಧಾರ್ಮಿಕ ಸಾಹಿತ್ಯದ ನಿರ್ಮಾಣವಾಯಿತು.

"ಹಿಂದೂ" ಎಂದೂ ಕರೆಯಿಸಿಕೊಳ್ಳುವ ವೈದಿಕ ಧರ್ಮ ಸೃಷ್ಟಿಸಿದ ಶ್ರೇಣೀಕೃತ ಸಮಾಜದಲ್ಲಿ ಎಲ್ಲ ಸ್ತರಗಳಲ್ಲಿನ ಕೆಳಜಾತಿಗಳ ಜನರ ಮೌನ-ಸ್ವಾಭಿಮಾನ ಮತ್ತು ಅವರಲ್ಲಿನ ಅನೇಕರ ಜಾಗೃತ ಮನಸ್ಥಿತಿಯಿಂದಾಗಿ ಮನುಸ್ಮೃತಿಯ ಆಧಾರದ ಮೇಲೆ ನಿಂತ ಹಿಂದೂ ಧರ್ಮವು ವೈರುಧ್ಯಗಳ ಆಗರವಾಗಿದೆ. ಈ ವೈರುಧ್ಯದಲ್ಲೇ ಸಾಂಪ್ರದಾಯಿಕ ಪ್ರಜಾಪ್ರಭುತ್ವ ಅಡಗಿದೆ. ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಹೋರಾಟಗಳಲ್ಲಿ ಎಲ್ಲ ಜನಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಈ ಕೆಳಜಾತಿಗಳವರ ಆತ್ಮಾಭಿಮಾನ ಸಹಾಯಕವಾಗುತ್ತದೆ. ಇದರರ್ಥ ಕೆಳಜಾತಿಗಳ ಜನ ತಮ್ಮ ಭವಿಷ್ಯದಲ್ಲಿ ಸಾಮಾಜಿಕ ನ್ಯಾಯ ದೊರೆತ ಮೇಲೂ ತಮ್ಮ ಜಾತಿಗಳನ್ನು ಉಳಿಸಿಕೊಂಡೇ ಹೋಗಬೇಕೆಂದಲ್ಲ ಇಂಥ ಜಾತಿ ಪ್ರಜ್ಞೆ "ಸಾಂಪ್ರದಾಯಿಕ ಪ್ರಜಾಪ್ರಭುತ್ವ"ವನ್ನು ಸೃಷ್ಟಿ ಮಾಡುತ್ತದೆ.

ಅಮಾನುಷ ವ್ಯವಸ್ಥೆಯಲ್ಲಿ ಕೆಳಜಾತಿಗಳವರಿಗೆ ತಮ್ಮ ತಮ್ಮ ಜಾತಿಗಳ ಪ್ರಜ್ಞೆ ಇರದೇ ಹೋದರೆ "ಗರ್ವದಿಂದ ಹೇಳಿರಿ ನಾವೆಲ್ಲ ಹಿಂದೂಗಳು" ಎಂಬ ಠಾಕ್ರೆವಾದ ವಿಜಯ ಸಾಧಿಸಿತು. ಹಿಂದುತ್ವವಾದಿ ಶಕ್ತಿಗಳು ವರ್ಣ ಮತ್ತು ಜಾತಿಭೇದದಿಂದ ಕೂಡಿದ ಮನುಸ್ಮೃತಿಯ ಆಧಾರದ ಮೇಲೆ ದೇಶದ ಸಂವಿಧಾನವನ್ನು ಪುನರ್ ರಚಿಸುವುದರ ಮೂಲಕ ಇಡೀ ಭಾರತವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಆಳುತ್ತಿದ್ದವು ದಲಿತರು ಮತ್ತು ಹಿಂದುಳಿದವರ ಆತ್ಮಶಕ್ತಿಯಿಂದಾಗಿ ಭಾರತದಲ್ಲಿ ಪ್ರಜಾಪ್ರಭುತ್ವ ಉಳಿದಿದೆ. ಒಂದು ವೇಳೆ ಈ ಆತ್ಮಶಕ್ತಿ ಇಲ್ಲದೇ ಇದ್ದಿದ್ದರೆ ಈಗಾಗಲೇ ಧಾರ್ಮಿಕ ಫ್ಯಾಸಿಸಂ ಬಂದು ನಮ್ಮ ಸಂವಿಧಾನದ ಜಾಗದಲ್ಲಿ ಮನಸ್ಮೃತಿ ರಾರಾಜಿಸುತ್ತಿತ್ತು.

ಭಾರತೀಯ ಸಮಾಜದ ಹಿನ್ನಲೆ : ವಿರಾಟ್‌ಪುರುಷನ ಮುಖದಿಂದ ಬ್ರಾಹ್ಮಣ, ಭುಜದಿಂದ ಕ್ಷತ್ರಿಯ, ತೊಡೆಯಿಂದ ವೈಶ್ಯ ಮತ್ತು ಪಾದದಿಂದ ಶೂದ್ರ ಹುಟ್ಟಿದ ಎಂದು ಹೇಳುವ ಋಗ್ವೇದದ ಪುರುಷ ಸೂಕ್ತದ ಆಧಾರದ ಮೇಲೆ ನಮ್ಮ ಸಮಾಜವು ಸುಲಿಗೆ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಲೇ ಶ್ರೇಣೀಕೃತವಾಗಿ ಬೆಳೆಯಿತು. ಈ ಸಮಾಜದ ವಿವಿಧ ಹಂತಗಳಲ್ಲಿ ತುಳಿತಕ್ಕೊಳಗಾದವರು ತಮ್ಮ ಸ್ಥಿತಿಗತಿಗೆ ತಮ್ಮ ಪ್ರಾರಬ್ಧ ಕರ್ಮವೇ ಕಾರಣ ಎಂದು ಭಾವಿಸುವಂತೆ ಧಾರ್ಮಿಕ ಸಾಹಿತ್ಯದ ನಿರ್ಮಾಣವಾಯಿತು. ವೇದ ಶಾಸ್ತ್ರ ಪುರಾಣಗಳನ್ನು ಓದಲು ಅವಕಾಶವಿಲ್ಲದ ಶೂದ್ರರಿಗೆ ನಾಟಕಗಳ ಮೂಲಕ ಕರ್ಮಸಿದ್ಧಾಂತ ಮತ್ತು ವರ್ಣ ಹಾಗೂ ಜಾತಿಗಳಿಂದ ಕೂಡಿದ ಶ್ರೇಣೀಕೃತ ಸಮಾಜದ ರಚನೆಯ ಕಲ್ಪನೆಯನ್ನು ಕೊಡಲಾಯಿತು.

ಅಷ್ಟೇ ಅಲ್ಲದೆ ಈ ಸಮಾಜದಲ್ಲಿ ಎಲ್ಲ ಜಾತಿಗಳವರಿಗೂ ಒಂದು ವಿಶಿಷ್ಟವಾದ ಉದ್ಯೋಗ ಮತ್ತು ಸ್ಥಾನವಿದೆ ಎಂಬುದನ್ನು ಸಾಧಿಸಲಾಯಿತು ಕೆಳಜಾತಿಗಳಲ್ಲಿ ಹುಟ್ಟಿ ಕಷ್ಟನಷ್ಟ ಅನುಭವಿಸುವವರ ಮತ್ತು ಅನ್ಯಾಯಕ್ಕೊಳಗಾಗುವವರ ನಿಕೃಷ್ಟ ಬದುಕಿಗೆ ಅವರು ಹಿಂದಿನ ಜನ್ಮದಲ್ಲಿ ಮಾಡಿದ ಪಾಪವೇ ಕಾರಣ. ಅವರೆಲ್ಲ ಈ ಧಾರ್ಮಿಕ ವ್ಯವಸ್ಥೆಗೆ ಅಂದರೆ ಸುಲಿಗೆ ವ್ಯವಸ್ಥೆಗೆ ಗೌರವ ಕೊಟ್ಟು ಕಷ್ಟನಷ್ಟಗಳನ್ನು ಸಹಿಸುತ್ತ ಮತ್ತು ಫಲಾಪೇಕ್ಷೆ ಇಲ್ಲದೆ ದುಡಿಯುತ್ತ, ಶೋಷಣೆಯನ್ನು ಒಪ್ಪಿಕೊಳ್ಳುತ್ತ ಬದುಕಿದರೆ ಮುಂದಿನ ಜನ್ಮದಲ್ಲಿ ಕುಲೀನರಾಗಿ ಜನಿಸಿ ಸುಖಭೋಗಗಳನ್ನು ಪಡೆಯುವರು ಎಂಬ ಭ್ರಮೆಯನ್ನು ಸೃಷ್ಟಿಸಲಾಯಿತು. ಸನಾತನ ವೈದಿಕರ ಈ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳವರು ಸವರ್ಣೀಯರೆನಿಸಿ ಎಲ್ಲ ಸೌಲಭ್ಯಗಳನ್ನು ಪಡೆದರು. ಆದರೆ ಶೂದ್ರರು ಯಾವುದೇ ಹಕ್ಕುಗಳಿಲ್ಲದೆ ಬದುಕುವಂಥ ಸ್ಥಿತಿಗೆ ಇಳಿದರು. ಇವರೆಲ್ಲ ಮೂಲನಿವಾಸಿಗಳೇ ಆಗಿದ್ದರು. ಇವರಲ್ಲಿ ಅನೇಕರು ಕಾಡು ಸೇರಿ ಆದಿವಾಸಿಗಳಾದರು. ಆದರೆ ಇತರ ಅನೇಕರು ಈ ಕ್ರೂರ ವ್ಯವಸ್ಥೆಯ ವಿರುದ್ಧ ಹೋರಾಡುತ್ತ ಅಲ್ಲೇ ಉಳಿದರು. ಈ ಹೋರಾಟಗಾರರಿಗೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದರು.

ಹೀಗೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾದ ಶೂದ್ರರೇ ಅಸ್ಪೃಶ್ಯರು ಅವರು ಊರಿನ ಹೊರಗಡೆಯ ಜಾಗದಲ್ಲಿ ಬದುಕುವಂತಾಯಿತು. ಇದೊಂದು ಭಯಂಕರವಾದ

ಅಪಾರ್ಥೈಡ್ ವ್ಯವಸ್ಥೆ. ಅಪಾರ್ಥೈಡ್ ಎಂದರೆ ಪ್ರತ್ಯೇಕವಾಗಿ ಬದುಕುವುದು ಹೀಗೆ ಅಪಾರ್ಥೈಡ್ ವ್ಯವಸ್ಥೆ ಭಾರತದಲ್ಲೇ ಮೊದಲ ಬಾರಿಗೆ ಪ್ರಾರಂಭವಾಯಿತು. ದಕ್ಷಿಣ ಆಫ್ರಿಕಾದ ಅಪಾರ್ಥೈಡ್ (ವರ್ಣಬೇಧ ನೀತಿ) ವ್ಯವಸ್ಥೆಗೆ ಕೇವಲ ನಾಲ್ಕು ಶತಮಾನಗಳ ಇತಿಹಾಸವಿದೆ. 1990ರಲ್ಲಿ ಕರಿಯರ ನಾಯಕ ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದ ಮೇಲೆ ಈ ವ್ಯವಸ್ಥೆ ಕೊನೆಗೊಂಡಿತು. ಭಾರತದ ಅಪಾರ್ಥೈಡ್ ವ್ಯವಸ್ಥೆ ಎಷ್ಟು ಕ್ರೂರವಾಗಿದೆ ಎಂದರೆ ಸಹಸ್ರಾರು ವರ್ಷಗಳ ಹಿಂದೆ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಭಟನೆ ಮಾಡಿದವರ ವಂಶಜರು ಇಂದಿಗೂ ಹೊಲಗೇರಿಗಳಲ್ಲಿ ಬದುಕುವ ಪರಿಸ್ಥಿತಿ ಇದೆ.

ನಿರೀಶ್ವರವಾದಿ ಚಾರ್ವಾಕರು (ಲೋಕಾಯುತರು) ಸಾಮೂಹಿಕವಾಗಿ ಈ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದವರಲ್ಲಿ ಮೊದಲಿಗರು ಚಾರ್ ವಾಕ್ ಅಂದರೆ ಸುಂದರವಾಗಿ ಮಾತನಾಡುವವನು "ಲೋಕ ಆಯುತ" ಅಂದರೆ ಈ ಭೂಮಿಗೆ ಯೋಗ್ಯನಾಗಿರುವವನು (ಈ ಬದುಕಿನ ವಾಸ್ತವತೆಯನ್ನು ಮಾತ್ರ ನಂಬಿ ಉಳಿದದ್ದೆಲ್ಲ ಸುಳ್ಳು ಎಂದು ಸಾರಿದವನು) ಶೂದ್ರರಿಗೆ ಈ ವಿಚಾರ ತುಂಬ ಹಿಡಿಸಿತು: ಅವರಿಗೆ ಈ ಬದುಕಿನಲ್ಲೇ ಒಳ್ಳೆಯದನ್ನು ಕಾಣುವ ಕನಸುಗಳು ಬೀಳತೊಡಗಿದವು. ಆದರೆ ಪುರುಷ ಸೂಕ್ತದ ಚಾತುರ್ವರ್ಣ ಪದ್ಧತಿಯಿಂದ ಕುಲವಾದವನ್ನು ಸೃಷ್ಟಿಸಿದ ಮತ್ತು ತಾನು "ಪ್ಯೂವರ್ ಆರ್ಯನ್" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಅನ್ಯ ಜನಾಂಗ ದ್ವೇಷಿ ಹಿಟ್ಲರ್ ಮೂಲಪುರುಷರೆಂಬಂತೆ ಬದುಕಿನ ಸನಾತನವಾದಿಗಳ ಚಾರ್ವಾಕರನ್ನು ಕೊಲ್ಲುತ್ತ ಅವರ ಸಾಹಿತ್ಯವನ್ನು ಸುಡುತ್ತ, ಲೋಕಾಯುತ ತತ್ವ ಜ್ಞಾನವನ್ನೇ ನಿರ್ನಾಮ ಮಾಡುವಲ್ಲಿ ಬಹುಪಾಲು ಯಶಸ್ವಿಯಾದರು.

ನಂತರ ಬಂದ ಜೈನತತ್ವ, ಯಾವುದೇ ವರ್ಣದ ಮನುಷ್ಯ ಐಹಿಕ ಜಗತ್ತಿನ ಎಲ್ಲ ವ್ಯಾಮೋಹಗಳಿಂದ ಹೊರಬಂದು ತನ್ನ ಸದ್ಗುಣಗಳಿಂದ ಅತ್ಯುನ್ನತವಾದುದನ್ನು ಸಾಧಿಸಿದಾಗ ಆತನೇ ದೇವನಾಗುತ್ತಾನೆಂಬ ವಿಶಿಷ್ಟವಾದ ನಿರೀಶ್ವರವಾದವನ್ನೇ ಸಾರಿತು. ಆದರೆ ಐಹಿಕ ಜಗತ್ತಿಗೆ ಸಂಬಂಧಿಸಿದಂತೆ ಕಠಿಣ ಮಾರ್ಗದಿಂದಾಗಿ ಬಹುಪಾಲು ಶೂದ್ರರಿಗೆ ಈ ಧರ್ಮವನ್ನು ಸ್ವೀಕರಿಸಲಿಕ್ಕಾಗಲಿಲ್ಲ ಅಲ್ಲದೆ ಆ ಧರ್ಮ ಬುದ್ಧನ ಕಾಲದಲ್ಲೇ ಸನಾತನಿಗಳ ಹಿಡಿತಕ್ಕೆ ಬಂದಾಗಿತ್ತು. ಬುದ್ಧನ ಆಜ್ಞೆಯವಾದ ಕಾಠಿಣ್ಯವನ್ನು ಅಲ್ಲಗಳೆದ ಮಧ್ಯಮ ಮಾರ್ಗ, ದೇವರ ಆಸ್ತಿತ್ವದ ಬಗ್ಗೆ ಬುದ್ಧ ಎಲ್ಲಿಯೂ ಮಾತನಾಡುವುದಿಲ್ಲ. ಆತ ಮಾತನಾಡುವುದು ಬದುಕಿನ ಅಸ್ತಿತ್ವದ ಬಗ್ಗೆ ಈ ಬದುಕನ್ನು ದುಃಖದಿಂದ ಬಿಡುಗಡೆಗೊಳಿಸುವುದರ ಬಗ್ಗೆ ವಿವಿಧ ಜಾತಿ ಮತ್ತು ಕೆಲಸಗಳಲ್ಲಿ ಹಂಚಿಹೋಗಿದ್ದ ಶೂದ್ರರಿಗೆ ಬುದ್ಧ ಬಹಳ ಹಿಡಿಸಿದ.

ಬಹುಪಾಲು ಜನಸಮುದಾಯ ಬುದ್ಧನ ಮಾರ್ಗವನ್ನು ಅನುಸರಿಸತೊಡಗಿತು. ಅನೇಕ ರಾಜರು ಕೂಡ ಹಿಂದೂ ಧರ್ಮವನ್ನು ತೊರೆದು ಬೌದ್ಧ ಧರ್ಮವನ್ನು ಸ್ವೀಕರಿಸುವಂಥ ಪರಿಸ್ಥಿತಿಯುಂಟಾಯಿತು. ಆದರೆ ಸನಾತನಿಗಳು ಬೌದ್ಧ ಭಿಕ್ಷುಗಳ ಮೇಲೆ ಹಲ್ಲೆ

ವೈದಿಕರ ಶಾಸ್ತ್ರ ಮತ್ತು ಜಮೀನುದಾರರ ಶಸ್ತ್ರಗಳು ಭಾರತದ ಬಡವರು ಮತ್ತು ಹಿಂದುಳಿದ ಜಾತಿಗಳ ಜನರನ್ನು ಸಹಸ್ರಾರು ವರ್ಷಗಳಿಂದ ಬಂಧನದಲ್ಲಿಟ್ಟಿದ್ದವು. ಅದರಿಂದ ತಮ್ಮ ವಿಮೋಚನೆಗಾಗಿ ಮುಸ್ಲಿಂ ಮತ್ತು ಇತರ ಧರ್ಮಗಳಿಗೆ ಮತಾಂತರಗೊಂಡರು. ಈ ಪ್ರಕ್ರಿಯೆಯನ್ನು ಸ್ವಾಮಿ ವಿವೇಕಾನಂದರು ನೂರು ವರ್ಷಗಳಿಗಿಂತ ಹಿಂದೆಯೆ ಗುರುತಿಸಿದ್ದಾರೆ.

ಮಾಡತೊಡಗಿದರು. ಅವರನ್ನು ಜೀವಂತ ಸುಡುವ ಕೃತ್ಯಗಳೂ ನಡೆದವು. ನಂತರ ವಿವಿಧ ದೇಶಗಳಿಗೂ ಹರಡಿದ ಬೌದ್ಧ ಧರ್ಮ ಭಾರತದಲ್ಲಿ ಅಲ್ಪಸಂಖ್ಯಾತ ಧರ್ಮವಾಗಿ ಉಳಿದುಕೊಳ್ಳುವ ಪರಿಸ್ಥಿತಿ ಬಂದೊದಗಿತು. ತದನಂತರ ಬಂದ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಜಾತಿ ಮತ್ತು ವರ್ಣ ವ್ಯವಸ್ಥೆಯಿಂದ ಬೇಸತ್ತ ಜನರಿಗೆ ವರದಾನಗಳಾದವು.

ತಮ್ಮ ಗೌರವಕ್ಕಾಗಿ ವಿವಿಧ ಕೆಳಜಾತಿಗಳವರು ಬಹುಸಂಖ್ಯೆಯಲ್ಲಿ ಈ ಧರ್ಮಗಳನ್ನು ಸ್ವೀಕರಿಸಿದರೆ, ಮೇಲ್ಜಾತಿಯವರಲ್ಲಿ ಅನೇಕರು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಆಳುವ ವರ್ಗಗಳಿಂದ ಲಾಭ ಪಡೆಯುವುದಕ್ಕಾಗಿಯೇ ಆ ಧರ್ಮಗಳ ತತ್ವಕ್ಕೆ ಮಾರುಹೋಗಿಯೋ ಮತಾಂತರಗೊಂಡರು. ಸಂತರು ಮತ್ತು ಸೂಫಿಸಂತರು ಕೂಡ ಜನಸಮುದಾಯದ ಆಶೋತ್ತರಗಳನ್ನು ಎತ್ತಿಹಿಡಿಯುವಂಥ ಆದರ್ಶಗಳ ಮೂಲಕ ಜನರಲ್ಲಿ ಹೊಸ ವಿಚಾರಗಳನ್ನು ಬಿತ್ತತೊಡಗಿದರು. ಕೆಳಜಾತಿಗಳವರು ಏಕೆ ಮುಸ್ಲಿಮರಾದವರು ಎಂಬುದಕ್ಕೆ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ.

The Mohammedan conquest of Indian came as a salation to the downtroden to the poor. That is why one fifth of our people have become Mahammedans It was not the sword that did all. It would be the height of adness to think it was all the work of sword and fire...It was to gain their liberty from the...Zemindars and from the....Priest.

ವೈದಿಕರ ಶಾಸ್ತ್ರ ಮತ್ತು ಜಮೀನುದಾರರ ಶಸ್ತ್ರಗಳು ಭಾರತದ ಬಡವರು ಮತ್ತು ಹಿಂದುಳಿದ ಜಾತಿಗಳ ಜನರನ್ನು ಸಹಸ್ರಾರು ವರ್ಷಗಳಿಂದ ಬಂಧನದಲ್ಲಿಟ್ಟಿದ್ದವು. ಅದರಿಂದ ತಮ್ಮ ವಿಮೋಚನೆಗಾಗಿ ಮುಸ್ಲಿಂ ಮತ್ತು ಇತರ ಧರ್ಮಗಳಿಗೆ ಮತಾಂತರಗೊಂಡರು. ಈ ಪ್ರಕ್ರಿಯೆಯನ್ನು ಸ್ವಾಮಿ ವಿವೇಕಾನಂದರು ನೂರು ವರ್ಷಗಳಿಗಿಂತ ಹಿಂದೆಯೆ ಗುರುತಿಸಿದ್ದಾರೆ.

ಕನ್ನಡ ನಾಡಿನಲ್ಲಿ 12ನೇ ಶತಮಾನದ ಶರಣರು ಬಸವಣ್ಣನವರ ಮಾರ್ಗದರ್ಶನದಲ್ಲಿ ವರ್ಣ ಮತ್ತು ಜಾತ್ಯಾತೀತ ಸಮಾಜ ನಿರ್ಮಿಸಲು ತೀವ್ರ ಪ್ರಯತ್ನ ಮಾಡಿದರು. ಆಗ ಅಸ್ಪೃಶ್ಯರು ಮತ್ತು ಕೆಳಜಾತಿಗಳ ವಿವಿಧ ಕಾಯಕದವರು ಬೃಹತ್ ಪ್ರಮಾಣದಲ್ಲಿ ಶರಣ ಏಕದೇವೋಪಾಸನೆಯ ವರ್ಣ ಮತ್ತು ಜಾತ್ಯತೀತ ಧರ್ಮವನ್ನು ಸ್ವೀಕರಿಸಿದರು. ಬ್ರಾಹ್ಮಣ ಮಧುವರಸ ಮತ್ತು ಸಮಗಾರ ಹರಳಯ್ಯನಂಥವರು ಈ ಹೊಸ ಧರ್ಮದಲ್ಲಿ ಒಂದೇ ಸ್ಥಾನವನ್ನು ಪಡೆದರು. ಆದರೆ ಮಧುವರಸರ ಮಗಳು ಮತ್ತು ಹರಳಯ್ಯನವರ ಮಗನ ಮದುವೆಯೇ ಒಂದು ನೆಪವಾಗಿ ಮೇಲ್ಜಾತಿಯವರು ಗುಲ್ಲೆಬ್ಬಿಸಿದಾಗ ಸಂಭವಿಸಿದ ಕಲ್ಯಾಣ ಕ್ರಾಂತಿಯಿಂದಾಗಿ ಶರಣರ ಕನಸು ಕನಸಾಗಿಯೇ ಉಳಿಯಿತು.

ಶೂದ್ರರೂ ಹೀಗೆ ಜೈನರು, ಬೌದ್ಧರು, ಕ್ರೈಸ್ತರು, ಮುಸ್ಲಿಮರು ಲಿಂಗಾಯಿತರು ಮತ್ತು ಸಿಖ್‌ರಾಗಿ ಮತಾಂತರಗೊಂಡರು. ಉಳಿದವರು ಆದಿವಾಸಿಗಳಾಗಿ, ಅಸ್ಪೃಶ್ಯರಾಗಿ ಮತ್ತು ವಿವಿಧ ಜಾತಿಗಳ ಶೂದ್ರರಾಗಿ ಇದ್ದಲ್ಲೇ ಇದ್ದಾರೆ" ಬಹುಪಾಲು ಜೈನರು, ಬೌದ್ಧರು, ಕ್ರೈಸ್ತರು, ಮುಸ್ಲಿಮರು, ಲಿಂಗಾಯಿತರು ಮತ್ತು ಸಿಖ್ಖರು ಶೂದ್ರ ಮೂಲದವರೇ ಆಗಿದ್ದಾರೆ" ಅಸ್ಪೃಶ್ಯರು, ಆದಿವಾಸಿಗಳು ಮತ್ತು ಎಲ್ಲ ಹಿಂದುಳಿದ ವರ್ಗದವರು ಕೂಡ ಶೂದ್ರ ಮೂಲದವರೇ ಆಗಿದ್ದಾರೆ ಎಂಬ ಸತ್ಯ ಹೆಚ್ಚು ಜನಪ್ರಿಯವಾಗಬೇಕಿದೆ.

ಮಹಾಜನ ಸಮಾಜದ ವಿರುದ್ಧ ಬಹುಜನ ಸಮಾಜ ಈ ಐತಿಹಾಸಿಕ ಪ್ರಜ್ಞೆಯ ಆಧಾರದ ಮೇಲೆ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು ಒಂದು ಗೂಡಿ ಬಹುಜನರಾದರೆ ಭಾರತದ ಚರಿತ್ರೆ ಹೊಸ ತಿರುವು ಪಡೆದು ಭವಿಷ್ಯದಲ್ಲಿ ಬಹುಜನರ ಆಳ್ವಿಕೆ ಬಂದು ಸಾಂಪ್ರದಾಯಿಕ ಸುಲಿಗೆಕೋರ, "ಮಹಾ ಜನರ" ಆಳ್ವಿಕೆ ಕೊನೆಗೊಳ್ಳುವುದು. ಆದರೆ ಮಹಾಜನರು ಅಷ್ಟು ಸುಲಭವಾಗಿ ತಮ್ಮ ಹಕ್ಕನ್ನು ಬಿಟ್ಟುಕೊಡರು.

ತಮ್ಮ ರಾಜಕೀಯ ಹಕ್ಕನ್ನು ಉಳಿಸಿಕೊಳ್ಳುವುದಕ್ಕಾಗಿ ಅವರೀಗ "ಗರ್ವಸೇ "ಕಹೋಹಂ ಹಿಂದೂ ಹೈ", "ನಾವೆಲ್ಲಾ ಹಿಂದೂ ನಾವೆಲ್ಲ ಒಂದು" ಮುಂತಾದ ಘೋಷಣೆಗಳನ್ನು ಕೂಗತೊಡಗಿದ್ದಾರೆ. ಜನಗಣತಿಯಲ್ಲಿ ಜಾತಿಗಳ ಹೆಸರುಗಳಿರಬಾರದು. ಕೇವಲ ಹಿಂದೂ ಎಂದಿದ್ದರೆ ಸಾಕು ಎಂದು ಹಿಂದುಳಿದವರನ್ನು ಮತ್ತು ಅಸ್ಪೃಶ್ಯರನ್ನು ಗೊಂದಲಕ್ಕೀಡು ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಹಿಂದುಳಿದವರನ್ನು ಮತ್ತು ಅಸ್ಪೃಶ್ಯರನ್ನೊಡೆದು ಆಳಿದ ಇವರು ಇಂದು ಅವರೆಲ್ಲರನ್ನು ಹಿಂದೂ ಶಬ್ದಕ್ಕೆ ಕಟ್ಟಿಹಾಕಿ ಆಳ ಬಯಸಿದ್ದಾರೆ. ಎಲ್ಲಿಯವರೆಗೆ ತುಳಿತಕ್ಕೊಳಗಾದ ಹಿಂದುಳಿದವರು ಮತ್ತು ಅಸ್ಪೃಶ್ಯರ ಒಂದಾಗುವುದಿಲ್ಲವೋ, ಎಲ್ಲಿಯವರೆಗೆ ಇವರಿಬ್ಬರೂ ಸೇರಿ ಬಹುಪಾಲು ಕ್ರೈಸ್ತರು, ಸಿಖ್ಖರು, ಮುಸ್ಲಿಮರು ಮೊದಲಾದವರು ತಮ್ಮ ಪೂರ್ವಜರು ರಕ್ತಸಂಬಂಧಿಗಳಾಗಿದ್ದರು ಎಂಬ ಸತ್ಯವನ್ನು ಅರಿತು ಒಂದಾಗಿ ರಾಜ್ಯಶಕ್ತಿಯನ್ನು ಪಡೆಯಲು ಹೋರಾಡುವುದಿಲ್ಲವೋ ಅಲ್ಲಿಯವರೆಗೆ ಅವರು ಮಹಾಜನರ ಅಡಿಯಾಳುಗಳಾಗಿಯೇ ಇರಬೇಕಾಗುತ್ತದೆ. ●

ಕೃಷ್ಣಾರ್ಜುನರು ಈಗಲೂ ಇದ್ದಾರೆ !

(19ನೇ ಪುಟದಿಂದ)

ಸಾಮ್ಯತೆ ಗಮನಿಸುವಾಗ ಭೀತಿ ಉಂಟಾಗುತ್ತದೆ. ಇಂಥಲ್ಲಿ ಮತ್ತೊಂದು ಗುಪ್ತಯುಗ ಸ್ಥಾಪನೆಯಾಗದಂತೆ ತಡೆಯಲು, ಸ್ತ್ರೀಯರು, ದುರ್ಬಲರು, ಕೆಳವರ್ಗದವರು, ವಿಚಾರಶೀಲರು ತಮ್ಮ ಹಕ್ಕು ಸ್ವಾತಂತ್ರ್ಯ ಕಳೆದುಕೊಂಡು ಕೆಲವೇ ಮೇಲು ವರ್ಗದ ಅಧಿಪತ್ಯ ಪುನಃ ಸ್ಥಾಪನೆಯಾಗದಂತೆ ತಡೆಯಲು ಇರುವ ಮಾರ್ಗ ಒಂದೇ ಒಂದು. ಅದು ಕಾಲಮಾನದಲ್ಲಾದ ಸ್ವರೂಪಾತ್ಮಕ ಬದಲಾವಣೆ. ಆ ನಿಟ್ಟಿನಲ್ಲಿ ಪ್ರಯತ್ನಶೀಲರಾಗಲು ಪ್ರಸ್ತುತ ಕೃತಿ ವಿಪುಲ ಸಾಮಗ್ರಿ ಒದಗಿಸುತ್ತದೆ, ಆಹ್ವಾನಿಸುತ್ತದೆ. ಶುದ್ಧ ಪ್ರಜ್ಞಾವಂತ ವಿಚಾರಶೀಲತೆಯನ್ನು ಪ್ರೋತ್ಸಾಹಿಸುತ್ತದೆ. ಪ್ರಾಯಶಃ ಈ ಹೊತ್ತು ಬಹಳ ಮುಖ್ಯವಾಗಿರುವಂಥದು ವೀರಭದ್ರಪ್ಪನಂಥವರ ವಿಚಾರಶೀಲ ಚಕ್ಷುಗಳೇ ಹೊರತು ಮೌಢ್ಯದ ಚಕ್ಷುಗಳಲ್ಲ.

ಗೀತೆಯ ಇನ್ನೊಂದು ಮುಖವನ್ನು ಪರಿಚಯಿಸುವಲ್ಲಿ ಯಶಸ್ವಿಯಾದ ಈ ಕೃತಿಯ ಉದ್ದೇಶವೇ ಗೀತೆಯ ಇನ್ನೊಂದು ಮುಖವನ್ನು ಪರಿಚಯಿಸುವುದು ಎಂದು ಭಾವಿಸಲಾಗದು. ಅದನ್ನು ಲೇಖಕರ ಧ್ವನಿ ಅರ್ಥಮಾಡಿಸುತ್ತದೆ. ಧರ್ಮಗ್ರಂಥವನ್ನು ಅಲ್ಲಗಳೆಯುವ ಉದ್ದೇಶ ಅವರದಲ್ಲ. ಆದರೆ ಯಾವುದೋ ಒಂದು ಸಿದ್ಧಾಂತ ಪ್ರಸ್ತುತ ಬದುಕನ್ನು ದಾರುಣಾವಸ್ಥೆಗೆ ತಳ್ಳುತ್ತಿರುವಾಗ, ಪ್ರಜ್ಞಾವಂತ ವ್ಯಕ್ತಿ ಮೌನದಿಂದಿರಲಾರ. ಬರವಣಿಗೆಯ ಶಕ್ತಿ ಉಳ್ಳ ಲೇಖಕ ತನ್ನ ನೋವನ್ನು ಕೃತಿಯ ಮುಖೇನ ವ್ಯಕ್ತಪಡಿಸುತ್ತಾನೆ. ಸಾಮಾಜಿಕ ಸಾಮರಸ್ಯಕ್ಕೆ ಪ್ರಯತ್ನಿಸುತ್ತಾನೆ. ಆಗುತ್ತದೋ ಬಿಡುತ್ತದೋ ಅದಕ್ಕೆ ಜವಾಬ್ದಾರನಾಗಲಾರ. ಇಂಥಲ್ಲಿ ವೀರಭದ್ರಪ್ಪನವರ ಆಕ್ಷೇಪವಿರುವುದು ಸಮಕಾಲೀನ ಸಮಾಜವನ್ನು ದಾರುಣಾವಸ್ಥೆಗೆ ತಳ್ಳುತ್ತಿರುವ ಸಿದ್ಧಾಂತಕ್ಕೆ. ಆ ಸಿದ್ಧಾಂತ, ಪರಮ ಪವಿತ್ರವೆನ್ನಲಾದ ಗ್ರಂಥದ ಮೂಲಕವೇ ಹೇಗೆ ಬೆಳೆದು ಬಂದಿದೆ ಎಂದು ತೋರಿಸಿಕೊಡುತ್ತಾ, ಗ್ರಂಥವನ್ನು ಜೀವನ ಧರ್ಮ ಎಂದು ಬೋಧಿಸುವವರ ಒಳ ಉದ್ದೇಶ ಏನಿರುತ್ತದೆ ಎನ್ನುವುದರ ಸ್ಪಷ್ಟ ಚಿತ್ರಣ ಇಲ್ಲಿ ಕೊಟ್ಟಿದ್ದಾರೆ. ಯಾವತ್ತೂ ಬದುಕನ್ನು ಹಿಂಡುವ ಈ ಸಿದ್ಧಾಂತ ಬಿದ್ದುಹೋಗುತ್ತದೋ ಆಗ ಗೀತೆ ಒಂದು ಸ್ಮಾರಕವಾಗಿ ಉಳಿಯುತ್ತದೆ. ಅದರ ಬಗ್ಗೆ ಯಾರದೂ ಆಕ್ಷೇಪವಿರಲಾರದು. ಹಾಗಾಗುವಲ್ಲಿ ನಮ್ಮ ಶ್ರೇಯಸ್ಸಿದೆ. ಆದರೆ ಹಾಗಾದೀತೇ? ಎಲ್ಲಿಯ ತನಕ ಅದಾಗುವುದಿಲ್ಲವೋ ಅಲ್ಲಿಯ ತನಕವೂ ವೀರಭದ್ರಪ್ಪನವರ ಈ ಕೃತಿ ಪ್ರಾಯೋಗಿಕ ಮಹತ್ವ ಹೇಳುತ್ತಾ ಪ್ರಸ್ತುತವಾಗುತ್ತದೆ. ಪ್ರತಿಶಕ್ತಿಯಾಗಿ ನಿಲ್ಲುತ್ತದೆ ಅಂತಹ ಪವಾಡ ಸದೃಶ ಬದಲಾವಣೆ ನಡೆದಾಗ ಗೀತೆ ಸ್ಮಾರಕವಾಗುವಂತೆ ಈ ಕೃತಿಯೂ ಸ್ಮಾರಕವಾಗುತ್ತದೆ. ಅದು ಆಗಲಾರದೆಂದು ಗೊತ್ತಿದ್ದರೂ ಅಂತಹ ಕಾಲ ಎಷ್ಟು ಬೇಗ ಬಂದು ತಮ್ಮ ಕೃತಿ ಪ್ರಾಯೋಗಿಕ ಪ್ರಸ್ತುತತೆಯನ್ನು ಕಳೆದುಕೊಳ್ಳಲಿ ಎಂಬ ಹಾರೈಕೆ. ಸಹೃದಯತೆಯ ನಿರೀಕ್ಷೆ ವೀರಭದ್ರಪ್ಪನವರಿಗಿದೆ ಎಂದು ನಾನು ಭಾವಿಸುತ್ತೇನೆ.

ಗೀತೆಯ ಪರಿಪೂರ್ಣ ವಿಶ್ಲೇಷಣೆಯ ದೃಷ್ಟಿಯಿಂದ ಹೇಳುವುದಾದರೆ ಹಿಂದೆ ಹೇಳಿದಂತೆ ಪ್ರಸ್ತುತ ಕೃತಿ ಗೀತೆಯ ಒಂದು ಮುಖಕ್ಕೆ ಫೋಕಸ್ ಕೊಟ್ಟು ಪರಿಚಯಿಸಿ ಅಲ್ಲಲ್ಲಿ ಆಚೀಚಿನ ಮುಖಗಳನ್ನು ದಿಟ್ಟಿಸಿದೆ. ಇದು ಸುಧಾರಣಾವಾದಿ ನೆಲೆಯಲ್ಲಿ ನಿಂತು ನೋಡಿದ ಗೀತೆಯ ಮುಖ. ಸಂಪ್ರದಾಯವಾದಿ ನೆಲೆಯಲ್ಲಿ ನಿಂತು ನೋಡಿದ ಮುಖ ಶತಮಾನಗಳಿಂದಲೇ ಪರಿಚಿತವಾಗಿದೆ. ಅದನ್ನು ಸಮಗ್ರವಾಗಿ ತಿಳಿಯುವ ದೃಷ್ಟಿಯಿಂದ ಮೂರು ಕೆಲಸಗಳು ಆಗಬೇಕಾಗಿವೆ. ಒಂದು, ಸುಧಾರಣಾವಾದಿ ಬಲವಿರಿಸಿಕೊಂಡು ಸಂಪ್ರದಾಯದ ನೆಲೆಯಲ್ಲಿ ನಿಂತು ಗ್ರಹಿಸಬೇಕಾದ ಮುಖ. ಇನ್ನೊಂದು, ಸಂಪ್ರದಾಯದ ಬಲವಿರಿಸಿಕೊಂಡು ಸುಧಾರಣಾವಾದಿ ನೆಲೆಯಲ್ಲಿ ನಿಂತು ಗ್ರಹಿಸಬೇಕಾದ ಮುಖ. ಹೀಗೆ ನಾಲ್ಕು ಕಡೆಗಳಿಂದ ಕ್ರೋಢೀಕರಿಸಲಾಗುವ ಚಿಂತನೆಯ ಒಟ್ಟು ಸ್ವರೂಪದ ಗ್ರಹಿಕೆಯಿಂದ ಗೀತೆಯನ್ನು ಹೆಚ್ಚು ಅರ್ಥಮಾಡಿಕೊಳ್ಳಬಹುದೇನೋ? ಆದರೂ ಅದು ಪರಿಪೂರ್ಣವಾಗದು. ಅಂದಿನ ಸ್ಥಿತಿಗತಿಯ ಹೆಚ್ಚಿನ ಗ್ರಹಿಕೆಯಿಂದ ಪ್ರಾಪ್ತವಾಗುವಷ್ಟನ್ನು ಹೇಳಬಹುದೇ ಹೊರತು ನಾವಾರೂ ಆ ಕಾಲದಲ್ಲಿ ಬದುಕಿದ್ದವರಲ್ಲ. ಭಾರತದ ಯಾವುದೇ ಸಾಂಪ್ರದಾಯಿಕ ಕೃತಿ ಹೀಗೇ ಎನ್ನಲು ಬರುವುದಿಲ್ಲ. ಏಕೆಂದರೆ ಅದಕ್ಕೆ ಹಲವು ತಿದ್ದುಪಡಿಗಳಾಗಿವೆ. ಹಲವಾರು ಮಂದಿ ಪುನರ್ ರಚನೆ ಮಾಡಿದ್ದಾರೆ. ಬಹುಶಃ ಇದು ಭಾರತದ ವೈಶಿಷ್ಟ್ಯ. ಗ್ರೀಕ್ ಪುರಾಣ ಸಾಹಿತ್ಯಗಳು ಇಂತಹ ತಿದ್ದುಪಡಿಗೆ ಒಳಗಾದುದಿಲ್ಲ. ನಮ್ಮಲ್ಲೋ, ಸಾವಿರಾರು ರಾಮಾಯಣ, ಮಹಾಭಾರತಗಳು, ಕುಮಾರವ್ಯಾಸ ಅಂದಂತೆ 'ತಿಣುಕಿದನು ಫಣಿರಾಯ ರಾಮಾಯಣ ಕವಿಗಳ ಭಾರದಲಿ' ಎನ್ನುವಷ್ಟು ತುಂಬಿವೆ. ಎಲ್ಲದರಲ್ಲೂ ಅವರವರೇ ಕೆಲವು ಸಿದ್ಧಾಂತವನ್ನು ತುಂಬುವುದುಂಟು. ಈಗಲೂ ಸಹ ರಾಮಾಯಣ-ಮಹಾಭಾರತ ರಚನೆ ಮುಂದುವರಿಯುತ್ತಲೇ ಇವೆ. ಇಂಥಲ್ಲಿ ಗೀತೆಯ ಎಲ್ಲ ಮುಖಗಳನ್ನು ತಿಳಿಯುವ ಪ್ರಯತ್ನಕ್ಕಿಂತ ಸಮಕಾಲೀನ ಸಂದರ್ಭದಲ್ಲಿ ಅದರ ಒಳಿತು ಕೆಡುಕುಗಳ ಅಧ್ಯಯನ ಹೆಚ್ಚು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಈಗಲೂ ಇರುವ ಕೃಷ್ಣಾರ್ಜುನರಿಗೆ ವೀರಭದ್ರಪ್ಪನವರ ಕೃತಿಯ ಸಂದೇಶ ತಲುಪೀತೇ? ಸಾಮಾನ್ಯ ಜನರಿಗೆ ಮಾತ್ರ, ಪ್ರಾಂಜಲ ಚಿತ್ರದಿಂದ ಓದಲು ಸಾಧ್ಯವಾದರೆ ಖಂಡಿತವಾಗಿಯೂ ಪ್ರಸ್ತುತ ಕೃತಿ ರಾತ್ರಿಯ ದಾರಿಗೆ ಬೆಳಕು ಚೆಲ್ಲುವ ಟಾರ್ಚ್ ಆಗಿ ಕೆಲಸ ಮಾಡುತ್ತದೆ. ವೈಚಾರಿಕತೆಗೆ ಗದಾ ಪ್ರಹಾರವಾಗುತ್ತಿರುವ ಈ ಹೊತ್ತಿನಲ್ಲೂ ನಮ್ಮ ನಡುವೆ ಅಚಲವಾಗಿ ನಿಂತಿರುವ ಕೆಲವೇ ಮಂದಿ ಪ್ರಮುಖ ವೈಚಾರಿಕ ಬರಹಗಾರರಲ್ಲಿ ಒಬ್ಬರಾದ ಬಿ.ವಿ. ವೀರಭದ್ರಪ್ಪನವರ ಈ ಕೃತಿ ಸದ್ಯ ಇಂಗ್ಲೀಷ್‌ಗೆ ಅನುವಾದಗೊಂಡು ಮುದ್ರಣ ಕಾಣುತ್ತಿರುವುದು ಆರೋಗ್ಯ ಪೂರ್ಣ ಸಂತಸದ ಸಂಗತಿ. ●

ಸಂವಾದ



ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗ ಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸ ಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

– ಸಂಪಾದಕ

ವಿಳಾಸ :

'ಸಂವಾದ' ಮಾಸ ಪತ್ರಿಕೆ

ಸ್ಫೂರ್ತಿಧಾಮ, ಅಂಜನಾನಗರ

ವಿಶ್ವನೀಡಂ ಅಂಚೆ, ಬೆಂಗಳೂರು - 560 091

ದೂರವಾಣಿ : 3287943 / 3281667

ಅಂಬೇಡ್ಕರ್‌ಗೆ ಅಸ್ಪೃಶ್ಯತೆ ಕಲಿಸಿದ ಪಾಠ

ಅಂಬೇಡ್ಕರ್ ಅವರ ಅಪರೂಪದ ಬರಹ ಇದು. ದಲಿತರ ಆತ್ಮಕಥನದ ರೀತಿಯಲ್ಲಿರುವ ಈ ಬರಹವನ್ನು ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿರುವ 12 ನೇ ಸಂಪುಟದಿಂದ ಆಯ್ಕೆಮಾಡಲಾಗಿದೆ. ಅಂಬೇಡ್ಕರ್ ಅವರೊಳಗೂ ಇದ್ದ 'ಸಾಹಿತಿ' ಯೊಬ್ಬನ ಸ್ವಗತದಂತೆ ಈ ಬರಹ ಇದೆ. 'ಸಂವಾದ' ಓದುಗರಿಗೆ ಇದೊಂದು ಹೊಸ ಅನುಭವವಾಗಬಹುದು.

ಮೂಲ : ಡಾ॥ ಬಿ.ಆರ್. ಅಂಬೇಡ್ಕರ್

ಅನು : ಸಿ.ವಿ. ಲಕ್ಷ್ಮೀ ಮತ್ತು ಎಂ. ಮಾತಂಗಿ



ನಾವು ಮುಂಬೈ ಪ್ರಾಂತ್ಯದ ರತ್ನಗಿರಿ ಜಿಲ್ಲೆಯ ದಾಪೋಲಿ ತಾಲ್ಲೂಕಿನ ಮೂಲದವರು. ಈಸ್ಟ್ ಇಂಡಿಯಾ ಕಂಪನಿಯು ತನ್ನ ಆಳ್ವಿಕೆಯನ್ನು ಶುರುಮಾಡುತ್ತಿದ್ದಂತೆ ನನ್ನ ಪೂರ್ವಿಕರು ತಮ್ಮ ಕುಲಕಸುಬುಗಳನ್ನು ಬಿಟ್ಟು ಕಂಪನಿಯ ಸೈನ್ಯದಲ್ಲಿ ಸೇವೆಗೆ ಸೇರಿಕೊಂಡರು. ಕುಟುಂಬದ ಪರಂಪರೆಯಂತೆ ನನ್ನ ತಂದೆಯೂ ಸಹ ಸೈನ್ಯದಲ್ಲಿ ನೌಕರಿಯನ್ನು ಪಡೆದರು. ಅವರು ಒಬ್ಬ ಅಧಿಕಾರಿಯ ಹುದ್ದೆಯ ತನಕ ಬಡ್ತಿಯನ್ನು ಪಡೆದು ಸುಭೇದಾರರಾಗಿ ನಿವೃತ್ತರಾದರು. ನಿವೃತ್ತಿಯ ನಂತರ ನನ್ನ ತಂದೆಯವರು ನಮ್ಮ ಕುಟುಂಬವನ್ನು ದಾಪೋಲಿಗೆ ಕರೆತಂದು ಅಲ್ಲಿಯೇ ಬೀಡುಬಿಡುವ ಆಲೋಚನೆಯಲ್ಲಿದ್ದರು.

ಆದರೆ, ಯಾವುದೋ ಕಾರಣಕ್ಕೆ ನಮ್ಮ ತಂದೆಯವರು ತಮ್ಮ ನಿರ್ಧಾರವನ್ನು ಬದಲಾಯಿಸಿದರು. ನಮ್ಮ ಕುಟುಂಬವು ದಾಪೋಲಿಯನ್ನು ಬಿಟ್ಟು ಸತಾರದಲ್ಲಿ ನೆಲೆಗೊಂಡಿತು. 1904ರ ತನಕ ನಾವು ಸತಾರದಲ್ಲಿಯೇ ಉಳಿದೆವು. ನನ್ನ ಜೀವನದ ಮೊದಲನೆಯ ಘಟನೆಯು ನನಗೆ ನೆನಪಿರುವಂತೆ, 1901ರಲ್ಲಿ, ಸತಾರದಲ್ಲಿರುವಾಗ ನಡೆಯಿತು. ಆ ವೇಳೆಗಾಗಲೇ ನನ್ನ ತಾಯಿ ಮಡಿದಿದ್ದರು. ನನ್ನ ತಂದೆಯವರು ಸತಾರಾ ಜಿಲ್ಲೆಯ ಕಟಾವ್ ತಾಲ್ಲೂಕಿನ ಕೋರೆಂಗಾವ್ ಎಂಬ ಹಳ್ಳಿಯಲ್ಲಿ ಖಜಾಂಚಿಯಾಗಿ ಸರ್ಕಾರಿ ಸೇವೆಯಲ್ಲಿದ್ದರು. ಅಲ್ಲಿ ಸಾವಿರಾರು ಜನರು ಬರದಿಂದ ತತ್ತರಿಸಿ ಸಾಯುತ್ತಿದ್ದರಿಂದ, ಮುಂಬೈ ಸರ್ಕಾರವು ಅವರೆಲ್ಲರಿಗೂ ಕೆಲಸ ನೀಡುವ ಸಲುವಾಗಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸುತ್ತಿತ್ತು. ನನ್ನ ತಂದೆಯವರು ಕೋರೆಗಾಂವ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಾಗ, ನನ್ನನ್ನು ನನ್ನ ಹಿರಿಯಣ್ಣನನ್ನು ಮತ್ತು ತೀರಿಕೊಂಡಿದ್ದ ನನ್ನ ಹಿರಿಯಕ್ಕನ ಇಬ್ಬರು ಗಂಡುಮಕ್ಕಳನ್ನು ನನ್ನ ಅತ್ತೆಯವರೊಂದಿಗೆ ಬಿಟ್ಟು ಹೋದರು. ನನ್ನ ಅತ್ತೆಯೊಟ್ಟಿಗೆ ಕೆಲವು ಗುಣವಂತ ನೆರೆಹೊರೆಯವರೂ ಸಹ ನಮ್ಮ ಸಹಾಯಕ್ಕಿದ್ದರು.

ನನ್ನ ಅತ್ತೆಯವರು ಅತ್ಯಂತ ಮೆದು ಸ್ವಭಾವದ ಕರುಣಾಮಯಿಯಾಗಿದ್ದರು. ಆದರೆ, ಅವರಿಂದ ನಮಗೆ ಯಾವ ಸಹಾಯವೂ ಆಗುತ್ತಿರಲಿಲ್ಲ. ಆಕೆಯು ಹೆಚ್ಚಿನ ದೈಹಿಕ ಬೆಳವಣಿಗೆಯಿಲ್ಲದೆ ಕುಳ್ಳಗಿದ್ದು, ಆಕೆಯ ಕಾಲುಗಳಿಗೆ ಎಂತದೋ ರೋಗ ತಗಲಿತ್ತು. ಇದರಿಂದಾಗಿ, ಇತರರ ಸಹಾಯವಿಲ್ಲದೆ ಆಕೆ ನಡೆದಾಡುವುದೇ ಬಲು ಕಷ್ಟವಾಗಿತ್ತು. ಕೆಲವೊಮ್ಮೆ ಆಕೆಯನ್ನು ಹೊತ್ತುಕೊಂಡು ಹೋಗಬೇಕಿತ್ತು.

ನನಗೆ ಅಕ್ಕಂದಿರಿದ್ದರು. ಅವರೆಲ್ಲರಿಗೂ ಮದುವೆಯಾಗಿ, ಅವರು ತಮ್ಮ ತಮ್ಮ ಕುಟುಂಬಗಳೊಂದಿಗೆ ದೂರದ ಊರುಗಳಲ್ಲಿ ನೆಲೆಸಿದ್ದರು. ಅಡಿಗೆ ಮಾಡಿಕೊಳ್ಳುವುದು ನಮಗೊಂದು ದೊಡ್ಡ ಸಮಸ್ಯೆಯಾಗಿತ್ತು. ನಮ್ಮ ಅತ್ತೆಯವರಿಗಂತೂ ಅಡಿಗೆಯ ಕೆಲಸ ಅಸಾಧ್ಯವಾಗಿತ್ತು. ನಾವು ನಾಲ್ಕು ಮಂದಿ ಮಕ್ಕಳು, ಶಾಲೆಗೆ ಹೋಗುವುದರೊಂದಿಗೆ ಅಡಿಗೆಯನ್ನೂ ಮಾಡಬೇಕಿತ್ತು. ನಮಗೆ ರೊಟ್ಟಿ / ಬ್ರೆಡ್ ತಯಾರಿಸಲು ಬರುತ್ತಿರಲಿಲ್ಲ. ಆದ ಕಾರಣ ನಮಗೆ ಪಲಾವ್ ತಯಾರಿಸುವುದು ಬಲು ಸುಲಭವಾಗಿತ್ತು. ಅಕ್ಕಿ ಮತ್ತು ಮಾಂಸವನ್ನು ಬೆರಸಿ ಬೇಯಿಸಿದರೆ ಸಾಕು, ಪಲಾವ್ ತಯಾರಾಗಿಬಿಡುತ್ತಿತ್ತು.

ಕೋರೆಗಾಂವ್‌ನಲ್ಲಿ ಖಜಾಂಚಿಯಾಗಿದ್ದ ನಮ್ಮ ತಂದೆಯವರಿಗೆ ತಮ್ಮ ಕೆಲಸದ ಜಾಗವನ್ನು ಬಿಟ್ಟು, ನಮ್ಮನ್ನು ಕಾಣಲಿಕ್ಕೆ ಸತಾರಕ್ಕೆ ಬರುವುದು ಅಸಾಧ್ಯವಾಗಿದ್ದ ಕಾರಣ, ಬೇಸಿಗೆ ರಜೆಯನ್ನು ಅವರೊಟ್ಟಿಗೆ ಕೋರೆಗಾಂವ್‌ನಲ್ಲೇ ಕಳೆಯಲು ನಮಗೆ ಪತ್ರ ಬರೆದರು. ಮಕ್ಕಳಾದ ನಮಗೆ ಆ ಪತ್ರವನ್ನು ಓದಿ ರೋಮಾಂಚನವಾಯಿತು. ನಾವಾರೂ ಅಲ್ಲಿಯ ತನಕ ರೈಲನ್ನು ನೋಡಿಯೇ ಇರಲಿಲ್ಲ. ರೈಲು ಪ್ರಯಾಣವನ್ನು ನೆನೆಸಿಕೊಳ್ಳುತ್ತಿದ್ದಂತೆಯೇ ನಮ್ಮ ಸಂತೋಷ ಮುಗಿಲು ಮುಟ್ಟಿತು.

ಪ್ರಯಾಣಕ್ಕಾಗಿ ಭಾರಿ ಸಿದ್ಧತೆಗಳು ನಡೆಯತೊಡಗಿದವು. ಇಂಗ್ಲಿಷ್ ಶೈಲಿಯ ಹೊಸ ನಮೂನೆಯ ಅಂಗಿ, ಟೋಪಿ, ಹೊಸದಾದ ಬೂಟುಗಳು, ಜರಿ ಅಂಚಿನ ಹೊಸ ದೋತಿಗಳು ಪ್ರಯಾಣಕ್ಕಾಗಿ ಸಿದ್ಧವಾಗತೊಡಗಿದವು. ಪ್ರಯಾಣದ ಎಲ್ಲಾ ವಿವರಗಳನ್ನೂ ನಮ್ಮ ತಂದೆಯವರು ಬರೆದುಕಳಿಸಿದ್ದರು. ಅಲ್ಲದೆ, ನಾವು ಹೊರಡುವ ದಿನವನ್ನು ಮುಂಚಿತವಾಗಿ ಅವರಿಗೆ ತಿಳಿಸುವಂತೆ ಹೇಳಿದ್ದರು. ಏಕೆಂದರೆ, ನಾವು ಕೋರೆಗಾಂವ್‌ನ ರೈಲು ನಿಲ್ದಾಣದಲ್ಲಿ ಇಳಿದಾಗ ತಮ್ಮ ಕಛೇರಿಯ ಜವಾನನನ್ನು ನಮಗಾಗಿ ಕಳಿಸಿಕೊಡುವುದು ಅವರ ಉದ್ದೇಶವಾಗಿತ್ತು.

ಇದೇ ವ್ಯವಸ್ಥೆಯ ಪ್ರಕಾರ ನಾನು, ನನ್ನಣ್ಣ, ಹಾಗೂ ನನ್ನಕ್ಕನ ಮಕ್ಕಳೊಂದಿಗೆ ನಾವು ಸತಾರದಿಂದ ಹೊರಟೆವು. ನಮ್ಮ ಅತ್ತೆಯನ್ನು ನೆರೆಹೊರೆಯವರು ನೋಡಿಕೊಳ್ಳುವುದಾಗಿ ಹೇಳಿದರು. ರೈಲು ನಿಲ್ದಾಣವು ನಾವಿದ್ದ ಜಾಗದಿಂದ ಹತ್ತು ಮೈಲಿ ದೂರದಲ್ಲಿತ್ತು. ಅದಕ್ಕಾಗಿ ಒಂಟಿಕುದುರೆಯ ಟಾಂಗವೊಂದನ್ನು ಗೊತ್ತುಪಡಿಸಿ ನಾವು ರೈಲು ನಿಲ್ದಾಣವನ್ನು ಮುಟ್ಟಿದೆವು. ನಾವು ಪ್ರಯಾಣಕ್ಕಾಗಿಯೇ ಸಿದ್ಧಪಡಿಸಿದ ಉಡುಪುಗಳನ್ನು ಧರಿಸಿದ್ದೆವು. ನಾವೇನೋ ಹೊಸ ಹುರುಪು ಉತ್ಸಾಹದಿಂದ ಮನೆಯಿಂದ ಹೊರಟೆವು. ಆದರೆ ನಮ್ಮನ್ನು ಬಿಟ್ಟು ಅಗಲಿರಲಾರದ ನಮ್ಮ ಅತ್ತೆಯ ಗೋಳಾಟವಂತೂ ಹೇಳತೀರದಾಗಿತ್ತು.

ನಾವು ರೈಲು ನಿಲ್ದಾಣವನ್ನು ಮುಟ್ಟಿದಾಗ, ನಮ್ಮಣ್ಣನು ಟಿಕೇಟುಗಳನ್ನು ತಂದನು. ನನಗೂ, ನಮ್ಮಕ್ಕನ ಮಕ್ಕಳಿಗೂ ಪ್ರಯಾಣಕಾಲದಲ್ಲಿ ನಮಗೆ ಇಷ್ಟವಾದುದನ್ನು ಕೊಳ್ಳಲು, ತಲಾ ಎರಡು ಆಣೆಯನ್ನು ಕೊಟ್ಟನು. ಆ ಕೂಡಲೆ ನಾವು ನಿಂಬೆಹಣ್ಣಿನ ಜ್ಯೂಸ್ ಬಾಟಲುಗಳನ್ನು ತರಿಸಿ ಕುಡಿದೆವು. ಸ್ವಲ್ಪ ಹೊತ್ತಿನ ನಂತರ ರೈಲು ಶಿಳ್ಳೆ ಹಾಕತೊಡಗಿತು. ತಡಮಾಡಿದರೆ ಎಲ್ಲಿ ಹಿಂದೆಬೀಳುವೆವೋ ಎಂದು ಹೆದರಿ ಆ ಕೂಡಲೆ ನಾವು ರೈಲು ಹತ್ತಿ ಬೋಗಿಯಲ್ಲಿ ಕುಳಿತು ಬಿಟ್ಟೆವು. ಕೋರೆಗಾಂವ್ ನಿಲ್ದಾಣಕ್ಕೆ ಅತ್ಯಂತ ಹತ್ತಿರದಲ್ಲಿರುವ ಮಾಸೂರಿನಲ್ಲಿ ಇಳಿಯುವಂತೆ ನಮಗೆ ತಿಳಿಸಲಾಗಿತ್ತು. ರೈಲು ಮಾಸೂರು ನಿಲ್ದಾಣವನ್ನು ಸಂಜೆ ಐದು ಗಂಟೆಗೆ ಮುಟ್ಟಿತು. ನಾವು ನಮ್ಮ ಲಗೇಜುಗಳ ಸಮೇತ ಇಳಿದೆವು.

ಕೆಲವೇ ನಿಮಿಷಗಳಲ್ಲಿ ಅಲ್ಲಿ ಇಳಿದಂತಹ ಎಲ್ಲಾ ಪ್ರಯಾಣಿಕರೂ ತಮ್ಮ ತಮ್ಮ ಜಾಗಗಳಿಗೆ ಹೊರಟು ಹೋದರು. ನಾವು ನಮ್ಮ ತಂದೆಯವರಿಗಾಗಿ ಅಥವಾ ಅವರು ಕಳಿಸಬಹುದಾದ ಜವಾನನ ದಾರಿಕಾಯುತ್ತಾ ಪ್ಲಾಟ್ ಫಾರಮ್ಮಿನಲ್ಲೇ ಉಳಿದೆವು. ಬಹಳ ಹೊತ್ತು ಕಾಯುತ್ತಾ ಕುಳಿತರೂ ಯಾರೂ ಬರುವ ಸೂಚನೆ ಕಾಣಬರಲಿಲ್ಲ. ಒಂದು ಗಂಟೆ ಕಳೆದ ಬಳಿಕ, ನಮ್ಮನ್ನು

ವಿಚಾರಿಸಲು ಸ್ಟೇಷನ್ ಮಾಸ್ಟರ್ ಬಂದನು. ಅವನು ನಮ್ಮ ಟಿಕೇಟುಗಳನ್ನು ಕೇಳಿದನು. ನಾವು ಟಿಕೇಟುಗಳನ್ನು ತೋರಿಸಿದೆವು. ನಂತರ ನಾವು ಕಾಯುತ್ತಿರುವುದು ಏತಕ್ಕೆಂದು ಆತನು ವಿಚಾರಿಸಿದನು. ಆಗ ನಾವು ಕೋರೆಗಾಂವ್‌ಗೆ ಹೋಗಬೇಕಾಗಿರುವುದಾಗಿಯೂ, ನಮ್ಮನ್ನು ಕರೆದೊಯ್ಯಲು ನಮ್ಮ ತಂದೆ ಅಥವಾ ಅವರ ಕಛೇರಿಯ ಜವಾನನು ಬರಬೇಕಿದ್ದುದ್ದಾಗಿಯೂ ತಿಳಿಸಿದೆವು.

ಆದರೆ, ಅಲ್ಲಿಯು ತನಕ ಯಾರೂ ಬಂದಿಲ್ಲವೆಂಬುದನ್ನು ಮತ್ತು ಕೋರೆಗಾಂವ್‌ಗೆ ಹೋಗುವ ಮಾರ್ಗವೂ ಸಹ ನಮಗೆ ಗೊತ್ತಿಲ್ಲವೆಂಬುದನ್ನು ಸ್ಟೇಷನ್ ಮಾಸ್ಟರ್‌ಗೆ ತಿಳಿಸಿದೆವು. ನಾವು ಬಹಳ ಸೊಗಸಾದ ಉಡುಪುಗಳನ್ನು ಧರಿಸಿದ್ದೆವು. ನಮ್ಮ ಉಡುಪು ನಡೆನುಡಿಗಳನ್ನು ಗಮನಿಸಿದವರಾರಾದರೂ ಸರಿ, ನಮ್ಮನ್ನು ಅಸ್ಪೃಶ್ಯರ ಮಕ್ಕಳೆಂದು ಗುರುತಿಸುವಂತಿರಲಿಲ್ಲ. ಸ್ಟೇಷನ್ ಮಾಸ್ಟರ್‌ನಂತೂ ನಾವು ಖಂಡಿತವಾಗಿಯೂ ಬ್ರಾಹ್ಮಣರ ಮಕ್ಕಳೇ ಆಗಿರಬೇಕೆಂದು ತಿಳಿದುಕೊಂಡಿದ್ದನು. ಮತ್ತು ನಮಗೊದಗಿದ ದುರವಸ್ಥೆಯಿಂದಾಗಿ ಅವನಿಗೆ ಬಹಳ ವೇದನೆಯಾಗಿತ್ತು.

ಹಿಂದೂಗಳಲ್ಲಿ ಇರುವ ಪದ್ಧತಿಯಂತೆ, ನಾವು ಯಾವ ಜಾತಿಯವರೆಂದು ವಿಚಾರಿಸಿದನು. ನಾನು ಆ ಕೂಡಲೇ ಯಾವುದೇ ಬಿಗುಮಾನವಿಲ್ಲದೆ, ನಾವು 'ಮಹರ್' ಜಾತಿಯವರೆಂದು ಹೇಳಿದೆ. (ಬೊಂಬಾಯಿ ಪ್ರಾಂತ್ಯದಲ್ಲಿರುವ ಅಸ್ಪೃಶ್ಯ ಜನಾಂಗಗಳ ಪೈಕಿ ಮಹರ್ ಜಾತಿಯೂ ಒಂದು). ಆತನು ನನ್ನ ಮಾತನ್ನು ಕೇಳಿ ಕಲ್ಲಿನಂತೆ ಕದಲದೇ ನಿಂತು ಬಿಟ್ಟನು. ಆತನ ಮುಖದಲ್ಲಿ ಭಯಂಕರ ಬದಲಾವಣೆಗಳಾಗತೊಡಗಿದವು. ಆತನ ಮನಸ್ಸಿನಲ್ಲಿ ಉಂಟಾಗುತ್ತಿದ್ದ ಹೇಸಿಗೆಯ ಭಾವನೆಗಳು ನಮಗೆ ಸುಲಭವಾಗಿ ಗೊತ್ತಾಗ ತೊಡಗಿದವು. ನನ್ನ ಉತ್ತರವನ್ನು ಕೇಳಿದ ಕೂಡಲೇ ಆತನು ತನ್ನ ಕೊಠಡಿಯೊಳಗೆ ಹೋಗಿ ಸೇರಿಕೊಂಡನು.

ನಾವು ಎಲ್ಲಿದ್ದೆವೋ ಅಲ್ಲೇ ಉಳಿದೆವು. ಹದಿನೈದು ಇಪ್ಪತ್ತು ನಿಮಿಷಗಳು ಕಳೆದವು. ಸೂರ್ಯನು ನಿಧಾನವಾಗಿ ಮುಳಗತೊಡಗಿದನು. ನಮ್ಮ ತಂದೆಯೂ ಬರಲಿಲ್ಲ, ಅವರ ಜವಾನನೂ ಬರಲಿಲ್ಲ, ಇತ್ತ ಸ್ಟೇಷನ್ ಮಾಸ್ಟರನು ನಮ್ಮನ್ನು ತೊರೆದುಬಿಟ್ಟನು. ನಮಗೆ ದುಃಖ ಗಾಬರಿಗಳು ಆವರಿಸಿಕೊಂಡವು. ಪ್ರಯಾಣಕ್ಕೆ ಹೊರಟಾಗ ಇದ್ದಂತಹ ಉತ್ಸಾಹ, ಉಲ್ಲಾಸಗಳು ಮಾಯವಾಗಿ ಎಲ್ಲಿಲ್ಲದ ವ್ಯಸನವು ನಮ್ಮ ಮನಸ್ಸನ್ನು ತುಂಬಿಕೊಳ್ಳತೊಡಗಿತು.

ಅರ್ಧಗಂಟೆ ಕಳೆದ ಬಳಿಕ, ಸ್ಟೇಷನ್ ಮಾಸ್ಟರನು ಮರಳಿ ನಮ್ಮಲ್ಲಿಗೆ ಬಂದನು. ನಾವು ಮುಂದೇನು ಮಾಡಬೇಕೆಂಬುದಿರುವುದಾಗಿ ಕೇಳಿದನು. ಒಂದು ಎತ್ತಿನಗಾಡಿಯು ಬಾಡಿಗೆಗೆ ಸಿಗುವುದಾದರೆ ನಾವು ಕೋರೆಗಾಂವ್‌ಗೆ ಹೋಗುವುದಾಗಿಯೂ ಮತ್ತು ಕೋರೆಗಾಂವ್ ಹಳ್ಳಿಯು ಹೆಚ್ಚು ದೂರವಿಲ್ಲದಿದ್ದಲ್ಲಿ, ಆ ಕೂಡಲೇ ಹೊರಡಲು ಸಿದ್ಧವಿರುವುದಾಗಿ ಹೇಳಿದೆವು. ಅಲ್ಲಿ ಸಾಕಷ್ಟು ಎತ್ತಿನ ಗಾಡಿಗಳು ಬಾಡಿಗೆಗಾಗಿಯೇ ನಿಂತಿದ್ದವು. ಆದರೆ, ನಾನು ಸ್ಟೇಷನ್ ಮಾಸ್ಟರನಿಗೆ "ನಾವು ಮಹರ್ ಜಾತಿಯವರು" ಎಂದು ಹೇಳಿದ್ದ ಉತ್ತರವು ಗಾಡಿಯವರೆಲ್ಲರಿಗೂ ಮುಟ್ಟಿತ್ತು. ಆದ ಕಾರಣ, ಯಾವೊಬ್ಬ ಗಾಡಿಯವನೂ ಅಸ್ಪೃಶ್ಯ ಜಾತಿಯವರನ್ನು ತನ್ನ ಗಾಡಿಯಲ್ಲಿ ಕೂರಿಸಿಕೊಂಡು, ತನ್ನನ್ನು ತಾನು ಅಪಮಾನಿಸಿಕೊಳ್ಳಲು ಸಿದ್ಧನಿರಲಿಲ್ಲ ಮತ್ತು ನಮ್ಮಿಂದ ಆಗಬಹುದಾದ ಮೈಲಿಗೆಯನ್ನು ಅನುಭವಿಸಲು

ಚಿತ್ರ : ಸೆಂಥಿಲ್ ಸೆಲ್ವನ್

ತಯಾರಿರಲಿಲ್ಲ.

ನಾವು ಒಂದಕ್ಕೆ ಎರಡರಷ್ಟು ಬಾಡಿಗೆ ನೀಡಲು ತಯಾರಾಗಿದ್ದೆವು. ಆದರೆ ಹಣದ ಆಮಿಷವು ಸಹ ಕೆಲಸ ಮಾಡಲಿಲ್ಲ. ನಮ್ಮ ಪರವಾಗಿ ಗಾಡಿಯವರ ಬಳಿ ಚೌಕಾಶಿ ಮಾಡುತ್ತಿದ್ದ ಸ್ಟೇಷನ್ ಮಾಸ್ಟರನಿಗೆ ಮುಂದೇನು ಮಾಡಬೇಕೆಂಬುದು ಹೊಳೆಯದೆ ತೆಪ್ಪಗೆ ನಿಂತನು. ಇದ್ದಕ್ಕಿದ್ದಂತೆ ಆತನ ತಲೆಯಲ್ಲಿ ಹೊಸತೊಂದು ಆಲೋಚನೆಯು ಮಿಂಚಿದಂತಾಯ್ತು "ನೀವೇ ಗಾಡಿಯನ್ನು ನಡೆಸಲು ಸಾಧ್ಯವೇ?" ಎಂದು ಕೇಳಿದನು. ನಮ್ಮ ಸಮಸ್ಯೆಗೆ ಆತನು ಪರಿಹಾರ ಕಂಡುಹಿಡಿಯುತ್ತಿದ್ದಾನೆಂದು ಭಾವಿಸಿದ ನಾವು, ತಕ್ಷಣವೇ, "ಓಹೋ, ನಾವೇ ಗಾಡಿ ನಡೆಸಬಲ್ಲೆವು" ಎಂದು ಉದ್ಗರಿಸಿದೆವು. ನಮ್ಮ ಉತ್ತರದಿಂದ ಉತ್ತೇಜಿತವಾದ ಸ್ಟೇಷನ್ ಮಾಸ್ಟರನು ಗಾಡಿಯವರ ಬಳಿಗೆ ಹೋದನು. ನಾವು ಗಾಡಿಯವನಿಗೆ ಎರಡರಷ್ಟು ಬಾಡಿಗೆ ಕೊಡುವಂತೆ, ಗಾಡಿಯನ್ನು ನಾವೇ ನಡೆಸುವಂತೆ ಮತ್ತು ಗಾಡಿಯವನು ಗಾಡಿಯ ಹಿಂದೆ ನಡೆದುಕೊಂಡು ಹೋಗಬೇಕಾಗಿ ಸ್ಟೇಷನ್ ಮಾಸ್ಟರನು ಸಲಹೆ ಮಾಡಿದನು.

ಈ ಸಲಹೆಗೆ ಒಬ್ಬ ಗಾಡಿಯವನು ಒಪ್ಪಿಕೊಂಡನು. ಒಂದಕ್ಕೆ ಎರಡರಷ್ಟು ಬಾಡಿಗೆಯೂ ಸಿಗುತ್ತದೆ. ಅಲ್ಲದೆ, ಮೈಲಿಗೆಯಾಗುವ ಅಪಾಯವೂ ತಪ್ಪುತ್ತದೆ ಎಂದು ಅವನಿಗೆ ಸಂತಸವಾಯಿತು. ನಾವು ಎತ್ತಿನ ಗಾಡಿಯನ್ನು ಹತ್ತಿದಾಗ, ಸಂಜೆ 6.30 ಆಗಿತ್ತು. ಕತ್ತಲಾಗುವುದಕ್ಕೆ ಮುನ್ನ ನಾವು ಕೋರೆಗಾಂವ್ ಹಳ್ಳಿಯನ್ನು ತಲುಪುವ ಭರವಸೆ ಸಿಗುವವರೆಗೂ ನಮಗೆ ರೈಲು ನಿಲ್ದಾಣವನ್ನು ಬಿಡುವ ಧೈರ್ಯವಿರಲಿಲ್ಲ. ಆದ ಕಾರಣ, ಕೋರೆಗಾಂವ್‌ಗೆ ಇರಬಹುದಾದ ದೂರ ಮತ್ತು ಅಲ್ಲಿಗೆ ತಲುಪಲು ತಗಲಬಹುದಾದ ಸಮಯದ ಬಗ್ಗೆ ಗಾಡಿಯವನನ್ನು ಕೇಳಿದೆವು. ಆತನು ಮೂರು ಗಂಟೆಗಳಿಗಿಂತ ಹೆಚ್ಚು ಕಾಲ ಬೇಕಾಗಿಲ್ಲವೆಂದು ಹೇಳಿದನು. ಆತನ ಮಾತನ್ನು ನಂಬಿ, ನಾವು ನಮ್ಮ ಸರಕು ಸಾಮಾನುಗಳನ್ನು ಗಾಡಿಯೊಳಗಿಟ್ಟು ಸ್ಟೇಷನ್ ಮಾಸ್ಟರನಿಗೆ ವಂದನೆ ಸಲ್ಲಿಸಿ, ಗಾಡಿಯೇರಿದೆವು. ನಮ್ಮಲ್ಲಿಯೇ ಒಬ್ಬರು ಎತ್ತಿನ ಲಗಾಮನ್ನು ಹಿಡಿದು ಗಾಡಿ ನಡೆಸತೊಡಗಿದವು. ಗಾಡಿಯವನು ಗಾಡಿಯ ಪಕ್ಕದಲ್ಲೇ ನಡೆದು ಬರಲಾರಂಭಿಸಿದನು.

ರೈಲು ನಿಲ್ದಾಣದಿಂದ ಸ್ವಲ್ಪ ದೂರ ಸಾಗುತ್ತಿದ್ದಂತೆಯೆ ನದಿಯೊಂದು ಅಡ್ಡ ಸಿಕ್ಕಿತು. ಆದರೆ ಈ ನದಿಯು ಸಾಕಷ್ಟು ಒಣಗಿಹೋಗಿ, ಅಲ್ಲಲ್ಲಿ ಇದ್ದಂತಹ ಹೊಂಡಗಳಲ್ಲಿ ಮಾತ್ರ ನೀರು ತುಂಬಿತ್ತು. ಅಲ್ಲಿಯೇ ಇಳಿದು ನಮ್ಮ ಊಟವನ್ನು ಮುಗಿಸಿಕೊಳ್ಳುವಂತೆ ಗಾಡಿಯವನು ನಮಗೆ ಸೂಚಿಸಿದನು. ಏಕೆಂದರೆ, ಮುಂದೆ ದಾರಿಯಲ್ಲಿ ನೀರು ಸಿಗಲಾರದೆಂದು ತಿಳಿಸಿದನು. ನಮಗೆ ಅವನ ಮಾತು ಸರಿಯೆಂದು ತೋಚಿದ್ದರಿಂದ, ನಾವು ಒಪ್ಪಿದೆವು. ಆತನು ತನಗೆ ಸಲ್ಲಬೇಕಾದ ಬಾಡಿಗೆ ಹಣದಲ್ಲಿ, ಸ್ವಲ್ಪ ಹಣವನ್ನು ಮುಂಗಡವಾಗಿ ಕೊಡಬೇಕೆಂದು ಕೇಳಿಕೊಂಡನು. ಅಲ್ಲಿರುವ ಹಳ್ಳಿಯೊಳಗೆ ಹೋಗಿ ತನ್ನ ಊಟ ಮುಗಿಸಿ ಬರುವುದಾಗಿ ತಿಳಿಸಿದನು. ನನ್ನ ಅಣ್ಣನು ಸ್ವಲ್ಪ ಹಣವನ್ನು ಅವನಿಗೆ ಕೊಟ್ಟನು. ಆತನು ಸ್ವಲ್ಪ ಹೊತ್ತಿನಲ್ಲಿ ಹಿಂತಿರುಗುವುದಾಗಿ ಹೇಳಿ, ಹಳ್ಳಿಯೊಳಗೆ ಹೋದನು.

ನಮಗಂತೂ ಬಹಳ ಹಸಿವಾಗಿತ್ತು. ತುತ್ತು ಅನ್ನ ಉಣ್ಣಲು ಅವಕಾಶ ಸಿಕ್ಕಿದ್ದಕ್ಕಾಗಿ ಬಹಳ ಖುಷಿಯಾಯಿತು. ನಮ್ಮ ಅತ್ತೆಯು ನೆರೆಹೊರೆಯವರನ್ನು ಒತ್ತಾಯಪಡಿಸಿ, ಅವರ ಕೈಯಿಂದಲೇ ಬಲು ರುಚಿಯಾದ ಅಡುಗೆಯನ್ನು ಮಾಡಿ ಬುತ್ತಿ ಕಟ್ಟಿಕೊಟ್ಟಿದ್ದಳು. ನಾವು ಬುತ್ತಿಯನ್ನು ತೆಗೆದು ಉಣ್ಣಲಾರಂಭಿಸಿದೆವು. ಉಣ್ಣುತ್ತಿರುವಾಗಲೇ ನೀರು ಬೇಕೆನಿಸಿತು. ನಮ್ಮಲ್ಲಿ ಒಬ್ಬನು ನದಿಯಲ್ಲಿರುವ ಹೊಂಡಕ್ಕೆ ನೀರು ತರಲು ಹೋದನು. ಆದರೆ ಆ ಹೊಂಡದಲ್ಲಿದ್ದ ನೀರು ನೀರೇ ಆಗಿರಲಿಲ್ಲ. ಕೊಳಚೆ ಮಣ್ಣು, ಉಚ್ಚೆ ಮತ್ತು ಎಮ್ಮೆ ಎತ್ತುಗಳ ಸಗಣಿಯಿಂದ ತುಂಬಿದ್ದ ಆ ಹೊಂಡದ ನೀರು ಗಬ್ಬುನಾರುತ್ತಿತ್ತು. ಆ ನೀರನ್ನು ಮನುಷ್ಯರಾದವರು ಬಳಸುವಂತಿರಲಿಲ್ಲ. ಆ ಕೊಳಕು ನೀರಿನ ಗಬ್ಬು ವಾಸನೆಯು ಬಹಳ ಕೆಟ್ಟದಾಗಿತ್ತು. ನಮಗಂತೂ ಅದನ್ನು ಕೈಯಾರೆ ಮುಟ್ಟುವುದಕ್ಕೂ ಆಗಲಿಲ್ಲ.

ಅಲ್ಪಸ್ವಲ್ಪ ತಿಂದಿದ್ದ ಊಟದ ಡಬ್ಬಿಗಳನ್ನು ಮುಚ್ಚಿ, ಗಾಡಿಯವನಿಗಾಗಿ ಕಾಯುತ್ತಾ ಕುಳಿತುಕೊಂಡೆವು. ಎಷ್ಟು

ಹೊತ್ತು ಕಳೆದರೂ ಆ ಮನುಷ್ಯ ಬರಲೇ ಇಲ್ಲ. ಎಲ್ಲಾ ದಿಕ್ಕುಗಳನ್ನೂ ನೋಡುತ್ತಾ ಆತನಿಗಾಗಿ ಕಾಯುವುದನ್ನು ಬಿಟ್ಟರೆ, ನಮಗೆ ಬೇರೆ ಮಾರ್ಗವೇ ಇರಲಿಲ್ಲ. ಬಹಳ ಹೊತ್ತು ಕಳೆದ ಬಳಿಕ, ಕೊನೆಗೂ ಗಾಡಿಯವನು ಬಂದ ನಮ್ಮ ಪ್ರಯಾಣ ಮುಂದುವರೆಯಿತು. ಐದಾರೂ ಮೈಲುಗಳಷ್ಟು ದೂರ ನಾವು ಗಾಡಿ ನಡೆಸಿದವು. ಆ ಗಾಡಿಯವನು ನಡೆಯುತ್ತಲೇ ಬರುತ್ತಿದ್ದವನು, ಇದ್ದಕ್ಕಿದ್ದಂತೆ ಗಾಡಿಯೊಳಗೆ ನೆಗೆದು ಕುಳಿತು, ನಮ್ಮ ಕೈಗಳಿಂದ ಲಗಾಮನ್ನು ತೆಗೆದುಕೊಂಡನು. ಆತನ ವರ್ತನೆಯಿಂದ ನಮಗೆ ನಿಜಕ್ಕೂ ಅಚ್ಚರಿಯಾಯಿತು. ನಮ್ಮನ್ನು ತನ್ನ ಗಾಡಿಯಲ್ಲಿ ಕರೆದೊಯ್ದರೆ ಮೈಲಿಗೆಯಾಗುತ್ತದೆ ಎಂದು ಎಗರಾಡಿದಂತವನು, ಇದೀಗ ತನ್ನೆಲ್ಲಾ ಧಾರ್ಮಿಕ ನಂಬಿಕೆಗಳನ್ನು ಬದಿಗಿಟ್ಟು ನಮ್ಮೊಟ್ಟಿಗೆ ಗಾಡಿಯಲ್ಲೇ ಕುಳಿತು ಬಿಟ್ಟನಲ್ಲಾ!" ಆದರೆ ಆತನನ್ನು ಪ್ರಶ್ನಿಸುವ ಸಾಹಸವನ್ನು ನಾವು ಮಾಡಲಿಲ್ಲ.

ಆದಷ್ಟು ಬೇಗ ಕೋರೆಗಾಂವ್ ಹಳ್ಳಿಯನ್ನು ಸೇರಿದರೆ ಸಾಕಾಗಿತ್ತು. ಸ್ವಲ್ಪ ಕಾಲ ಗಾಡಿಯ ಚಲನೆಯನ್ನು ಗಮನಿಸುವುದರಲ್ಲಿ ನಾವು ಆಸಕ್ತರಾಗಿದ್ದೆವು. ಸ್ವಲ್ಪ ಹೊತ್ತಿಗೆ, ಗವ್ವನೆ ದಟ್ಟ ಕತ್ತಲು ಆವರಿಸತೊಡಗಿತು. ಆ ಕತ್ತಲೆಯನ್ನು ಹೊಡೆದೋಡಿಸಲು ದಾರಿದೀಪಗಳೂ ಇರಲಿಲ್ಲ. ಬರುಬರುತ್ತಾ ಆ ದಾರಿಯು ನಿರ್ಜನವಾಗತೊಡಗಿತು. ಮನುಷ್ಯರಾಗಲೀ ಪ್ರಾಣಿಗಳಾಗಲೀ ಕಾಣಸಿಗದಾದರು. ಮನುಷ್ಯ ಅಥವಾ ಪ್ರಾಣಿಗಳ ಸಂಚಾರವಿದ್ದಿದ್ದಲ್ಲಿ, ನಾವು ಜನರ ಮಧ್ಯೆ ಇರುವ ಧೈರ್ಯವಾದರೂ ನಮಗೆ ಇರುತ್ತಿತ್ತು. ಆ ಕತ್ತಲಿನಲ್ಲಿ ಒಂಟಿತನದ ಭಯವು ನಮ್ಮನ್ನು ಕಾಡತೊಡಗಿತು. ಗಾಡಿ ಚಲಿಸುತ್ತಿದ್ದಂತೆ ನಮ್ಮ ಭಯ ಕಾತರಗಳು ಹೆಚ್ಚಾಗತೊಡಗಿದವು. ಆದರೂ ಇದ್ದ ಬದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಗಟ್ಟಿಯಾಗಿ ಕುಳಿತುಕೊಂಡೆವು.

ಮಾಸೂರಿನಿಂದ ಸಾಕಷ್ಟು ದೂರ ಬಂದಿದ್ದೆವು. ಅಷ್ಟೊತ್ತಿಗಾಗಲೇ ಮೂರು ಗಂಟೆಗಳು ಕಳೆದಿದ್ದವು. ಆದರೆ ಕೋರೆಗಾಂವ್ ಹಳ್ಳಿಯ ಸೂಚನೆಗಳೇ ಕಂಡು ಬರಲಿಲ್ಲ. ನಮಗೆ ಇದ್ದಕ್ಕಿದ್ದಂತೆ, ವಿಚಿತ್ರವಾದ ಭಯಬೆರತ ಆಲೋಚನೆಗಳು ಬರಲಾರಂಭಿಸಿದವು. ಈ ಗಾಡಿಯವನು ನಮ್ಮನ್ನು ಮೋಸದಿಂದ ದಾರಿ ತಪ್ಪಿಸಿ ಕರೆದುಕೊಂಡು ಹೋಗಿ ನಮ್ಮನ್ನು ಕೊಲ್ಲಲು ಹೊಂಚು ಹಾಕುತ್ತಿದ್ದಾನೆ ಎಂಬ ಸಂಶಯ ಬರತೊಡಗಿತು. ನಮ್ಮ ಮೈಮೇಲೆ ಬಹಳಷ್ಟು ಬಂಗಾರದ ಒಡವೆಗಳಿದ್ದದ್ದರಿಂದ ನಮ್ಮ ಭಯ ಸಂಶಯಗಳು ಇನ್ನಷ್ಟು ಬಲಗೊಳ್ಳತೊಡಗಿದವು. ಕೋರೆಗಾಂವ್ ಹಳ್ಳಿಯು ಇನ್ನು ಎಷ್ಟು ದೂರವಿದೆ. ಹಳ್ಳಿಯನ್ನು ಮುಟ್ಟಲು ಇಷ್ಟು ತಡವೇಕೆ ಆಗುತ್ತಿದೆ ಎಂದು ನಾವು ಗಾಡಿಯವನಿಗೆ ಪ್ರಶ್ನೆಗಳನ್ನು ಹಾಕತೊಡಗಿದೆವು. "ಇಲ್ಲ, ಇಲ್ಲ, ಬಹಳ ದೂರವಿಲ್ಲ, ಇನ್ನು ಸ್ವಲ್ಪ ಹೊತ್ತಿಗೆ ನಾವು ಕೋರೆಗಾಂವ್ ತಲುಪುತ್ತೇವೆ" ಎಂದು ಗಾಡಿಯವನು ಹೇಳುತ್ತಲೇ ಬಂದ.

ಅಷ್ಟೊತ್ತಿಗಾಗಲೇ ರಾತ್ರಿ ಸುಮಾರು 10 ಗಂಟೆಯಾಗಿತ್ತು. ಕೋರೆಗಾಂವ್ ಹಳ್ಳಿಯ ಸುಳಿವೇ ಇಲ್ಲ.

ಚಿತ್ರ : ಸಂಥಿಲ್ ಸೆಲ್ವನ್

ನಾವು ಬಿಕ್ಕಿ ಬಿಕ್ಕಿ ಅಳತೊಡಗಿದೆವು. ಜತೆಗೆ ಗಾಡಿಯವನನ್ನು ಶಪಿಸತೊಡಗಿದೆವು. ನಮ್ಮ ಗೋಳಾಟ ಬಯ್ದಾಟಗಳು ಸುಮಾರು ಹೊತ್ತು ನಡೆಯಿತು. ಆದರೆ ಗಾಡಿಯವನು ಮಾತ್ರ ತೆಪ್ಪಗೆ ಗಾಡಿ ಹೊಡೆಯುತ್ತಿದ್ದ. ಇದ್ದಕ್ಕಿದ್ದಂತೆ, ಸ್ವಲ್ಪ ದೂರದಲ್ಲಿ ಒಂದು ದೀಪ ಉರಿಯುತ್ತಿರುವುದು ಕಂಡು ಬಂತು. ಗಾಡಿಯವನು ಹೇಳಿದ, "ನಿಮಗೆ ಆ ದೀಪ ಕಾಣುತ್ತಿದೆಯಾ? ಅದು ಟೋಲ್‌ಗೇಟ್ ಬಳಿಯಿರುವ ದೀಪ. ಈ ರಾತ್ರಿ ನಾವು ಅಲ್ಲಿಯೇ ಕಳೆಯೋಣ" ನಮಗೆ ಸ್ವಲ್ಪ ಧೈರ್ಯ ಬಂದಂತಾಗಿ, ಅಳುವುದನ್ನು ನಿಲ್ಲಿಸಿದೆವು. ಹತ್ತಿರದಲ್ಲೇ ಇದ್ದಂತೆ ಕಂಡ ಆ ದೀಪವು ಬಹಳ ದೂರದಲ್ಲಿತ್ತು. ಅಲ್ಲಿಗೆ ನಾವು ಮುಟ್ಟಲಾರವೇನೋ ಅನಿಸತೊಡಗಿತು.

ಕೊನೆಗೆ, ಟೋಲ್ ಕಲೆಕ್ಟರ್‌ನ ಬಿಡಾರವನ್ನು ಮುಟ್ಟುವುದಕ್ಕೆ ಎರಡು ಗಂಟೆ ಬೇಕಾಯಿತು. ಈ ನಡುವೆ ನಮ್ಮ ಭಯಕಾತರಗಳು ಹೆಚ್ಚಾಗಿ, ಗಾಡಿಯವನಿಗೆ ಇನ್ನಿಲ್ಲದ ಪ್ರಶ್ನೆಗಳನ್ನು ಹಾಕತೊಡಗಿದೆವು. ಕೋರೆಂಗಾವ್ ಹಳ್ಳಿಯನ್ನು ಸೇರಲು ತಡವಾದದ್ದೇಕೆ, ನಾವು ಸರಿಯಾದ ದಾರಿಯಲ್ಲೇ ಹೋಗುತ್ತಿದ್ದೇವಾ ಇತ್ಯಾದಿ ಇತ್ಯಾದಿ ಪ್ರಶ್ನೆಗಳು.

ಮಧ್ಯರಾತ್ರಿಯ ವೇಳೆಗೆ ಗಾಡಿಯು ಟೋಲ್ ಕಲೆಕ್ಟರ್‌ನ ಬಿಡಾರವನ್ನು ಮುಟ್ಟಿತು. ಆ ಚಾವಡಿಯು ಬೆಟ್ಟದ ಬುಡದಲ್ಲಿತ್ತು. ಅಲ್ಲಿಗೆ ಬಂದಾಗ, ಅಲ್ಲಿ ಅನೇಕ ಎತ್ತಿನ ಗಾಡಿಗಳು ರಾತ್ರಿ ಕಳೆಯಲು ಬೀಡುಬಿಟ್ಟಿದ್ದವು. ನಮಗೆ ಸಿಕ್ಕಾಪಟ್ಟೆ ಹಸಿವಾಗಿತ್ತು. ಏನಾದರೂ ತಿನ್ನಲು ಸಿಕ್ಕಿದರೆ ಸಾಕು ಹೊಟ್ಟೆ ತುಂಬಾ ತಿನ್ನಬೇಕೆನಿಸಿತ್ತು. ಆದರೆ, ಮತ್ತೆ ಅಲ್ಲಿ ನೀರಿನ ಪ್ರಶ್ನೆಯೇ ಕಣ್ಣ ಮುಂದೆ ಬಂತು, ನಾವು ನಮ್ಮ ಗಾಡಿಯವನನ್ನು ಎಲ್ಲಿಂದಲಾದರೂ ನೀರು ತಂದುಕೊಡಲು ಸಾಧ್ಯವೇ ಎಂದು ಕೇಳಿದೆವು. ಟೋಲ್ ಕಲೆಕ್ಟರನು ಒಬ್ಬ ಹಿಂದೂವಾದದ್ದರಿಂದ, ನಾವು ಮಹರ್‌ಗಳೆಂದು ಸತ್ಯವನ್ನೇ ನುಡಿದರೆ, ನೀರು ಸಿಗುವ ಸಾಧ್ಯತೆಯೇ ಇಲ್ಲವೆಂದು ಗಾಡಿಯವನು ನಮಗೆ ಎಚ್ಚರಿಸಿದನು. "ಆದ್ದರಿಂದ, ನೀವು ಮುಸಲ್ಮಾನರು ಎಂದು ಹೇಳಿ, ನಿಮ್ಮ ಅದೃಷ್ಟವನ್ನು ಪರೀಕ್ಷಿಸಿ" ಎಂದು ಬುದ್ಧಿವಾದ ಹೇಳಿದನು.

ಆತನ ಬುದ್ಧಿಮಾತಿನ ಮೇರೆಗೆ, ನಾನು ಟೋಲ್ ಕಲೆಕ್ಟರ್‌ನ ಬಳಿಗೆ ಹೋಗಿ, ಸ್ವಲ್ಪ ನೀರು ಕೊಡುವಂತೆ ಕೇಳಿಕೊಂಡೆ ತಕ್ಷಣವೇ ಆತನು, "ಯಾರು ನೀನು?" ಎಂದು ಪ್ರಶ್ನಿಸಿದನು. ನಾವು ಮುಸ್ಲಿಮರೆಂದು ನಾನು ಉತ್ತರಿಸಿದೆ. ನನಗೆ ಉರ್ದು ಭಾಷೆಯು ಬಲು ಚೆನ್ನಾಗಿ ಬರುತ್ತಿದ್ದರಿಂದ, ಆತನಿಗೆ ಯಾವುದೇ ಸಂಶಯ ಬರದಿರಲು ನಾನು ಪಕ್ಕಾ ಮುಸ್ಲಿಮನಂತೆ ಉರ್ದುವಿನಲ್ಲೇ ಮಾತನಾಡತೊಡಗಿದೆ. ಆದರೆ ನನ್ನ ತಂತ್ರವು ನಡೆಯಲಿಲ್ಲ. ಆತನ ಪ್ರತಿಕ್ರಿಯೆಯು ಬಹಳ ಖಾರವಾಗಿತ್ತು. "ನಿನಗಾಗಿ ಇಲ್ಲಿ ನೀರು ತಂದಿಟ್ಟುಕೊಂಡಿರುವವರಾರು? ಆ ಗುಡ್ಡದ ಮೇಲೆ ನೀರಿದೆ. ಬೇಕಾದರೆ ಹೋಗಿ ತೆಗೆದುಕೊಂಡು ಬಾ. ನೀರು ತರಿಸಲು ನನ್ನಲ್ಲಿ ಯಾರೂ ಇಲ್ಲ" ಎಂದು ಸಿಡುಕಿದನು. ನಂತರ ಮುಖ ತಿರುಗಿಸಿ ಕುಳಿತನು. ನಾನು ಗಾಡಿಯ ಬಳಿಗೆ ವಾಪಸ್ಸಾಗಿ, ನಡೆದ ಸಂಗತಿಯನ್ನು ನನ್ನ ಅಣ್ಣನಿಗೆ ತಿಳಿಸಿದೆ. ನನ್ನ ಅಣ್ಣನಿಗೆ ಏನು ಅನಿಸಿತೋ, ನಮಗೆ ತೆಪ್ಪಗೆ ಮಲಗಿಕೊಳ್ಳಲು ಹೇಳಿದ.

ಎತ್ತುಗಳ ಹೆಗಲ ಮೇಲಿನ ಗಾಡಿಯ ನೊಗವನ್ನು ಬಿಚ್ಚಿ, ಗಾಡಿಯನ್ನು ವಾಲಿಸಿ ನಿಲ್ಲಿಸಲಾಯಿತು. ನಾವು ಗಾಡಿಯ ಕೆಳಗೆ ನಮ್ಮ ಹಾಸಿಗೆಯನ್ನು ಹರಡಿ, ಮೈಚೆಲ್ಲಿ ಮಲಗಿದೆವು. ಈಗಷ್ಟೇ ಒಂದು ಸುರಕ್ಷಿತವಾದ ಜಾಗಕ್ಕೆ ಬಂದಿದ್ದರಿಂದ, ಅಲ್ಲಿಯ ತನಕ ನಡೆದದ್ದನ್ನೆಲ್ಲಾ ಮರೆತು, ನೆಮ್ಮದಿಯಾಗಿ ನೆಲಕ್ಕೆ ಒರಗಿದೆವು. ಆದರೆ ಆಗಷ್ಟೆ ಜರುಗಿದ ಘಟನೆಯನ್ನು ಮನಸ್ಸು ಮತ್ತೆ ಮತ್ತೆ ನೆನಪಿಸತೊಡಗಿತು. ನಮ್ಮಲ್ಲಿ ಸಾಕಷ್ಟು ಊಟವಿತ್ತು. ಹೊಟ್ಟೆಯೊಳಗೆ ಧಗಧಗಿಸುತ್ತಿರುವ ಹಸಿವು. ಆದರೂ ತೆಪ್ಪಗೆ ಬಿದ್ದುಕೊಳ್ಳದೆ ಬೇರೆ ಮಾರ್ಗವೇ ಇರಲಿಲ್ಲ. ನಮ್ಮಿಂದ ಕುಡಿಯುವ ನೀರನ್ನು ಗಳಿಸಿಕೊಳ್ಳಲಾಗಲಿಲ್ಲ. ಅಸ್ಪೃಶ್ಯರಾದ ನಮಗೆ ನೀರು ಕೊಡುವವರೇ ಇಲ್ಲ. ಇದೇ ಯೋಚನೆ ಮನಸ್ಸಿನ ತುಂಬಾ ತುಂಬಿಕೊಂಡಿತ್ತು. ನಾನೇನೂ ಸುರಕ್ಷಿತ ಸ್ಥಳಕ್ಕೆ ಬಂದು ಮುಟ್ಟಿದ್ದೇವೆ ಎಂದು ಭಾವಿಸಿದ್ದೆ.

ಚಿತ್ರ : ಸೆಂಥಿಲ್ ಸೆಲ್ವನ್

ಆದರೆ ನಮ್ಮ ಅಣ್ಣನಿಗೆ ತನ್ನದೇ ಆದ ಅನುಮಾನಗಳಿದ್ದವು. ನಾವೆಲ್ಲರೂ ಒಟ್ಟಿಗೆ ನಿದ್ದೆ ಮಾಡುವುದು ಒಳಿತಲ್ಲವೆಂದು ಆತನು ನಮಗೆ ಎಚ್ಚರಿಸಿದನು. ನಾವು ಮೈಮರೆತು ಮಲಗಿರುವಾಗ ಏನೂ ಬೇಕಾದರೂ ಆಗಬಹುದು. ಆದಕಾರಣ, ಒಮ್ಮೆಗೆ ಇಬ್ಬರು ಮಾತ್ರ ಮಲಗಬೇಕು; ಉಳಿದಿಬ್ಬರು ಎಚ್ಚರವಾಗಿ ಕಾವಲು ಕಾಯಬೇಕು ಎಂದು ಸಲಹೆ ಕೊಟ್ಟನು. ಅದರಂತೆಯೇ ನಾವು ಬೆಟ್ಟದ ಬುಡದಲ್ಲಿ ಆ ರಾತ್ರಿಯನ್ನು ಕಳೆದೆವು. ಮುಂಜಾನೆ ಐದು ಗಂಟೆಗೆ, ನಮ್ಮ ಗಾಡಿಯವನು ಬಂದು ನಮ್ಮನ್ನು ಎಬ್ಬಿಸಿ, ಕೋರೆಗಾಂವ್‌ಗೆ ಹೊರಡೋಣ ಎಂದು ಹೇಳಿದನು. ನಾವು ಸಾರಾ ಸಗಟಾಗಿ ನಿರಾಕರಿಸಿದೆವು. ಎಂಟು ಗಂಟೆಯ ತನಕ ನಾವು ಆ ಜಾಗ ಬಿಟ್ಟು ಕದಲುವುದಿಲ್ಲ ಎಂದು ಹೇಳಿದೆವು. ಯಾವುದೇ ರೀತಿಯ ಅಪಾಯವನ್ನು ಎದುರುಹಾಕಿಕೊಳ್ಳುವುದು ನಮಗೆ ಬೇಕಿರಲಿಲ್ಲ. ಆತನು ಮರು ಮಾತಾಡದೆ ಹಿಂದುರುಗಿದನು. ನಾವು ಹೇಳಿದಂತೆಯೇ ಬೆಳಿಗ್ಗೆ ಎಂಟು ಗಂಟೆಗೆ ಅಲ್ಲಿಂದ ಹೊರಟೆವು. ಹನ್ನೊಂದು ಗಂಟೆಯ ವೇಳೆಗೆ ನಾವು ಕೋರೆಗಾಂವ್ ತಲುಪಿದೆವು.

ನಮ್ಮನ್ನು ನೋಡಿ ನಮ್ಮ ತಂದೆಯವರಿಗೆ ಆಶ್ಚರ್ಯವಾಯಿತು. ನಾವು ಕೋರೆಗಾಂವ್‌ಗೆ ಬರುವ ಸುದ್ದಿಯೇ ಅವರಿಗೆ ತಲುಪಿರಲಿಲ್ಲ ಎಂದು ಹೇಳಿದರು! ಅದು ಹೇಗೆ ಸಾಧ್ಯ? ನಾವು ಬರುವ ಸುದ್ದಿಯನ್ನು ಸಾಕಷ್ಟು ಮುಂಚಿತವಾಗಿಯೇ ಪತ್ರ ಬರೆದು ತಿಳಿಸಿದ್ದೆವು. ನಮ್ಮ ತಂದೆಯವರ ಮಾತನ್ನು ಒಪ್ಪದೆ ನಾವು ಗಲಾಟೆ ಮಾಡಿದೆವು. ನಾವು ಹೇಳಿದ್ದನ್ನು ನಮ್ಮ ತಂದೆಯವರೂ ಒಪ್ಪಲಿಲ್ಲ. ಸ್ವಲ್ಪ ಹೊತ್ತಿನ ನಂತರ ನಿಜ ಸಂಗತಿ ತಿಳಿಯಿತು. ನಾವು ಬರೆದ ಪತ್ರವು ನಮ್ಮ ತಂದೆಯ ಕೆಲಸಗಾರನ ಕೈಗೆ ತಲುಪಿತ್ತು. ಆತನು ಆ ಪತ್ರವನ್ನು ನಮ್ಮ ತಂದೆಯವರಿಗೆ ಮುಟ್ಟಿಸಿರಲಿಲ್ಲ. ಒಟ್ಟಾರೆ ತಪ್ಪು ಕೆಲಸದವನದಾಗಿತ್ತು. ನಮ್ಮ ತಂದೆಯವರದು ಯಾವ ತಪ್ಪೂ ಇರಲಿಲ್ಲ.

ಈ ಘಟನೆಯು ನನ್ನ ಜೀವನದಲ್ಲಿ ಬಲು ಮುಖ್ಯ ಸ್ಥಾನವನ್ನು ಪಡೆದಿದೆ. ಈ ಘಟನೆ ನಡೆದಾಗ ನಾನು ಒಂಬತ್ತು ವರುಷದ ಹುಡುಗನಾಗಿದ್ದೆ. ಆದರೆ, ಈ ಘಟನೆಯು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದುಬಿಟ್ಟಿದೆ. ಈ ಘಟನೆ ನಡೆಯುವುದಕ್ಕೆ ಮೊದಲು, ನಾನೊಬ್ಬ ಅಸ್ಪೃಶ್ಯನೆಂಬುದು ನನಗೆ ತಿಳಿದಿತ್ತು ಮತ್ತು ಅಸ್ಪೃಶ್ಯರು ಹಲವು ಬಗೆಯ ಅವಮಾನ ಮತ್ತು ತಾರತಮ್ಯಗಳಿಗೆ ಒಳಗಾಗಿದ್ದಾರೆಂಬುದೂ ನನಗೆ ತಿಳಿದಿತ್ತು. ಉದಾಹರಣೆಗೆ, ನಾನು ಶಾಲೆಯಲ್ಲಿ ಇತರ ವಿದ್ಯಾರ್ಥಿಗಳೊಂದಿಗೆ ನನ್ನ ಸ್ಥಾನಕ್ಕೆ ತಕ್ಕಂತೆ ಅವರ ನಡುವೆ ಕುಳಿತುಕೊಳ್ಳುವುದಕ್ಕಿಂತಲೇ ಒಂದು ಗೋಣಿ ಚೀಲವನ್ನು ಇರಿಸಲಾಗಿತ್ತು. ಶಾಲಾ ತರಗತಿಗಳನ್ನು ಗುಡಿಸುವ ಕೆಲಸಗಾರನು ಆ ಗೋಣಿ ಚೀಲವನ್ನು ಮುಟ್ಟುತ್ತಿರಲಿಲ್ಲ. ಪ್ರತಿದಿನ ಶಾಲೆ ಬಿಟ್ಟಾಗ, ನಾನು ಆ ಗೋಣಿಚೀಲವನ್ನು ಮನೆಗೊಯ್ಯಬೇಕಿತ್ತು ಮತ್ತು ಮರುದಿನ ಶಾಲೆಗೆ ಬರುವಾಗ ಅದನ್ನು ವಾಪಸ್ಸು ತರಬೇಕಿತ್ತು.

ಶಾಲೆಯ ಇತರ ವಿದ್ಯಾರ್ಥಿಗಳು, ತಮಗೆ ನೀರಡಿಕೆಯಾದಾಗ, ನೇರವಾಗಿ ನಲ್ಲಿಯ ಬಳಿ ಹೋಗಿ, ನಲ್ಲಿಯನ್ನು ತಿರುಗಿಸಿ ನೀರು ಕುಡಿಯುತ್ತಿದ್ದರು. ಇದಕ್ಕಾಗಿ ಅವರು ಮಾಡಬೇಕಾದುದ್ದೇನೆಂದರೆ, ಗುರುಗಳ ಅನುಮತಿ ಪಡೆಯಬೇಕಿತ್ತಷ್ಟೇ ಆದರೆ ನನ್ನ ವಿಚಾರ ಹಾಗಲ್ಲ. ನಾನು ನಲ್ಲಿಯನು ಮುಟ್ಟುವಂತೆಯೇ ಇರಲಿಲ್ಲ. ಯಾವನಾದರೂ ಹಿಂದೂ ವಿದ್ಯಾರ್ಥಿಯೊಬ್ಬನು ನನಗಾಗಿ ನಲ್ಲಿಯನ್ನು ತಿರುಗಿಸಿ ತೆರೆಯದ ಹೊರತು, ನಾನು ನೀರು ಕುಡಿಯುವಂತಿರಲಿಲ್ಲ. ನನ್ನ ದಾಹ ತೀರುವಂತಿರಲಿಲ್ಲ. ನನ್ನ ವಿಚಾರದಲ್ಲಿ ಕೇವಲ ಗುರುಗಳ ಅನುಮತಿ ಮಾತ್ರ ಸಾಕಾಗಿರಲಿಲ್ಲ. ಗುರುಗಳ ಅನುಮತಿಯೊಟ್ಟಿಗೆ, ಶಾಲಾ ಜವಾನನು ಅಲ್ಲಿರಬೇಕಿತ್ತು. ನಲ್ಲಿಯ ನೀರನ್ನು ತೆರೆಯಲು ಆ ಜವಾನನನ್ನು ಮಾತ್ರ ಗುರುಗಳು ಬಳಸಬಹುದಿತ್ತು. ಒಂದು ವೇಳೆ ಆ ಜವಾನನು ಇಲ್ಲದಿದ್ದಲ್ಲಿ, ನಾನು ಬಾಯನ್ನು ಒಣಗಿಸಿಕೊಂಡು ನೀರಿಲ್ಲದೆಯೇ ಹೋಗಬೇಕಿತ್ತು.

ಆ ಪರಿಸ್ಥಿತಿಯನ್ನು ಒಂದು ವಾಕ್ಯದಲ್ಲಿ ಹೇಳುವುದಾದರೆ, ಜವಾನನಿಲ್ಲದಿದ್ದಲ್ಲಿ, ನೀರೂ ಇಲ್ಲ. ಮನೆಯಲ್ಲಿ, ನನ್ನ ಬಟ್ಟೆಗಳನ್ನು ನನ್ನ ಅಕ್ಕಂದಿರು ಒಗೆಯುತ್ತಿದ್ದರು. ಅದರ ಅರ್ಥ, ಸತಾರದಲ್ಲಿ ಅಗಸರು ಇರಲಿಲ್ಲವೆಂಬುದಲ್ಲ. ಅಥವಾ ಅಗಸನಿಗೆ ಹಣ ಕೊಡಲು ನಮ್ಮಿಂದ ಆಗುತ್ತಿರಲಿಲ್ಲವೆಂಬುದಲ್ಲ. ನಾವು ಅಸ್ಪೃಶ್ಯರಾದ್ದರಿಂದ ಯಾವ ಅಗಸನೂ ನಮ್ಮ ಬಟ್ಟೆಗಳನ್ನು ಒಗೆಯುತ್ತಿರಲಿಲ್ಲ. ಆದ ಕಾರಣ ನಮ್ಮ ಬಟ್ಟೆಗಳನ್ನು ನಮ್ಮ ಅಕ್ಕಂದಿರೇ ಒಗೆಯಬೇಕಿತ್ತು ಹುಡುಗರ ತಲೆಗೂದಲು ತೆಗೆಯುವುದಾಗಲೀ ಅಥವಾ ಗಡ್ಡ ಬೋಳಿಸುವುದಾಗಲೀ ನಮ್ಮ ಅಕ್ಕಂದಿರೇ ಮಾಡುತ್ತಿದ್ದರು. ಅವರು ಅತಿ ನಿಪುಣರಾದ ಹಜಾಮರಾಗಿ ಬಿಟ್ಟಿದ್ದರು!

ಸತಾರದಲ್ಲಿ ಹಜಾಮರು ಇರಲಿಲ್ಲ ಎಂಬುದು ಇದರ ಅರ್ಥವಲ್ಲ. ಅಥವಾ ಅವರಿಗೆ ಕೊಡುವಷ್ಟು ಹಣ ನಮ್ಮಲ್ಲಿ ಇರಲಿಲ್ಲವೆಂಬುದಲ್ಲ. ನಾವು ಅಸ್ಪೃಶ್ಯರಾದ್ದರಿಂದ ಯಾವ ಹಜಾಮನೂ ನಮ್ಮ ತಲೆಮುಖಗಳನ್ನು ಮುಟ್ಟಿ ಕೂದಲು ಕತ್ತರಿಸುವುದೋ ಗಡ್ಡ ಬೋಳಿಸುವುದೋ ಮಾಡುತ್ತಿರಲಿಲ್ಲ. ಆದ ಕಾರಣ ನಮ್ಮ ಅಕ್ಕಂದಿರೇ ನಮ್ಮ ಹಜಾಮರಾಗಿದ್ದರು. ಅಸ್ಪೃಶ್ಯರ ವಿರುದ್ಧ ಇರುವಂತಹ ಸಹಜ ಸಾಮಾನ್ಯ ಸಾಮಾಜಿಕ ನಿಬಂಧನೆಗಳೆಂದು ತಿಳಿದು ನಿರ್ಲಿಪ್ತನಾಗಿದ್ದೆ. ಆದರೆ, ಆ ಎತ್ತಿನ ಗಾಡಿಯ ಘಟನೆಯು ನನಗೆ ಭಾರಿ ಆಘಾತವನ್ನುಂಟು ಮಾಡಿ ಎಚ್ಚರಿಸಿತು. ಎಂದೆಂದೂ ಆಗದಷ್ಟು ನೋವು ತಲ್ಲಣಗಳು ನನಗಾಯಿತು.

ಈ ಘಟನೆ ನಡೆದ ಮೇಲೆ, ನಾನು ಅಸ್ಪೃಶ್ಯತೆಯ ಬಗ್ಗೆ ಭಾರಿ ಗಂಭೀರವಾಗಿ ಆಲೋಚನೆ ಮಾಡತೊಡಗಿದೆ. ಈ ಘಟನೆ ನಡೆಯುವುದಕ್ಕೆ ಮೊದಲು, ಇತರ ಅಸ್ಪೃಶ್ಯರು ಮತ್ತು ಹಿಂದೂಗಳಂತೆ, ಅಸ್ಪೃಶ್ಯತೆಯೆಂಬುದು ಸಮಾಜದ ಸಹಜವಾದ ಒಂದು ಭಾಗವೆಂದು ತಿಳಿದು, ಅದರ ವಿರುದ್ಧ ಯಾವುದೇ ಬಗೆಯ ಕ್ರೋಧವಿಲ್ಲದಿದ್ದೆ. ಆದರೆ ಈ ಘಟನೆಯಿಂದಾಚೆಗೆ, ನನ್ನ ಆಲೋಚನೆಯಲ್ಲಿ ಭಾರಿ ಭಯಂಕರ ಬದಲಾವಣೆಗಳಾದವು. ●

ನಾವು ಅಸ್ಪೃಶ್ಯರಾದ್ದರಿಂದ ಯಾವ ಅಗಸನೂ ನಮ್ಮ ಬಟ್ಟೆಗಳನ್ನು ಒಗೆಯುತ್ತಿರಲಿಲ್ಲ. ಆದ ಕಾರಣ ನಮ್ಮ ಬಟ್ಟೆಗಳನ್ನು ನಮ್ಮ ಅಕ್ಕಂದಿರೇ ಒಗೆಯಬೇಕಿತ್ತು. ಹುಡುಗರ ತಲೆಗೂದಲು ತೆಗೆಯುವುದಾಗಲೀ ಅಥವಾ ಗಡ್ಡ ಬೋಳಿಸುವುದಾಗಲೀ ನಮ್ಮ ಅಕ್ಕಂದಿರೇ ಮಾಡುತ್ತಿದ್ದರು. ಅವರು ಅತಿ ನಿಪುಣರಾದ ಹಜಾಮರಾಗಿ ಬಿಟ್ಟಿದ್ದರು!
ಸತಾರದಲ್ಲಿ ಹಜಾಮರು ಇರಲಿಲ್ಲ ಎಂಬುದು ಇದರ ಅರ್ಥವಲ್ಲ. ಅಥವಾ ಅವರಿಗೆ ಕೊಡುವಷ್ಟು ಹಣ ನಮ್ಮಲ್ಲಿ ಇರಲಿಲ್ಲವೆಂಬುದಲ್ಲ. ನಾವು ಅಸ್ಪೃಶ್ಯರಾದ್ದರಿಂದ ಯಾವ ಹಜಾಮನೂ ನಮ್ಮ ತಲೆ ಮುಖಗಳನ್ನು ಮುಟ್ಟಿ ಕೂದಲು ಕತ್ತರಿಸುವುದೋ ಗಡ್ಡ ಬೋಳಿಸುವುದೋ ಮಾಡುತ್ತಿರಲಿಲ್ಲ. ಆದ ಕಾರಣ ನಮ್ಮ ಅಕ್ಕಂದಿರೇ ನಮ್ಮ ಹಜಾಮರಾಗಿದ್ದರು.

WTO, ಉನ್ನತ ಶಿಕ್ಷಣ ಮತ್ತು ಸಾಮ್ರಾಜ್ಯ ಶಾಹಿ

WTO ಪ್ರಣೀತ ಶಿಕ್ಷಣ ಪದ್ಧತಿಯಲ್ಲಿ ವಿದ್ಯೆ ಸಾಮಾಜಿಕ ಸಂಪತ್ತಲ್ಲ. ಭಾಷೆ, ಕೌಶಲ, ಜ್ಞಾನ, ಪರಿಣತಿ, ಸಂಶೋಧನಾ ಸಾಮರ್ಥ್ಯ, ಸಂಶೋಧಿತ ವಿಷಯಗಳು ಹೀಗೆ ಎಲ್ಲವೂ, ಶಿಕ್ಷಣವನ್ನು ನಿಯಂತ್ರಿಸುವ, ಬಲಿಷ್ಠ ಸಂಸ್ಥೆಗಳ ಸ್ವತ್ತಾಗುತ್ತವೆ. ಸಬಲರು ಮತ್ತು ದುರ್ಬಲರ ನಡುವಿನ ಕೊಡು-ಕೊಳ್ಳುವ ಯಾವುದೇ ಒಪ್ಪಂದದಲ್ಲಿ ಷರತ್ತುಗಳು ಎಷ್ಟೇ 'ಪ್ರಜಾತಾಂತ್ರಿಕ'ವಾಗಿ, 'ಮುಕ್ತ'ವಾಗಿ ಕಂಡರೂ, ಅವು ಸ್ಪಷ್ಟವಾಗಿ ಸಬಲರಿಗೆ ಲಾಭದಾಯಕವೂ, ದುರ್ಬಲರಿಗೆ ಘಾತಕವೂ ಆಗಿರುತ್ತವೆ.

○ ಪ್ರೊ|| ವಿ.ಎನ್. ಲಕ್ಷ್ಮೀನಾರಾಯಣ

WTO ಪ್ರಣೀತ ಉನ್ನತ ಶಿಕ್ಷಣ, ನವ ವಸಾಹತೀಕರಣದ ಪ್ರಯತ್ನಗಳ ನೇರ ಪರಿಣಾಮ. ಸಾಮ್ರಾಜ್ಯಶಾಹಿ ಶಕ್ತಿಗಳು ದೇಶೀಯ ವಿದ್ಯಾಭ್ಯಾಸ ಪದ್ಧತಿಗಳನ್ನು ನಿರ್ನಾಮಗೊಳಿಸಿ, ಪಶ್ಚಿಮದ ಶ್ರೀಮಂತ ರಾಷ್ಟ್ರಗಳ ಪರವಾದ ಬಂಡವಾಳ ಶಾಹೀ ತಾತ್ವಿಕದರ್ಶನ ಮತ್ತು ಮೌಲ್ಯ ಪದ್ಧತಿಗಳನ್ನು ಏಕರೂಪವಾಗಿ ಎಲ್ಲೆಡೆ ಹರಡಲು ಹಾಕಿಕೊಂಡಿರುವ ಸಾಮಾಜಿಕ-ಸಾಂಸ್ಕೃತಿಕ ಕಾರ್ಯಯೋಜನೆ. ಶಿಕ್ಷಣವನ್ನು ಅದರ ಸಾಮಾಜಿಕ-ಸಾಂಸ್ಕೃತಿಕ ಕಾಳಜಿಗಳಿಂದ ಬೇರ್ಪಡಿಸಿ ಸರಕೀಕರಣಗೊಳಿಸಿ, ಕೇಂದ್ರೀಕೃತ ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಅಂಗವನ್ನಾಗಿ ಮಾಡುವ ರಾಜಕೀಯ ಆಕ್ರಮಣ.

ಸುಂಕ ಮತ್ತು ವ್ಯಾಪಾರದ ಮೇಲಿನ ಒಪ್ಪಂದ (GATT)ದ ಉಗಮ 1947ರಲ್ಲೇ ಆಗಿದ್ದರೂ 1963ರಿಂದ ಈಚೆಗೆ, ಜಿನೆವಾ, ಟೋಕಿಯೋ ಮತ್ತು ಉರುಗ್ವೆ ಸುತ್ತಿನ ಮಾತುಕತೆ-ಒಪ್ಪಂದಗಳಲ್ಲಿ ಅದಕ್ಕೆ ನಿಜವಾದ ಅರ್ಥದಲ್ಲಿ ಜಾಗತೀಕರಣದ ಶಕ್ತಿ ಪ್ರಾಪ್ತವಾಯಿತು. ಪ್ರಪಂಚದ ವಿವಿಧ ದೇಶಗಳ ರಾಜಕೀಯ ಸಿದ್ಧಾಂತಗಳು ಏನೇ ಇದ್ದರೂ, ಆರ್ಥಿಕವಾಗಿ ಬಂಡವಾಳ ಶಾಹಿ ಪದ್ಧತಿಯನ್ನು ಮುನ್ನೊತ್ತುವ ಈ ಒಪ್ಪಂದಗಳ ಸಾಮಾನ್ಯ ಅಂಶಗಳೆಂದರೆ : ಸುಂಕಗಳ ಕಡಿತ, ದೇಶೀಯವಾದ ನಿರ್ಬಂಧಗಳ ನಿವಾರಣೆ, ಯೂರೋಪಿನ ದೇಶಗಳು ತೃತೀಯ ಜಗತ್ತಿನಲ್ಲಿ ಅನಿರ್ಬಂಧಿತ ವ್ಯಾಪಾರ ಮಾಡುವ ಮುಕ್ತ ಅವಕಾಶ, ಹಿಂದುಳಿದ ಮತ್ತು ಪ್ರಗತಿ ಶೀಲ ದೇಶಗಳಲ್ಲಿ ದೊರೆಯಬಹುದಾದ ಅಗ್ಗದ ಶ್ರಮ ಮೌಲ್ಯ ಮತ್ತು ಕಚ್ಚಾ ಸಾಮಗ್ರಿಗಳ ಮೇಲಿನ ನಿಯಂತ್ರಣ ಮತ್ತು ಬಳಕೆ. ಈ ಕ್ರಮಗಳು ಹೊರನೋಟಕ್ಕೆ ಪ್ರಜಾತಾಂತ್ರಿಕವೆಂಬಂತೆ ತೋರಿದರೂ ವಾಸ್ತವವಾಗಿ ಬಲಷ್ಠ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಮೇಲೆ, ಅಂತಾರಾಷ್ಟ್ರೀಯ ಕಾನೂನಿನ ಹೆಸರಿನಲ್ಲಿ ನಡೆಸುವ ದಬ್ಬಾಳಿಕೆಯೇ ಆಗಿದೆ. ಕೃಷಿ, ಹೈನು ಉತ್ಪನ್ನಗಳು, ಜವಳಿ ಉದ್ಯಮ, ಸೇವೆ, ಬೌದ್ಧಿಕ ಆಸ್ತಿ ಹಕ್ಕುಗಳು, ಬಂಡವಾಳ ಹೂಡಿಕೆ ಹೀಗೆ ಒಂದು ದೇಶದ ಆರ್ಥಿಕತೆಯ ಮೂಲ ಅಂಶಗಳನ್ನೇ, ಜನರ ಬದುಕಿನ ರೀತಿ-ನೀತಿಗಳನ್ನೇ ನೇರವಾಗಿ ಬಲಿಷ್ಠ ರಾಷ್ಟ್ರಗಳ ನಿಯಂತ್ರಣಕ್ಕೆ ಒಪ್ಪಿಸುವ ಕ್ರಮಗಳು ಈ ಎಲ್ಲಾ ಒಪ್ಪಂದಗಳು.

ಈ ಎಲ್ಲಾ ಒಪ್ಪಂದಗಳಿಗೆ ಅಂತಾರಾಷ್ಟ್ರೀಯ ಕಾನೂನಿನ ಮಾನ್ಯತೆಯನ್ನು ತಂದು ಕೊಡುವ ಸಂಸ್ಥೆ WTO. ಆದ್ದರಿಂದಲೇ WTO ಅನ್ನು 'ಒಪ್ಪಂದಗಳ ಒಪ್ಪಂದ' ಎಂದರು ಕರೆಯುತ್ತಾರೆ.

ಜಾಗತಿಕ ಅರ್ಥವ್ಯವಸ್ಥೆ ನಗ್ನವಾಗಿ ಬಂಡವಾಳಶಾಹಿ ವ್ಯವಸ್ಥೆಯಾ॰, ದೇಶ-ರಾಷ್ಟ್ರಗಳ ಬೇಧವಿಲ್ಲದೆ, ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳಲು ಅನುವಾಗುವಂತೆ, ಸಾಮ್ರಾಜ್ಯಶಾಹಿ ಶಕ್ತಿಗಳು ಮಾಡಿಕೊಂಡಿರುವ 'ಶಾಶ್ವತ' ಸಂಸ್ಥೆ ಇದು.

ಶಿಕ್ಷಣಕ್ಕೆ ಸಂಬಂಧಿಸಿದಂತೆ WTO ಷರತ್ತುಗಳಲ್ಲಿನ ಬಹುಮುಖ್ಯವಾದ ಅಂಶವೆಂದರೆ ಶಿಕ್ಷಣದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳನ್ನು ಮೂಲೆಗೊತ್ತಿ ಅದನ್ನು ಲಾಭದಾಯಕ ಉದ್ಯಮದ ಸರಕೆಂದು ಪರಿಗಣಿಸುವುದು, ಮತ್ತು ದೇಶೀಯ ಸರ್ಕಾರಗಳ ಹಿಡಿತದಿಂದ ಬಿಡುಗಡೆಗೊಳಿಸಿ ದೇಶ ದೇಶಗಳ ನಡುವಿನ ಗಡಿಗಳ ನಿರ್ಬಂಧವಿಲ್ಲದೆ, ಬಂಡವಾಳ ಶಾಹಿಗಳ ನೇರ ಹಿಡಿತಕ್ಕೆ ಒಳಪಡಿಸುವುದು. ಅನಿರ್ಬಂಧಿತ ಸ್ಪರ್ಧೆಯನ್ನು ಉತ್ತೇಜಿಸಿ ಬಲಿಷ್ಠರು ಮಾತ್ರ ಬದುಕುಳಿಯುವಂಥ, ದುರ್ಬಲರನ್ನು ಪ್ರಜಾತಾಂತ್ರಿಕವಾಗಿ ಚುನಾಯಿತಗೊಂಡ ಆಯಾ ಸರ್ಕಾರಗಳೇ ರಕ್ಷಿಸಲಾಗದಂಥ ವ್ಯವಸ್ಥೆಯನ್ನು ಜಾರಿಗೆ ತರುವುದು. ಬಂಡವಾಳಶಾಹಿ ಪ್ರಜಾತಂತ್ರದಲ್ಲಿ ಬಲಿಷ್ಠರಿಗೆ ದುರ್ಬಲವನ್ನು ತುಳಿಯುವ ಹಕ್ಕು 'ಸಂವಿಧಾನ ಬದ್ಧ'ವಾಗೇ ಇರುವುದು ಎಲ್ಲರಿಗೂ ತಿಳಿದ ವಿಷಯ.

WTO ಪ್ರಣೀತ ಶಿಕ್ಷಣ ಪದ್ಧತಿಯಲ್ಲಿ ವಿದ್ಯೆ ಸಾಮಾಜಿಕ ಸಂಪತ್ತಲ್ಲ. ಭಾಷೆ, ಕೌಶಲ, ಜ್ಞಾನ, ಪರಿಣತಿ, ಸಂಶೋಧನಾ ಸಾಮರ್ಥ್ಯ, ಸಂಶೋಧಿತ ವಿಷಯಗಳು ಹೀಗೆ ಎಲ್ಲವೂ, ಶಿಕ್ಷಣವನ್ನು ನಿಯಂತ್ರಿಸುವ, ಬಲಿಷ್ಠ ಸಂಸ್ಥೆಗಳ ಸ್ವತ್ತಾಗುತ್ತವೆ. ಸಬಲರು ಮತ್ತು ದುರ್ಬಲರ ನಡುವಿನ ಕೊಡು-ಕೊಳ್ಳುವ ಯಾವುದೇ ಒಪ್ಪಂದದಲ್ಲಿ ಷರತ್ತುಗಳು ಎಷ್ಟೇ 'ಪ್ರಜಾತಾಂತ್ರಿಕ'ವಾಗಿ, 'ಮುಕ್ತ'ವಾಗಿ ಕಂಡರೂ, ಅವು ಸ್ಪಷ್ಟವಾಗಿ ಸಬಲರಿಗೆ ಲಾಭದಾಯಕವೂ, ದುರ್ಬಲರಿಗೆ ಘಾತಕವೂ ಆಗಿರುತ್ತವೆ. 3000 ಕೋಟಿ ಡಾಲರುಗಳ ಮೌಲ್ಯದ ಶೈಕ್ಷಣದ ಚಟುವಟಿಕೆಗಳನ್ನು WTO ಶಿಕ್ಷಣದ ವಹಿವಾಟೆಂದು ಪರಿಗಣಿಸುತ್ತದೆ. ಈ ವಹಿವಾಟಿನಲ್ಲಿ 'ಜ್ಞಾನೋದಯ' (Knowledge Industry) ಎನಿಸಿಕೊಳ್ಳುತ್ತದೆ. ಶಿಕ್ಷಕರು 'ಜ್ಞಾನಕಾರ್ಮಿಕರು' (Knowledge workers) ಎನಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳು, ಶಿಕ್ಷಣ ಪಡೆಯುವಾಗ 'ಗಿರಾಕಿ'ಗಳೆಂದೂ, ಪಡೆದು ಕೆಲಸ ಹುಡುಕುವಾಗ 'ಉದ್ಯೋಗೋದ್ಯಮ' (Job industry), ಅಥವಾ ಉದ್ಯೋಗ ಮಾರುಕಟ್ಟೆ (Job Market)ಯಲ್ಲಿ ಬಿಕರಿಗೊಳ್ಳಬೇಕಾದ ಸರಕುಗಳಾಗುತ್ತಾರೆ. ಯಾರು ಕಡಿಮೆ ಬೆಲೆಗೆ ಸಿಗುವ ಉತ್ತಮ ಸರಕುಗಳೊ ಅವರಿಗೆ ಮಾರುಕಟ್ಟೆಯಲ್ಲಿ 'ಉತ್ತಮ ಭವಿಷ್ಯವಿದೆ'. ಉತ್ತಮ ವಿದ್ಯಾರ್ಥಿಗಳಾಗುವುದೆದಂರೆ, 'ಉತ್ತಮ' ಸರಕುಗಳಾಗುವುದು. ಈ ಉತ್ತಮ ಸರಕುಗಳ್ನು ಉತ್ಪಾದಿಸಲು ಉತ್ತಮ ಯಂತ್ರ (ಶಿಕ್ಷಕರು) ಉತ್ತಮ ಕೌಶಲಗಳ ಅಭಿವೃದ್ಧಿ (Skill development) ಮತ್ತು ಒಟ್ಟು ಗುಣಮಟ್ಟದ ನಿರ್ವಹಣೆ (Total Quality Management) ಅಗತ್ಯವಾಗುತ್ತದೆ.

ಇವನ್ನು ಆಗುಮಾಡಲೆಂದೇ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರ ಮತ್ತು ಮಾನವಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಗಳ ನೇರ ಉಸ್ತುವಾರಿಕೆಯಲ್ಲಿ, TQM ಕಾರ್ಯಾಗಾರಗಳು,

ಪಠ್ಯಕ್ರಮಗಳ ನವೀಕರಣ, ಉನ್ನತ ಶಿಕ್ಷಣ ಪಠ್ಯಗಳ ಮರು ವರ್ಗೀಕರಣ ಮತ್ತು ಸಂಬಂಧಿತ ತಾತ್ವಿಕ ನಿರೂಪಣೆ ಚರ್ಚೆಗಳು, ಸಂಕಿರಣ ಸಮಾವೇಶಗಳು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿವೆ. ಆದರೆ ಶಿಕ್ಷಣದ ಜಾಗತಿಕ ವ್ಯಾಪಾರೀಕರಣದ ಕಸರತ್ತುಗಳಲ್ಲಿ WTOದ ಪಾತ್ರ ಮತ್ತು ಬಂಡವಾಳ ಶಾಹಿಯ, ನವವಸಾಹತೀಕರಣದ ಘಾತಕ ಅಂಶಗಳನ್ನು ಮರೆಮಾಚಿ 'ಜಾಗತೀಕರಣದ ಈ ದಿಗನಲ್ಲಿ ಶಿಕ್ಷಣ ಶಿಕ್ಷಕ ಶಿಕ್ಷಿತರರುಗಳ ಗುಣಮಟ್ಟವನ್ನು ಕಾಯ್ದುಕೊಳ್ಳದೇ ಹೋದರೆ ನಾಶವಾಗಬೇಕಾದಿತೆಂದು' ಎಚ್ಚರಿಸಿ TQMನ ಮಹತ್ವವನ್ನು ಮನಗಾಣಿಸಲಾಗುತ್ತಿದೆ. ಶಿಕ್ಷಣದ ವ್ಯಾಪಾರೀಕರಣವೇ, ಮರುವಸಾಹತೀಕರಣವೇ, WTOದ ಷರತ್ತುಗಳೇ ಸ್ವತಃ ವಿನಾಶಕಾರೀ ಎಂಬುದನ್ನು ಬಹುತೇಕವಾಗಿ 'ರಾಜಕೀಯ ನಿರಕ್ಷರಿ' (Political Illiterates)ಗಳಾಗಿರುವ ಶಿಕ್ಷಕರು ಅರಿಯಲಾರದೆ, 'ಶಿಕ್ಷಣದಲ್ಲಿ' ಗುಣಮಟ್ಟದ ಸುಧಾರಣೆ ಅತ್ಯಗತ್ಯವೆಂದು ನಂಬುವ ವಿಪರ್ಯಾಸ ಒದಗಿದೆ. ಯಾವುದೇ ಕ್ಷೇತ್ರದಲ್ಲಿ ಗುಣಮಟ್ಟದ ಸುಧಾರಣೆ, ಬದಲಾವಣೆ ಅಪೇಕ್ಷಣೀಯವೇ. ಅದನ್ನು ಯಾರೂ ವಿರೋಧಿಸಲಾರರು. ಆದರೆ ಜಾಗತಿಕ ವ್ಯಾಪಾರಿಗಳ ಹಿತಾಸಕ್ತಿಗಳನ್ನು ಮುನ್ನೊತ್ತಿ, ಕಾಪಾಡಿಕೊಳ್ಳಲು ಜನ ಸಮುದಾಯದ ಜೀವನದ ಗುಣಮಟ್ಟವನ್ನೇ ಆಮೂಲಾಗ್ರವಾಗಿ ಹಾಳುಮಾಡುವ ಬದಲಾವಣೆಗಳನ್ನು, ಮುಗ್ಧವಾಗಿ ಸ್ವಾಗತಿಸುವ ಶಿಕ್ಷಕರು ಕಟುಕನ ಕತ್ತಿಯಲಗನ್ನು ನೆಕ್ಕುವ ಮೇಕೆಗಳನ್ನದೆ ವಿಧಿಯಿಲ್ಲ.

WTO ಪ್ರಣೀತ ಶಿಕ್ಷಣ ಪದ್ಧತಿಯ ಮತ್ತೊಂದು ಮುಖ್ಯ ಅಂಶ ಸ್ವಾಯತ್ತತೆ (Autonomy). ಶಿಕ್ಷಣವನ್ನು ಸರ್ಕಾರದ ಹಿಡಿತದಿಂದ ತಪ್ಪಿಸಿ ಜಾಗತಿಕ ವ್ಯಾಪಾರಿಗಳ ಕೈಗೆ ಕೊಡುವ ಕ್ರಮ ಇದು. TWO ಷರತ್ತುಗಳಲ್ಲಿನ ಕಣ್ಣೊರೆಸುವ ಅಂಶವೆಂದರೆ, ದೇಶೀಯ ಸರ್ಕಾರಗಳು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ತಮಗಿಷ್ಟ ಬಂದ ರೀತಿಯಲ್ಲಿ ನಿಯಂತ್ರಿಸಿಕೊಳ್ಳಬಹುದು. ಅವನ್ನು WTO ಷರತ್ತುಗಳ ಪರಿಧಿಯೊಳಕ್ಕೆ ತರಬೇಕಾಗಿಲ್ಲ, ಎಂಬುದು. ಆದರೆ ಸಹಾಯಧನಗಳನ್ನು ರದ್ದು ಪಡಿಸುವುದು, ವಿದೇಶೀ, ಅಂತಾರ್ದೇಶೀ ಮತ್ತು ದೇಶಾಂತರೀ ಸಂಸ್ಥೆಗಳಿಗೆ ಮುಕ್ತದ್ವಾರವನ್ನು ತೆರೆಯುವುದು, ದೇಶೀಯ ನೆಲದಲ್ಲಿ ಕಾರ್ಯ ನಿರ್ವಹಿಸುವ ವಿದೇಶೀ ಸಂಸ್ಥೆಗಳಿಗೆ, ದೇಶೀಯ ಸಂಸ್ಥೆಗಳಿಗೆ ಕೊಡುವ ಮಾನ್ಯತೆಯನ್ನೇ ಕೊಡ ಬೇಕೆನ್ನುವುದು, WTO ಷರತ್ತುಗಳಲ್ಲಿ ಬಹುಮುಖ್ಯವಾದವುಗಳು. ಒಂದು ಕಡೆ ವಿನಾಯಿತಿ ತೋರಿಸಿದಂತೆ ಮಾಡಿ, ಮತ್ತೊಂದೆಡೆ ಅತ್ಯಂತ ಘಾತಕವಾದ ಸ್ಪರ್ಧೆಯಲ್ಲಿ ಭಾಗವಹಿಸಲಾಗದಿರದಂತೆ ನಿರ್ಬಂಧಿಸುವುದು ಜಾಗತಿಕ ಬಂಡವಾಳ ಶಾಹಿಯ ಹುಟ್ಟುಗುಣ. ಶಿಕ್ಷಣ ಮತ್ತು ಸೇವಾ ವ್ಯಾಪಾರದ ಕ್ಷೇತ್ರಗಳಲ್ಲಿ ಪಶ್ಚಿಮದ ಬಲಿಷ್ಠ ರಾಷ್ಟ್ರಗಳಿಗಿರುವ ಅನುಕೂಲ ಅಗಾಧವಾದದ್ದು. ಇವುಗಳೊಂದಿಗೆ ಸ್ಪರ್ಧಿಸಲಾಗದ ದೇಶೀಯ ವಿದ್ಯಾ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ದೇಶಾಂತರೀ ಸಂಸ್ಥೆಗಳ ಹೊಟ್ಟೆ ಸೇರಿ ತಾವೂ ಅವೇ ಆಗಿದ್ದೇವೆ ಎಂಬ ಭ್ರಮೆಗೆ ತುತ್ತಾಗುವ ದಿನಗಳು ದೂರವಿಲ್ಲ.

ವಸಾಹತೀಕರಣದ ಪ್ರಭಾವದಲ್ಲಿ ನಮ್ಮ ಯುವಕರು, ಪ್ರತಿಭಾವಂತರು, ವಿದೇಶಗಳಲ್ಲಿ ವ್ಯಾಸಂಗ ಮಾಡುವ, ವಿದೇಶಿ ಪದವಿಗಳನ್ನು ಪಡೆಯುವ ಕನಸು ಕಾಣುವುದು ಸರ್ವೇಸಾಮಾನ್ಯವಾಗಿತ್ತು. WTOದ ನವ ವಸಾಹತೀಕರಣದಲ್ಲಿ ಯಾವುದೇ ವಿದೇಶಿ ಪದವಿಯನ್ನು ಮನೆಯ ಬಾಗಿಲಲ್ಲೇ ಪಡೆಯಬಹುದು. ಜಾಗತೀಕರಣದಲ್ಲಿ ಅಡಕವಾಗಿರುವ ವ್ಯಾಪಾರೀಕರಣ, ಅನಿರ್ಬಂಧಿತ ಸ್ಪರ್ಧೆ ಮತ್ತು ಗಿರಾಕಿಯನ್ನರ ಮನೆ ಬಾಗಿಲಿಗೇ ಬರುವ ವಾಣಿಜ್ಯ ತುರ್ತುಗಳು, ಶಿಕ್ಷಣದ ವಿಷಯದಲ್ಲೂ ವ್ಯಾಪಕವಾಗಿ ಬಳಕೆಯಾಗುತ್ತಿವೆ. ದೇಶೀಯ ಮತ್ತು ಸಾಂಪ್ರದಾಯಿಕ ಕ್ರಮಗಳಿಗೆ ಬದಲಾಗಿ 'ಗಡಿಯಾಚೆಗಿನ ಶಿಕ್ಷಣ' (Cross border education) WTOದಿಂದಾಗಿ ಸಾಧ್ಯವಾಗಿದೆ. ಇದರಲ್ಲಿ ವಿದೇಶೀ ವಿಶ್ವವಿದ್ಯಾನಿಲಯ ದೂರ ಶಿಕ್ಷಣದ ಮೂಲಕ, ದೇಶೀಯ 'ಜ್ಞಾನ ಗಿರಾಕಿ'ಗಳನ್ನು (Knowledge customers) ಆಕರ್ಷಿಸಿ ಪಡೆಯುವುದು; ದೇಶೀಯ ವಿಶ್ವವಿದ್ಯಾನಿಲಯಗಳ ಸಹಯೋಗದಲ್ಲಿ ವಿದೇಶೀ ಜ್ಞಾನ ಕಾರ್ಮಿಕರನ್ನು ಕಳಿಸಿ ಗಿರಾಕಿಗಳನ್ನು ತಲುಪುವುದು; ಮತ್ತು ವಿದೇಶೀ ವಿಶ್ವವಿದ್ಯಾನಿಲಯಗಳ ಕ್ಯಾಂಪಸ್‌ಗಳನ್ನು ದೇಶೀಯ ನೆಲದಲ್ಲಿ ಪ್ರಾರಂಭಿಸುವುದು. ಹೀಗೆ ಮೂರು ರೀತಿಯಲ್ಲಿ 'ಜ್ಞಾನ ಬಿಕರಿ'ಯನ್ನು ಯಾವುದೇ ದೇಶ ಮತ್ತಾವುದೇ ದೇಶದಲ್ಲಿಬೇಕಾದರೂ, ಯಾರು ಎಷ್ಟೇ ವಿರೋಧಿಸಿದರೂ, ಅಲ್ಲಿನ ಸರ್ಕಾರಗಳನ್ನು ಚುನಾಯಿಸುವ ಜನರಿಗೆ ಒಪ್ಪಿತವಾಗಿರಲಿ ಬಿಡಲಿ, ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ನಡೆಸಲು WTO ಷರತ್ತುಗಳು ದಾರಿ ಮಾಡಿಕೊಟ್ಟಿವೆ. ಇವುಗಳ ಪಠ್ಯಕ್ರಮ, ಶೈಕ್ಷಣಿಕ ಧ್ಯೇಯ-ಧೋರಣೆಗಳನ್ನು, ಚುನಾಯಿತ ಸರ್ಕಾರಗಳ ಸಮ್ಮತಿಯ ಹಂಗಿಲ್ಲದೆ, ವಿರೋಧದ ಸಂಕೋಚವಿಲ್ಲದೆ, ಸ್ಥಳೀಯ ಸಾಂಸ್ಕೃತಿಕ-ಮೌಲ್ಯ ಪದ್ಧತಿಗಳಿಗೆ ಪ್ರತಿಕೂಲವಾಗಿದ್ದರೂ ಸಹ, ಈ ಶೈಕ್ಷಣಿಕ ಸಂಸ್ಥೆಗಳು WTO ನ್ಯಾಯದಡಿಯಲ್ಲಿ ರೂಪಿಸಿಕೊಳ್ಳಬಹುದು. ಇವು ರೂಪಿಸುವ ಮೌಲ್ಯ ಪದ್ಧತಿ. ಜೀವನದರ್ಶನ ಮತ್ತು ರಾಜಕೀಯ ಧೋರಣೆಗಳು ಸಾಮ್ರಾಜ್ಯಶಾಹೀ ಪದ್ಧತಿಗೆ ಸಹಾಯಕವೂ ಪೂರಕವೂ ಆಗಿರುತ್ತವೆಂದು ಯಾರು ಬೇಕಾದರೂ ಊಹಿಸಬಹುದು. ಇಂಥ ಶಿಕ್ಷಣ, ಅಸಮಾನತೆ, ಸ್ಪರ್ಧೆ ಅಮಾನವೀಯತೆ ಮುಂತಾದ ಬಂಡವಾಳ ಶಾಹೀ ಮೌಲ್ಯಗಳನ್ನು, ಅವೇ ಮನುಷ್ಯನ ನಿಜವಾದ ಗುಣಗಳೆಂಬಂತೆ ಯುವಕರ ಮನಸ್ಸಿನಾಳಕ್ಕೆ ಇಳಿಸುತ್ತವೆ. ಈ ಮೂಲಕ ಸಾಮಾಜಿಕ-ಸಾಂಸ್ಕೃತಿಕ ನಿಯಂತ್ರಣವೂ, ಈಗಾಗಲೇ ಟಿವಿ ಮತ್ತು ಸಿನಿಮಾಗಳ ಮೂಲಕ ಆಗುತ್ತಿರುವಂತೆ ಸಾಧ್ಯವಾಗುತ್ತದೆ. ದೇಶ ದೇಶಗಳ ಅನನ್ಯತೆ, ವಿಶಿಷ್ಟತೆಗಳು ಕರಗಿ, ಏಕಶಿಲಾ ಸಂಸ್ಕೃತಿ, ಬಂಡವಾಳ ಶಾಹಿ ಸಾಮಾಜಿಕತೆ ಮತ್ತು ರಾಜಕೀಯತೆಗಳು ಸ್ಥಾಪಿತಗೊಳ್ಳುತ್ತವೆ.

ಎಲ್ಲಾ ಕ್ಷೇತ್ರಗಳಲ್ಲಿಯೂ ಈಗ ಹಾಸು ಹೊಕ್ಕಾಗಿರುವ 'ಪ್ರಾಯೋಜನೆಯ ಪರಿಕಲ್ಪನೆ ಶಿಕ್ಷಣ ಕ್ಷೇತ್ರಕ್ಕೂ ಕಾಲಿಡುತ್ತಿದೆ. ವಿದ್ಯಾ ಸಂಸ್ಥೆಗಳ ಪ್ರಯೋಜನೆ ಈಗಾಗಲೇ ಹಳ್ಳಿಗಳಿಗೂ ಕಾಲಿಟ್ಟಿದೆ. ಕೋರ್ಸ್‌ಗಳ ಪ್ರಾಯೋಜನೆ, ವಿದ್ಯಾರ್ಥಿವೇತನಗಳ ಪ್ರಾಯೋಜನೆ, ಕೊನೆಗೆ ಪಠ್ಯ ಪುಸ್ತಕಗಳ, ಪ್ರಶ್ನೆಪತ್ರಿಕೆಗಳ ಪ್ರಾಯೋಜನ ಶುರುವಾಗಿ, ಪುಸ್ತಕಗಳ ಅಂಚಿನಲ್ಲಿ ಪೆಪ್ಸಿ-ಕೋಕಕೋಲಗಳ ಜಾಹೀರಾತುಗಳು ರಾರಾಜಿಸುವ ದಿನಗಳು ದೂರವಿಲ್ಲ.

ಯಾವುದೇ ಸರಕಿನ ಬಳಕೆ ಹೆಚ್ಚಾಗಬೇಕಾದರೆ, ಅದರ ಅಗತ್ಯತೆಯನ್ನು ಸೃಷ್ಟಿಸಬೇಕು ಮತ್ತು ಅದನ್ನು ಆರಾಧಿಸಲು ಬೇಕಾದ ಮನಸ್ಥಿತಿಯನ್ನು ರೂಪಿಸಬೇಕು. ಈ ಕೆಲಸವನ್ನು ಜಾಹೀರಾತುಗಳು ಮಾಡುತ್ತವೆ. ಆಧುನಿಕ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ನವವಸಾಹತೀಕರಣದ ಶಕ್ತಿಗಳಿಗೆ ಸಮೂಹ ಮಾಧ್ಯಮಗಳು ಯುದ್ಧ, ಮತ್ತು ಕಚ್ಚಾ ಸಾಮಗ್ರಿಗಳ ಮೇಲಿನ ನಿಯಂತ್ರಣ ಅತ್ಯಗತ್ಯ.

ಜಾಹೀರಾತುಗಳ, ಸಂಪರ್ಕಸಾಧನಗಳ ಬಲದೊಂದಿಗೆ ಕಲೆ, ಸಾಹಿತ್ಯ, ಸಂಗೀತ ಮತ್ತು ಭಾಷೆಗಳ ಒರಟು ಬಳಕೆಯಲ್ಲಿ ಸರಕು ಪ್ರೀತಿಯನ್ನು ಹುಟ್ಟಿಸುತ್ತವೆ. ಯುದ್ಧವನ್ನು ವೈಭವೀಕರಿಸುತ್ತವೆ. ಕಚ್ಚಾ ಸಾಮಗ್ರಿಗಳ ಒಡೆತನ-ನಿಯಂತ್ರಣವನ್ನು, ಸ್ವಾತಂತ್ರ್ಯ, ಪ್ರಜಾತಂತ್ರ, ಮಾನವ ಹಕ್ಕುಗಳು ಮುಂತಾದ ಮೌಲ್ಯಗಳ ಅಪ ಬಳಕೆಯ ಮೂಲಕ ಪ್ರತಿಪಾದಿಸುತ್ತವೆ.

ಎಲ್ಲಾ ಕ್ಷೇತ್ರಗಳಲ್ಲಿಯೂ ಈಗ ಹಾಸು ಹೊಕ್ಕಾಗಿರುವ 'ಪ್ರಾಯೋಜನೆಯ ಪರಿಕಲ್ಪನೆ ಶಿಕ್ಷಣ ಕ್ಷೇತ್ರಕ್ಕೂ ಕಾಲಿಡುತ್ತಿದೆ. ವಿದ್ಯಾ ಸಂಸ್ಥೆಗಳ ಪ್ರಯೋಜನೆ ಈಗಾಗಲೇ ಹಳ್ಳಿಗಳಿಗೂ ಕಾಲಿಟ್ಟಿದೆ. ಕೋರ್ಸ್‌ಗಳ ಪ್ರಾಯೋಜನೆ, ವಿದ್ಯಾರ್ಥಿವೇತನಗಳ ಪ್ರಾಯೋಜನೆ, ಕೊನೆಗೆ ಪಠ್ಯ ಪುಸ್ತಕಗಳ, ಪ್ರಶ್ನೆಪತ್ರಿಕೆಗಳ ಪ್ರಾಯೋಜನ ಶುರುವಾಗಿ, ಪುಸ್ತಕಗಳ ಅಂಚಿನಲ್ಲಿ ಪೆಪ್ಸಿ-ಕೋಕಕೋಲಗಳ ಜಾಹೀರಾತುಗಳು ರಾರಾಜಿಸುವ ದಿನಗಳು ದೂರವಿಲ್ಲ. ಅಂಗಿ ಬನಿಯನ್‌ಗಳ ಮೇಲೆ ವಿದೇಶೀ ಬಾವುಟಗಳು ವಾಲ್‌ಡಿಸ್ನಿ ಚಿತ್ರಗಳು ಮತ್ತು ದೇಶ ವಿದೇಶಗಳ ಸಾಂಸ್ಕೃತಿಕ ಲಾಂಛನಗಳು ಈಗಾಗಲೇ ರೂಢಿಯಾಗಿರುವುದರಿಂದ ಪಠ್ಯ ಪುಸ್ತಕ-ಪ್ರಶ್ನೆಪತ್ರಿಕೆಗಳ ಮೇಲಿನ ಜಾಹೀರಾತುಗಳು ವಿಶೇಷವೆನಿಸದೇ ಹೋಗಬಹುದು. ಜಾಹೀರಾತು ಕಂಪೆನಿಗಳಿಗೆ ತಮ್ಮನ್ನು ಮಾರಿಕೊಂಡಿರುವ ಸಿನಿಮಾ ಮತ್ತು ಕ್ರೀಡಾತಾರೆಗಳು ಈಗಾಗಲೇ ಜಾಗತೀಕ ವ್ಯಾಪಾರಿಗಳ ಕೆಲಸವನ್ನು ಹಗುರ ಮಾಡಿದ್ದಾರೆ. ಪಠ್ಯ ಪುಸ್ತಕಗಳ ಮುಖ ಚೆಲೆಗಳು ಪ್ರಾಯೋಜನೆ, ಜಾಹೀರಾತುಗಳಿಂದ 'ಆಕರ್ಷಕ'ವಾಗುವುದಾದರೆ, ಯಾರು ತಾನೇ ಬೇಡವೆನ್ನುತ್ತಾರೆ?

ಶಿಕ್ಷಣದ ಸರಕೀಕರಣದಲ್ಲಿ ಒಂದು ಸಣ್ಣ ತೊಡಕಿದೆ. ಅದೇನೆಂದರೆ ಯಾವುದೇ ವಸ್ತುವನ್ನು ಸರಕೆಂದು

ಪರಿಗಣಿಸಬೇಕಾದರೆ ಅದಕ್ಕೊಂದು ನಿರ್ದಿಷ್ಟ ಆಕಾರ ತೂಕ ಮತ್ತು ಗುಣಗಳಿರಬೇಕು. ಆಗ ಮಾತ್ರ ಅದಕ್ಕೆ ಬೆಲೆ ಕಟ್ಟಿ ಸರಕನ್ನಾಗಿ ಮಾರಬಹುದು, ಕೊಳ್ಳಬಹುದು. ಶಿಕ್ಷಣ ಅಮೂರ್ತ. ಅದನ್ನು ಒಂದು ನಿರ್ದಿಷ್ಟ ಸಂಸ್ಥೆಯ ವಿದ್ಯಾರ್ಥಿ ಸಮೂಹದ ಒಟ್ಟು ವೆಚ್ಚದ ಗ್ರಹಿಕೆಯನ್ನಾಗಿ ಲೆಕ್ಕ ಹಾಕಬಹುದು. ಆದರೆ ಒಬ್ಬ ವಿದ್ಯಾರ್ಥಿಗೆ (ಗಿರಾಕಿಗೆ) ಕೊಡುವ ಶಿಕ್ಷಣದ ಬೆಲೆಯನ್ನು ನಿಗದಿ ಮಾಡುವುದು ಹೇಗೆ? ಸರ್ವಶಕ್ತವಾದ WTO ಷರತ್ತುಗಳಲ್ಲಿ, ಇದಕ್ಕೂ ಪರಿಹಾರವಿದೆ. WTO ಶಿಕ್ಷಣವನ್ನು ಸೇವೆಯೆಂದು ಪರಿಗಣಿಸುತ್ತದೆ. ಯಾವುದೇ ಸೇವೆಯನ್ನು ವ್ಯಾಪಾರಿಗಳಿಗೆ ಗುತ್ತಿಗೆ ಕೊಡಬಹುದು. ಶೌಚಾಲಯ, ಕ್ಯಾಂಟೀನ್, ಹಾಸ್ಟೆಲ್ ಹೀಗೆ. ಗುತ್ತಗೆ ಕೊಡುವ ಯಾವ ಸೇವೆಗಾದರೂ ಬೆಲೆ ಕಟ್ಟಬಹುದು. ಬೆಲೆ ಕಟ್ಟಬಹುದಾದ ಯಾವುದನ್ನು ಬೇಕಾದರೂ ಸರಕೆಂದು ಪರಿಗಣಿಸಿ WTO ಷರತ್ತುಗಳ ವ್ಯಾಪ್ತಿಗೆ ತರಬಹುದು. ಇದೇ ಕ್ರಮದಲ್ಲಿ ಸ್ಕೂಲು ಕಾಲೇಜುಗಳನ್ನು ವ್ಯಾಪಾರಿಗಳಿಗೆ ಗುತ್ತಿಗೆ ಕೊಡಬಹುದು. ಆಗ ಶಿಕ್ಷಣದ ಶುಲ್ಕ, ಪಠ್ಯಕ್ರಮಗಳನ್ನು ಸಹ ವ್ಯಾಪಾರಿಗಳೇ ನಿರ್ಧರಿಸಬಹುದು. ಶುಲ್ಕ ದುಬಾರಿಯೆನಿಸಿದರೆ ವ್ಯಾಪಾರೀತಂತ್ರಗಳು ಇದ್ದೇ ಇವೆ. ಎರಡು ಸ್ಕೂಲ ವ್ಯತ್ಯಾಸಗಳುಳ್ಳ ಸರಕುಗಳನ್ನು ಅಕ್ಕಪಕ್ಕದಲ್ಲಿಟ್ಟು ಒಂದರ ಬೆಲೆಯನ್ನು ಮತ್ತೊಂದರ ಬೆಲೆಗಿಂತ ಹೆಚ್ಚೆಂದು ತೋರಿಸಿದರೆ ಸ್ವಾಭಾವಿಕವಾಗಿಯೇ ಬೆಲೆಕಡಿಮೆಯೆಂದು ತೋರುವ ಸರಕಿಗೆ ಜನ ಮುಗಿಬೀಳುತ್ತಾರೆ. ಅಥವಾ ಹೆಚ್ಚಿನ ಬೆಲೆಯ ಸರಕು, ಗುಣಮಟ್ಟದಲ್ಲಿ ಹೆಚ್ಚೆಂದು ನಂಬಿ ಅದನ್ನೇ ಆಯ್ದುಕೊಳ್ಳುತ್ತಾರೆ. ಇದರ ಜೊತೆಗೆ ಬ್ಯಾಂಕ್ ಸಾಲ, ಪ್ರಾಯೋಜನೆ, ಸುಳ್ಳುಕಡಿತ, ಸುಳ್ಳು ಸ್ಕಾಲರ್‌ಶಿಪ್‌ಗಳು ಇದ್ದೇ ಇವೆ. ಇವೆಲ್ಲಾ ಎಂದೋ ಎಲ್ಲೋ ಆಗಬಹುದಾದ ಸಂಗತಿಗಳಲ್ಲ. ಈ ಪ್ರಕ್ರಿಯೆ ಈಗಾಗಲೇ ಬೇರೆ ಬೇರೆ ಹಂತಗಳಲ್ಲಿ ಪ್ರಾರಂಭವಾಗಿ ಬಿಟ್ಟಿದೆ.

WTO ಮತ್ತು ಜಾಗತೀಕರಣದ ವಿವಿಧ ರೂಪಗಳ ಷರತ್ತುಗಳ ಚರ್ಚೆ ಬಹುತೇಕವಾದ ಗುಟ್ಟಾಗೇ ನಡೆದಿದೆ. ಜನರನ್ನು ಕತ್ತಲಲ್ಲಿರಿಸಿ, ಜನರು ಚುನಾಯಿಸುವ ಸಂಸತ್ತುಗಳಲ್ಲಿ ಚರ್ಚಿಸದೆಯೇ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಮುಂದುವರಿದ ರಾಷ್ಟ್ರಗಳ ಶಿಕ್ಷಣ ತಜ್ಞರು, ಶಿಕ್ಷಕರು ಸಹ ಸಹಜವಾಗೇ ಆತಂಕಗೊಂಡಿದ್ದಾರೆ. ಸರ್ಕಾರೀ ಪ್ರಣೀತ ಸಂಕಿರಣಗಳು, ಕಾರ್ಯಾಗಾರಗಳು, ಶಿಕ್ಷಕರನ್ನು WTO ಪ್ರಣೀತ ಶಿಕ್ಷಣ ದರ್ಶನಕ್ಕೆ ಬಗ್ಗಿಸುವ ಕೆಲಸ ಮಾಡುತ್ತಿವೆಯೇ ಹೊರತು, ನಿಜವಾಗಿ ಚರ್ಚೆ ಆಗುತ್ತಲೇ ಇಲ್ಲ. ವಿದ್ಯಾರ್ಥಿಗಳಿಗೆ ಏನಾಗುತ್ತದೆಯೆಂದೇ ತಿಳಿದಿಲ್ಲ. ಪೋಷಕರಿಗೆ ಈ ಬಗ್ಗೆ ತಿಳಿದುಕೊಳ್ಳುವ ಸಂದರ್ಭ ಒದಗಿಲ್ಲ. ವಿವಿಧ ಕೋರ್ಸುಗಳ ಪ್ರವೇಶ ಶುಲ್ಕ, ಶಿಕ್ಷಣ ಶುಲ್ಕ, ಮತ್ತು ಪರೀಕ್ಷಾ ಶುಲ್ಕಗಳು ಏರುತ್ತಲೇ ಹೋದಾಗ ಅವರೂ, ಶಿಕ್ಷಣದ ವೆಚ್ಚದ ಬಗ್ಗೆ ತಲೆ ಕೆಡೆಸಿಕೊಳ್ಳಬಹುದೇ ಹೊರತು, ಸಮಸ್ಯೆಯ ನಿಜವಾದ ಮೂಲ ಗೋಚರಿಸದೆಯೇ ಹೋಗಬಹುದು.

ಶಿಕ್ಷಣದ ಸರಕೀಕರಣದಲ್ಲಿ ಒಂದು ಸಣ್ಣ ತೊಡಕಿದೆ. ಅದೇನೆಂದರೆ ಯಾವುದೇ ವಸ್ತುವನ್ನು ಸರಕೆಂದು **ಪರಿಗಣಿಸಬೇಕಾದರೆ ಅದಕ್ಕೊಂದು ನಿರ್ದಿಷ್ಟ ಆಕಾರ ತೂಕ ಮತ್ತು ಗುಣಗಳಿರಬೇಕು. ಆಗ ಮಾತ್ರ ಅದಕ್ಕೆ ಬೆಲೆ ಕಟ್ಟಿ ಸರಕನ್ನಾಗಿ ಮಾರಬಹುದು, ಕೊಳ್ಳಬಹುದು. ಶಿಕ್ಷಣ ಅಮೂರ್ತ. ಅದನ್ನು ಒಂದು ನಿರ್ದಿಷ್ಟ ಸಂಸ್ಥೆಯ ವಿದ್ಯಾರ್ಥಿ ಸಮೂಹದ ಒಟ್ಟು ವೆಚ್ಚದ ಗ್ರಹಿಕೆಯನ್ನಾಗಿ ಲೆಕ್ಕ ಹಾಕಬಹುದು. ಆದರೆ ಒಬ್ಬ ವಿದ್ಯಾರ್ಥಿಗೆ (ಗಿರಾಕಿಗೆ) ಕೊಡುವ ಶಿಕ್ಷಣದ ಬೆಲೆಯನ್ನು ನಿಗದಿ ಮಾಡುವುದು ಹೇಗೆ? ಸರ್ವಶಕ್ತವಾದ WTO ಷರತ್ತುಗಳಲ್ಲಿ, ಇದಕ್ಕೂ ಪರಿಹಾರವಿದೆ. WTO ಶಿಕ್ಷಣವನ್ನು ಸೇವೆಯೆಂದು ಪರಿಗಣಿಸುತ್ತದೆ. ಯಾವುದೇ ಸೇವೆಯನ್ನು ವ್ಯಾಪಾರಿಗಳಿಗೆ ಗುತ್ತಿಗೆ ಕೊಡಬಹುದು.**

ಇದ್ದಲ್ಲಿಯೇ ವಿದೇಶೀ ಪದವಿಗಳನ್ನು ಪಡೆಯ ಬಯಸುವ ಶ್ರೀಮಂತರಿಗೆ ಇಡೀ ಪ್ರಕ್ರಿಯೆ ಬಯಸಿ ಬಂದ ವರವಾಗಿ ಕಾಣಿಸಬಹುದು.

ಇದಕ್ಕೆ ಪರಿಹಾರ ಏನು? ಜಾಗತೀಕರಣಕ್ಕೆ, WTO ಬಗ್ಗೆ ಮತ್ತು WTO ಪ್ರಣೀತ ಶಿಕ್ಷಣ ಕ್ರಮದ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯಗಳಲ್ಲಿ ಜಾಗತಿಕವಾಗಿ, ದೇಶೀಯವಾಗಿ ಪ್ರತಿಕ್ರಿಯೆಗಳು ಬಂದಿವೆ. ಅವುಗಳಲ್ಲಿ 1. ಜಾಗತೀಕರಣ ಬೇಕು ಎನ್ನುವವರು 2. ಜಾಗತೀಕರಣ ಬೇಕು ಆದರೆ ಅದರಲ್ಲಿನ ದೇಶೀಯತೆಗೆ ಮಾರಕವಾದ ಅಂಶಗಳು ಬೇಡ ಎನ್ನುವವರು 3. ಜಾಗತೀಕರಣ ಬೇಕಿರಲಿ, ಬೇಡವಾಗಿರಲಿ, ಅದು ಬಂದಾಗಿದೆ. ಆದ್ದರಿಂದ ಅದಕ್ಕೆ ಹೊಂದಿಕೊಂಡು ಅದರಿಂದಾಗುವ ಲಾಭವನ್ನು ಪಡೆಯಲು ಅನುವಾಗೋಣ ಎನ್ನುವವರು. 4. ಜಾಗತೀಕರಣ ಬೇಡ, ಅದು ಶಿಕ್ಷಣವಿರಲಿ, ವ್ಯಾಪಾರವಿರಲಿ, ದೇಶೀಯವಾಗಿ ಘಾತುಕವಾದುದು ಎನ್ನುವವರು. ಹೀಗೆ ನಾಲ್ಕು ಬಗೆಯ ಜನರಿದ್ದಾರೆ.

ಜಾಗತೀಕರಣ, ಖಾಸಗೀಕರಣದ ಬಗ್ಗೆ ಒಲವುಳ್ಳವರು, ಬದಲಾವಣೆ ಅನಿವಾರ್ಯ ಬಂಡವಾಳ ಪದ್ಧತಿ ಮನುಷ್ಯ ಸ್ವಭಾವಕ್ಕೆ ಹತ್ತಿರವಾದುದು ಸಮಾಜವಾದವೇ ಅಸಹಜವಾದುದು. ಶ್ರೀಮಂತಿಕೆ, ಸ್ಪರ್ಧೆ, ಪೈಪೋಟಿಗಳಿದ್ದರೇ ಮನುಷ್ಯ ಸಮಾಜ ಮುಂದುವರೆಯಲು ಸಾಧ್ಯ ಎಂದು ಈ ಜನ ನಂಬುತ್ತಾರೆ. ಜಾಗತೀಕರಣದ ಕೆಡುಕುಗಳು ಅದರ ಲಾಭಗಳಿಗಿಂತ ಗೌಣ ಎಂದು ಇವರ ನಂಬಿಕೆ. ಜಾಗತೀಕರಣ ಬೇಕು ಆದರೆ ಅದರ ಕೆಡಕುಗಳು ಬೇಡ ಎನ್ನುವವರು ಅದರ ಲಾಭಾಂಶಗಳ ಕಡೆ ಕಣ್ಣಿಟ್ಟವರೇ. ಮೇಲ್ಪದರದ ಪ್ರಜಾತಂತ್ರದಾಚೆ ನೋಡಲಾರದ ಇವರಿಗೆ ಪರಿಷ್ಕೃತ ಜಾಗತೀಕರಣ ಅಪೇಕ್ಷಿತ. ವಿಶಾಲ ಆರ್ಥಿಕ ರಾಜಕೀಯ ಭಿತ್ತಿಯಲ್ಲಿ ಜಾಗತೀಕರಣವನ್ನು ನೋಡಲಾಗದ ಇವರಿಗೆ, ಶ್ರೀಮಂತರಿಗೊಂದು ನ್ಯಾಯ ಬಡವರಿಗೊಂದು ನ್ಯಾಯ ಇದೆ ಎಂದು ಅರ್ಥವಾಗುವುದು ಕಷ್ಟ. ನಮ್ಮಸುತ್ತ ಮುತ್ತಲಿನ 'ಜನರಲ್ಲಿ ಇವರ ಸಂಖ್ಯೆಯೇ ಹೆಚ್ಚು. ಮೂರನೆಯ ಬಗೆಯ ಜನ ಪ್ರಯೋಜನವಾದಿಗಳು. ಸಾಮಾಜಿಕ ಕರ್ತವ್ಯ, ಚಳುವಳಿ; ಇತ್ಯಾದಿಯ ಬಗ್ಗೆ ಇವರಿಗೆ ಉಪೇಕ್ಷೆ. WTO ಸರಿಯಿಲ್ಲವೆಂದೇ ಇಟ್ಟುಕೊಳ್ಳೋಣ. ಆದರೆ ಅದರಿಂದ ಹೊರ ಬರಬೇಕಾದರೆ ಅಗಾಧ ಪ್ರಮಾಣದ ಪರಿಹಾರ ಕೊಡಬೇಕು. ಬಲಿಷ್ಠ ರಾಷ್ಟ್ರಗಳ ಕೋಪಕ್ಕೆ ತುತ್ತಾಗಬೇಕು. 'ಪ್ರಗತಿ' ಸಾಧ್ಯವಾಗುವುದಿಲ್ಲ. ಆದ್ದರಿಂದ ಜಾಗತೀಕರಣ ಇರಲಿ ಎನ್ನುತ್ತಾರೆ ಇವರು. ನಾಲ್ಕನೆಯ ಬಗೆಯ ಜನ ಜಾಗತೀಕರಣವನ್ನು ಆರ್ಥಿಕ ರಾಜಕೀಯ ವಿಶಾಲಭಿತ್ತಿಯಲ್ಲಿ ಅರ್ಥಮಾಡಿಕೊಳ್ಳಲು ಯತ್ನಿಸುತ್ತಾರೆ. ಬಂಡವಾಳ ಶಾಹಿಗಳೊಂದಿಗಿನ ಸಖ್ಯ-ಸಹಯೋಗ ಎಂದಿಗೂ ಸಮಾಜದ ವಿಷಮತೆಗಳನ್ನು ಬಗೆಹರಿಸುವುದಿಲ್ಲ. ಸದಾ ವಿಸ್ತರಿಸಬಯಸುವ ಬಂಡವಾಳಶಾಹಿ ತನ್ನ ಉಳಿವಿಗಾಗಿ ತಾನು ವಿರೋಧಿಸುವ ಸಮಾಜವಾದದ ಮೌಲ್ಯಗಳನ್ನು ಬೇಕಾದರೂ ಅಳವಡಿಸಿಕೊಳ್ಳುತ್ತದೆ. ಆದರೆ ತನ್ನ ಬಂಡವಾಳ ಶಾಹಿಯ ಮೂಲ ದರ್ಶನವನ್ನು ಬದಲಿಸಿಕೊಳ್ಳುವುದಿಲ್ಲ. ಈಗ ಪ್ರಪಂಚದಲ್ಲಿ ಸಂಭವಿಸುತ್ತಿರುವ ಬದಲಾವಣೆಗಳು, ಮನುಷ್ಯರು ಹೆಚ್ಚು ಹೆಚ್ಚು ಪ್ರಜ್ಞಾವಂತರೂ, ಸುಸಂಸ್ಕೃತರೂ ಆದಂತೆ, ಸಮಾಜವಾದದತ್ತ ಸರಿಯುತ್ತಿರುವ ವಿಶ್ವ ಸಮಾಜಗಳನ್ನು ಬಂಡವಾಳ ಶಾಹಿ ತನ್ನ ಆರ್ಥಿಕತೆಗೆ ಬಲವಂತವಾಗಿ ಕಟ್ಟಿಹಾಕಲು ಮಾಡುತ್ತಿರುವ ಪ್ರಯತ್ನಗಳಿಂದ ಹುಟ್ಟಿದ ವಿಕೃತಿಗಳು. ಬಂಡವಾಳ ಶಾಹಿ ನಿರಂತರವಾಗಿ ಮಾಡುತ್ತಿರುವ ದೊಂಬರಾಟಗಳೇ ಅದು ಸರಿಯಲ್ಲ, ಸಹಜವಲ್ಲ ಎಂಬುದನ್ನು ಸಾಬೀತು ಪಡಿಸುತ್ತವೆ.

WTO ಸಹ ದೇಶ ದೇಶಗಳ ಗಡಿಗಳನ್ನು ಮುರಿದು, ವಿಶ್ವಸಂಸ್ಥೆಯಂಥ ಜಾಗತಿಕ ವ್ಯವಸ್ಥೆಯನ್ನೂ ಧಿಕ್ಕರಿಸಿ ಅಥವಾ ದಾಟಿಕೊಂಡು ಇಡೀ ವಿಶ್ವವನ್ನು ಬಂಡವಾಳ ಶಾಹೀ ತೆಕ್ಕೆಯೊಳಕ್ಕೆ ತರಲು, ಸಾಮ್ರಾಜ್ಯ ಶಾಹಿ ಮಾಡುತ್ತಿರುವ ಪ್ರಯತ್ನವೇ ಆಗಿದೆ. ಒಪ್ಪಿದರೆ ಒಪ್ಪಂದ ಇಲ್ಲದಿದ್ದರೆ ಆಕ್ರಮಣ ಎನ್ನುವುದು ಸಾಮ್ರಾಜ್ಯಶಾಹಿಯ ಹಳೆಯ ಚಾಳಿ. ಸಾಂಸ್ಕೃತಿಕವಾಗಿ ಒಳಹೊರಕ್ಕು ಸಾಮಾಜಿಕವಾಗಿ ನೆಲೆಗೊಂಡು ರಾಜಕೀಯ ನಿಯಂತ್ರಣ ಸಾಧಿಸುವುದು ಸಾಮ್ರಾಜ್ಯಶಾಹಿಗಳ ಈಚಿನ ಕಾರ್ಯತಂತ್ರ. ನವಸಾಹತೀಕರಣದ ಅಂಗವಾಗಿ, ಅಸ್ತ್ರವಾಗಿ WTO ಮತ್ತು ಅದರ ಶಿಕ್ಷಣ ನೀತಿಗಳು ಬಂದಿವೆಯೇ ಹೊರತು ಅವೇ ಶತ್ರುಗಳಲ್ಲ. ಹೋರಾಡಬೇಕಾಗಿರುವುದು ಸಾಮ್ರಾಜ್ಯಶಾಹಿಯ ಜೊತೆ, WTO ವಿರೋಧದ ಮೂಲಕ. ●

(ಸೌಜನ್ಯ : ವರ್ಗ ಸಮರ)





ವೈಜ್ಞಾನಿಕತೆ :

ಲೇ : ಪ್ರೊ|| ಜೆ.ಆರ್. ಲಕ್ಷ್ಮಣರಾವ್   ಬೆಲೆ ರೂ. 28/-

ಜನ ಜೀವನದಲ್ಲಿ ವಿಜ್ಞಾನದ ಪಾತ್ರ, ಸಮಾಜದ ಮೇಲೆ ವಿಜ್ಞಾನದ ಪ್ರಭಾವ ಮುಂತಾದ ವೈಜ್ಞಾನಿಕ ಮನೋವೃತ್ತಿ ಅರಿಯಲು ಈ ಕೃತಿ ನೆರವಾಗುತ್ತದೆ.

ಪ್ರಾಚೀನ ಭಾರತದಲ್ಲಿ ಅಂಧ ಶ್ರದ್ಧೆಗೆ ಎದುರಾದ ವಿಜ್ಞಾನ :

ಲೇಖಕರು : ಎಸ್.ಜಿ. ಸರ್ದೇಸಾಯಿ ಸಂಕ್ಷಿಪ್ತ ಕನ್ನಡ ರೂಪಾಂತರ ಕೆ.ಎಲ್. ಗೋಪಾಲಕೃಷ್ಣರಾವ್   ಬೆಲೆ ರೂ. 18/-



ಆಚರಣೆಯಲ್ಲಿದ್ದ, ಕಂಧಾಚಾರ, ಮೌಢ್ಯ ನಂಬಿಕೆಗಳ ಎದುರಿಗೆ ವಿಜ್ಞಾನ ಹೇಗೆ ಸವಾಲಾಗಿ ನಿಂತು, ಜನರಲ್ಲಿ ವೈಚಾರಿಕ ಮನೋಭಾವ ಮೂಡಲು ಕಾರಣವಾಯಿತು ಎನ್ನುವ ಹಲವಾರು ಮಾಹಿತಿಯೊಂದಿಗೆ ಕೃತಿಯು ಕೂಡಿದೆ.

ಬರೆಯದ ದಿನಚರಿಯ ಮರೆಯದ ಪುಟಗಳು

ಲೇಖಕರು : ಬಿ.ವಿ. ಕಕ್ಕಿಲ್ಲಾಯ   ಬೆಲೆ ರೂ. 200/-



ಕನಸುಗಳನ್ನು ವಾಸ್ತವಕ್ಕಿಳಿಸುವಾಗ ಮುಖಾಮುಖಿಯಾಗುವ ಸಮಸ್ಯೆಗಳ ವೈಚಿತ್ರ್ಯಗಳು, ಆದರ್ಶ ಹತಾಶೆಯ ಹೊಯ್ದಾಟ, ದಾರುಣವಾದ ಕಷ್ಟಾನುಭವಗಳು, ಸಾಧನೆಗಳು, ಗುರಿಮುಟ್ಟಿದ ಸಾರ್ಥಕತೆ ಇಂಥ ಹತ್ತು ಹಲವು ಜೀವನ ಅನುಭವಗಳನ್ನು ಬೆಸೆದುಕೊಂಡಿರುವ ಕೃತಿ.

ಮೇಲಿನ ಮೂರೂ ಪುಸ್ತಕದ ಪ್ರಕಾಶಕರು :

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್ ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಜೀವನಾನಂದರ ಕವಿತೆಗಳು :

ಅನುವಾದಕರು : ಮೀರಾ ಚಕ್ರವರ್ತಿ, ಎಂ.ಆರ್. ಕಮಲ

ಬೆಲೆ ರೂ.70/-

ಸಮೀರ್ ರಾಯ್ ಚೌಧುರಿ ಅವರ ಕವಿತೆಗಳ, ಅನುವಾದವು ಬಂಗಾಳಿ ಮತ್ತು ಕನ್ನಡ ಭಾಷೆಗಳ ಸಾಹಿತ್ಯಪ್ರಿಯರಿಗೆ ಸಂಪರ್ಕ ಸೇತುವೆಯಾಗಿದೆ. ಅಲ್ಲದೆ, ಸಮೀರ್‌ರವರ ಆಯ್ದ ವಿಮರ್ಶಾತ್ಮಕ ಮುನ್ನುಡಿ ಇರುವುದರಿಂದ ಓದುಗರಿಗೆ, ವಿಮರ್ಶಕರಿಗೆ, ಕವಿಗಳಿಗೆ ಸಾಹಿತ್ಯಪ್ರಿಯರಿಗೆ ಉಪಯುಕ್ತವಾಗಬಹುದು.

ಅಮೃತ ಮತ್ತು ವಿಷ :

ಲೇಖಕರು : ಅಮೃತವಾಲ್ ನಾಗರ್ ಅನು : ತಿಪ್ಪೇಸ್ವಾಮಿ ಬೆಲೆ ರೂ. 300/-

ಇಪ್ಪತ್ತನೇ ಶತಮಾನ ಕಂಡ ಮಹಾನ್ ಲೇಖಕರಲ್ಲಿ ಪ್ರಮುಖರಾದ ಅಮೃತಲಾಲ್ ನಾಗರ್ (1916-1990) ಅವರ ಪ್ರಶಸ್ತಿ ವಿಜೇತ ಕಾದಂಬರಿ ಇದು. ಪ್ರೇಮಾಚಾರ್‌ರ ನಂತರ ಹಿಂದೀ ಕಥಾ ಸಾಹಿತ್ಯವನ್ನು ಸಮೃದ್ಧದತ್ತ ಕೊಂಡೊಯ್ದ ನಾಗರ್‌ಕರ ಉತ್ತಮ ಕೃತಿಗಳಲ್ಲಿ 'ಅಮೃತ ಮತ್ತು ವಿಷ' ವಿಶಿಷ್ಟ ಸ್ಥಾನ ಗಳಿಸಿದೆ.

ಅಶ್ವಘೋಷ :

ಲೇಖಕರು : ರೋಮಾಚೌಧುರಿ ಅನು : ಶ್ರೀರಾಮ ಭಟ್ಟ   ಬೆಲೆ ರೂ. 25/-

ಭಾರತೀಯ ಸಾಹಿತ್ಯದಲ್ಲಿ ತುಂಬಾ ಪ್ರಾಚೀನವಾದ ಸುಪ್ರಸಿದ್ಧ ಕವಿ ನಾಟಕಕಾರರಾದ ಅಶ್ವಘೋಷನನ್ನು ಕುರಿತ ಕೃತಿ. ಭಾರತ ಸಾಹಿತ್ಯದಲ್ಲೇ ಅಪರೂಪ ಹಾಗೂ ಅಪವಾದ ಎನ್ನುವಂತೆ ಅಶ್ವಘೋಷ, ಬುದ್ಧ ಹಾಗೂ ಬೌದ್ಧ ಧರ್ಮ ಕುರಿತಂತೆ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ.

ಬುದ್ಧ ಚರಿತೆ ಮತ್ತು ಸೌಂದರನಂದ ಆತನ ಶ್ರೇಷ್ಠ ಕೃತಿಗಳು.

ಮೇಲಿನ ಮೂರೂ ಪುಸ್ತಕದ ಪ್ರಕಾಶಕರು :

ಸಾಹಿತ್ಯ ಅಕಾದೆಮಿ, ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001

ಬಳಕೆದಾರ ಸಂಸ್ಕೃತಿ : ಚಿನ್ನದ ಕತ್ತಿಯ ಮೋಹ

ಲೇಖಕರು : ಸಚ್ಚಿದಾನಂದ ಸಿನ್ಹ ಅನು : ಜಿ. ಶ್ರೀನಿವಾಸ ಕುಮಾರ್

ಪ್ರಕಾಶಕರು : ನೆಲಸಿರಿ ಪ್ರಕಾಶನ, ಲಕ್ಷ್ಮಿದೇವಮ್ಮ ಕಾಂಪೌಂಡ್, ವೆಂಕಟೇಶ್ವರ ಇಂಡಸ್ಟ್ರೀಸ್ ಸಮೀಪ, ಕುಣಿಗಲ್ ರಸ್ತೆ, ತುಮಕೂರು -572 102



ಬೆಲೆ ರೂ. 20/-

ಡಾ|| ರಾಮಮನೋಹರ ಲೋಹಿಯಾ ಅವರ ನಿಕಟವರ್ತಿಯಾಗಿದ್ದ ಸಚ್ಚಿದಾನಂದ ಸಿನ್ಹ ಅವರು, 1982ರಲ್ಲಿ ಬಳಕೆದಾರರ ಸಂಸ್ಕೃತಿಯ ಬಗೆಗೆ ನಡೆಸಿದ ಅಧ್ಯಯನದ ಫಲವಾಗಿ ಮೂಡಿ ಬಂದ ಕೃತಿ ಇದು. ಬಳಕೆದಾರ ಸಂಸ್ಕೃತಿಯ ವಿಷಮ ಬಲೆಯಲ್ಲಿ ಸಿಕ್ಕಿ ಜನ ಹೇಗೆ ಆರ್ಥಿಕ ದಿವಾಳಿಯಾಗಬಲ್ಲರು ಹಾಗೂ ಅಮೂಲ್ಯ ಸಾಂಸ್ಕೃತಿಕ ಆಧ್ಯಾತ್ಮಿಕ ವಿಕಾರಗಳಿಗೆ ಕಾರಣವಾಗಬಲ್ಲದೆಂಬುದನ್ನು ಈ ಕಿರು ಪುಸ್ತಕದಲ್ಲಿ ವಿಶ್ಲೇಷಿಸಲಾಗಿದೆ.

ಕಥನ ಕುತೂಹಲ :

ಸಂಪಾದಕರು : ಮೋಹನ ನಾಗಮ್ಮನವರ

ಪ್ರಕಾಶಕರು : ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ - 580 001 ಬೆಲೆ: 60-00 ರೂ.ಗಳು.

ಕಥಾ ಕಮ್ಮಟ (2002 ಡಿಸೆಂಬರ್, 24 ಮತ್ತು 25)ದಲ್ಲಿ ನಡೆದ ಕಥೆಗಳ ವಿಚಾರಗೋಷ್ಠಿಯಲ್ಲಿ, ನಾಡಿನ ಪ್ರಸಿದ್ಧ ಲೇಖಕರು ಕತೆಗಾರರು ಮಂಡಿಸಿದ ಪ್ರಬಂಧಗಳು ಈ ಕೃತಿಯಲ್ಲಿ ಇವೆ. ಸಾಹಿತ್ಯ ಓದುಗರಿಗೆ ಮತ್ತು ಉದಯೋನ್ಮುಖ ಬರಹಗಾರರಿಗೆ ಈ ಕೃತಿಯು ಸಹಾಯಕವಾಗಬಲ್ಲದು

ತನ್ನ ತಾವು :

ಲೇಖಕರು : ಡಾ. ಹಿ.ಶಿ ರಾಮಚಂದ್ರೇಗೌಡ   ಬೆಲೆ ರೂ. 150/-

ಪ್ರಕಾಶಕರು : ಸಿ.ವಿ.ಜಿ. ಪಬ್ಲಿಕೇಷನ್ಸ್, ನಂ. 70, 2ನೇ ಮಾನ್, ಜಬ್ಬಾರ್ ಬ್ಲಾಕ್ ವಯ್ಯಾಲಿಕಾವಲ್, ಬೆಂಗಳೂರು - 560 003

ನಮ್ಮ ನಡುವಿನ ಅತ್ಯಂತ ವಿಶಿಷ್ಟ ವ್ಯಕ್ತಿತ್ವದ ಗಂಭೀರ ಜನಪದ ಚಿಂತಕ ಮತ್ತು ಲೇಖಕ ಡಾ|| ಹಿ.ಶಿ. ರಾಮಚಂದ್ರೇಗೌಡ ಜನಪದ ಸಾಹಿತ್ಯ ಹಾಗೂ ಲಿಖಿತ ಸಾಹಿತ್ಯಗಳ ಅಂದ-ಚೆಂದ ಮತ್ತು ಓರೆ-ಕೋರೆಗಳಲ್ಲಿ ಅತ್ಯಂತ ವಸ್ತುನಿಷ್ಠವಾಗಿ ಸಾಮುದಾಯಕವಾಗಿ ನೋಡುವ ಪ್ರಯತ್ನದ ಫಲವೇ ಅವರ ಇತ್ತೀಚಿನ ಕೃತಿ 'ತನ್ನ ತಾವು' ಜನಪದ ಸಾಹಿತ್ಯದ ಬಗ್ಗೆ ಒಲವುಳ್ಳವರೆಲ್ಲರಿಗೂ ಇದೊಂದು ಉಪಯುಕ್ತ ಕೃತಿ.

'ನ್ಯಾಷನಲ್ ಜಿಯೋಗ್ರಫಿಕ್' ಕಂಡ ಭಾರತದ ಅಸ್ಪೃಶ್ಯರು

(21ನೇ ಪುಟದಿಂದ)

ಕಾರಣವೇ ಇಲ್ಲದೆ, ಒಮ್ಮೊಮ್ಮೆ ಕ್ಷುಲ್ಲಕ ಕಾರಣಗಳಿಗೆ ಭಾರತದಲ್ಲಿ ದಲಿತರ ಗುಡಿಸಲುಗಳು ಬೆಂಕಿಗೆ ಆಹುತಿಯಾಗುವುದು ತೀರಾ ಸಾಮಾನ್ಯ.

ಥರದವರ ಕೆಲಸ ಸಣ್ಣದೇನಲ್ಲ. ಮಕ್ವಾನ್‌ನ 'ನವ ಸರ್ಜನ್ ಟ್ರಸ್ಟ್'ಟ ತಯಾರು ಮಾಡಿರುವ 150 ಜನ 'ಬರಿಗಾಲು ಲಾಯರುಗಳು' ಸುಮಾರು 2200 ಹಳ್ಳಿಗಳಲ್ಲಿ ದಲಿತರ ಪರವಾಗಿ ಕೋರ್ಟು, ಕಛೇರಿಗಳಲ್ಲಿ ಹೋರಾಡುತ್ತಾರೆ. ಈ ಮಕ್ವಾನ್ ಗುಂಪಿನಿಂದ ಹಳ್ಳಿಯ ಮೇಲ್ಜಾತಿಯವರೂ ಕಾನೂನಿನ ನೆರವು ಪಡೆಬಹುದು. ಆದರೆ ಅದಕ್ಕೊಂದು 'ಫೀಸ್' ಇದೆ: ಅದೇನೆಂದರೆ, ಅಸ್ಪೃಶ್ಯನೊಬ್ಬನಿಂದ ಈ ಮೇಲ್ಜಾತಿಯವರು ಒಂದು ಲೋಟ ನೀರು ಕುಡಿಯಬೇಕು.

ಅಸ್ಪೃಶ್ಯರು ತಮ್ಮ ಹಕ್ಕುಗಳಿಗಾಗಿ ದನಿಯೆತ್ತಲಾರಂಭಿಸಿದಂತೆ, ಭಾರತದಲ್ಲಿ ನಡೆದ ಹಿಂಸೆಗಳ ಸರಮಾಲೆಯ ಭಯಾನಕ ಮುಖವನ್ನು ಟಾಮ್ ಬಿಹಾರ್‌ನಲ್ಲಿ ಕಾಣುತ್ತಾನೆ. ಇಲ್ಲಿ ಸುಮಾರು, ಇಪ್ಪತ್ತು ವರ್ಷಗಳ ಕಾಲ ನಕ್ಸಲೈಟ್ ಚಳುವಳಿಯ ಪ್ರಭಾವದಿಂದಾಗಿ ಹಿಂಸೆಯನ್ನು ಹಿಂಸೆಯ ಮೂಲಕವೇ ಅಸ್ಪೃಶ್ಯರು ಎದುರಿಸಲೆತ್ನಿಸಿದರು. ಈಚಿನ ವರ್ಷಗಳಲ್ಲಿ ಮೇಲ್ಜಾತಿಯ ಜಮೀನ್ದಾರರ ರಣಬೀರ್ ಸೇನೆ 500ಕ್ಕೂ ಹೆಚ್ಚು ದಲಿತರನ್ನು ಕೊಂದಿದೆ. ನೂರಾರು ಬಂದೂಕು, ಪಿಸ್ತೂಲುಗಳಿರುವ ಕಾರಣಕ್ಕಾಗಿ 'ಕೋಟೆ' ಎಂದು ಕರೆಯಲಾಗುವ ಹಳ್ಳಿಯೊಂದರಲ್ಲಿ ರಣಬೀರ್ ಸೇನೆಯ ಬ್ರಾಹ್ಮಣ ನಾಯಕನೊಬ್ಬ ಒಂದು ರಾತ್ರಿ ಟಾಮ್‌ಗೆ ಹೇಳುತ್ತಾನೆ: 'ನಮ್ಮಲ್ಲಿ ಒಬ್ಬರನ್ನು ಕೊಂದರೆ ನಾವು ಹತ್ತು ಜನರನ್ನು ಕೊಲ್ಲುತ್ತೇವೆ. ಜನ ಅವರವರ ಜಾತಿಯೊಳಗೇ ಬದ್ಧರಿರಬೇಕು. 'ಹೀಗೆ ಸತ್ತವರಲ್ಲಿ ಹೆಂಗಸರು, ಮಕ್ಕಳೇ ಹೆಚ್ಚಿಗೆ ಇರುತ್ತಾರಲ್ಲ?' ಎಂದು ಟಾಮ್ ಕೇಳಿದರೆ, 'ನಾವು ಬಂದೂಕು ಹಾರಿಸುವಾಗ ಅವರು ಅಡ್ಡ ಬರುತ್ತಾರೆ' ಎಂದು ಆರಾಮಾಗಿ ಹೇಳುತ್ತಾನೆ, ಈ ಬ್ರಾಹ್ಮಣ ನಾಯಕ.

> **ಒಂದು ಧರ್ಮದ ಬಲಿಪಶುಗಳಾಗಿರುವ ಭಾರತದ ಅಸ್ಪೃಶ್ಯರ ಸಮಸ್ಯೆಯನ್ನು ಯಾವ ಭಾಷಣಗಳೂ ಬಗೆಹರಿಸಲಾರವು; ಕಾನೂನಿನ ಮೂಲಕ ಹೊಸ ಹೋರಾಟ ಆರಂಭಿಸಿರುವ ಹೊಸ ತಲೆಮಾರಿನ ಕಾರ್ಯಕರ್ತರೇ ನಾಳಿನ ಆಶಾಕಿರಣ' ಎನ್ನುತ್ತಾನೆ ಟಾಮ್.**

ಇದೆಲ್ಲದವರ ನಡುವೆ ಉತ್ತರ ಪ್ರದೇಶದಲ್ಲಿ ಚಮ್ಮಾರ ಜಾತಿಯ ಒಬ್ಬ ಮಾಜಿ ಸ್ಕೂಲ್ ಟೀಚರ್ ಮುಖ್ಯಮಂತ್ರಿಯಾಗುವ ಹೊಸ ಚಲನೆಯನ್ನು ಟಾಮ್ ನೋಡುತ್ತಾನೆ. ಮಾಯಾವತಿಯವರು ಮುಖ್ಯಮಂತ್ರಿಯಾಗುವ ಈ ಬೆಳವಣಿಗೆ ಕೆಳ ಜಾತಿಯ ಪಕ್ಷ ಹಾಗೂ ಮೇಲ್ಜಾತಿಯ ಪಕ್ಷಗಳು ಒಂದಾಗಿ, ಶೂದ್ರರೇ ಹೆಚ್ಚಿರುವ ಪಕ್ಷವೊಂದನ್ನು ಅಧಿಕಾರದಿಂದ ಹೊರಗಿಡುವ ಬೆಳವಣಿಗೆಯಂತೆ ಟಾಮ್‌ಗೆ ಕಾಣುತ್ತದೆ. ಚಮ್ಮಾರ ಜಾತಿಯ ಮಹಿಳೆ ರಾಜ್ಯವೊಂದರ ಮುಖ್ಯಮಂತ್ರಿಯಾದಂತೆಯೇ, ಅಸ್ಪೃಶ್ಯನೊಬ್ಬ ರಾಷ್ಟ್ರಪತಿಯ ಸ್ಥಾನಕ್ಕೇರಿದ್ದನ್ನು, ಮೊದಲ ಬಾರಿಗೆ ಭಾರತದ ಗಣರಾಜ್ಯೋತ್ಸವದ ದಿನ ಅಸ್ಪೃಶ್ಯತೆಯ ನಿವಾರಣೆ ಹಾಗೂ ಮಹಿಳೆಯರ ವಿರುದ್ಧದ ಅಸಮಾನತೆಯ ನಿವಾರಣೆ ಕುರಿತು ಅಂಬೇಡ್ಕರರ ಮಾತುಗಳನ್ನು ತನ್ನ ಭಾಷಣದಲ್ಲಿ ಮಂಡಿಸಿದ್ದನ್ನು ಟಾಮ್ ನಮಗೆ ನೆನಪಿಸುತ್ತಾನೆ.

'ಆದರೆ ಹಿಂದು ಧರ್ಮದ ಬಲಿಪಶುಗಳಾಗಿರುವ ಭಾರತದ ಅಸ್ಪೃಶ್ಯರ ಸಮಸ್ಯೆಯನ್ನು ಯಾವ ಭಾಷಣಗಳೂ ಬಗೆಹರಿಸಲಾರವು; ಕಾನೂನಿನ ಮೂಲಕ ಹೊಸ ಹೋರಾಟ ಆರಂಭಿಸಿರುವ ಹೊಸ ತಲೆಮಾರಿನ ಕಾರ್ಯಕರ್ತರೇ ನಾಳಿನ ಆಶಾಕಿರಣ' ಎನ್ನುತ್ತಾನೆ ಟಾಮ್. ಮತ್ತೊಮ್ಮೆ ಅಂಬೇಡ್ಕರ್ ಥರದ ನಾಯಕರು ಹುಟ್ಟುವವರೆಗೂ ಭಾರತದ 16 ಕೋಟಿ ಅಸ್ಪೃಶ್ಯರ ಈ 'ಜೀವಾವಧಿ ಶಿಕ್ಷೆ' ಹೀಗೆಯೇ ಮುಂದುವರಿಯಲಿದೆಯೇನೋ ಎಂಬ ವಿಷಾದದೊಂದಿಗೆ ಟಾಮ್‌ನ ಬರಹ ಮುಗಿಯುತ್ತದೆ.

ಟಾಮ್‌ನ 'ವರದಿಗಣ್ಣಿನ' ಮಿತಿಯ ನಡುವೆಯೂ ಈ ಲೇಖನ ಅತ್ತಿತ್ತ ಅಲೆಯದೆ, ನೇರವಾಗಿ ಎಲ್ಲವನ್ನೂ ಹೇಳುವ ಕ್ರಮದಿಂದ, 'ನ್ಯಾಷನಲ್ ಜಿಯೋಗ್ರಫಿಕ್'ನ ಎಡಿಟಿಂಗ್ ಕಲೆಯಿಂದ ನಮ್ಮಲ್ಲಿ ದಲಿತರ ಸ್ಥಿತಿಗತಿ ಕುರಿತು ಬರೆಯುವವರು ಕಲಿಯುವುದು ಬಹಳವಿದೆ ಎನ್ನಿಸುತ್ತದೆ. ಆದರೂ ಈ ಇಂಗ್ಲಿಷ್ ಪತ್ರಿಕೆಯ ವರದಿಗಾರನಿಗೆ ಭಾರತದಲ್ಲಿ ಪ್ರಾಯಶಃ ಇಂಗ್ಲಿಷ್ ದುಬಾಷಿ ಎನ್.ಜಿ.ಓ.ಗಳೆ ಮಾರ್ಗದರ್ಶಕರಾಗಿದ್ದರಿಂದಲೋ ಏನೋ, ಇಲ್ಲಿನ ನಿಜವಾದ ದಲಿತ ಹೋರಾಟದ ಚಿತ್ರ ಸಿಕ್ಕದೆ ಹೋದಂತಿದೆ. ಕರ್ನಾಟಕದಲ್ಲಿ ಈತನಿಗೆ ಸಿಕ್ಕ ಮಾಹಿತಿದಾರರ ಕಾರಣಕ್ಕೋ ಏನೋ ಇಲ್ಲಿನ ಕಂಬಾಲಪಲ್ಲಿಯಾಗಲೀ ದಲಿತ ಸಂಘರ್ಷ ಸಮಿತಿಗಳ ಹೋರಾಟದ ಚಿತ್ರವಾಗಲೀ ಇಲ್ಲಿಲ್ಲ. ಇವತ್ತಿನ ಭಾರತದ ರಾಜಕಾರಣದಲ್ಲಿ ಕಾನ್ಶೀರಾಮರ ಮುಖ್ಯ ಪಾತ್ರ ಕೂಡ ಟಾಮ್‌ಗೆ ಸರಿಯಾಗಿ ಅರ್ಥವಾದಂತಿಲ್ಲ. ಆದರೂ ಪಶ್ಚಿಮದ ಎಚ್ಚರದ ಗಂಟೆ ಬಾರಿಸಿದಾಗಲೆಲ್ಲ ಭಾರತದಲ್ಲಿ ಕೆಲವಾದರೂ ಬದಲಾವಣೆಗಳು ಶುರುವಾದ ಉದಾಹರಣೆಗಳಿವೆ. ಹಾಗೆಯೇ ಅಮೆರಿಕಾದ ಕಪ್ಪುಜನ ಈ ಲೇಖನ ಓದಿ ತಮ್ಮ ಭಾರತೀಯ ಸೋದರ, ಸೋದರಿಯರ ಹೋರಾಟದಲ್ಲಿ ನೆರವಾಗಲು ಮುಂದಾಗಬಹುದೆ? ಎಲ್ಲಕ್ಕಿಂತ ಮುಖ್ಯವಾಗಿ ಕಸ ಎತ್ತುವ, ಮಲ ಹೊರುವ ದಲಿತರಿಗೆ ಕೈಕವಚ ಹಾಗೂ ಗ್ಯಾಸ್ ಮಾಸ್ಕ್‌ಗಳನ್ನಾದರೂ ಒದಗಿಸಲು ದಲಿತ ಸಂಘಟನೆಗಳು ಹಾಗೂ ಇನ್ನಿತರ ಜಾಗತಿಕ ಮಾನವೀಯ ಸಂಘಟನೆಗಳು ಒತ್ತಾಯಿಸಬಹುದೆ? 'ನ್ಯಾಷನಲ್ ಜಿಯಾಗ್ರಫಿಕ್'ನ ಸಂಪಾದಕ ನಿರೀಕ್ಷಿಸಿದಂತೆ ಈ ಪ್ರಭಾವಶಾಲಿ ದಾರುಣ ಫೋಟೋಗಳು ಈ ಪತ್ರಿಕೆಯ ಪ್ರತಿಷ್ಠೆಯ ಓದುಗ ಬಳಗವನ್ನು ಯೋಚನೆಗೆ ಹಚ್ಚಿ, ಭಾರತದತ್ತ ತಿರುಗುವಂತೆ ಮಾಡಬಹುದೆ? ತನ್ನ ಭೀಕರ ಮುಖವನ್ನು ಬಣ್ಣದ ಚಿತ್ರದಲ್ಲಿ ಕಂಡ ಭಾರತಕ್ಕೆ, ಮತ್ತದರ ಸರ್ಕಾರಕ್ಕೆ ಒಂದಿಷ್ಟಾದರೂ ನಾಚಿಕೆಯಾಗಿ, ಈ ನಾಚಿಕೆಯಿಂದ ಏನಾದರೂ ಹೊಸತು ಹುಟ್ಟಬಹುದೆ? ●

(ಈ ಲೇಖನದ ಜೊತೆಗೇ ದಲಿತ ಝಾಢಮಾಲಿಗಳ ಬದುಕನ್ನು ಚಿತ್ರಿಸಿದ 'Lesser Humans' ಎಂಬ ಸಾಕ್ಷ್ಯ ಚಿತ್ರವನ್ನೂ nationalgeographic.com/ngm/0306 ಈ ವೆಬ್‌ಸೈಟ್‌ನಲ್ಲಿ 'ಸಂವಾದ'ದ ಓದುಗರು ಗಮನಿಸಬಹುದು).

ಜಾತಿ ಪ್ರಜ್ಞೆಯ ಮೂಲ ಹುಡುಕುತ್ತಾ...

(ಹಿಂದಿನ ಸಂಚಿಕೆಯಿಂದ)

ಈಗ ನನ್ನ ಮಹಾಪ್ರಬಂಧದ ಮುಖ್ಯಾಂಶಗಳ ಸಾರಾಂಶ. ಜಾತಿಯ ಅಭ್ಯಾಸಿಗಳಿಂದ ನಾನಾ ತಪ್ಪುಗಳಾಗಿವೆಯೆಂಬುದು ನನ್ನ ಅಭಿಪ್ರಾಯ. ಅವರ ಅನ್ವೇಷಣೆಯಲ್ಲಿ ಈ ತಪ್ಪುಗಳು ದಾರಿ ತಪ್ಪಿಸಿವೆ. ಜಾತಿಯ ಅಧ್ಯಯನ ನಿರತರಾದ ಯೂರೋಪಿನ ಅಭ್ಯಾಸಿಗಳು ಅನಗತ್ಯವಾಗಿ ಜಾತಿ ವ್ಯವಸ್ಥೆಯಲ್ಲಿ ವರ್ಣದ ಪಾತ್ರವನ್ನು ಒತ್ತುಕೊಟ್ಟು ಹೇಳಿದ್ದಾರೆ; ಸ್ವತಃ ತಾವೇ ವರ್ಣದ ಪೂರ್ವಗ್ರಹಗಳಿಗೆ ಒಳಗಾಗಿ ಅವರು ತುಂಬ ಸುಲಭವಾಗಿ, ಜಾತಿ ಸಮಸ್ಯೆ ಪ್ರಧಾನವಾದ ಅಂಶವೆಂದು ಊಹಿಸಿದರು.

ಇದಕ್ಕಿಂತ ಬೇರೆ ಯಾವುದೂ ಸತ್ಯದಿಂದ ತುಂಬ ದೂರ ಇರಲಾರದು: ಡಾ. ಕೇತ್ಕರ್ ಅವರು ಸರಿಯಾಗಿಯೇ ಹೇಳಿದ್ದಾರೆ: "ಆರ್ಯ ಅಥವಾ ದ್ರಾವಿಡ, ಯಾವುದೇ ಜನಾಂಗಕ್ಕೆ ಸೇರಿದವರಾಗಲಿ, ಎಲ್ಲ ರಾಜರೂ ಆರ್ಯರೇ ಆಗಿದ್ದರೂ, ವಿದೇಶಿ ವಿದ್ವಾಂಸರು ಬಂದು ವ್ಯತ್ಯಾಸದ ಗೆರೆಯನ್ನು ಎಳೆಯುವವರೆಗೂ, ಒಂದು ಬುಡಕಟ್ಟು ಅಥವಾ ಒಂದು ಕುಟುಂಬ ಜನಾಂಗಿಕವಾಗಿ ಆರ್ಯವೋ ಅಥವಾ ದ್ರಾವಿಡವೋ ಎಂಬ ಪ್ರಶ್ನೆ ಭಾರತದ ಜನರನ್ನು ಯಾವಾಗಲೂ ಕಾಡಲಿಲ್ಲ. ಚರ್ಮದ ಬಣ್ಣ ಒಂದು ಮುಖ್ಯ ವಿಷಯವೆಂಬುದು ಎಂದೋ ನಿಂತುಹೋಗಿತ್ತು.

ಅಲ್ಲದೆ ಅವರು (ಯುರೋಪಿನ ತಜ್ಞರು) ಕೇವಲ ವರ್ಣಗಳನ್ನೆಲ್ಲ ವಿವರಣೆಗಳೆಂದು ತಪ್ಪಾಗಿ ಗ್ರಹಿಸಿದ್ದಾರೆ ಮತ್ತು ಅವೇ ಸಿದ್ಧಾಂತಗಳೆಂಬತೆ ಅವುಗಳ ವಿಚಾರದಲ್ಲಿ ಚರ್ಚೆ ಮಾಡಿದ್ದಾರೆ. ವೃತ್ತಿಪರ, ಧಾರ್ಮಿಕ ಮೊದಲಾದ ಜಾತಿಗಳಿವೆಯೆಂಬುದು ನಿಜ. ಆದರೆ ಅದನ್ನು ಹೇಳಿದ ಮಾತ್ರಕ್ಕೆ ಯಾವುದೇ ರೀತಿಯಿಂದ ಅದೇ ಜಾತಿಯ ಉಗಮದ ವಿವರಣೆಯಾಗುವುದಿಲ್ಲ. ಈ ವೃತ್ತಿಪರ ಗುಂಪುಗಳು ಯಾಕೆ ಜಾತಿಗಳೆಂಬುದನ್ನು ನಾವಿನ್ನೂ ಕಂಡುಕೊಳ್ಳಬೇಕಾಗಿದೆ.

ಆದರೆ ಈ ಪ್ರಶ್ನೆಯನ್ನು ಯಾವಾಗಲೂ ಕೇಳಿಯೇ ಇಲ್ಲ. ಕಡೆಯದಾಗಿ, ಅವರು (ಹೊರಗಿನ ವಿದ್ವಾಂಸರು) ಜಾತಿಯನ್ನು, ಅದನ್ನು ಒಂದು ಉಸಿರು ಮಾಡಿತೊ ಎಂಬಂತೆ, ತುಂಬ ಲಘುವಾಗಿ ಪರಿಗಣಿಸಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ, ಆಗಲೇ ನಾನು ವಿವರಿಸಿರುವಂತೆ, ಜಾತಿಯೆ ಬಹುಮಟ್ಟಿಗೆ ನಿತ್ತರಿಸಲಾಗದಂತಹುದು; ಏಕೆಂದರೆ, ಅದು ಉಂಟುಮಾಡುವ ಕಷ್ಟಗಳು ಭಯಂಕರವಾಗಿವೆ. ನಂಬಿಕೆಯ ಮೇಲೆ ಜಾತಿ ನಿಂತಿರುವುದೆಂಬುದು ನಿಜ. ಆದರೆ ನಂಬಿಕೆಯು ಒಂದು ಸಂಸ್ಥೆಯ ಬುನಾದಿಯಾಗುವುದಕ್ಕಿಂತ ಮುಂಚೆ, ಸ್ವತಃ ಸಂಸ್ಥೆಯನ್ನೇ ಮುಂದುವರಿಸಿಕೊಂಡು ಸುಭದ್ರಗೊಳಿಸಬೇಕಾಗಿದೆ.

ಜಾತಿ ಸಮಸ್ಯೆಯನ್ನು ಕುರಿತ ನನ್ನ ಅಧ್ಯಯನದಲ್ಲಿ ನಾಲ್ಕು ಅಂಶಗಳಿವೆ. 1) ಹಿಂದೂ ಜನಾಂಗ ಒಂದು ಸಂಕೀರ್ಣ ರಚನೆಯಾಗಿದ್ದರೂ, ಅದರಲ್ಲೊಂದು ಆಳವಾದ ಸಾಂಸ್ಕೃತಿಕ ಏಕತೆಯಿದೆ. 2) ವ್ಯಾಪಕವಾದ ಸಾಂಸ್ಕೃತಿಕ ಘಟಕದ ಪ್ರತಿಯೊಂದು ಭಾಗವನ್ನೂ ಜಾತಿಯು ಹಣೆದು ಕಟ್ಟಿದೆ. 3) ಪ್ರಾರಂಭದಲ್ಲಿದ್ದುದು ಒಂದೇ ಜಾತಿ. 4) ಅನುಕರಣೆಯಿಂದಲೂ ಮತ್ತು ಬಹಿಷ್ಕರಿಸಿದ್ದರಿಂದಲೂ ವರ್ಗಗಳೇ ಜಾತಿಗಳಾಗಿ ಪರಿಣಮಿಸಿವೆ.

ಜಾತಿಯೆ ಬಹುಮಟ್ಟಿಗೆ ನಿತ್ತರಿಸಲಾಗದಂತಹುದು; ಏಕೆಂದರೆ, ಅದು ಉಂಟುಮಾಡುವ ಕಷ್ಟಗಳು ಭಯಂಕರವಾಗಿವೆ. ನಂಬಿಕೆಯ ಮೇಲೆ ಜಾತಿ ನಿಂತಿರುವುದೆಂಬುದು ನಿಜ. ಆದರೆ ನಂಬಿಕೆಯು ಒಂದು ಸಂಸ್ಥೆಯ ಬುನಾದಿಯಾಗುವುದಕ್ಕಿಂತ ಮುಂಚೆ, ಸ್ವತಃ ಸಂಸ್ಥೆಯನ್ನೇ ಮುಂದುವರಿಸಿಕೊಂಡು ಸುಭದ್ರಗೊಳಿಸಬೇಕಾಗಿದೆ. ಜಾತಿ ಸಮಸ್ಯೆಯನ್ನು ಕುರಿತ ನನ್ನ ಅಧ್ಯಯನದಲ್ಲಿ ನಾಲ್ಕು ಅಂಶಗಳಿವೆ. 1) ಹಿಂದೂ ಜನಾಂಗ ಒಂದು ಸಂಕೀರ್ಣ ರಚನೆಯಾಗಿದ್ದರೂ, ಅದರಲ್ಲೊಂದು ಆಳವಾದ ಸಾಂಸ್ಕೃತಿಕ ಏಕತೆಯಿದೆ. 2) ವ್ಯಾಪಕವಾದ ಸಾಂಸ್ಕೃತಿಕ ಘಟಕದ ಪ್ರತಿಯೊಂದು ಭಾಗವನ್ನೂ ಜಾತಿಯು ಹೆಣೆದು ಕಟ್ಟಿದೆ. 3) ಪ್ರಾರಂಭದಲ್ಲಿದ್ದುದು ಒಂದೇ ಜಾತಿ. 4) ಅನುಕರಣೆಯಿಂದಲೂ ಮತ್ತು ಬಹಿಷ್ಕರಿಸಿದ್ದರಿಂದಲೂ ವರ್ಗಗಳೇ ಜಾತಿಗಳಾಗಿ ಪರಿಣಮಿಸಿವೆ.

ಇಂದು ಭಾರತದಲ್ಲಿ ಜಾತಿ ಸಮಸ್ಯೆಗೆ ವಿಚಿತ್ರವಾದ ಹಿತಾಸಕ್ತಿಗಳು ತಳಕು ಹಾಕಿಕೊಂಡಿವೆ; ಈ ಅಸಹಜ ಸಂಸ್ಥೆಯನ್ನು ತೊಡೆದು ಹಾಕಲು ನಿರಂತರವಾದ ಪ್ರಯತ್ನಗಳನ್ನೂ ಮಾಡಲಾಗಿದೆ. ಆದರೆ ಸುಧಾರಣೆಯ ಅಂಥ ಪ್ರಯತ್ನಗಳು ಬಹುವಾದ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿವೆ. ಜಾತಿಯ ಮೂಲವು ಒಂದು ಪರಮೋಚ್ಚ ಅಧಿಕಾರದ ಪ್ರಜ್ಞಾಪೂರ್ವಕ ಆದೇಶದಿಂದಾದುದೇ? ಅಥವಾ ಮಾನವ ಸಮಾಜದ ಜೀವನದಲ್ಲಿ, ವಿಚಿತ್ರವಾದ ಸನ್ನಿವೇಶಗಳಲ್ಲಾದ ಅಪ್ರಜ್ಞಾಪೂರ್ವಕವಾದ ಬೆಳವಣಿಗೆಯೇ? ಈ ಎರಡನೆಯ ಅಭಿಪ್ರಾಯವನ್ನು ಹೊಂದಿರುವವರು ಈ ಪ್ರಬಂಧದಲ್ಲಿ ತಳೆದಿರುವ ದೃಷ್ಟಿಕೋನದಿಂದ ಆಲೋಚನೆಗೆ ಸ್ವಲ್ಪ ಗ್ರಾಸವನ್ನು ಪಡೆಯುವರೆಂದು ನಾನು ಭಾವಿಸುತ್ತೇನೆ.

ಜಾತಿ ವಿಷಯವು, ಅದರ ಪ್ರಾಯೋಗಿಕ ಮಹತ್ವವಲ್ಲದೆ, ಪೂರ್ಣ ತನ್ಮಯಗೊಳಿಸುವ ಸಮಸ್ಯೆಯಾಗಿದ್ದು, ಅದರ ತಾತ್ವಿಕ ತಳಹದಿಯ ವಿಚಾರವಾಗಿ ನನ್ನಲ್ಲಿ ಮೂಡಿದ ಆಸಕ್ತಿಯು ನಿಮ್ಮ ಮುಂದೆ ಕೆಲವು ತೀರ್ಮಾನಗಳನ್ನು ಮಂಡಿಸಲು ಪ್ರಚೋದಿಸಿದೆ: ಅವು ಸುಭದ್ರವೂ, ಚೆನ್ನಾಗಿ ಬೆಂಬಲಿಸಲಾದ ತಳಹದಿಯ ಮೇಲೆ ನಿಂತಿರುವಂತಹುದೂ ಆಗಿವೆ. ಹಾಗಿದ್ದೂ, ಅವು ಒಂದು ವಿಷಯದ ಮೇಲಿನ ಸಂವಾದದ ಚಾಲನೆಗೆ ಬೇಕಾದ ಕೊಡುಗೆಗಿಂತ ಹೆಚ್ಚಿನದೆಂದೂ ಅಥವಾ ಅವೇ ಅಂತಿಮವಾದದ್ದೆಂದೂ ತಿಳಿಯುವ ಧಾರ್ಷ್ಟ್ಯ ನನಗಿಲ್ಲ. ವಾಹನವನ್ನು ತಪ್ಪು ದಾರಿಯಲ್ಲಿ ನಿಲ್ಲಿಸಿರುವಂತೆಯೂ ನನಗೆ ತೋರುತ್ತದೆ; ಈ ಪ್ರಬಂಧದ ಪ್ರಧಾನ ಆಶಯವೆಂದರೆ ನಾನು ಯಾವುದನ್ನು ಸರಿಯಾದ ಸಂಶೋಧನ ಪಥವೆಂದು ತಿಳಿದಿದ್ದನೆಯೊ ಅದನ್ನು ಸೂಚಿಸಬಹುದು; ಹಾಗೆ ಸೂಚಿಸುವುದು ಕೂಡ ಪ್ರಯೋಜನಾಕಾರಿಯಾದ ಸತ್ಯದ ಬಳಿಗೆ ಸೇರುವ ದೃಷ್ಟಿಯಿಂದ.

ಆದರೂ ನಾವು ವಿಷಯವನ್ನು ಪೂರ್ವಗ್ರಹದಿಂದ ಸಮೀಪಿಸದಂತೆ ಎಚ್ಚರ ವಹಿಸಬೇಕು. ವಿಜ್ಞಾನ ಪ್ರಪಂಚದಿಂದ ಅತಿ ಭಾವುಕತೆಯನ್ನು ಹೊರಹಾಕಬೇಕು. ವಸ್ತುನಿಷ್ಠವಾದ ದೃಷ್ಟಿಕೋನದಿಂದ ಸಂಗತಿಗಳನ್ನು ತೂಗಿನೋಡಬೇಕು. ನನ್ನ ಮಟ್ಟಿಗಂತೂ ನನ್ನ ಈ ಸಿದ್ಧಾಂತವನ್ನು ಗುಣಾತ್ಮಕವಾಗಿ ನಾಶಪಡಿಸಿದಾಗಲೂ, ಒಂದು ವಿಷಯದಲ್ಲಿ ವೈಚಾರಿಕ ಭಿನ್ನಾಭಿಪ್ರಾಯದಂತೆ, ನಾನು ಅಷ್ಟೇ ಸಂತೋಷಪಡುತ್ತೇನೆ; ಇದು ಅನೇಕ ವಿದ್ವತ್ಪೂರ್ಣ ವ್ಯಾಖ್ಯಾನಗಳೊಂದಿಗೆ ನಿಲ್ಲದೆ ಎಂದೆಂದಿಗೂ ವಿವಾದಾಸ್ಪದವಾಗಿ ಉಳಿಯಲೂಬಹುದು. ಕಡೆಯದಾಗಿ ಜಾತಿಯ ಒಂದು ಸಿದ್ಧಾಂತವನ್ನು ಪ್ರತಿಪಾದಿಸಲು ನಾನು ಮಹತ್ವಾಕಾಂಕ್ಷಿಯಾಗಿದ್ದರೂ ನನ್ನ ಸಿದ್ಧಾಂತವು ಅಸಮರ್ಥನೀಯವಾದುದೆಂದು ತೋರಿಸಿಕೊಟ್ಟರೆ, ಅದನ್ನು ಬಿಟ್ಟುಕೊಡಲು ನಾನು ಸಿದ್ಧನಿದ್ದೇನೆ. ●

(ಮುಗಿಯಿತು)

ದಯವಿಟ್ಟು ಓದಿರಿ

"ಜಂಗಮಕ್ಕೆ ಜಾತಿಯಿಲ್ಲ ಲಿಂಗಕ್ಕೆ ಹೊಲೆಯಿಲ್ಲ" ಎಂಬುದು ಲಿಂಗಾಯತ ಧರ್ಮದ ಮೂಲ ಸೂಕ್ತಿ. ಆದರೆ ಪುರೋಹಿತಶಾಹಿಗಳ ಕುತಂತ್ರ ಮತ್ತು ಆಡಳಿತ ಶಾಹಿಯ ಆಘಾತದಿಂದಾಗಿ ಶರಣ ಚಳವಳಿಯಲ್ಲಿದ್ದವರೆಲ್ಲರೂ ಚದುರಬೇಕಾಯಿತು. ಹೀಗೆ ಚದುರಿ ಹೋದ ಶರಣರಲ್ಲಿ ಅಸ್ಪೃಶ್ಯ ಮೂಲದ ಹೊಲೆಯರ ಉರಿಲಿಂಗ ಪೆದ್ದಿಯ ಕುಲವೂ ಒಂದು. ಅತ್ತ ಲಿಂಗಾಯಿತರಿಂದಲೂ ಇತ್ತ ಹೊಲೆಯರಿಂದಲೂ ದೂರಾಗಿ ತ್ರಿಶಂಕು ಸ್ಥಿತಿಯಲ್ಲಿರುವ ಈ ವರ್ಗದ ಇತಿಹಾಸ, ಬದುಕು, ವಾಸ್ತವದತ್ತ ಡಾ|| ಸಾಹುಕಾರ್ ಎಸ್. ಕಾಂಬಳೆಯವರು ನಡೆಸಿದ ಪಿಹೆಚ್‌ಡಿ ಸಂಶೋಧನಾ ಕೃತಿಯೇ 'ಲಿಂಗಾಯಿತ ಅಸ್ಪೃಶ್ಯರು'.

ಪ್ರತಿಗಳಿಗಾಗಿ ಸಂಪರ್ಕಿಸಿ : **ವೀರಶೈವ ಅಧ್ಯಯನ ಸಂಸ್ಥೆ,** ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ-582 101

ಬೆಲೆ : ರೂ. **75/-**

ಕನ್ನಡ ಸಾಹಿತ್ಯದ ಇತ್ತೀಚಿನ ತಲೆಮಾರಿನ ವಿಶಿಷ್ಟ ರೀತಿಯ ಸಂವೇದನಾ ಶೀಲ ಲೇಖಕರಲ್ಲಿ ಡಾ|| ನಟರಾಜ್ ಹುಳಿಯಾರ್ ಪ್ರಮುಖರು. ನಾಡಿನ ಪ್ರಗತಿಪರ ಚಳುವಳಿಗಳಲ್ಲೂ ಸಕ್ರಿಯರಾಗಿರುವ ಇವರು ಕಳೆದ 3-4ವರ್ಷಗಳ ಹಿಂದೆ ಲಂಕೇಶ್ ಪತ್ರಿಕೆಯಲ್ಲಿ ಅಂಕಣಕಾರರಾಗಿ ಬರೆದ ಕೆಲವು ಪ್ರಮುಖ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿಮರ್ಶಾ ಬರಹಗಳನ್ನು ತಮ್ಮ **'ಗಾಳಿ ಬೆಳಕು'** ಕೃತಿಯಲ್ಲಿ ಸಂಕಲಿಸಿದ್ದಾರೆ. ಸಮಕಾಲೀನ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಸೃಜನಶೀಲ ಓದುಗರಿಗೆ ಇದೊಂದು ಉಪಯುಕ್ತ ಕೃತಿ.

ಪ್ರತಿಗಳಿಗಾಗಿ ಸಂಪರ್ಕಿಸಿ : **ಚಂದನ ಪ್ರಿಂಟರ್ಸ್,**

ನಂ. 685, ರಾಮಾಂಜನೇಯ ರಸ್ತೆ, ಶ್ರೀನಗರ, ಬೆಂಗಳೂರು - 560 050

ಬೆಲೆ : ರೂ. **75/-**

ಇತ್ತೀಚೆಗೆ ಸಾಮಾನ್ಯರಿಂದ ಹಿಡಿದು ಬುದ್ಧಿಜೀವಿಗಳವರೆಗೆ ಹೆಚ್ಚು-ಬಳಕೆಯಲ್ಲಿ ಚರ್ಚೆಯಲ್ಲಿರುವ ಮಾತುಗಳೆಂದರೆ **'ಜಾಗತೀಕರಣ'** ಮತ್ತು **'ಆರ್ಥಿಕ ಉದಾರೀಕರಣ'**. ಜಗತ್ತಿನ ಎಲ್ಲಾ ಸಾಮಾಜಿಕ-ಆರ್ಥಿಕ ಸಮಾನತೆಗಳನ್ನು ಪರಿಹರಿಸುವ ಏಕೈಕ ಮಾರ್ಗ ಹಾಗೂ 'ವಿಶ್ವವೇ ಒಂದು ಗ್ರಾಮ' ಎಂಬ ಕಲ್ಪನೆಯೊಂದಿಗೆ ದಾಪುಗಾಲಿಡುತ್ತಿರುವ ಜಾಗತೀಕರಣದ ಹುಟ್ಟು, ಬೆಳವಣಿಗೆ, ಲಕ್ಷಣಗಳು, ಇತ್ಯಾದಿಗಳನ್ನು ಕುರಿತು ಬೆಳಕು ಚೆಲ್ಲುವ ಉಪಯುಕ್ತ ಕೃತಿ **'ಜಾಗತೀಕರಣ'**. ಲೇಖಕರು ಮ. ಮಹೇಶನ್

ಪ್ರತಿಗಳಿಗಾಗಿ ಸಂಪರ್ಕಿಸಿ : **ನವ ಕರ್ನಾಟಕ ಪ್ರಕಾಶನ**

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

ಬೆಲೆ : ರೂ. **95/-**



ನವ ದೆಹಲಿ ಮತ್ತು ಲಕ್ನೋಗಳಿಂದ ಪ್ರಕಟವಾಗುವ ದೇಶದ ಪ್ರತಿಷ್ಠಿತ ಇಂಗ್ಲೀಷ್ ದಿನಪತ್ರಿಕೆ 'ದಿ ಪಯನೀರ್' ನಲ್ಲಿ ಖ್ಯಾತ ದಲಿತ ಲೇಖಕ, ಚಿಂತಕ ಚಂದ್ರ ಬಾನ್ ಪ್ರಸಾದ್ ಅವರು ಪ್ರತಿವಾರ ಬರೆಯುತ್ತಿರುವ ವಿಚಾರ ಪ್ರಚೋದಕ ಜನಪ್ರಿಯ ಅಂಕಣ 'ದಿ ದಲಿತ್ ಡೈರಿ'. ಏಪ್ರಿಲ್ 1999 ರಿಂದ ಏಪ್ರಿಲ್ 29, 2001ರವರೆಗೆ ಬರೆದ ವಿವಿಧ ಲೇಖನಗಳು ಇಲ್ಲಿವೆ. ಅತ್ಯಂತ ಜನಪ್ರಿಯವಾಗಿರುವ ಈ ಅಂಕಣ ತೆಲುಗಿನ 'ವಾರ್ತಾ' ದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದೆ. (ಪ್ರತಿಗಳಿಗಾಗಿ ಇಂಗ್ಲೀಷ್ ಅಥವಾ ಹಿಂದಿಯಲ್ಲಿ ವ್ಯವಹರಿಸಿ)

ಪ್ರತಿಗಳಿಗಾಗಿ ಸಂಪರ್ಕಿಸಿ : **ದಲಿತ್ ಮೀಡಿಯಾ ನೆಟ್‌ವರ್ಕ್**

ನಂ. ಡಿ40/ಎ, ಮಂಡವಾಲಿ, ದೆಹಲಿ - 110 092 ಬೆಲೆ : ರೂ. **500/-**